ಕರ್ನಾಟಕ ಸಾಹಿತ್ಯ ಅಕಾಡೆಮಿ

# ತಳಸ್ತರದ ವಚನಕಾರ್ತಿಯರ ವಚನಗಳ ಅಧ್ಯಯನ

ದೊಡ್ಡನಾಯ್ಕ ಹೆಚ್



2014–15ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿಯ
ಫೆಲೋಷಿಪ್ ಸಂಪ್ರಬಂಧ

# ತಳಸ್ತರದ ವಚನಕಾರ್ತಿಯರ ವಚನಗಳ ಅಧ್ಯಯನ

**ದೊಡ್ಡನಾಯ್ಕ ಹೆಚ್.**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
**ಕನ್ನಡ ಭವನ, ಜೆ.ಸಿ.ರಸ್ತೆ**
**ಬೆಂಗಳೂರು–560 002.**
**ದೂರವಾಣಿ:080–22211730/22106460**
www.karnatakasahithyaacademy.org
Email: sahithya.academy@gmail.com

**THALASTHARADHA VACHANAKARTIYARA**
**VACHANAGALA ADYAYANA**
**Fellowship thesis by: Doddanayaka H.**
Published by
**C.H.Bhagya**
Registrar
Karnataka Sahithya Academy
Kannada Bhavana
J.C.Road, Bengaluru-560 002.

© ಕರ್ನಾಟಕ ಸಾಹಿತ್ಯ ಅಕಾಡೆಮಿ

| | | |
|---|---|---|
| ಪುಟಗಳು | : | vii+೧೪೦ |
| ಬೆಲೆ | : | ₹ 140/- |
| ಮೊದಲ ಮುದ್ರಣ | : | ೨೦೧೬ |
| ಪ್ರತಿಗಳು | : | ೫೦೦ |
| ಮುಖಪುಟ ವಿನ್ಯಾಸ | : | ಹಜರತ್ ಅಲಿ ಯು. |
| Pages | : | vii+140 |
| Price | : | ₹ 140/- |
| First impression | : | 2016 |
| Copies | : | 500 |

**ಪ್ರಕಾಶಕರು:**
**ಸಿ.ಎಚ್.ಭಾಗ್ಯ**
ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು–560 002.

**ಮುದ್ರಕರು:**
ಸರ್ಕಾರಿ ಕೇಂದ್ರ ಮುದ್ರಣಾಲಯ
ಮೈಸೂರು ರಸ್ತೆ, ಬೆಂಗಳೂರು–560 059.
080–28483133 / 28484518

## ಅಧ್ಯಕ್ಷರ ನುಡಿ

ಶ್ರೀ ದೊಡ್ಡನಾಯ್ಕ ಎಚ್. ಅವರು ಬರೆದು ಸಿದ್ಧಪಡಿಸಿದ ಸಂಪ್ರಬಂಧ 'ತಳಸ್ತರದ ವಚನಕಾರ್ತಿಯರ ವಚನಗಳ ಅಧ್ಯಯನ'ದ ಹಸ್ತಪ್ರತಿ ಕೈಯಲ್ಲಿದೆ. ಐದು ಅಧ್ಯಾಯಗಳಲ್ಲಿ ವಿಸ್ತಾರಗೊಂಡ ಅವರ ಅಧ್ಯಯನಪೂರ್ಣ ಸುದೀರ್ಘ ಪ್ರಬಂಧವನ್ನು ಓದುತ್ತಾ ತುಂಬ ಸಂತೋಷಪಡುತ್ತಿದ್ದೇನೆ.

ಇದುವರೆಗೆ ನಿರ್ಲಕ್ಷಿತರಾಗಿದ್ದ ತಳಸ್ತರದ ವಚನಕಾರ್ತಿಯರ ಚಿಂತನೆ, ಸಿದ್ಧಾಂತ ಮತ್ತು ತತ್ವಗಳ ಮೌಲಿಕತೆಯನ್ನು ಬೆಳಕಿಗೆ ತರುವಂಥ ಸಂದರ್ಭೋಚಿತ ಕೆಲಸ ಕೈಗೊಂಡಿದ್ದು ಪ್ರಶಂಸನೀಯವಾದುದು. 39 ಜನ ತಳಸ್ತರದ ವಚನಕಾರ್ತಿಯರ ವಚನಗಳ ಆಧಾರದ ಮೇಲೆ ಒಟ್ಟು ವಿಶ್ಲೇಷಣೆಯನ್ನು ಮಾಡುವ ಕೆಲ ಪ್ರಯತ್ನಗಳನ್ನು ಈ ಪ್ರಬಂಧಕಾರರು ಇಲ್ಲಿ ಮಾಡಿದ್ದಾರೆ.

ಕುಟುಂಬದ ಒಳಗೆ, ಕುಟುಂಬದ ಹೊರಗಿನ ಪುರುಷ ಪ್ರಧಾನ ಸಮಾಜದಲ್ಲಿ ಪರಂಪರಾಗತವಾಗಿ ಬಂದ ಶೋಷಣೆಗಳನ್ನು ಪ್ರತಿಭಟಿಸಿ, ತಮ್ಮ ಆತ್ಮಶಕ್ತಿ ಬೆಳೆಸಿಕೊಳ್ಳುವ ಮೂಲಕ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸಿದ್ದನ್ನು ತಳಸ್ತರದ ವಚನಕಾರ್ತಿಯರ ವಚನಗಳಲ್ಲಿ ಕಾಣುತ್ತೇವೆ. ಸಮಾಜದಲ್ಲಿ ಕೆಳವರ್ಗದ ಹೆಣ್ಣುಮಕ್ಕಳ ಮೇಲೆ ತೋರುವ ಅಗೌರವ, ನಡೆಸುವ ದೌರ್ಜನ್ಯ, ಶೋಷಣೆಗಳನ್ನು ಪ್ರತಿಭಟಿಸುತ್ತಾ, ಗಂಡು ಹೆಣ್ಣಿನ ಬಗೆಗಿರುವ ತಾರತಮ್ಯದ ಕಲ್ಪನೆ ಹಾಗೂ ಸತಿಪತಿಯರಿಬ್ಬರಲ್ಲೂ ಸಮಾನ ಗೌರವ, ಕರ್ತವ್ಯಗಳ ಬಗ್ಗೆ ತಳಸ್ತರದ ವಚನಕಾರ್ತಿಯರು ದಿಟ್ಟವಾಗಿ ತಮ್ಮ ವಚನಗಳಲ್ಲಿ ತಿಳಿಸಿದ್ದಾರೆ. ವೇದಕಾಲೀನವೇ ಇರಲಿ, ಇಲ್ಲವೇ ಯಾವುದೇ ಕಾಲದ ದೇವಪೂಜಾವಿಧಿಗಳನ್ನು ನಿರಾಕರಿಸುತ್ತಾ ಶುದ್ಧ ಚಾರಿತ್ರ್ಯದ ಬಗ್ಗೆ, ಕಾಯಕತತ್ವದಲ್ಲಿಯ ಬದ್ಧತೆಯನ್ನು ಈ ವಚನಕಾರ್ತಿಯರು ತೋರಿದ್ದು ನಿಜವಾಗಿಯೂ ಪ್ರಶಂಸನೀಯ.

ಶ್ರೀ ದೊಡ್ಡನಾಯ್ಕ ಎಚ್. ಅವರು ತಳಸ್ತರದ ವಚನಕಾರ್ತಿಯರದ್ದಷ್ಟೇ ಅಲ್ಲದೆ ಒಟ್ಟು ವಚನ ಸಾಹಿತ್ಯವನ್ನು ಅಧ್ಯಯನ ಮಾಡಿ ಬರೆದ ಈ ದೀರ್ಘ ಪ್ರಬಂಧದಲ್ಲಿ ಮಂಡಿತವಾದ ಚಿಂತನೆಗಳು ಮೌಲಿಕವಾಗಿವೆ. ಅವರಿಗೆ ಅಭಿನಂದನೆಗಳು. ಹಾಗೂ ಈ ಪುಸ್ತಕವನ್ನು ಹೊರತರಲು ಸಹಕರಿಸಿ ಶ್ರಮಿಸಿದ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀಮತಿ ಸಿ.ಎಚ್.ಭಾಗ್ಯ, ಮತ್ತು ಶ್ರೀ ಹರೀಶ್ ಹಾಗೂ ಮುದ್ರಣ ಕಾರ್ಯ ನಿರ್ವಹಿಸಿದ ಸರ್ಕಾರಿ ಮುದ್ರಣಾಲಯದ ನಿರ್ದೇಶಕರು ಹಾಗೂ ಅಧಿಕಾರಿ/ ಸಿಬ್ಬಂದಿಗಳೆಲ್ಲರನ್ನೂ ನಾನಿಲ್ಲಿ ಕೃತಜ್ಞತೆಗಳೊಂದಿಗೆ ನೆನೆಯುತ್ತೇನೆ.

2016

**ಮಾಲತಿ ಪಟ್ಟಣಶೆಟ್ಟಿ**
ಅಧ್ಯಕ್ಷರು

## ಮಾರ್ಗದರ್ಶಕರ ಮಾತು

ದೊಡ್ಡನಾಯಕ ಎಚ್. ಅವರು 'ತಳಸ್ತರದ ವಚನಕಾರ್ತಿಯರ ವಚನಗಳ ಅಧ್ಯಯನ' ಎಂಬ ವಿಷಯವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಸಂಶೋಧನಾ ಪ್ರಬಂಧವನ್ನು ಮಂಡಿಸಿದ್ದಾರೆ. ನನ್ನ ಮಾರ್ಗದರ್ಶನದಲ್ಲಿ ನಡೆದ ಈ ಅಧ್ಯಯನವು ತಳಸ್ತರದ ವಚನಕಾರ್ತಿಯರ ಬದುಕು ಮತ್ತು ಸಮಾಜದ ಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಮಾಡುತ್ತದೆ. ಈ ವಿಷಯದ ಬಗ್ಗೆ ಈಗಾಗಲೇ ಸಾಕಷ್ಟು ಅಧ್ಯಯನಗಳು ಬಂದಿದ್ದರೂ, ವಿದ್ಯಾರ್ಥಿಗಳಿಗೆ ಹಾಗೂ ಮೂಲಭೂತ ಮಾಹಿತಿಯನ್ನು ನೀಡುವ ಒಂದು ಸರಳ ಓದಿಗೆ ಅನುಕೂಲವಾಗುವಂತೆ ದೊಡ್ಡನಾಯಕ ಅವರು ಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

**ಡಾ. ಬಿ.ಯು. ಸುಮಾ**
ಮಾರ್ಗದರ್ಶಕರು

# ಪರಿವಿಡಿ


ಪುಟ ಸಂಖ್ಯೆ

ಅಧ್ಯಕ್ಷರ ನುಡಿ iii

ಮಾರ್ಗದರ್ಶಕರ ಮಾತು v

ನನ್ನ ಮಾತು

**ಅಧ್ಯಾಯ–01: 01–05**

**ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ**

**ಅಧ್ಯಾಯ–02: 6–59**

**ತಳಸ್ತರದ ವಚನಕಾರ್ತಿಯರ ಪರಿಚಯ ಮತ್ತು ವಚನಗಳು**

0.1 ತಳಸ್ತರದ ವಚನಕಾರ್ತಿಯರು ಯಾರು? ಏಕೆ ಹೀಗೆ ಕರೆಯುತ್ತೇವೆ?

0.2 ಒಟ್ಟು ಲಭ್ಯವಾದ ವಚನಕಾರ್ತಿಯರು ಮತ್ತು ವಚನಗಳ ಸಂಖ್ಯೆ

0.3 ತಳಸ್ತರದ ವಚನಕಾರ್ತಿಯರ ಪರಿಚಯ ಮತ್ತು ವಚನಗಳು

**ಅಧ್ಯಾಯ–03: 60–95**

**ತಳಸ್ತರದ ವಚನಕಾರ್ತಿಯರ ಸಮಾಜದ ಕಲ್ಪನೆ**

0.1 ಕುಟುಂಬ ಕಲ್ಪನೆ

0.2 ಸಾಮಾಜಿಕ ನೆಲೆ

0.3 ಹೆಣ್ಣು–ಗಂಡಿನ ಕಲ್ಪನೆ

0.4 ಸತಿ–ಪತಿ ಭಾವದ ಕಲ್ಪನೆ

0.5 ವೈಚಾರಿಕ ನೆಲೆ

**ಅಧ್ಯಾಯ–04: 96–132**

**ಆಚರಣೆಗಳು**

0.1 ಆಚರಣೆಯ ಲಾಭ ಯಾರಿಗೆ ಮತ್ತು ಯಾವ ಯಾವ ರೂಪದಲ್ಲಿವೆ?

0.2 ಆಚರಣೆಗಳ ನಿರ್ಮಾಣ ಮತ್ತು ನಿಯಂತ್ರಣ

0.3 ಆಚರಣೆಗಳ ಬಗ್ಗೆ ವಚನಕಾರ್ತಿಯರು ತಳೆಯುವ ನಿಲುವುಗಳೇನು?

0.4 ಆಚರಣೆಗಳ ಬಗ್ಗೆ ವಚನಕಾರರು ತಳೆದ ನಿಲುವುಗಳು.

**ಅಧ್ಯಾಯ–05 133–136**

**ಉಪಸಂಹಾರ**

**ಅನುಬಂಧ 137–139**

# ಅಧ್ಯಾಯ-೦೧

## ಅಧ್ಯಯನದ ಉದ್ದೇಶ, ವಿಧಾನ ಮತ್ತು ವ್ಯಾಪ್ತಿ

ತಳಸ್ತರದ ವಚನಕಾರ್ತಿಯರನ್ನು ವಿಶೇಷವಾಗಿ ಓದುವ ಅಗತ್ಯ ಏಕೆ ಒದಗಿದೆ ಅಂದರೆ ವಸಾಹತುಶಾಹಿ ಆಡಳಿತ ಮತ್ತು ಈ ಆಡಳಿತ ವಲಯದ ಜೊತೆಗೆ ಸಹಯೋಗದಲ್ಲಿದ್ದ ಮೇಲ್ಜಾತಿಯ ಹಿತಾಸಕ್ತಿಗಳು, ಕೆಳಜಾತಿಯ ಚಿಂತನೆ, ಸಿದ್ಧಾಂತ ಮತ್ತು ತತ್ವ ಇವುಗಳನ್ನು ಅಲಕ್ಷಿಸುವ, ಪ್ರಜ್ಞಾಪೂರ್ವಕವಾಗಿ ಪರಿಧಿಗೆ ತಳ್ಳುವ ಕೆಲಸವನ್ನು ಮಾಡಲಾಗಿದೆ. ಹೀಗಾಗಿ ಭಾರತದಲ್ಲಿರುವ ಸಾಂಸ್ಕೃತಿಕ ರಾಜಕಾರಣದ ಸ್ವರೂಪವನ್ನು ನಿರ್ವಚಿಸುವಲ್ಲಿ, ವ್ಯಾಖ್ಯಾನಿಸುವಲ್ಲಿ ತಳಸ್ತರದ ವಚನಕಾರ್ತಿಯರ ವಚನಗಳು ನಿರ್ಣಾಯಕವಾದ ಪಾತ್ರವಹಿಸುತ್ತವೆ.

ಪ್ರಾಚೀನ, ನವೋದಯ ಮತ್ತು ನವ್ಯ ಕಾಲದಲ್ಲಿ ಸಂಸ್ಕೃತಿಯನ್ನು ವ್ಯಾಖ್ಯಾನಿಸುವವರು ಯಾರು ಆಗಿದ್ದರು? ಅವರು ಮಾಡುತ್ತಿದ್ದ ರಾಜಕಾರಣ ಹೇಗಿತ್ತು? ಈ ರಾಜಕಾರಣ ಹೇಗೆ ಕೆಳಜಾತಿಯ ಸಂಸ್ಕೃತಿಗೆ ದಕ್ಕಬೇಕಾದ ಅಧಿಕೃತತೆಯನ್ನು ದಕ್ಕಿಸಿಕೊಡುವಲ್ಲಿ ಸೋತು ಹೋಯಿತು. ಈ ಕಾಲದಲ್ಲಿ ವಚನಗಳ ಬಗ್ಗೆ ಸಾಕಷ್ಟು ಅಧ್ಯಯನ ನಡೆದರೂ ತಳಸ್ತರದ ವಚನಕಾರ್ತಿಯರ ವಚನಗಳ ಆಶಯಗಳನ್ನು ಸರಿಯಾಗಿ ಗ್ರಹಿಸಲು ಆಗಲಿಲ್ಲ. ಹೀಗಾಗಿ ಈ ವಚನಗಳನ್ನು ಮರುವ್ಯಾಖ್ಯಾನಿಸುವ ಪ್ರಯತ್ನ ಈ ನನ್ನ ಅಧ್ಯಯನದ್ದಾಗಿದೆ. ಪ್ರತಿಯೊಂದು ಸಮುದಾಯದ ಸಂಸ್ಕೃತಿ ಸಾಹಿತ್ಯಕ್ಕೆ ತನ್ನದೆ ಆದ, ವಿಶಿಷ್ಟವಾದ ಅನನ್ಯತೆ ಇರುತ್ತದೆ. ಈ ಅನನ್ಯತೆಗಳನ್ನು ಗ್ರಹಿಸಲು ವಸಾಹತುಶಾಹಿ ಸಂದರ್ಭದ ಚಿಂತನೆಗಳ ವಿಧಾನಗಳನ್ನು ನೇರವಾಗಿ ನೀಡಲಿಲ್ಲ. ಆದ್ದರಿಂದ ಇದರ ಪರಿಣಾಮ ವಚನಗಳನ್ನು ಸೀಮಿತ ದೃಷ್ಟಿಕೋನದಲ್ಲಿ ಸರಾಸಗಟಾಗಿ ಎಲ್ಲಾ ವಚನಗಳ ಆಶಯಗಳು ಇಷ್ಟೇ ಎಂದು ಸಾಮಾನ್ಯೀಕರಿಸುವ ಅಪಾಯ ಒಂದು ಸೃಷ್ಟಿಯಾಯಿತು. ಈ ಅಪಾಯದಿಂದ ವಚನಗಳಿಗೆ ಮತ್ತು ನಮ್ಮ ಸಂಸ್ಕೃತಿಯ ಬಹುಮುಖಿ ಆಶಯಗಳಿಗೆ ದಕ್ಕಬೇಕಾದ ಅಧಿಕೃತತೆಯು ದಕ್ಕದೆ ಹೋಯಿತು.

ದಲಿತ ಮತ್ತು ಬಂಡಾಯ ಕಾಲಘಟ್ಟದ ಅಧ್ಯಯನ ವಿಧಾನಗಳು ಈ ಮೇಲಿನ ಎರಡು ಅಪಾಯಗಳನ್ನು (ಸೀಮಿತತೆಯನ್ನು) ಮೀರುವ ಪ್ರಯತ್ನ ಮಾಡಿದರು. ಹಾಗೂ ಕೇವಲ ಮಾರ್ಕ್ಸ್‌ವಾದ, ಉಪಸಂಸ್ಕೃತಿಗಳ ಸಿದ್ಧಾಂತದ ಹಿನ್ನೆಲೆಯಲ್ಲಿ ವಚನಗಳನ್ನು ಗ್ರಹಿಸುವ ಪ್ರಯತ್ನ ಮಾಡಲಾಗಿದೆ. ಇದರಿಂದ

ಜಾತಿ ಹೋರಾಟ ಮತ್ತು ವರ್ಗ ಹೋರಾಟದ ನಡುವಿನ ರಾಜಕಾರಣ ವಿಭಿನ್ನ ನೆಲೆಯಲ್ಲಿ ಅನಾವರಣಗೊಂಡರೂ ತಳಸ್ತರದ ವಚನಕಾರ್ತಿಯರ ವಚನಗಳ ಸೈದ್ಧಾಂತಿಕ ನೆಲೆಗಳನ್ನು ವಿವರಿಸುವುದರಲ್ಲಿ ಇವು ಕೂಡ ಸಫಲವಾಗಲಿಲ್ಲ. ಅಂದರೆ ದಲಿತ ಮತ್ತು ಬಂಡಾಯದ ಸಾಹಿತಿಗಳು ತಮ್ಮ ಚಳುವಳಿ ಮತ್ತು ಹೋರಾಟಕ್ಕೆ ಪೂರಕವಾಗುವ ಹಾಗೆ ಮಾತ್ರ ವಚನಗಳನ್ನು ಅರ್ಥ ಮಾಡಿಕೊಳ್ಳುತ್ತ ಹೋದವು. ಇವೆಲ್ಲಕ್ಕಿಂತ ಮುಖ್ಯವಾದ ಇನ್ನೊಂದು ತೊಡಕು ವಚನಗಳ ಚಿಂತನೆಯನ್ನು ಅರಿಯಲು ಉಂಟಾಗಿದ್ದೆಂದರೆ ಪಿತೃ ಪ್ರಧಾನ್ಯತೆಯ ರಚನೆಗಳು ವಚನಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವಲ್ಲಿ ಸೋತು ಹೋಗಿವೆ.

ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಗಳಿಂದಾಗಿ ಸಮಾಜದಲ್ಲಿ ಸ್ತ್ರೀಗೆ ಉಂಟಾಗಿದ್ದ ಅಸಮಾನತೆ, ಶೋಷಣೆಗಳನ್ನು ಕಂಡ ವಚನಕಾರ್ತಿಯರು ಸ್ತ್ರೀ–ಪುರುಷ ಭೇದರಹಿತ ಉಭಯ ಪ್ರಧಾನ ಕುಟುಂಬ ಪದ್ಧತಿಯನ್ನು ತರಲು ಪ್ರಯತ್ನಿಸಿದರು. ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಎರಡು ನೆಲೆಗಳಲ್ಲಿಯೂ ಆಕೆ ಸಮಾನ ಅವಕಾಶಗಳೊಂದಿಗೆ ಬದುಕಲು ಅನುವು ಮಾಡಿಕೊಳ್ಳಲು ಪ್ರಯತ್ನಿಸಿದ್ದಾಳೆ. ಇದನ್ನು ಅವರ ಬದುಕಿನ ಘಟನೆಗಳು, ಬದುಕಿನ ಮೌಲ್ಯಗಳ ಅಭಿವ್ಯಕ್ತಿಯನ್ನೇ ಗುರಿಯನ್ನಾಗಿ ಇಟ್ಟುಕೊಂಡ ವಚನಗಳೂ ನಿಚ್ಚಳವಾಗಿ ನಿರ್ವಚಿಸುತ್ತವೆ.

ವಚನಗಳನ್ನು ವಿವರಿಸಿದ, ವ್ಯಾಖ್ಯಾನಿಸಿದ ಎಲ್ಲಾ ವಿದ್ವಾಂಸರು ನವೋದಯ ದೃಷ್ಟಿಕೋನದಿಂದ ಮಾತ್ರ ಅದನ್ನು ಗ್ರಹಿಸುತ್ತಿದ್ದರು. ಎನ್ನುವ ವಾದದಿಂದ ಸ್ತ್ರೀ ಕಲ್ಪನೆಯ ಸಮಾಜ, ಸಂಸ್ಕೃತಿ ತಾತ್ವಿಕತೆಗಳ ಕಲ್ಪನೆಗೆ ದಕ್ಕಬೇಕಾದ ಅಧಿಕೃತತೆ ದಕ್ಕಲಿಲ್ಲ. ಆದ್ದರಿಂದ ತಳಸ್ತರದ ವಚನಕಾರ್ತಿಯರ ವಚನಗಳನ್ನು ಪ್ರಾಚೀನ ನವೋದಯ ಮತ್ತು ನವ್ಯ ನೆಲೆಗಳ ಈ ಎಲ್ಲದರಾಚೆಗೆ ಬೌದ್ಧತತ್ವ ಅಥವಾ ಸಿದ್ಧಾಂತದ ನೆಲೆಯಲ್ಲಿ ವಚನಕಾರ್ತಿಯರ ವಚನಗಳನ್ನು ವಿವರಿಸುವ ಪ್ರಯತ್ನ ಈ ಅಧ್ಯಾಯಗಳಲ್ಲಿ ಮಾಡಲಾಗಿದೆ.

**ಈ ಅಧ್ಯಯನದ ಮುಖ್ಯ ಪ್ರಶ್ನೆಗಳು :**

- ವಚನದಲ್ಲೇ ಲಭ್ಯವಾಗುವ ಚಿಂತನೆ ಮತ್ತು ಪರಿಭಾಷೆಯ ಮೂಲವನ್ನು ಹುಡುಕಿಕೊಂಡು ಹೋಗುವುದು.

- ವಚನಗಳಲ್ಲಿ ಯೋಗದ, ಚಕ್ರದ ಕುಂಡಲಿಯ ಉಲ್ಲೇಖಗಳು ಪದೇ ಪದೇ ಬರುತ್ತವೆ. ಇವುಗಳನ್ನು ಆಚರಿಸುವವರು ಏನನ್ನು ಸಾಧಿಸುವ ಪ್ರಯತ್ನದಲ್ಲಿ ಇರುತ್ತಾರೆ.
- ಈ ಸಾಧನೆ ಹೇಗೆ ಸಮಾಜದ ಮತ್ತು ಮನುಷ್ಯ ನಿರ್ಮಿತ ಚೌಕಟ್ಟುಗಳಾಚೆಗೆ ಮನಸ್ಸನ್ನು ವಿಸ್ತರಿಸುತ್ತದೆ. ಆ ಮೂಲಕ ಹೇಗೆ ಅದರ ಎದುರಿಗೆ ಒಂದು ಹೊಸ ವಿಧಾನ ನೀಡುತ್ತದೆ. ಎನ್ನುವುದನ್ನು ಹೇಳುವುದೇ ಈ ಅಧ್ಯಯನದ ವಿಧಾನ.

ಈ ನಿಟ್ಟಿನಲ್ಲಿ ಆಲೋಚಿಸಿದಾಗ ನಮ್ಮನಾಡಿನ ನೆಲ(ತಳ)ಮೂಲ ಸಾಹಿತ್ಯವೇ ವಚನ ಸಾಹಿತ್ಯದ ಸಾರ ಮತ್ತು ಸಾಂಸ್ಕೃತಿಕ ಆಸ್ತಿ. ಈ ಆಸ್ತಿಯನ್ನು ತಳಸ್ತರದ ವಚನಕಾರ್ತಿಯರ ವಚನಗಳಲ್ಲಿ ಕಾಣಬಹುದು. ವಚನ ಸಾಹಿತ್ಯದ ಪೂರ್ವದಲ್ಲಿ ಸ್ತ್ರೀಯರ ಸ್ಥಿತಿ ಶೋಚನೀಯವಾಗಿತ್ತು. ದ್ರಾವಿಡ ಸಂಸ್ಕೃತಿಯಲ್ಲಿ ಎಲ್ಲ ರೀತಿಯಿಂದಲೂ ಗೌರವದ ಸ್ಥಾನವನ್ನು ಹೊಂದಿ, ಕುಟುಂಬದ ಸಮಗ್ರ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದ ಆಕೆ, ಆರ್ಯ ಸಂಸ್ಕೃತಿಯ ದಾಳಿಯಿಂದ ಪಿತೃ ಪ್ರಧಾನ ಕುಟುಂಬ ಪದ್ಧತಿಗೆ ಜಾರಿಕೊಂಡು ಪರಾಧೀನಳಾದಳು.[2] ಅಂದರೆ ಆರ್ಯರ ದಾಳಿಯಿಂದ ಮಾತೃ ಪ್ರಧಾನ ಜಾಗಕ್ಕೆ ಪಿತೃ ಪ್ರಧಾನ ನೆಲೆಗಳು ಆಕ್ರಮಿಸಿಕೊಂಡವು ಎಂತಲು ಇದರಿಂದ ಸ್ತ್ರೀಯ ಕೈಯಿಂದ ಅಧಿಕಾರ, ಗೌರವ, ಹೊಣೆಗಾರಿಕೆ ಪುರುಷನಿಗೆ ವರ್ಗವಾಯಿತೆಂದು ಅರ್ಥವಲ್ಲವೆ?

ವೈದಿಕ ಪರಂಪರೆಯನ್ನು ಸಾರುವ ಧರ್ಮಶಾಸ್ತ್ರಗಳು ಹುಟ್ಟಿಕೊಂಡು ಸ್ತ್ರೀಯರು ಆಚಾರ-ವಿಚಾರ, ಸಂಪ್ರದಾಯ, ರೂಢಿ, ವ್ರತ, ಆಚರಣೆಗಳಂತಹ ನಿಯಮವನ್ನು ಪಾಲಿಸುವಂತೆ ಮಾಡಿದವು. ಸ್ತ್ರೀ ಮೇಲೆ ಇಲ್ಲ-ಸಲ್ಲದ ನಿರ್ಬಂಧಗಳನ್ನು ಹೇರಿ, ಅವಳ ಸ್ವಾತಂತ್ರ್ಯವನ್ನು ಕಿತ್ತುಕೊಂಡು, ಅವಳನ್ನು ದಾಸಿಯ ನೆಲೆಯ ಅವಹೇಳನಕ್ಕೆ ಗುರಿ ಮಾಡಿದರು. ಹೆಣ್ಣಿನ ನೈಸರ್ಗಿಕ ಕ್ರಿಯೆಯಾದ ಋತುಚಕ್ರ (ಮುಟ್ಟಾಗುವಿಕೆ)ಯನ್ನು ಅಪವಿತ್ರವೆಂದು ಕಲ್ಪಿಸಿ, ಅವಳನ್ನು ವೈದಿಕ ಪರಂಪರೆಯಲ್ಲಿ ಶೂದ್ರರ ಸಾಲಿಗೆ ಸೇರಿಸಲಾಗಿತ್ತು.[3] ಅಲ್ಲದೇ ಅವಳ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ನೈತಿಕ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಅವಕಾಶಗಳನ್ನೆಲ್ಲ ಕಿತ್ತುಕೊಂಡು ಅವಳನ್ನು ತಳಸ್ತರಕ್ಕೆ ತಳ್ಳಲಾಗಿತ್ತು. ವೈದಿಕ ಸಂಸ್ಕೃತಿಯಲ್ಲಿ ಹೆಣ್ಣಿಗೆ ಸ್ವಾತಂತ್ರ್ಯವಿಲ್ಲ. ಅವಳು ಪಾರಮಾರ್ಥವನ್ನು

ಕುರಿತು ಚಿಂತಿಸುವಂತಿಲ್ಲ. ಅವಳು ಆತ್ಮೋದ್ಧಾರದ ಹಂಬಲವಿಲ್ಲದೆ ಬದುಕುವಂತಾಗಿತ್ತು.[೪]

ಸ್ತ್ರೀಯೊಬ್ಬಳು ಅಬಲೆ, ಸ್ತ್ರೀಯೊಬ್ಬಳು ದುರ್ಬಲಳು, ಸ್ತ್ರೀಯೊಬ್ಬಳು ಅಸಮರ್ಥಳು, ಸ್ತ್ರೀಯು ಸ್ವಾತಂತ್ರ್ಯಕ್ಕೆ, ಮೋಕ್ಷಕ್ಕೆ ಅರ್ಹಳಲ್ಲ ....... ಹೀಗೆ....... ಹಾಗೇ....... ಎಂದು ಅವಳಿಗೆ ಅವಳ ಮೇಲೆಯೇ ಕೀಳರಿಮೆ ಉಂಟಾಗುವ ಹಾಗೆ ಮಾಡಿದರು. ಉಸುರುಗಟ್ಟುವ ವಾತಾವರಣದಲ್ಲಿ ಜೀವಂತ ಶವವಾಗಿ ಬದುಕುವಂತೆ ಮಾಡಿದರು. ಸ್ತ್ರೀಯ ಅಭಿವ್ಯಕ್ತಿಯ ಧ್ವನಿಯನ್ನು ಅಡಗಿಸಲಾಗಿತ್ತು. ಇಂತಹ ಪರಿಸ್ಥಿತಿಯಿಂದಲೂ ಸಿಡಿದೆದ್ದು ಸ್ತ್ರೀಯ ಸಮುದಾಯಕ್ಕೆ ಶಕ್ತಿ, ಸ್ಫೂರ್ತಿಯಾಗಿ ನಿಂತವರು ತಳಸ್ತರದ ವಚನಕಾರ್ತಿಯರು. ಪುರುಷ ನಿರ್ಮಿತ ಸಮಾಜದ ಮೌಢ್ಯತೆ, ಆಚರಣೆ, ವ್ರತ, ನಿಷ್ಠೆ ಮೊದಲಾದ ವಿಷಯಗಳಿಗೆ ನಿರ್ಭಯದಿಂದ ವಚನದ ಮೂಲಕ ಉತ್ತರಕೊಟ್ಟವರು.ಈ ಮೂಲಕ ಸ್ತ್ರೀಯರ ಶಕ್ತಿಯನ್ನು ಜಗತ್ತಿಗೆ ಸಾರಿದ ಕೀರ್ತಿ ಇವರದಾಗಿದೆ. ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃ ಪ್ರಧಾನ ಕುಟುಂಬ ಪದ್ಧತಿಯ ವಿರುದ್ಧ ತಳಸ್ತರದ ವಚನಕಾರ್ತಿಯರು ವಚನಗಳ ಮೂಲಕ ಮಾತನಾಡಿದರು. ಸ್ತ್ರೀ–ಪುರುಷ ಸಮಾನತೆಯ ಕುಟುಂಬ ಪದ್ಧತಿಯನ್ನು ಅಸ್ತಿತ್ವಕ್ಕೆ ತರಲು ಪ್ರಯತ್ನಿಸಿದರು.[೫]

ಆ ಮೂಲಕ ವಚನಕಾರ್ತಿಯರು ತಮಗೆ ಇಷ್ಟವಾದವರ ಒಡೆಯನ, ತಂದೆಯ, ಅಣ್ಣನ, ಗಂಡನ, ಇಷ್ಟದೈವದ, ಗುರುವಿನ, ಕಾಯಕದ ಹೆಸರನ್ನು ಮತ್ತು ತಮಗೆ ಇಷ್ಟವಾದ ಆಚಾರ, ವ್ರತ, ಕಾಯಕ ವೃತ್ತಿ....... ಇತ್ಯಾದಿ ಹೆಸರನ್ನು ಅಂಕಿತನಾಮವಾಗಿ ಮಾಡಿಕೊಂಡು ವಚನಗಳನ್ನು ರಚಿಸಿದ್ದಾರೆ. ಈ ವಚನಕಾರ್ತಿಯರು ಅವರವರ ವಚನಗಳ ಅಂಕಿತನಾಮದ ಮೂಲಕ ಕಾಯಕದ ಮಹತ್ವ ಸಾರಿದರು. ಆದರೆ ಕೆಲ ವಚನಕಾರ್ತಿಯರು ತಮ್ಮ ಇಷ್ಟ ದೈವದ (ಸತ್ಯಕ್ಕ, ಗೊಗ್ಗವ್ವೆ, ಸಂಕವ್ವೆ), ಒಡೆಯನ, ಗಂಡನ (ಉರಿಲಿಂಗ ಪೆದ್ದಿಗಳ ಕಾಳವ್ವೆ, ಕಾಳಕೂಟಯ್ಯಗಳ ರೇಚವ್ವೆ, ಮಂಚಣ್ಣಗಳ ರಾಯಮ್ಮ, ಆಯ್ದಕ್ಕಿ ಲಕ್ಕಮ್ಮ, ಗುಂಡಯ್ಯಗಳ ಕೇತಲದೇವಿ), ಅಣ್ಣನ (ಮುಕ್ತಾಯಕ್ಕ), ಗುರುವಿನ (ಕೊಟ್ಟಣದ ಸೋಮವ್ವೆ, ದಸರಯ್ಯಗಳ ವೀರಮ್ಮ, ರೇವಣ ಸಿದ್ಧಯ್ಯಗಳ ರೇಕಮ್ಮ) ಕಾಯಕದ (ಅಕ್ಕಮ್ಮ, ಗಂಗಮ್ಮ, ಹಡಪದಪ್ಪಣ್ಣಗಳ ಲಿಂಗಮ್ಮ) ಹೆಸರನ್ನು ಮತ್ತು ತಮಗೆ ಇಷ್ಟವಾದ ಆಚಾರ, ವ್ರತ, ವೃತ್ತಿಗಳನ್ನು ಅಂಕಿತನಾಮಗಳಾಗಿ ಇಟ್ಟುಕೊಂಡು ವಚನಗಳನ್ನು ರಚಿಸಿದ್ದಾರೆ. ಹೀಗೆ ಒಟ್ಟು ಮೂವತ್ತೆರಡು ತಳಸ್ತರದ ವಚನಕಾರ್ತಿಯರನ್ನು ಗುರುತಿಸಿದ್ದೇನೆ. ಇನ್ನು ಕೆಲ

ವಚನಕಾರ್ತಿಯರ ಹೆಸರು ಮತ್ತು ಅಂಕಿತನಾಮಗಳು ಮಾತ್ರ ಲಭ್ಯವಾಗಿವೆ. ಅವರುಗಳೆಂದರೆ ನೀಲಲೋಚನೆಯು ಸಂಗಯ್ಯ ಎಂಬ ಅಂಕಿತದಲ್ಲಿ ವಚನಗಳನ್ನು ಬರೆದ ವಚನಕಾರ್ತಿಯಾಗಿದ್ದಾಳೆ. ಮಹಾದೇವಿಯು "ಮಹಾದೇವ ಜ್ಯೋತಿರ್ಲಿಂಗ" ಎಂಬ ಅಂಕಿತವಿಟ್ಟು ವಚನ ರಚನೆ ಮಾಡಿದ್ದಾಳೆ. ಸುವರ್ಣಾದೇವಿಯು 'ಸುವರ್ಣಲಿಂಗ' ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾಳೆ. ಸೋಮವ್ವೆಯು 'ಶಾಂತ ಮಲ್ಲಿಕಾರ್ಜುನ' ಎಂಬ ಅಂಕಿತದಿಂದ ವಚನಗಳನ್ನು ರಚಿಸಿದ್ದಾಳೆ. ತಿಬ್ಬವ್ವೆಯು 'ಶ್ರೀಶೈಲ ಮಲ್ಲಿಕಾರ್ಜುನ' ನೆಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾಳೆ. ಬಿಬ್ಬಿಯು ತಿಬ್ಬವ್ವೆಯ ಸೊಸೆಯಾದವಳು, ಅತ್ತೆಯ ಮೇಲಣ ಭಕ್ತಿ ಗೌರವಗಳಿಂದಾಗಿ ತನ್ನ ವಚನಗಳನ್ನು 'ತಿಬ್ಬವ್ವೆ ಪ್ರಿಯ ಮಲ್ಲಿಕಾರ್ಜುನ' ಎಂದು ಅಂಕಿತವಿಟ್ಟು ಬರೆದಿದ್ದಾಳೆ. ತಿಮ್ಮವ್ವೆಯು 'ಆದಿಲಿಂಗ' ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾಳೆ. ಚಿಬ್ಬವ್ವೆಯು 'ತಿಮ್ಮವ್ವೆ ಪ್ರಿಯ ಆದಿಲಿಂಗ' ಎಂಬ ಹೆಸರಿನಿಂದ ವಚನಗಳನ್ನು ಬರೆದಿದ್ದಾಳೆ. ಗಿರಿಜಾದೇವಿಯು 'ಗಿರಿಜಾರಮಣ' ಎಂಬ ಅಂಕಿತವಿಟ್ಟು ವಚನಗಳನ್ನು ಬರೆದಿದ್ದಾರೆಂದು ಗುರುತಿಸಬಹುದು. ಆದರೆ ಇವರುಗಳ ಯಾವ ಒಂದು ವಚನವೂ ಲಭ್ಯವಿಲ್ಲ. ಹೀಗಾಗಿ ಅಂದು ಎಚ್ಚೆತ್ತ ಸಮಾಜದ ಸ್ತ್ರೀಯರು ವಚನಗಳನ್ನು ಬರೆದಿದ್ದರೂ ನಮಗೆ ಲಭ್ಯವಾಗದಿರುವ ವಚನಕಾರ್ತಿಯರು ಇರಬಹುದು. ಕೆಲವು ವಚನಕಾರ್ತಿಯರ ಹೆಸರು ಸಿಕ್ಕರೆ, ಮತ್ತೆ ಕೆಲವರ ಅಂಕಿತನಾಮ ಮಾತ್ರ ಸಿಕ್ಕಿವೆ. ಇನ್ನೂ ಕೆಲವರದು ವಚನಗಳು ಮಾತ್ರ ಸಿಕ್ಕಿರುವ ಉದಾಹರಣೆಗಳಿವೆ. ಹೀಗೆ ಲಭ್ಯವಿರುವ ವಚನಕಾರ್ತಿಯರ ವಚನಗಳೇ ನನ್ನ ಅಧ್ಯಯನದ ವ್ಯಾಪ್ತಿ ಮತ್ತು ಮಿತಿ. ಇವುಗಳನ್ನು ಇಟ್ಟುಕೊಂಡೆ ವಚನಗಳನ್ನು ವಿಶ್ಲೇಷಣೆ ಮಾಡಿದ್ದೇನೆ.

**ಅಡಿ ಟಿಪ್ಪಣಿ :**

೧. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೧
೨. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೦, ೨೧
೩. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೪
೪. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೫
೫. ವಚನಕಾರ್ತಿಯರು – ಪುಟ ಸಂಖ್ಯೆ : ೪೦, ೪೧, ೪೨, ೪೩, ೪೪, ೪೬, ೪೭, ೪೮

## ಅಧ್ಯಾಯ-೨

## ತಳಸ್ತರದ ವಚನಕಾರ್ತಿಯರ ಪರಿಚಯ ಮತ್ತು ವಚನಗಳು.

### ೧. ತಳಸ್ತರದ ವಚನಕಾರ್ತಿಯರು ಯಾರು? ಏಕೆ ಹೀಗೆ ಕರೆಯುತ್ತೇವೆ?

'ತಳಸ್ತರ' ಎಂಬುದು ಇಂದು ವಿವಿಧ ವಲಯಗಳಲ್ಲಿ ಬಳಕೆಯಾಗುತ್ತಿದೆ. ಸಾಮಾಜಿಕ, ಧಾರ್ಮಿಕ, ರಾಜಕೀಯ ಕ್ಷೇತ್ರಗಳಲ್ಲಿ ಸಮಾಜದ ಅಂಚಿನವರನ್ನು, ಸರ್ಕಾರಿ ಸೌಲಭ್ಯಗಳು ಸಿಗದಿದ್ದವರನ್ನು ಸೂಚಿಸಲು ಇದನ್ನು ಬಳಸಲಾಗುತ್ತಿದೆ. ಈ ದೃಷ್ಟಿಯಿಂದ ಇದು 'ವಂಚಿತರು' ಎಂಬ ಸಾಮಾನ್ಯರನ್ನು ವಿಶಾಲಾರ್ಥದಲ್ಲಿ 'ಶೋಷಿತರು' ಎಂಬ ಆಯಾಮವನ್ನು ಪಡೆದುಕೊಂಡಿದೆ. 'ತಳಸ್ತರ' ಎಂಬುದನ್ನು ಬಳಸುವಾಗಲೆಲ್ಲಾ ಅದನ್ನು ಮುಖ್ಯವಾಹಿನಿಗೆ ವಿರುದ್ಧವಾಗಿ ಬಳಸುವುದು ರೂಢಿಯಾಗಿದೆ. ಹೀಗೆ ಈ ಎರಡನ್ನೂ ಎದುರು-ಬದುರು ಇಟ್ಟು ನೋಡುವಾಗ ಮುಖ್ಯವಾಹಿನಿಯನ್ನು ಆಧುನಿಕತೆ, ನಾಗರಿಕತೆ ಎಂತಲೂ, 'ಕೆಳಸ್ತರ'ದವರನ್ನು ಅನಾಗರಿಕರು ಎಂತಲೂ ಗುರುತಿಸಲಾಗಿದೆ.[೧] ಈ ಹಿನ್ನೆಲೆಯಲ್ಲಿ ತಳಸ್ತರದ ಬಗ್ಗೆ ಮಾತನಾಡುವವರೆಲ್ಲಾ ಇವರು ಆಧುನಿಕತೆಗೆ ಹೋಗಬೇಕೆ ಬೇಡವೇ ಎಂಬ ಗೊಂದಲಮಯ ಚರ್ಚೆಯಲ್ಲಿದ್ದಾರೆ. ಇವರು ಆಧುನಿಕತೆಗೆ ಬಂದರೆ, ಇವರ ಸಂಸ್ಕೃತಿ, ಜೀವನ ವಿಧಾನಗಳು ನಾಶವಾಗುತ್ತವೆ ಎಂಬ ಅಭಿಪ್ರಾಯವೂ ಇದೆ.

ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ತಳಸ್ತರದ ಬಗ್ಗೆ ಮಾತನಾಡಿದಾಗಲೆಲ್ಲಾ ಸಾಮಾಜಿಕ ನ್ಯಾಯದ ಕಲ್ಪನೆ ಅದಕ್ಕೆ ಅಂಟಿಕೊಂಡೇ ಬಂದುಬಿಡುತ್ತದೆ. ಅಥವಾ ಈ ಬಗೆಯ ಭ್ರಮೆಯನ್ನು ಹುಟ್ಟು ಹಾಕಲಾಗಿದೆ. ಹಾಗಾಗಿ ಇದನ್ನು ಬಳಸುವುದು ಪ್ರಗತಿಪರವಾದ, ನ್ಯಾಯಪರವಾದ, ಸುಧಾರಣಪರವಾದ ಒಂದು ರೂಪವಾಗಿ ಕಾಣುತ್ತಿದೆ. ಮತ್ತು ಇದನ್ನು ಬಳಸುವವರೆಲ್ಲಾ ಹೀಗೆಂದೇ ಭ್ರಮಿಸಿದ್ದಾರೆ. ಇದು ಅಂತಿಮವಾಗಿ ಸಂಸದೀಯ ಚೌಕಟ್ಟಿನೊಳಗೆ ಪ್ರಮಾಣವಾರು ಮೀಸಲಾತಿಯನ್ನು ಕೇಳುವಲ್ಲಿ ಕೊನೆಯಾಗುತ್ತಿದೆ. ಹೆಚ್ಚುವರಿ ಉತ್ಪನ್ನವನ್ನು ಕಾಯ್ದುಕೊಳ್ಳುವ ಸಲುವಾಗಿ ಮೀಸಲಾತಿಯ ಕಡೆಗೆ ಗಮನ ಸೆಳೆಯಲಾಗಿದೆ. ಇದು ಮೀಸಲಾತಿಗಾಗಿ ಮುಗಿಬೀಳುವಂತೆ ಮಾಡಿದೆ.[೨] ಸಾಮಾಜಿಕವಾಗಿ ಕೆಲವು ಮೇಲಿನ ಶ್ರೇಣಿಯವರು ಇಂದು ಮೀಸಲಾತಿಯ ಸೌಲಭ್ಯಕ್ಕಾಗಿ ಮೀಸಲಾತಿ ಸಿಗುವ ಶ್ರೇಣಿಯಲ್ಲಿ ತಮ್ಮನ್ನು ದಾಖಲಿಸುವಂತೆ ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ.

ಇದನ್ನು ಕೆಳ ಶ್ರೇಣಿಯವರು ವಿರೋಧಿಸುತ್ತಿದ್ದಾರೆ. ಇದು ಆಯಾ ಜಾತಿಯ ಸಂಖ್ಯಾ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿಯಲ್ಲಿಯೂ ಪ್ರಮಾಣವಾರು ಬೇಡಿಕೆಯನ್ನು ಇಡಲು ಕಾರಣವಾಗಿದೆ. ಇದಕ್ಕಾಗಿ ಆಯಾ ಜಾತಿ–ಉಪಜಾತಿಗಳಲ್ಲಿ ಜಾತಿ ಆಧಾರಿತ ಸಂಘಟನೆಗಳು ಹುಟ್ಟಿಕೊಂಡಿವೆ. ಇವರ ಲೆಕ್ಕಾಚಾರದ ವಿಧಾನವು ಒಂದೊಂದು ಉಪಜಾತಿಯನ್ನು ಎದುರು–ಬದುರು ಆಗುವಂತೆ ಮಾಡಿದೆ. ಹೀಗಾಗಿ ಹೊರಗಿನ ನೈಜ ಶತ್ರುಗಳು ಕಾಣದಂತಾಗಿ ಸಹವರ್ತಿತರಲ್ಲೇ ಶತ್ರುತ್ವ ವಿನ್ಯಾಸ ಸೃಷ್ಟಿಯಾಗಿದೆ. ತಳಸ್ತರ ಎಂಬುದನ್ನು 'ದೇಸಿ' ಎಂಬ ನೆಲೆಯಲ್ಲೂ ಗ್ರಹಿಸಲಾಗುತ್ತಿದೆ. ತಳಸ್ತರ ಪ್ರಶ್ನೆಯು ಒಂದು ಹಂತಕ್ಕೆ ಸಮಾಜದ ಅಂಚಿನವರು ಎಂಬುದಕ್ಕೆ ಸಂಬಂಧಪಟ್ಟಿದ್ದರೆ, ಮತ್ತೊಂದು ಹಂತದಲ್ಲಿ ಅದು ಪ್ರಾದೇಶಿಕ ಆಯಾಮದ ಪ್ರಶ್ನೆಯಾಗಿಯೂ ಕೇಳಿ ಬರುತ್ತಿದೆ. ದಕ್ಷಿಣ ಕರ್ನಾಟಕದ ಮುಂದೆ ಉತ್ತರ ಕರ್ನಾಟಕವನ್ನು ಅಲಕ್ಷಿಸಲಾಗಿದೆ ಎಂಬ ಚರ್ಚೆ ಮತ್ತು ಅದಕ್ಕೆ ಸಂಬಂಧಿಸಿದ ಹಕ್ಕೊತ್ತಾಯಗಳು ಇಂದು ಮಂಡಿತವಾಗುತ್ತಿವೆ. ಸ್ತ್ರೀ ಪ್ರಶ್ನೆ ಅಥವಾ ಸ್ತ್ರೀ ಚಳುವಳಿಯ ಚರ್ಚೆಯಲ್ಲಿ ನಾವು ಪುರುಷನಿಷ್ಠ ಸಮಾಜದಿಂದ ನಿರ್ಲಕ್ಷ್ಯಕ್ಕೆ ಒಳಗಾಗಿದ್ದೇವೆ ಎಂಬುದು ಸೈದ್ಧಾಂತಿಕ ತಳಹದಿಯಾಗಿದೆ.

ತಳಸ್ತರ ಎನ್ನುವ ಪದವು ತಳ ಮತ್ತು ಸ್ತರಗಳೆಂಬ ಎರಡು ಪದದಿಂದ ಸಂಯೋಜಿತವಾಗಿದೆ. 'ತಳ' ಎಂದರೆ ಮೂಲ, ನೆಲ, ಭೂಮಿ, ಆಳ, ಗಂಭೀರತೆ. ಸಮತಟ್ಟಾದ ಪ್ರದೇಶ ಇತ್ಯಾದಿ ಅರ್ಥಗಳನ್ನು ಹೊಂದಿದೆ.[೩] 'ತಳ: ಎಂದರೆ 'ಅಂಗೈ', 'ಅಂಗಾಲು' ಎಂಬರ್ಥಗಳೂ ಇವೆ.[೪] 'ಸ್ತರ' ಎಂದರೆ, 'ವರ್ಗ', 'ಹಂತ', 'ವಿಭಾಗ', 'ಪಾತಳಿ', 'ಪದರ', 'ಘಟ್ಟ' ಇತ್ಯಾದಿ ಅರ್ಥಗಳನ್ನು ಹೊಂದಿದೆ.[೫] ಈ ಮೇಲಿನ ಎರಡು ಪದಗಳನ್ನು ಗಮನಿಸಿದಾಗ 'ತಳಸ್ತರ' ಎನ್ನುವ ಪದಕ್ಕೆ ಕೆಳಹಂತ,ಕೆಳಸ್ತರ, ಮೂಲಸ್ತರ, ಮೂಲಪದರ, ಮೂಲಹಂತ ಎಂದು ಕರೆಯಬಹುದು. ಹೀಗೆ ತಳಸ್ತರದ ವಚನಕಾರ್ತಿಯರು ಎಂದರೆ ಮೂಲಸ್ತರದವರು. ಮೂಲನೆಲೆಯವರು ಎಂದು ಹೇಳಬಹುದು.ಈ ಅಧ್ಯಾಯದಲ್ಲಿ ತಳಸ್ತರದ ವಚನಕಾರ್ತಿಯರ ಚಿಂತನೆಗಳನ್ನು ವಿಸ್ಮೃತಿಗೆ ಉದ್ದೇಶ ಪೂರ್ವಕವಾಗಿ ತಳ್ಳಲಾಗಿರುವುದನ್ನು ಚರ್ಚಿಸಲಾಗಿದೆ.

ಕಾಯಕ ತತ್ವದ ಬುನಾದಿಯ ಮೇಲೆ ವೈದಿಕ ಪರಂಪರೆಯ ಸಸಿಯ ಜೋಡಿಸಿ ಅದನ್ನು ವಿಜೃಂಭಿಸುವಂತೆ ಮಾಡಲಾಗಿದೆ. ಮೂಲ ಬೇರು ಶ್ರಮಿಕ ವರ್ಗದವರಾಗಿದ್ದಾರೆ, ಜೋಡಿಸಲ್ಪಟ್ಟ ಸಸಿ ವೈದಿಕಶಾಹಿಯದ್ದು. ಹೀಗಾಗಿ ಈ

ಮೂಲ ಬೇರಿನ ತತ್ವಚಿಂತನೆಗಳನ್ನು ಪುನರ್ ವ್ಯಾಖ್ಯಾನಿಸುವ, ವಿಮರ್ಶಿಸುವ, ಹೊಸನೆಲೆಯಲ್ಲಿ ಕಟ್ಟುವ ಪ್ರಯತ್ನವನ್ನು ವಸಹತ್ತೋತರ ನೆಲೆಯಲ್ಲಿ ಮಾಡಲಾಗಿದೆ. ಮತ್ತೊಮ್ಮೆ ವರ್ಗದ, ಜಾತಿಯ ಸೃಷ್ಠಿಕರ್ತರು ಯಾರು ಎಂಬುದನ್ನು ಹೇಳಬೇಕಾಗಿಲ್ಲ. ಏಕೆಂದರೆ ನಾವುಗಳು ಸಮಾಜದಲ್ಲಿ ವಾಸಿಸುವವರು. ಸಾಮಾನ್ಯವಾಗಿ ಕೆಳವರ್ಗ, ಮಧ್ಯಮವರ್ಗ ಮತ್ತು ಮೇಲ್ವರ್ಗಗಳೆಂದು ಆರ್ಥಿಕ ನೆಲೆಯಲ್ಲಿ ಗುರುತಿಸುತ್ತೇವೆ.

ವರ್ಣದ ನೆಲೆಯಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಗುಣ–ಕರ್ಮಗಳ ಆಧಾರದ ಮೇಲೆ ಪ್ರತಿನಿಧಿಸಲಾಗುವುದು. ಸಮಾಜದಲ್ಲಿ ಬ್ರಾಹ್ಮಣ–ಕ್ಷತ್ರಿಯ–ವೈಶ್ಯ ಮತ್ತು ಶೂದ್ರಗಳೆಂಬ ನಾಲ್ಕು ಸ್ತರಗಳಾಗಿ ಅಥವಾ ವರ್ಣಗಳಾಗಿ ವಿಭಜಿಸಲಾಗಿದೆ. ಪ್ರತಿಯೊಂದು ವರ್ಣಕ್ಕೂ ತನ್ನದೇ ಆದ ವೃತ್ತಿ, ಕಾಯಕದ ಕರ್ತವ್ಯ ಹಾಗೂ ಹೊಣೆಗಾರಿಕೆಗಳಿವೆ. ಋಗ್ವೇದದ ಉಲ್ಲೇಖದಂತೆ ವಿರಾಟ ಸ್ವರೂಪದ ದೈವ ಪುರುಷನ ದೇಹದ ವಿವಿಧ ಭಾಗಗಳಿಂದ ವಿವಿಧ ವರ್ಣಗಳು ಹೊರಹೊಮ್ಮಿವೆ ಎನ್ನಲಾಗಿದೆ. ವಿರಾಟ ಪುರುಷನ ಬಾಯಿಯಿಂದ ಬ್ರಾಹ್ಮಣರು, ಭುಜದಿಂದ ಕ್ಷತ್ರಿಯರು, ತೊಡೆಯಿಂದ ವೈಶ್ಯರು ಹಾಗೂ ಪಾದದಿಂದ ಶೂದ್ರರು ಅವಿರ್ಭವಿಸಿದರು ಎಂಬುದು ಒಂದು ನಂಬಿಕೆ[3]. ಈ ನಂಬಿಕೆಯು ವರ್ಣವ್ಯವಸ್ಥೆಯ ಹಿಂದಿನ ದೈವಿಕ ಸಮರ್ಥನೆಯೂ ಆಗಿದೆ. ಕಾಲನುಕ್ರಮದಲ್ಲಿ ವರ್ಣ ವ್ಯವಸ್ಥೆಯು ಜಾತಿ ವ್ಯವಸ್ಥೆಯಾಗಿ ಮಾರ್ಪಟ್ಟು ಸಾಮಾಜಿಕ ಇತಿಹಾಸದ ಗತಿಯೇ ಬೇರೆಯಾಯಿತು".

ಸಾಮಾನ್ಯವಾಗಿ ತಳಸ್ತರದ ವಚನಕಾರ್ತಿಯರಿಗೆ ಕಾಡಿರುವ ವರ್ಣದ ನೆಲೆಯನ್ನು ಜನಾಂಗೀಯವಾಗಿ ಅಧ್ಯಯನ ಮಾಡದೆ ವೈಚಾರಿಕ ನೆಲೆಯಲ್ಲಿ ಅಧ್ಯಯನ ಮಾಡಬೇಕಿದೆ. ಆಗ ಮಾತ್ರ ಇದೊಂದು ಭ್ರಮಾತ್ಮಕತೆ ಕಲ್ಪನೆ ಕಡೆಯಿಂದ ಹೊರಹರಿದ ದೃಷ್ಟಿಯಾಗುತ್ತದೆ. ಆಗ ದೇಹದ ಭಾಗಗಳಾದ ಬಾಯಿಯಿಂದ, ಭುಜದಿಂದ, ತೊಡೆಯಿಂದ,ಪಾದಗಳಿಂದ ಮನುಷ್ಯ ಜನಿಸಲು ಸಾಧ್ಯವಿಲ್ಲ ಎಂಬ ಆಲೋಚನೆ ವೈಚಾರಿಕವಾಗಿ ಮಾಡಲು ಸಾಧ್ಯವೆನಿಸುತ್ತದೆ. ಆದರೂ ವರ್ಣ ಮತ್ತು ವರ್ಗ ವ್ಯವಸ್ಥೆಯನ್ನು ಒಪ್ಪಿ, ಬೋಧಿಸಿ, ಕಲಿತುಕೊಂಡು ಬಂದಿರುವುದು ದುರ್ವಿಧಿ.

ಬಿಳಿವರ್ಣ, ಕಪ್ಪುವರ್ಣಗಳೆಂದು ಸಮಾಜಶಾಸ್ತ್ರಿಯ ಅಧ್ಯಯನಗಳ ನೆಲೆಯಲ್ಲಿ ಗುರುತಿಸುವ ನಾವು ಬಿಳಿ ಎಂದರೆ ಶ್ವೇತವರ್ಣ, ಕೋಮಲತೆ,

ಮೇಲ್ವರ್ಗ, ಎಂದೂ 'ಕಪ್ಪು' ಎಂದರೆ ಕರಿಯರು, ಗಟ್ಟಿತನ, ಕೆಳವರ್ಗ ಎಂದು ಇಂತಹ ಸಾಂಕೇತಿಕ ಅರ್ಥಗಳನ್ನು ಇಟ್ಟುಕೊಂಡರೆ, ಈ ಭೂಮಿಯ ಮೇಲ್ಭಾಗದಲ್ಲಿ ಎಷ್ಟು ಸುಂದರವಾದ ಮಹಲ್‌ಗಳು ಕಾಣಿಸುತ್ತವೆ. ಹತ್ತು – ಹದಿನೈದಕ್ಕೂ ಹೆಚ್ಚು ಮಹಡಿಗಳನ್ನು ಹೊತ್ತು ನಿಲ್ಲುವ ಸಾಮರ್ಥ್ಯದ ಗಟ್ಟಿತನ ಅವುಗಳ ಅಡಿಪಾಯಗಳಲ್ಲಿ ಇದೆ. ಈ ಅಡಿಪಾಯದ ಮೇಲೆ ಒಂದು ಸಂಸ್ಕೃತಿ ಅನಾವರಣವಾಗುವುದು. ಈ ನೆಲೆಯು ಮುಚ್ಚಲ್ಪಟ್ಟಿರುತ್ತದೆ. ಹೀಗೆ ತಳಸ್ತರದ ವಚನಕಾರರ ಮತ್ತು ವಚನಕಾರ್ತಿಯರ ವಚನಗಳ ಮೂಲಸೆಲೆಯನ್ನು ಉದ್ದೇಶಪೂರ್ವಕವಾಗಿ ವಿಸ್ಮೃತಿಗೆ ತಳ್ಳಲ್ಪಟ್ಟಿರುತ್ತದೆ. ವಿಸ್ಮೃತಿಯನ್ನು ಸ್ಮೃತಿಗೆ ತರಬೇಕಿದೆ. ಆ ಮೂಲಕ ಈಗಾಗಲೇ ಕಟ್ಟಲ್ಪಟ್ಟಿರುವ [ಬೌದ್ಧಿಕ ಪರಂಪರೆ, ಪುರೋಹಿತ ಶಾಹಿ ನೆಲೆ] ಮಹಲ್‌ಗಳನ್ನು ಕೆಡವಿ ತಳಸ್ತರನೆಲೆಯ ಮೇಲೆ ಹೊಸದಾದ ಪರಂಪರೆಯನ್ನು ಕಟ್ಟುವ ಅನಿವಾರ್ಯತೆ ಇಂದಿನ ದಿನಮಾನದಲ್ಲಿದೆ. ಈ ಪ್ರಯತ್ನ ತಳಸ್ತರದ ವಚನಕಾರ್ತಿಯರ ವಚನಗಳ ಅಧ್ಯಯನದ ಮೂಲಕ ಆರಂಭಿಸುವ ಪ್ರಯತ್ನ ಮಾಡಲಾಗಿದೆ.

ಹೀಗಾಗಿ ಕಾಲಗರ್ಭದಲ್ಲಿ ಅಡಗಿರುವ ಹೊಸಚಿಂತನೆಯೇ ನಮ್ಮ ಮೂಲ ಸೆಲೆ. ಈ ಮೇಲ್ಕಂಡ ನೆಲೆಗಳಲ್ಲಿ ಅಲ್ಲದೆ ಜಾತಿ , ವರ್ಗ, ವರ್ಣ, ವೃತ್ತಿ, ಕಾಯಕ ನೆಲೆಯ ಜೊತೆ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಧಾರ್ಮಿಕನೆಲೆ ಹಾಗೂ ಸತಿ–ಪತಿಭಾವದ, ಗಂಡು–ಹೆಣ್ಣಿನ ಸಂಬಂಧದ, ಪ್ರೇಮ–ಕಾಮದ, ಕುಟುಂಬದ, ವ್ರತ, ಚಕ್ರ ಸೂತಕ, ದಾಂಪತ್ಯ, ಆಧ್ಯಾತ್ಮ, ಶರಣ, ಸತಿ, ಪತಿ, ಲಿಂಗ, ನಂಬಿಕೆ, ಆಚರಣೆ ಮತ್ತು ಸಾಂಸ್ಕೃತಿಕ ನೆಲೆಗಳಲ್ಲಿ ವಚನಗಳನ್ನಿಟ್ಟು ಶೋಧಿಸುವ ಪ್ರಯತ್ನ ಮಾಡಿದ್ದೇನೆ.

## ೨. ಒಟ್ಟು ಲಭ್ಯವಾದ ವಚನಕಾರ್ತಿಯರು ಮತ್ತು ವಚನಗಳ ಸಂಖ್ಯೆ

ವಚನಕಾರ್ತಿಯರಲ್ಲಿ ತಾವೂ ವಚನಗಳನ್ನು ಬರೆಯಬಲ್ಲೇವು ಎಂಬ ಮನವರಿಕೆಯೇ ಅವರನ್ನು ಬರಹಕ್ಕೆ ಪ್ರಚೋದಿಸಿತು ಎಂಬುದು ಒಂದು ನೆಲೆ. ತಾವು ಕಂಡುಂಡ ಪಾರಂಪರಿಕ ನೆಲೆಯ ಅನುಭವಗಳನ್ನು ಅನುಭಾವಿಕ ನೆಲೆಯಲ್ಲಿ ಸೈದ್ಧಾಂತಿಕವಾಗಿ ನಿರೂಪಿಸಿದ್ದು ಇನ್ನೊಂದು ನೆಲೆ. ಹೆಣ್ಣು ಕೆಳ ಅಥವಾ ಉಚ್ಚ ವರ್ಣದವಳಾದರೂ ವೈದಿಕ ಪರಂಪರೆಯಲ್ಲಿ ಶೂದ್ರನ ಸಮಾನಳೆಂದು ಪರಿಗಣಿತಳಾಗಿದ್ದಳು. ಕಾರಣ ಅವಳ ಜನ್ಮ, ಋತುಚಕ್ರ ಮತ್ತು ಪಂಚಸೂತಕಗಳು.[೭] (ಜಾತಿಸೂತಕ, ಮರಣಸೂತಕ, ಉಚ್ಛಿಷ್ಟಸೂತಕ, ಜನನ

ಸೂತಕ, ರಜಸ್ಸೂತಕ) ಹೆಣ್ಣು ಗ್ರಂಥ ಅಧ್ಯಯನಕ್ಕೆ ಅನರ್ಹಳೆಂಬ ಹಣೆ ಪಟ್ಟಿ ಬೇರೆ ಇತ್ತು. ಆದರೂ ಹಿಂದೆ ಮೇಲ್ವರ್ಣದ ಸ್ತ್ರೀಯರು ಅಷ್ಟಿಷ್ಟು ವಿದ್ಯೆಯನ್ನು ಪಡೆದಿರಬಹುದಾದರೂ ಅವರಾರೂ ಬರವಣಿಗೆಗೆ ಕೈ ಹಾಕಿರಲಿಲ್ಲ. ೧೨ನೇ ಶತಮಾನದ ವಚನಕಾರ್ತಿಯರೇ ಬರಹಕ್ಕೆ ಕೈ ಹಾಕಿದವರಲ್ಲಿ ಮೊದಲಿಗರು. ಹೀಗೆ ತಮ್ಮ ಅನುಭವಗಳನ್ನು ಅನುಭಾವಿಕ ನೆಲೆಯ ಬರಹರೂಪಕ್ಕೆ ಇಳಿಸಿದರು. ಲಭ್ಯವಾದ ಐವತ್ತು ವಚನಕಾರ್ತಿಯರು ಮತ್ತು ಅವರು ರಚಿಸಿರುವ ಲಭ್ಯವಾಗಿರುವ ವಚನಗಳ ಸಂಖ್ಯೆಯನ್ನು ನೀಡಲಾಗಿದೆ.

| | **ವಚನಕಾರ್ತಿಯರು** | **ವಚನಗಳು** |
|---|---|---|
| ೧ | ಅಕ್ಕಮಹಾದೇವಿ | ೪೩೪ |
| ೨ | ಅಕ್ಕಮ್ಮ | ೧೫೪ |
| ೩ | ಅಮುಗೆ ರಾಯಮ್ಮ | ೧೧೬ |
| ೪ | ಆಯ್ದಕ್ಕಿ ಲಕ್ಕಮ್ಮ | ೨೫ |
| ೫ | ಕಾಳವ್ವೆ (ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ) | ೧೨ |
| ೬ | ಮಸಣಮ್ಮ (ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ) | ೦೧ |
| ೭ | ಕದರಿ ಕಾಯಕದ ಕಾಳವ್ವೆ | ೦೧ |
| ೮ | ಕದಿರ ರೆಮ್ಮವ್ವೆ | ೦೪ |
| ೯ | ಕನ್ನಡಿ ಕಾಯಕದ ರೇಮ್ಮಮ್ಮ | ೦೧ |
| ೧೦ | ರೇಚವ್ವೆ (ಕಾಳಕೂಟಯ್ಯಗಳ ಪುಣ್ಯಸ್ತ್ರೀ) | ೦೧ |
| ೧೧ | ಕಾಲಕಣ್ಣಿಯ ಕಾಮಮ್ಮ | ೦೧ |
| ೧೨ | ಲಕ್ಷ್ಮಮ್ಮ (ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ) | ೦೧ |
| ೧೩ | ಕೊಟ್ಟಣದ ಸೋಮವ್ವೆ | ೦೧ |
| ೧೪ | ಗಂಗಾಂಬಿಕೆ | ೦೯ |
| ೧೫ | ಗಜೇಶ ಮಸಣಯ್ಯ ಪುಣ್ಯಸ್ತ್ರೀ (ಆಕೆಯ ಹೆಸರು ಲಭ್ಯವಿಲ್ಲ) | ೧೦ |
| ೧೬ | ಕೇತಲದೇವಿ (ಗುಂಡಯ್ಯಗಳ ಪುಣ್ಯಸ್ತ್ರೀ) | ೦೨ |

| | | |
|---|---|---|
| ೧೭ | ಗೊಗ್ಗವ್ವೆ | ೦೬ |
| ೧೮ | ವೀರಮ್ಮ (ದಸರಯ್ಯಗಳ ಪುಣ್ಯಸ್ತ್ರೀ) | ೦೫ |
| ೧೯ | ದುಗ್ಗಳೆ | ೦೨ |
| ೨೦ | ನಾಗಲಾಂಬಿಕೆ | ೧೪ |
| ೨೧ | ನೀಲಮ್ಮ (ಇನ್ನೊಂದು ಹೆಸರು ನೀಲಾಂಬಿಕೆ) | ೨೮೮ |
| ೨೨ | ಗುಡ್ಡವ್ವೆ (ಬತ್ತಲೇಶ್ವರ ಪುಣ್ಯಸ್ತ್ರೀ) | ೦೧ |
| ೨೩ | ಕಾಳವ್ವೆ (ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ) | ೦೨ |
| ೨೪ | ಬೊಂತಾದೇವಿ | ೦೫ |
| ೨೫ | ಮುಕ್ತಾಯಕ್ಕ | ೩೭ |
| ೨೬ | ಮೊಳಿಗೆ ಮಹಾದೇವಿ | ೭೦ |
| ೨೭ | ರಾಯಮ್ಮ (ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ) | ೦೧ |
| ೨೮ | ರೇಕಮ್ಮ (ರೇವಣ ಸಿದ್ದಯ್ಯಗಳ ಪುಣ್ಯಸ್ತ್ರೀ) | ೦೧ |
| ೨೯ | ಸತ್ಯಕ್ಕ | ೨೭ |
| ೩೦ | ಕಾಳವ್ವೆ (ಸಿದ್ಧ ಬುದ್ಧಯ್ಯಗಳ ಪುಣ್ಯಸ್ತ್ರೀ) | ೦೧ |
| ೩೧ | ಸೂಳೆ ಸಂಕವ್ವೆ | ೦೧ |
| ೩೨ | ಲಿಂಗಮ್ಮ (ಹಡಪದಪ್ಪಣ್ಣನ ಪುಣ್ಯಸ್ತ್ರೀ) | ೧೧೪ |
| ೩೩ | ಗಂಗಮ್ಮ (ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ) | ೦೧ |
| ೩೪ | ಕುರಂಗೇಶ್ವರ ಲಿಂಗಾಂಕಿತ | ೦೧ |
| ೩೫ | ಮಸಣಯ್ಯ ಪ್ರಿಯ ಮಾರೇಶ್ವರಲಿಂಗ | ೦೧ |
| ೩೬ | ಕದಿರ ತಿಮ್ಮವ್ವೆ | ೦೩ |
| ೩೭ | ಒಕ್ಕಲ ತಿಮ್ಮವ್ವೆ | ೦೧ |
| ೩೮ | ತಿಮ್ಮವ್ವೆ | ೦೩ |
| ೩೯ | ಕೇಶಲದೇವಿ | ೦೧ |
| ೪೦ | ಭೀಮವ್ವೆ | ೦೧ |

ಇನ್ನುಳಿದಂತೆ ಕೆಲ ವಚನಕಾರ್ತಿಯರ ಹೆಸರು ಸಿಕ್ಕರೆ ಮತ್ತೆ ಕೆಲ ವಚನಕಾರ್ತಿಯರ ಅಂಕಿತನಾಮಗಳು ಮಾತ್ರ ಲಭ್ಯವಾಗಿವೆ.

೪೧ **ಶಾಂತನಪತ್ನಿಯರು:**

ಈ ವಚನಕಾರ್ತಿಯರು ಯಾರು? ಈ ಶಾಂತ ಯಾರು? ಎಂಬುದು ತಿಳಿದುಬಂದಿಲ್ಲ. ಅಷ್ಟಕ್ಕೂ ಇವನ ಪತ್ನಿಯರ ವಚನಗಳು ಸಿಕ್ಕಿಲ್ಲ. ಇವನ ಪತ್ನಿಯರ ಹೆಸರು ಮತ್ತು ಅಂಕಿತನಾಮಗಳು ದೊರೆತಿವೆ. ಅವು ಈ ಕೆಳಕಂಡಂತಿವೆ.

ಶಾಂತನ ಪತ್ನಿಯರ ಹೆಸರು ಮತ್ತು ಅಂಕಿತನಾಮ.

೧. ಗುಡ್ಡವ್ವೆ (ಮೊದಲ ಪತ್ನಿ) : ಗುಡ್ಡವ್ವೆಯ ಲಿಂಗ

೨. ಸಣ್ಣಸುಗ್ಗಳೆ (ಎರಡನೇ ಪತ್ನಿ): ಸಣ್ಣ ಸುಗ್ಗಳೆ ಪ್ರಿಯ

೩. ಕಾಮಾಲಿ (ಮೂರನೇ ಪತ್ನಿ): ಕಾಮಲೆ ಕಾಮಹರ

೪೨ ಬಿಜ್ಜ ಮಹಾದೇವಿ : ಈಕೆಯ ಇತರ ಹೆಸರುಗಳು (೧) ಬಿಜ್ಜಾಂಬೆ, (೨) ಅಮ್ಮವ್ವೆ

ಹುಟ್ಟು : ಬ್ರಾಹ್ಮಣ ಕುಲ

ಕಾಯಕ : ರಾಟೆ

ಈಕೆ ಹುಟ್ಟಿನಿಂದ ಮೇಲ್ವರ್ಗದವಳಾದರು ವೃತ್ತಿಯಿಂದ ಕೆಳ್ವರ್ಗದವಳು.

೪೩ ಮಹಾದೇವಿ

ಅಂಕಿತನಾಮ : ಮಹಾದೇವ ಜ್ಯೋತಿರ್ಲಿಂಗ

೪೪ ಸುವರ್ಣಾದೇವಿ

ಅಂಕಿತನಾಮ : ಸುವರ್ಣಲಿಂಗ

೪೫ ಸೋಮವ್ವೆ

ಅಂಕಿತನಾಮ : ಶಾಂತ ಮಲ್ಲಿಕಾರ್ಜುನ

೪೬ ತಿಬ್ಬವ್ವೆ

ಅಂಕಿತನಾಮ : ಶ್ರೀ ಶೈಲ ಮಲ್ಲಿಕಾರ್ಜುನ

೪೭ ಬಿಬ್ಬಿ

ಅಂಕಿತನಾಮ : ತಿಬ್ಬವ್ವೆ ಪ್ರಿಯ ಮಲ್ಲಿಕಾರ್ಜುನ

ವಿಶೇಷತೆ : ತಿಬ್ಬವ್ವೆಯು ಬಿಬ್ಬಿಯ ಅತ್ತೆ, ಅತ್ತೆಯ ಮೇಲಿನ ಭಕ್ತಿ, ಗೌರವಗಳಿಂದಾಗಿ ಈ ಅಂಕಿತನಾಮವಿದೆ ಎಂದು ತಿಳಿಯಬಹುದಾಗಿದೆ.

೪೮ ತಿಮ್ಮವ್ವೆ

ಅಂಕಿತನಾಮ : ಆದಿಲಿಂಗ

೪೯ ಚಿಬ್ಬವ್ವೆ

ಅಂಕಿತನಾಮ : **'ತಿಮ್ಮವ್ವೆ ಪ್ರಿಯ ಆದಿಲಿಂಗ'**

ಈ ಚಿಬ್ಬವ್ವೆ ತಿಮ್ಮವ್ವೆಯ ಸೊಸೆಯೋ, ಮಗಳೋ, ಒಂದು ಗೊತ್ತಾಗುವುದಿಲ್ಲ. ಆದರೆ ಚಿಬ್ಬವ್ವೆಗೆ ತಿಮ್ಮವ್ವೆಯ ಮೇಲಿರುವ ಭಕ್ತಿ ಗೌರವದ ಸಂಕೇತವೇ ಈ ಅಂಕಿತನಾಮವಿರಬಹುದು.

೫೦ ಗಿರಿಜಾದೇವಿ

ಅಂಕಿತನಾಮ : **'ಗಿರಿಜಾ ರಮಣ'**

ಈ ಮೇಲ್ಕಂಡ ಒಟ್ಟು ಲಭ್ಯವಾದ ಐವತ್ತು ವಚನಕಾರ್ತಿಯರಲ್ಲಿ ಮೂವತ್ತೇರಡು ತಳಸ್ತರದ ವಚನಕಾರ್ತಿಯರನ್ನು ಗುರುತಿಸಲಾಗಿದೆ. ಗುರುತಿಸಲು ಸಾಮಾನ್ಯವಾಗಿ ಬಳಸಿದ ಮಾನದಂಡಗಳೆಂದರೆ, ಜಾತಿ, ವರ್ಗ, ವರ್ಣ, ಕಾಯಕ, ವೃತ್ತಿ ಹಾಗೂ ಸಾಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಪರಿಸ್ಥಿತಿ ಜೊತೆಗೆ ವಾಸಿಸುತ್ತಿರುವ ವಾತಾವರಣ, ಆಡುವ ಭಾಷೆ, ಇಟ್ಟ ಹೆಸರು ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ. ಅಲ್ಲದೆ ಬೌದ್ಧಧರ್ಮದ ತತ್ವಗಳ ಆಧಾರದ ಮೇಲೆ ತಳಸ್ತರದ ವಚನಕಾರ್ತಿಯರ ವಚನಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

## ೩. ತಳಸ್ತರದ ವಚನಕಾರ್ತಿಯರ ಪರಿಚಯ ಮತ್ತು ವಚನಗಳು

### (೧) ಆಯ್ದಕ್ಕಿ ಲಕ್ಕಮ್ಮ

ಪತಿ :– ಆಯ್ದಕ್ಕಿ ಮಾರಯ್ಯ

**ಕಾಯಕ** :– ಕಲ್ಯಾಣ ನಗರದಲ್ಲಿ ಶಿವಶರಣರ ಮನೆಯ ಮುಂದೆ ಬಿದ್ದಿದ್ದ ಅಕ್ಕಿಕಾಳುಗಳನ್ನು ಆಯ್ದು ತರುವುದು.

| | | |
|---|---|---|
| ಅಂಕಿತನಾಮ | :– | ಮಾರಯ್ಯ ಪ್ರಿಯ ಅಮರೇಶ್ವರ ಲಿಂಗ |
| ಜನ್ಮಸ್ಥಳ | :– | ರಾಯಚೂರು (ಜಿಲ್ಲೆ), ಲಿಂಗಸೂರು (ತಾ), ಅಮರೇಶ್ವರ ಗ್ರಾಮ |
| ಲಭ್ಯವಾದ ವಚನಗಳಸಂಖ್ಯೆ | :– | ೨೫ |

ಶರಣರು ರೂಪಿಸಿದ ಕಾಯಕ ಮತ್ತು ದಾಸೋಹ ತತ್ವಗಳನ್ನು ತನ್ನ ಬದುಕಿನ ಮುಖ್ಯ ಮೌಲ್ಯವನ್ನಾಗಿ ಸ್ವೀಕರಿಸಿದವಳು.[೮] ಲಕ್ಕಮ್ಮ ಮಾರಯ್ಯನೆಂಬ ಶಿವಭಕ್ತನ ಪತ್ನಿ. ಇವರು ಮಹಾಮನೆಯ ಮುಂದೆ ಬಿದ್ದಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹ ಮಾಡುತ್ತಿದ್ದರು. ಮಾರಯ್ಯನ ಮನಸ್ಸನ್ನು ಅರಿತು ಸಂಸಾರ ನಿರ್ವಹಣೆ ಮಾಡುತ್ತಿದ್ದಳು. ಅಲ್ಲದೆ ಪತಿಗೆ ಮಾರ್ಗದರ್ಶಕಳು ಆಗಿದ್ದಳು. ಅವಳ ಧರ್ಮ ಶ್ರದ್ಧೆ, ಸದಾಚರಣೆ, ಉದಾತ್ತ ಧ್ಯೇಯ, ಆಚಾರ ವಿಚಾರಗಳಲ್ಲಿ ಎಳ್ಳಷ್ಟು ಲೋಪ ಬರದಂತೆ ನಡೆದುಕೊಳ್ಳುವ ಬದ್ಧತೆಯು ಅವಳ ವಚನಗಳಲ್ಲಿ ಕಂಡು ಬರುತ್ತದೆ.

ಬಸವಣ್ಣನವರು ಒಂದು ದಿನ ಎಂದಿಗಿಂತ ಹೆಚ್ಚು ಅಕ್ಕಿಯನ್ನು ಅಂಗಳದಲ್ಲಿ ಚೆಲ್ಲಿಸುತ್ತಾರೆ. ಅದನ್ನು ಕಂಡ ಮಾರಯ್ಯ ಅವನ್ನೆಲ್ಲ ಆಯ್ದು ತಂದು ಹೆಂಡತಿಯ ಕೈಯಲ್ಲಿ ಕೊಡುತ್ತಾನೆ. ಪತಿಯು ಆಯ್ದು ತಂದ ಅಕ್ಕಿಯು ನಿತ್ಯಕ್ಕಿಂತ ಅಧಿಕವಾಗಿದುದ್ದನ್ನು ಕಂಡು ಅವಳ ಮನಸ್ಸಿನಲ್ಲಿ ಇದು ದುರಾಸೆ ಎಂಬ ಭಾವನೆ ಮೂಡುತ್ತದೆ. ಅದಕ್ಕೆ ಅವಳು ಕೊಂಡು ಹೋಗಿ ಅಲ್ಲಿಯೇ ಸುರಿದು ಬನ್ನಿ ಎಂದು ಗಂಡನಿಗೆ ಹೇಳಿಕಳಿಸುತ್ತಾಳೆ.[೯] ಗಂಡ ಕಾಯಕ ಮರೆತು ಅನುಭಾವಗೋಷ್ಠಿಯಲ್ಲಿ ಮೈ ಮರೆತಾಗ "ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ' ಎಂದು ಸಮಯ ಪ್ರಜ್ಞೆಯನ್ನು ಮೂಡಿಸುತ್ತಾಳೆ.

ಮಾರಯ್ಯನ ಆಸೆ ದುರಾಸೆಗೆ ನೀರೆರೆಯದೆ ಅಂದೆ ಅದನ್ನು ತಡೆದಳು. ಈ ಆಸೆ ನಾಳೆಗೆ ಸಂಚಕಾರವೆಂದು ಅರಿವು ಮೂಡಿಸಿದಳು. ಪತಿಯ ಪಾಪಕ್ಕೆ ಸಹಕರಿಸಿದರೆ ಅವನನ್ನು ತಾನೇ ಪ್ರಚೋದಿಸಿದಂತೆಂದು ತಿಳಿದು ತಾನೂ ಬದುಕಿ ಅವನನ್ನು ಬದುಕಿಸುತ್ತಾಳೆ. ಪತಿಯ ಸ್ಫೂರ್ತಿಯ ಸೆಲೆ ಚೈತನ್ಯದ ನೆಲೆಯಾಗಿ ಅವನ ಅಂತಃಶಕ್ತಿಯೂ ಆಗಿದ್ದಾಳೆ. ಬಡವಳಾದರೂ ಭಗವಂತನನ್ನು ಒಲಿಸಿಕೊಳ್ಳುವ ಬಹುಮುಖ್ಯ ಮಾರ್ಗವಾದ ದಾಸೋಹದ ಹಿರಿಮೆಯನ್ನು ಚೆನ್ನಾಗಿ ಅರಿತವಳಾಗಿದ್ದಳು.[೧೦] ಶರಣರು ನಿರೂಪಿಸಿದ ಕಾಯಕ

ತತ್ವವನ್ನು ಪೂರ್ಣತಃ ಒಪ್ಪಿಕೊಂಡು, ಅದರಂತೆ ಬದುಕಿದ ನಿಷ್ಠಾವಂತ ಶರಣೆ. ಅನೇಕ ಜನ ಕನ್ನಡ ಕವಿಗಳು ಕಾಯಕ ಜೀವಿ ಲಕ್ಕಮ್ಮನ ಮಹಿಮೆಯನ್ನು ಕೊಂಡಾಡಿದ್ದಾರೆ. ಈ ಶರಣ ದಂಪತಿಗಳು ಶರಣರ ಮನೆಯಂಗಳದ ಅಕ್ಕಿ ಆಯ್ದು ತಂದು ದಾಸೋಹ ಮಾಡುವ ಕಾರ್ಯದಲ್ಲಿ ನಿರತರಾದವರು. ಶಿವ ಅವರನ್ನು ಪರೀಕ್ಷಿಸಿ ಅವರ ಶ್ರದ್ಧಾಪೂರ್ವಕ ಭಕ್ತಿಗೆ ಮೆಚ್ಚಿ, ಗಣಪದವಿಯನ್ನಿತ್ತು ಅನುಗ್ರಹಿಸಿದ ಸನ್ನಿವೇಶ ಕೆಲ ಕಾವ್ಯಗಳಲ್ಲಿ ಹೀಗೆ ಮೂಡಿ ಬಂದಿದೆ.

ಆಯ್ದಕ್ಕಿ ಮಾರಯ್ಯ ತಂದೆ ಭಕ್ತರ ಮನೆಯೊ

ಳಾಯ್ದುತಂದಾ ಧಾನ್ಯದಿಂದ ಅಂಬಲಿ ಮಾಡಿ

ಗೂಯ ಜಂಗಮ ರೂಪಿಲಭವ ಬರೆ ಸಲಿಸುತಿಹನೊಂದಿನಂಬಾರದಿರಲು

ಸಾಯಸಂಬಡುತಲಾರೋಗಿಸಲ್ ಸತಿಸಹಿತ

ಲಾಯಿರುಳು ಶಿವಬರಲುವುದ್ಧರಿಸಿ ತಂದಿಕ್ಕೆ

ವಾಯುಸಖನೇತ್ರನೊಲಿದಿತ್ತ ಗಣಪದವನು ಚರಣಾಂಬುಜಕ್ಕೆ ಶರಣ ॥[೧೧]

ಲಕ್ಕಮ್ಮ-ಮಾರಯ್ಯರು ಪಾಲಿಸಿಕೊಂಡು ಬರುತ್ತಿರಬಹುದಾದ ದಾಸೋಹ, ಆ ಮೂಲಕವಾಗಿಯೆ ಶಿವನ ಕರುಣೆಗೆ ಪಾತ್ರರಾಗುವ ವಿಚಾರ ಇಲ್ಲಿ ವ್ಯಕ್ತವಾಗಿದೆ.ಇನ್ನೊಂದೆಡೆ ಹೀಗಿದೆ :

ಮಾರಾರಿ ಜಂಗಮಾ
ಕಾರದಿಂ ಬೇಡೆ ತ
ನ್ನರಿಯುಟ್ಟುದ ತಾನುಟ್ಟುದನು
ಕೋರೆ ಕೊಟ್ಟಾಯ್ದಕ್ಕಿ
ಮಾರಯ್ಯ ಶಿವನ ಪಾ
ದಾರವಿಂದವ ಬೆಳೆಸಿದನು[೧೨]

ಶರಣ ದಂಪತಿಗಳ ಭಕ್ತಿ ಪಾರಮ್ಯವನ್ನು ದರ್ಶಿಸುವುದೆ, ಈ ಮೇಲಿನ ಕಾವ್ಯಗಳ ಸ್ಪಷ್ಟ ಉದ್ದೇಶ. ಇದಕ್ಕಿಂತ ಮಿಗಿಲಾಗಿ ಅವರ ಕಾರ್ಯ ನಿಷ್ಠೆಯನ್ನು ನಿರೂಪಿಸುವ ಘಟನೆ ಅತ್ಯಂತ ಮಹತ್ವದ್ದಾಗಿದೆ. ಶೂನ್ಯ ಸಂಪಾದನಾಕಾರ ನೀಡುವ ವಿವರಣೆ ಹೀಗಿದೆ : ಒಮ್ಮೆ ತನ್ನ ಕೆಲಸಕ್ಕಾಗಿ ಹೊರಟ ಮಾರಯ್ಯ, ಅಲ್ಲಮ ಪ್ರಭುವಿನೊಂದಿಗೆ ಕಾಯಕ ತತ್ತ್ವವನ್ನು ಚರ್ಚಿಸುತ್ತ ಕುಳಿತುಬಿಡುತ್ತಾನೆ.

ಲಕ್ಕಮ್ಮ ಅಲ್ಲಿಗೆ ಬಂದು "ಕಾಯಕ ನಿಂದಿತ್ತು ಏಳಯ್ಯಾ ಎನ್ನಾಳ್ದನೆ" ಎಂದು ಎಚ್ಚರಿಸಿದಾಗ ಮಾರಯ್ಯ ಎಂದಿನಂತೆ ಅಕ್ಕಿ ಆಯಲು ಹೋಗುತ್ತಾನೆ. ಬಸವಣ್ಣನವರ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ದಿನಕ್ಕಿಂತ ಹೆಚ್ಚಾಗಿ ಶೇಖರಿಸಿಕೊಂಡು ಬಂದು ಮಡದಿಯ ಮುಂದಿಡುತ್ತಾನೆ. ಆಗ ಲಕ್ಕಮ್ಮ "ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ, ಇದು ನಿಮ್ಮ ಮನವೊ ಬಸವಣ್ಣನ ಅನುಮಾನದ ಚಿತ್ತವೊ" ಎಂದು ಪ್ರಶ್ನಿಸಿ, ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ ಎಂದು ಎಚ್ಚರಿಸಿ, ಮಿಕ್ಕ ಅಕ್ಕಿಯನ್ನು ಅಲ್ಲಿಯೆ ಸುರಿದು ಬರುವಂತೆ ತಿಳಿ ಹೇಳುತ್ತಾಳೆ. ಹಾಗೂ ಸಮಸ್ತ ಜಂಗಮಸ್ತೋಮಕ್ಕೆ ಆರೋಗಣೆಗೆ ಬಿನ್ನೈಸಿಕೊಂಡು ಬರಲು ಹೇಳುತ್ತಾಳೆ. ಎಂದಿನಂದದ ಅಕ್ಕಿಯಲ್ಲಿಯೆ ಬೋನವ ತಯಾರಿಸಿ, ಬಂದ ಲಕ್ಕದ ಮೇಲೆ ತೊಂಬತ್ತಾರು ಸಾವಿರ ಜಂಗಮರಿಗೆ ಸಂತೃಪ್ತಿಯಾಗುವಂತೆ ವಿತರಿಸುತ್ತಾಳೆ. ಆಗ ಪ್ರಭುದೇವ ಕಾಯಕದ ಮಹಿಮೆಯ ಅರಿವಾಯಿತು ಎಂದು ಕೊಂಡಾಡಿದರೆ, ಬಸವಣ್ಣ 'ಮನೆ ನೋಡಾ ಬಡವರು ಮನ ನೋಡಾ ಸಂಪನ್ನರು' ಎಂದು ಉದ್ಗಾರ ತೆಗೆಯುತ್ತಾನೆ.[೧೩] ಕಾಯಕದ ನಿಜಾರ್ಥವನ್ನು ತಿಳಿಸಿಕೊಟ್ಟು, ಹಿರಿಯ ಶರಣರ ಮೇಲೆ ಪ್ರಭಾವ ಬೀರಿದ ಲಕ್ಕಮ್ಮ ಕಾಯಕ ಜೀವಿ, ಆಸೆಯಳಿದು ಅರಿವು ಸಾಧಿಸಿಕೊಂಡ ಅನುಭಾವಿ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇಷ್ಟನ್ನು ಬಿಟ್ಟರೆ ಆಕೆಯ ಜೀವನದ ಬಗೆಗೆ ಹೆಚ್ಚಿನ ಸಂಗತಿಗಳೇನೂ ತಿಳಿದುಬರುವುದಿಲ್ಲ.

**೨. ಹಡದಪ್ಪಣ್ಣಗಳ ಪುಣ್ಯಸ್ತ್ರೀ ಲಿಂಗಮ್ಮ**

ಪತಿ :– ಅಪ್ಪಣ್ಣ

ಅಂಕಿತನಾಮ :– ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ

ಜನ್ಮಸ್ಥಳ :– ವೈಯಕ್ತಿಕ ವಿವರ ದೊರಕಿಲ್ಲ

ಗುರು :– 'ಚೆನ್ನಮಲ್ಲೇಶ'

ಕಾಯಕ :– ಹಡಪದ(ಕ್ಷೌರಿಕ ವೃತ್ತಿ)

ಲಭ್ಯವಾದ ವಚನಗಳ ಸಂಖ್ಯೆ :– ೧೧೪

ಕೃತಿಗಳು :– (೧) ಮಂತ್ರಗೋಪ್ಯ (೨) ಸ್ವರ ವಚನ

ವಚನದ ಮಾದರಿ :– ಬೋಧೆಯ ವಚನಗಳು[೧೪]

ತಳಸ್ತರದಲ್ಲಿ ಹುಟ್ಟಿ ಬಂದ ಲಿಂಗಮ್ಮ ತನ್ನ ಕುಲದ ಸೂತಕವನ್ನು ಶರಣರ ಸಂಗದಿಂದ ಕಳೆದುಕೊಳ್ಳುತ್ತಾಳೆ. ಅದನ್ನವಳು ಮುಚ್ಚು ಮರೆಯಿಲ್ಲದೆ ಕನಿಷ್ಟದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ ಎಂದು ಪ್ರಾಮಾಣಿಕವಾಗಿ ಬಿಚ್ಚಿ ಹೇಳುತ್ತಾಳೆ.[೧೫] ಈಕೆ ವಚನಗಳಲ್ಲಿ ಮಾನಸಿಕ ತೋಳಲಾಟ ಕಂಡು ಬರುವುದಿಲ್ಲ. ಅಪ್ಪಣ್ಣನೂ ವಚನಕಾರ ಸತಿಪತಿಗಳಿಬ್ಬರೂ ಬಸವೇಶ್ವರನಲ್ಲಿ ಅತ್ಯಂತ ಭಕ್ತಿಯಿಂದಿದ್ದು ಕೊನೆಯ ತನಕವೂ ಅಗಲದಿದ್ದವರು. ಈಕೆಯ ಮುಕ್ತಿಯ ಸ್ವರೂಪವನ್ನು, ಶೂನ್ಯದ ನಿಲುವನ್ನು ಅಂಗವೆಂದರೆ ಲಿಂಗದೊಳಡಗಿತ್ತು, ಲಿಂಗವೆಂದರೆ ಅಂಗದೊಳಡಗಿತ್ತು ಎಂದು ಚಿತ್ರಿಸುವ ರೀತಿ ತುಂಬಾ ಮನೋಜ್ಞವಾಗಿದೆ.

ಶರಣ ಸೇವೆಯೇ ನಿಜ ಜೀವನದ ಧ್ಯೇಯ. ಅದುವೆ ನಿಜವಾದ ಸುಖ ಎಂಬುದನ್ನು ತಮ್ಮ ವಚನದಲ್ಲಿ ಸಾರಿದ್ದಾಳೆ. ಇವಳ ವಚನದಲ್ಲಿ ಅನುಭವದ ಜ್ಞಾನಸಾರ, ಶಿವಧ್ಯಾನ, ಜಪ, ಶರಣಸೇವೆ, ತಾನು ಸಾಮಾನ್ಯದಿಂದ ಅಸಾಮಾನ್ಯಕ್ಕೇರಿದ ಸಾಧನೆಯ ರೀತಿ ಮತ್ತು ಯೋಗದ ವಿಚಾರ ಕಂಡು ಬರುತ್ತವೆ[೧೬]. ಲಿಂಗಮ್ಮನ ಕೆಲ ವಚನಗಳಲ್ಲಿ ಗಾದೆ, ರೂಪಕ, ಉಪಮೆ, ಶಬ್ದಚಿತ್ರ, ದೇಶಿಪದ, ಸಂಭಾಷಣಾ ರೂಪದ ಶೈಲಿ ಹಿರಿಯಶರಣರ ಪ್ರಭಾವಕ್ಕೆ ಒಳಗಾಗಿರುವುದು ಕಾಣಬಹುದು. ಹಲವು ವಚನಗಳಲ್ಲಿ ಗದ್ಯಾತ್ಮಕ ಗುಣಗಳಿವೆ. ಈಕೆಯನ್ನು ಬೆಡಗಿನ ವಚನಕಾರ್ತಿ ಎಂದು ಗುರುತಿಸುತ್ತಾರೆ.

ಬಸವಣ್ಣನವರ ಆಪ್ತ ಕಾರ್ಯದರ್ಶಿ ಶರಣ ಹಡಪದ ಅಪ್ಪಣ್ಣನ ಪತ್ನಿ, ಅವಳ ವೈಯಕ್ತಿಕ ಬದುಕಿನ ಅಂಶಗಳು ಕಾವ್ಯ ಭಾಗದಿಂದಾಗಲಿ, ಅವಳ ವಚನಗಳಲ್ಲಾಗಲಿ ಅಥವಾ ಇನ್ನಾವುದೇ ಮೂಲದಿಂದಾಗಲಿ ಇದುವರೆಗೆ ಲಭಿಸಿಲ್ಲ. ಲಿಂಗಮ್ಮನ ಜೀವನದ ಬಗೆಗೆ ಹೆಚ್ಚು ವಿಷಯಗಳು ದೊರೆಯದಿರುವುದು ದುರ್ದೈವ. ಶರಣರ ಹೆಸರುಗಳ ಜೊತೆಯಲ್ಲಿ ಅವರ

ಕಾಯಕಗಳ ಹೆಸರು ಸೇರಿಸಲ್ಪಟ್ಟಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ. ಆ ಹಿನ್ನೆಲೆಯಲ್ಲಿ ಗಮನಿಸಿದಾಗ ಹಡಪದ ಅಪ್ಪಣ್ಣ ಕ್ಷೌರಿಕ ವೃತ್ತಿಯವನಾಗಿರಬಹುದೆಂದೂ ಊಹಿಸಬಹುದು. ಲಿಂಗಮ್ಮನ ಕೆಲ ವಚನಗಳಲ್ಲಿ 'ಚೆನ್ನಮಲ್ಲೇಶ್ವರ'ರ ಪ್ರಸ್ತಾಪ ಬಂದಿದೆ. "ತಾನು ತಾನಾಗಿಪ್ಪ ಮಹಾ ಬೆಳಗಿನಲ್ಲಿ ಓಲಾಡಿ ಸುಖಿಯಾದೆನಯ್ಯಾ, ಚೆನ್ನಮಲ್ಲೇಶ್ವರನ ಶಿಶುವಾದ ಕಾರಣ"[೧೭] ಎಂದು ಗಮನಿಸಿದರೆ, ಅಪ್ಪಣ್ಣನಿಗೆ ಗುರುವಾಗಿದ್ದ 'ಚೆನ್ನಮಲ್ಲೇಶ್ವರ' ಲಿಂಗಮ್ಮನ ಗುರುವೂ ಆಗಿದ್ದರೆಂದು ಹೇಳಬೇಕಾಗುತ್ತದೆ.

### ೩. ಕೊಟ್ಟಣದ ಸೋಮವ್ವೆ

ಅಂಕಿತನಾಮ :– ನಿರ್ಲಜ್ಜೇಶ್ವರ

ಕಾಯಕ :– ಭತ್ತವನ್ನು ಕುಟ್ಟುವುದು (ಕಲ್ಯಾಣ ಪಟ್ಟಣದಲ್ಲಿ)

ಗುರು :– ನಿರ್ಲಜ್ಜ ಶಾಂತಯ್ಯ

ಲಭ್ಯವಾದ ವಚನಗಳ ಸಂಖ್ಯೆ :– ೦೧

ಸ್ವವಿವರ :– ಸ್ವಲ್ಪವೂ ತಿಳಿದಿಲ್ಲ.

ಜನರು ಈಕೆಯನ್ನು ಕೊಟ್ಟಣದ ಸೋಮವ್ವೆ ಎಂದು ಬಹು ಗೌರವದಿಂದ ಕರೆಯುತ್ತಿದ್ದರು. ತನ್ನ ಕಾಯಕದ ಕಾಲವನ್ನು ಬಿಟ್ಟು ಉಳಿದೆಲ್ಲ ವೇಳೆಯನ್ನು ಸತ್ಸಂಗದಲ್ಲಿಯೂ ವಚನ ರಚನೆಯಲ್ಲಿಯೂ ಕಳೆಯುತ್ತಿದ್ದಳು. ಇವಳ ಕಾಯಕ ಕೊಟ್ಟಣ ಕುಟ್ಟುವುದು. ಅಂದರೆ ಭತ್ತವನ್ನು ಕುಟ್ಟಿ ಅಕ್ಕಿಯನ್ನು ತೆಗೆಯುವ ಕಾಯಕ ಮಾಡುತ್ತಿದ್ದಳು. ಇದು ಈಕೆಯ ಹೆಸರಿಗೆ ಹತ್ತಿದ ವಿಶೇಷಣ ಮತ್ತು ವಚನದಲ್ಲಿ ಬಳಸಿದ ದೃಷ್ಟಾಂತಗಳಿಂದ ವ್ಯಕ್ತವಾಗುತ್ತದೆ. ನಿತ್ಯ ಭಕ್ತರ ಮನೆಯ ಭತ್ತವನ್ನು ಕುಟ್ಟುವುದು ಅದರಿಂದ ಬಂದ ಧನದಿಂದ ಗುರುಲಿಂಗ ಜಂಗಮ ಸೇವೆ ಮಾಡುವುದು ಇವಳ ದಿನಚರಿ. ಎಲ್ಲ ಶರಣೆಯರಂತೆ ವ್ರತಾಚಾರ ನಿಷ್ಠೆಯೇ ಸೋಮವ್ವೆಯ ಜೀವನದ ಗುರಿಯೂ ಆಗಿದೆ. 'ನಾನು ವ್ರತ ಹೀನನನ್ನು ಬೆರೆಯಲು ಒಲ್ಲೆ" ಎಂದು ಸೋಮವ್ವೆ, ತನ್ನ ಇಷ್ಟದೈವ ಸಾಕ್ಷಿಯಾಗಿ ಪ್ರತಿಜ್ಞೆ ಮಾಡುತ್ತಾಳೆ. ಒಂದು ವೇಳೆ ಅರಿಯದೇ

ಬೆರೆತರೆ ಅದೂ ತಪ್ಪಲ್ಲ. ಆದರೆ ಅರಿತೂ ಬೆರೆಯುವುದು ಮಹಾ ಅಪರಾಧ ಅದಕ್ಕೆ ಶಿಕ್ಷೆ ತಪ್ಪುವುದಿಲ್ಲ. ಅದರಿಂದಾಗಿ ತಾನು ಅನುಸರಿಸುವ ಈ ವ್ರತಾಚಾರ ಶುದ್ಧಿಯ ಮಾರ್ಗದಲ್ಲಿ ಇತರರೂ ನಡೆಯಬೇಕೆಂದು ಆಕೆ ಬಯಸುತ್ತಾಳೆ. ಈಕೆಯ ವಿವರ ಸ್ವಲ್ಪವೂ ತಿಳಿದಿಲ್ಲ. ಆದರೆ ಕರ್ನಾಟಕ ಕವಿ ಚರಿತ್ರೆಕಾರರು ಹಾಗೂ ಕನ್ನಡ ಸಾಹಿತ್ಯ ಚರಿತ್ರೆಕಾರರು ಸೋಮಮ್ಮನ ಕಾಲವನ್ನು ಕ್ರಿ.ಶ. ಸುಮಾರು ೧೧೬೦ ಎಂದು ಗುರುತಿಸಿದ್ದಾರೆ.[೧೮]

**ಕೊಟ್ಟಣದ ಸೋಮವ್ವೆಯ ವಚನ:**

ಹದತಪ್ಪಿ ಕುಟ್ಟಲು ನುಚ್ಚಲ್ಲದೆ ಅಕ್ಕಿಯಿಲ್ಲ.

ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ.

ಅರಿಯದುದು ಹೋಗಲಿ, ಅರಿದು ಬೆರೆದೆನಾದಡೆ,

ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯಾ.

ಒಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ.

**೪. ಕದಿರ ರೆಮ್ಮವ್ವೆ**

| | | |
|---|---|---|
| ಅಂಕಿತನಾಮ | :– | ಕದಿರ ರೆಮ್ಮಿಯೊಡೆಯಗುಮ್ಮೇಶ್ವರಾ |
| ಕಾಯಕ | :– | ರಾಟೆಯಿಂದ ದಾರ ತೆಗೆಯುವುದು |
| **ಲಭ್ಯವಾದವಚನಗಳ ಸಂಖ್ಯೆ** | :– | ೦೪ |
| ಈಕೆ | :– | ತಿಮ್ಮಯ್ಯನಅನುಬಂಧಿನಿ ಕದಿರ ತಿಮ್ಮಯ್ಯನ ಅನುಬಂಧಿನಿ ಈಕೆಯೆಂದು ಕವಿ ಚರಿತ್ರಾಕಾರರು ಅಭಿಪ್ರಾಯ ಪಡುತ್ತಾರೆ |

ಕಾಲ:– ಈಕೆಯ ಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ[೧೯]

ಡಾ. ಎಲ್. ಬಸವರಾಜು ಪ್ರಕಾರ ಸುಮಾರು ೧೪೩೦ ಎಂದು ಗುರುತಿಸುತ್ತಾರೆ. ಏಕೆಂದರೆ ಈಕೆಯ ವಚನದಲ್ಲಿ ಪರದಳ ವಿಭಾಡ;

ಗಜವೆಂಟೆಕಾರ ಎಂಬ ಪದಗಳನ್ನು ಗಮನಿಸಿದ್ದರಿಂದ ಅವು ವಿಜಯನಗರದ ಅರಸರ ಕಾಲಕ್ಕೆ ಸೇರಿರುವುದರಿಂದ ಈ ಅವಧಿಯನ್ನು ಗುರುತಿಸಬಹುದು ಎಂದಿದ್ದಾರೆ. ಆದರೆ ಕವಿಚರಿತ್ರಕಾರರು ಸುಮಾರು ೧೧೬೦ಎಂದು ಊಹಿಸಿದ್ದಾರೆ.

ಈಕೆಗೆ ತಿಮ್ಮವ್ವೆ[೨೦], ರೆಮ್ಮವ್ವೆ, ರೆಬ್ಬವ್ವೆ[೨೧] ಎನ್ನುವ ಇತರ ಹೆಸರುಗಳಿವೆ. ಕವಿಚರಿತ್ರಕಾರರು ಈಕೆಯು ಕದಿರ ರೇಮಯ್ಯನ ಸತಿಯಾಗಿರಬಹುದೆಂದು ಊಹಿಸಿದ್ದಾರೆ. ರೆಮ್ಮವ್ವೆ ಒಬ್ಬ ನಿಷ್ಠಾವಂತ ಕಾಯಕಜೀವಿ. ರಾಟೆಯಿಂದ ನೂಲು ತೆಗೆಯುವುದು, ಅದರಿಂದ ಬಂದ ಆದಾಯದಿಂದ ಗುರುಲಿಂಗ ಜಂಗಮ ಸೇವೆ ಮಾಡುವುದು. ಜೊತೆಗೆ ಶರಣರ ಅನುಭಾವಗೋಷ್ಠಿಯಲ್ಲಿ ಭಾಗವಹಿಸುವುದು ಅವಳ ನಿತ್ಯ ನೇಮವಾಗಿತ್ತು. ವಚನಗಳ ಭಾಷೆ ಸರಳವಾಗಿದ್ದರೂ ಭಾವ ಬಂಧುರವಾಗಿದೆ. ಲೌಕಿಕ–ಪಾರಲೌಕಿಕಗಳನ್ನು ಸಮೀಕರಿಸಲು ಬಳಸಿದ ಬೆಡಗಿನ ವಿಧಾನ ಸಮರ್ಪಕವಾಗಿದೆ[೨೨]. ಇಲ್ಲಿನ ವಚನ ಕಾರ್ತಿಯರ ಹೆಸರುಗಳನ್ನು ನೋಡಿದರೆ ಒಂದು ಕದರಿ ತಿಮ್ಮವ್ವೆ ಎಂದೂ ಇನ್ನೊಂದು ಕದರಿ ರೆಮ್ಮವ್ವೆ ಎಂದಿದೆ. ಕದರಿ ತಿಮ್ಮವ್ವೆ, ಕದರ ರೆಮ್ಮವ್ವೆ ಎರಡು ಹೆಸರನ್ನು ಒಬ್ಬರದೇ ಎಂದು ಬಳಸಲಾಗಿದೆ. ಯಾಕೆಂದರೆ ಇಬ್ಬರ ಅಂಕಿತನಾಮದಲ್ಲೂ ಭಿನ್ನತೆಯಿದೆ. ಒಂದು ಕದಿರೆ ತಿಮ್ಮಿಯೊಡೆಯ ಗುಮ್ಮೇಶ್ವರ ಎಂದಿದ್ದರೆ, ಇನ್ನೊಂದರಲ್ಲಿ ಕದರಿ ರೆಮ್ಮಿಯೊಡೆಯ ಗುಮ್ಮೇಶ್ವರ ಎಂದಿದೆ. ವಿಶೇಷವಾಗಿ ವಚನಕಾರ್ತಿಯರ ಹೆಸರು, ಅಂಕಿತನಾಮ ಬೇರೆ ಬೇರೆ ಆಗಿದ್ದರೂ ವಚನಗಳು ಒಂದೇ ಮಾದರಿಯಲ್ಲಿರುವುದರಿಂದ ಇವುಗಳನ್ನು ಒಬ್ಬರೆ ಬರೆದಿರುವಂತೆ ಕಾಣುತ್ತದೆ.

**ಕದಿರ ರೆಮ್ಮವ್ವೆಯ ವಚನಗಳು:**

ಎನ್ನ ಸ್ಥೂಲತನುವೆ ಬಸವಣ್ಣನಯ್ಯಾ.
ಎನ್ನ ಸೂಕ್ಷ್ಮತನುವೆ ಚೆನ್ನಬಸವಣ್ಣನಯ್ಯಾ.
ಎನ್ನ ಕಾರಣತನುವೆ ಪ್ರಭುದೇವರಯ್ಯಾ.
ಇಂತಿವರ ಕರುಣದಿಂದಲಾನು ಬದುಕಿದೆನಯ್ಯಾ
ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ. (೧)

ಎಲ್ಲರ ಗಂಡಂದಿರು ಪರದಳವಿಭಾಡರು;
ಎಲ್ಲ ಗಂಡ ಮನದಳವಿಭಾಡ.
ಎಲ್ಲರ ಗಂಡಂದಿರು ಗಜವೇಂಟೆಕಾರರು;

ಎನ್ನ ಗಂಡ ಮನವೇಂಟೆಕಾರ.
ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು;
ಎನ್ನ ಗಂಡ ತಾರದೆ ಇಕ್ಕಿಸಿಕೊಂಬ.
ಎಲ್ಲರ ಗಂಡಂದಿರಿಗೆ ಮೂರು,
ಎನ್ನ ಗಂಡಂಗೆ ಅದೊಂದೆ;
ಅದೊಂದೂ ಸಂದೇಹ, ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ. (೨)

ಎಲ್ಲರ ಹೆಂಡಿರು ತೊಳಸಿಕ್ಕುವರು;
ಎನ್ನ ಗಂಡಂಗೆ ತೊಳಸುವುದಿಲ್ಲ.
ಎಲ್ಲರ ಗಂಡಂದಿರಿಗೆ ಬಸಿವರು;
ಎನ್ನ ಗಂಡಂಗೆ ಬಿಸುವುದಿಲ್ಲ.
ಎಲ್ಲರ ಗಂಡಂದಿರಿಗೆ ಬೀಜವುಂಟು;
ಎನ್ನ ಗಂಡಂಗೆ ಅಂಡದ ಬೀಜವಿಲ್ಲ.
ಎಲ್ಲರ ಗಂಡಂದಿರು ಮೇಲೆ;
ಎನ್ನ ಗಂಡ ಕೆಳಗೆ, ನಾ ಮೇಲೆ.
ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ. (೩)

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ:
ಅಡಿಯ ಹಲಗೆ ಬ್ರಹ್ಮ, ತೋರಣ ವಿಷ್ಣು;
ನಿಂದ ಬೊಂಬೆ ಮಹಾರುದ್ರ;
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ.
ಅರಿವೆಂಬ ಕದಿರು, ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ,
ಸುತ್ತಿತ್ತು ನೂಲು ಕದಿರು ತುಂಬಿತ್ತು.
ರಾಟೆಯ ತಿರುಹಲಾರೆ– ಎನ್ನ ಗಂಡ ಕುಟ್ಟಿಹ ;
ಇನ್ನೇವೆ ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ ? (೪)

**೫. ಒಕ್ಕಲ ತಿಮ್ಮವ್ವೆ**

| | | |
|---|---|---|
| ಅಂಕಿತನಾಮ | :– | ಏಲೇಶ್ವರ ಲಿಂಗ |
| ಕಾಯಕ | :– | ಒಕ್ಕಲುತನ |

ಗ್ರಾಮ :– ಏಲೇಶಕೇಶಯ್ಯನ ಗ್ರಾಮ

ಲಭ್ಯವಾದ ವಚನ ಸಂಖ್ಯೆ :– ೦೧

ಈಕೆಯು ಸದಾಚಾರದಿಂದ ಜನರು ನಡೆದುಕೊಳ್ಳಬೇಕೆಂಬ ಉದಾತ್ತ ಧ್ಯೇಯವನ್ನು ಬೋಧಿಸಿದ್ದಾಳೆ. "ತಾನೇ ಆಯ್ಕೆಮಾಡಿಕೊಂಡ ವ್ಯವಸಾಯವಿಲ್ಲದೆ ಒಡೆಯರು ಕಟ್ಟಪ್ಪಣೆ ಮಾಡುವರೆಂತು ಜಲ, ನೆಲ, ಶಿಲೆ ತಾ ಮೂಡುವ ಹೊಲ ಮುಂತಾಗಿ ಸರ್ವವೆಲ್ಲವೂ ಭವಿಸಂಗ, ಭವಿನಿರೀಕ್ಷಣೆ, ಭವಿ ಅಪೇಕ್ಷೆ, ಭವಿ ದ್ರವ್ಯಂಗಳನೊಲ್ಲದೆ, ಶಿವನರಿತಲ್ಲಿ, ಶಿವನ ಪೂಜೆಯ ಮಾಡುವಲ್ಲಿ, ಶಿವಮೂರ್ತಿ ಧ್ಯಾನದಿಂದ ಶಿವ ಲಿಂಗಾರ್ಚನೆಯ ಮಾಡುವಲ್ಲಿ ಶಿವ ಪ್ರಸಾದವ ತಂದು ಒಡೆಯನಿಗಿತ್ತು. ಆ ಪ್ರಸಾದವ ಏಲೇಶ್ವರ ಲಿಂಗಕ್ಕೆ ಕೊಟ್ಟ ವ್ರತ ಭಾವಿಗೆ ನಮೋ ನಮೋ ಎನ್ನುವಂತಿದೆ. ಈಕೆಯ ವಚನಗಳು ಇಪ್ಪತ್ಮೂರು ಪ್ರಕಟವಾಗಿವೆಯೆಂದು ದಾಖಲಿದೆ[೨೩]. ಆದರೆ ಒಂದು ವಚನ ಮಾತ್ರ ದೊರಕಿದೆ. ಕದಿರ ತಿಮ್ಮವ್ವೆ[೨೪] ಒಕ್ಕಲ ತಿಮ್ಮವ್ವೆ ಮತ್ತು ತಿಮ್ಮವ್ವೆ[೨೫] ಎಂಬ ವಚನಕಾರ್ತಿಯರು ಇರುವುದರಿಂದ ಅವರವರ ವಚನಗಳನ್ನು ಅಂಕಿತನಾಮದ ಮೇಲೆ, ಕಾಯಕದಮೇಲೆ ಗುರುತಿಸಲಾಗಿದೆ. ಕದಿರ ತಿಮ್ಮವ್ವೆಯ ಅಂಕಿತನಾಮ–ಕದಿರೆ ತಿಮ್ಮಿಯೊಡೆಯ ಗುಮ್ಮೇಶ್ವರಾ ? ಒಕ್ಕಲ ತಿಮ್ಮವ್ವೆಯ ಅಂಕಿತನಾಮ–ನೀವೇ ಬಲ್ಲಿರಿ ಏಲೇಶ್ವರ ಲಿಂಗವೇ ಮತ್ತು ತಿಮ್ಮವ್ವೆಯ ಅಂಕಿತನಾಮ–ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ ಎಂದಿದೆ. ಆದರೆ ಕದಿರ ತಿಮ್ಮವ್ವೆಯ ವಚನವು ಕದಿರ ರೆಮ್ಮವ್ವೆಯನ್ನು ನೆನಪಿಗೆ ತಂದರೆ, ತಿಮ್ಮವ್ವೆಯ ವಚನದ ಅಂಕಿತನಾಮ ಅಕ್ಕಮ್ಮಳನ್ನು ನೆನಪಿಗೆ ತರುತ್ತದೆ. ಬಹುಶಃ ಇವುಗಳ ಸಂಪಾದನೆಯ ಸಂದರ್ಭದಲ್ಲಿ ಮುದ್ರಣದ ತಪ್ಪಿರಬಹುದು, ಇಲ್ಲವೆ ಒಂದೇ ಕಾಯಕದ ವಚನಕಾರ್ತಿಯರು ಒಂದೇ ವಚನವನ್ನು ಅವರವರ ಹೆಸರಿನೊಂದಿಗೆ (ಕದಿರ ರೆಮ್ಮವ್ವೆ ಮತ್ತು ಕದಿರ ತಿಮ್ಮವ್ವೆ) ಬರೆದುಕೊಂಡಿರಬೇಕು. ಆದರೆ, ಅವರವರ ಸ್ವವಿವರಗಳು ಲಭ್ಯವಿಲ್ಲ. ಈ ಮೂವರು ಬೇರೆ ಬೇರೆ ವಚನಗಳನ್ನು ಬರೆದಿದ್ದಾರೆ. ಆದರೆ ಈಕೆಯ ವಚನ ಈ ಕೆಳಕಂಡಂತೆ ಇದೆ.

**ಒಕ್ಕಲ ತಿಮ್ಮವ್ವೆಯ ವಚನ**

ತಾನೇ ಮಾಡಿಕೊಂಡು ಕೃಷಿ ವ್ಯವಸಾಯವಿಲ್ಲದೆ
ಒಡೆಯರು ಕಟ್ಟಪ್ಪಣೆ ಮಾಡುವರೆಂತು
ಹೀಗಲ್ಲದೆ ಎನ್ನ ಒಡಲ ಪೊರೆದಿಹೆನೆಂದು

ಹೋದ ಕಾವಿನಲ್ಲಿ ಜಗಳವನಿಕ್ಕುವಲಾಗಿಗ
ಶೀಲವಂತರ ಮನದ ಭೇದವ ನೀವೇ ಬಲ್ಲಿರಿ
ಏಲೇಶ್ವರಲಿಂಗವೇ"

**೬. ಅಕ್ಕಮ್ಮ**

| | | |
|---|---|---|
| ಅಂಕಿತನಾಮ | :– | ಆಚಾರವೇ ಪ್ರಾಣವಾದ ರಾಮೇಶ್ವರ ಲಿಂಗ |
| ಲಭ್ಯವಾದ ವಚನಗಳ ಸಂಖ್ಯೆ | :– | ೧೫೪ |
| ಸ್ವವಿವರ | :– | ತಿಳಿದು ಬಂದಿಲ್ಲ. |

ಶರಣೆಯರ ಸಮೂಹದಲ್ಲಿ 'ರೆಮ್ಮವ್ವೆ' ಎಂಬ ಹೆಸರಿನ ಐದು ಜನರಿದ್ದು, ಅವರೆಂದರೆ ಕನ್ನಡಿ ಕಾಯಕದ ರೆಮ್ಮವ್ವೆ, ಕದಿರ ರೆಮ್ಮವ್ವೆ, ಕೃಷಿ(ಒಕ್ಕಲ) ಕಾಯಕದ ರೆಮ್ಮವ್ವೆ, 'ಆದಿಲಿಂಗ'ವೆಂಬ ಅಂಕಿತವಿಟ್ಟುಕೊಂಡ ರೆಮ್ಮವ್ವೆ ಮತ್ತು ಅಕ್ಕಮ್ಮನೆಂದು ಪ್ರಸಿದ್ಧಳಾಗಿರುವ ರೆಮ್ಮವ್ವೆ[೨೧] ಇವರಲ್ಲಿ ಒಬ್ಬ ಶರಣೆ ಮಾತ್ರ 'ಅಕ್ಕಮ್ಮ' ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ. ಅದರಲ್ಲಿಯೂ ಸ್ತ್ರೀ ವಚನಕಾರ್ತಿಯರಲ್ಲಿ ಅಕ್ಕಮಹಾದೇವಿಯನ್ನು ಬಿಟ್ಟರೆ ಹೆಚ್ಚು ವಚನಗಳನ್ನು ರಚಿಸಿರುವವಳು ಇವಳೇ, 'ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ' ಎಂಬ ಅಂಕಿತದಿಂದ ವಚನ ರಚಿಸಿರುವ ಅಕ್ಕಮ್ಮ ಈಕೆಯ ನಿಜನಾಮಧೇಯವೇ? ಅಥವಾ ಈಕೆಗೆ ಅಕ್ಕಮ್ಮ (ರೆಮ್ಮವ್ವೆಯ ಬದಲು)ನೆಂದು ಹೆಸರು ಬರಲು ಕಾರಣವೇನು? ಅದು ಅವಳಿಗೆ ಅನ್ವರ್ಥನಾಮವೇ? ಅಭಿದಾನಾಂಕಿತವೆ? ಅಥವಾ ಉಳಿದ ರೆಮ್ಮವ್ವೆಯರಿಂದ ಭಿನ್ನಳಾಗಿ ತೋರಲು ಹೇರಲ್ಪಟ್ಟಿರುವುದೇ? ಯಾವುದೂ ಗೊತ್ತಿಲ್ಲ. ಆಕೆಯ ವಚನಗಳನ್ನಾಧರಿಸಿಯೆ, ಆಕೆಯ ಸಾಧನೆ, ಸ್ವಭಾವಾದಿಗಳನ್ನು ಊಹಿಸಬೇಕಾಗುತ್ತದೆ. ವ್ರತ–ನಿಯಮಗಳನ್ನೇ ತನ್ನ ಬದುಕಿನ ಹಾಸುಹೊಕ್ಕುಗಳನ್ನಾಗಿ ಮಾಡಿಕೊಂಡಿರಬಹುದಾದ ಶರಣೆ, ವ್ರತಭ್ರಷ್ಟರನ್ನು, ಆಚಾರ ಹೀನರನ್ನು, ತೀರ ಅಸಹ್ಯವಾಗಿ ಕಂಡಿದ್ದಾಳೆ. ವೇಷಾಧಾರಿಗಳನ್ನು ತೀವ್ರವಾಗಿ ಖಂಡಿಸಿದ್ದಾಳೆ. ಎಂತಹ ಪ್ರಸಂಗದಲ್ಲೂ ಹಿಡಿದ ನಿಯಮಗಳನ್ನು ಬಿಡದ ಛಲ, ತನ್ನ ಗುರಿಯನ್ನು ಈಡೇರಿಸಿಕೊಳ್ಳುವ ಧೈರ್ಯ, ತಾಮಸ, ಆಚಾರ–ವಿಚಾರಗಳನ್ನು ಅಲ್ಲಗಳೆಯುವ ಕೆಚ್ಚು[೨೨] ಇವು ಆಕೆಯ ವಚನಗಳಲ್ಲಿ ಗುರುತಿಸಬಹುದಾದ ವಿಶಿಷ್ಟ ಅಂಶಗಳು. ಜೊತೆಗೆ ಕಾಯಕ ನಿಷ್ಠಳೂ ಆದ

ಶರಣೆ ಆಗಿರಬಹುದೆಂದು ತೋರುತ್ತದೆ. ಗುರುವಾದರೂ ಆಚಾರ ಭ್ರಷ್ಟನಾದರೆ ಅವನನ್ನು ಅನುಸರಿಸಲಾಗುವುದಿಲ್ಲ ಎನ್ನುತ್ತಾಳೆ. ಈಕೆಯ ಪಾಲಿಗೆ ಆಚಾರವೇ ವಸ್ತು, ವ್ರತವೇ ಪ್ರಾಣ, ಕ್ರಿಯವೇ ಜ್ಞಾನ ಎಂದು ತನ್ನ ವಚನಗಳಲ್ಲಿ ಪ್ರಾಸ್ತಪಿಸಿದ್ದಾಳೆ. ಅಕ್ಕಮ್ಮಳು ಬರೆದಿರುವ ವಚನಗಳನ್ನು 'ತಿಮ್ಮವ್ವೆ' ಬರೆದಿರುವಳೆಂದು ತಿಳಿಸಲಾಗಿದೆ. ಅಕ್ಕಮ್ಮನ ವಚನದ ಅಂಕಿತನಾಮವು ತಿಮ್ಮವ್ವೆಯ ವಚನದ ಅಂಕಿತ ನಾಮವು ಒಂದೇ ಆಗಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಒಂದೇ ಬಗೆಯ ವಚನವನ್ನು ಇಬ್ಬರು ವಚನ ಕಾರ್ತಿಯರು ಬರೆಯಲು ಸಾಧ್ಯವೇ? ಸಾಧ್ಯವಿದ್ದರು ಬರೀ ಅಂಕಿತನಾಮ ಮಾತ್ರ ಬದಲಾಗಲು ಹೇಗೆ ಸಾಧ್ಯ? ತಿಮ್ಮವ್ವೆ. ರೆಮ್ಮವ್ವೆ[೨೮] ಅಕ್ಕಮ್ಮ[೨೯] – ಈ ಮೂರು ಹೆಸರುಗಳು ಒಬ್ಬ ವಚನಕಾರ್ತಿಯದ್ದೇ ಇರಬಹುದು? ಒಬ್ಬರ ವಚನವನ್ನು ತಂತಮ್ಮ ಹೆಸರಿನಲ್ಲಿ ಪ್ರಕಟಿಸಿಕೊಂಡು ತಾನೇ ಬರೆದುದ್ದಾಗಿ ಹೇಳಿಕೊಂಡಿರಬಹುದೇ? ಈ ರೀತಿಯ ಪ್ರಶ್ನೆಗಳು ನಮ್ಮ ಮುಂದೆ ನಿಲ್ಲುತ್ತವೆ.

**೭. ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ**

| | |
|---|---|
| ಪತಿ | :– ದಸರಯ್ಯ |
| **ಗ್ರಾಮ** | :– ರಾಮಗೊಂಡೆ ಗ್ರಾಮ |
| ಅಂಕಿತನಾಮ | :– ಗುರು ಶಾಂತೇಶ್ವರಾ |
| ಲಭ್ಯವಾದ ವಚನಗಳ ಸಂಖ್ಯೆ | :– ೦೫ |
| ವಚನ ಮೌಲ್ಯ | :– ಅಹಿಂಸೆ |

ಶಿವಶರಣನಾದ ದಸರಯ್ಯನ ಮಡದಿ ವೀರಮ್ಮ. ಗಂಡ–ಹೆಂಡತಿಯರಿಬ್ಬರೂ ವಚನಗಳನ್ನು ರಚನೆ ಮಾಡಿದ್ದಾರೆ. ಈಕೆ ಅಹಿಂಸೆಯನ್ನೇ ತನ್ನ ಜೀವನ ಮೌಲ್ಯವನ್ನಾಗಿಸಿಕೊಂಡು ಬದುಕಿದಳು. ಶರಣೆ ವೀರಮ್ಮನ ಗುರು–ಗುರುಶಾಂತೇಶ್ವರ. ಗುರುವಿನ ಹೆಸರನ್ನು ತನ್ನ ವಚನದ ಅಂಕಿತನಾಮವಾಗಿಟ್ಟುಕೊಂಡಿದ್ದಾಳೆ. ಈಕೆಯ ಲಭ್ಯವಾದ ವಚನಗಳನ್ನು ಆಧಾರಿಸಿ ಹೇಳುವುದಾದರೆ ಇವಳ ವಚನಗಳಲ್ಲಿ ಪಾದೋದಕ, ಪ್ರಸಾದ, ಮತ್ತು ವೀರಶೈವಾಚಾರ, ಮನದ ಚಂಚಲತೆ, ಶರಣನ ನಿಲುವು, ವ್ರತನಿಷ್ಠೆ ಇವುಗಳ

ವಿವರಣೆಯಿದೆ[೩೦]. ವೀರಮ್ಮ – ದಸರಯ್ಯ ಇವರು ರಾಮಗೊಂಡೆ ಗ್ರಾಮಕ್ಕೆ ಸೇರಿದವರು. ಬಸವಣ್ಣನವರ ಸಮಕಾಲೀನರಾದುದ್ದರಿಂದ ಇವರ ಕಾಲ ಸುಮಾರು ೧೧೬೦ ಎಂದು ಕವಿ ಚರಿತ್ರೆಕಾರರು ಊಹಿಸಿದ್ದಾರೆ. ಅದನ್ನೇ ನಂತರದ ಸಾಹಿತ್ಯ ಚರಿತ್ರೆಕಾರರೂ ಅನುಮೋದಿಸಿದ್ದಾರೆ. ವೀರಮ್ಮನಾದರೋ ಉತ್ತಮ ಶಿವಾನುಭವಿ, ಗುರು–ಲಿಂಗ–ಜಂಗಮ ಸೇವಾನಿರತಳಾಗಿದ್ದು ತನ್ನ ಪತಿಯ ಪಾರಮಾರ್ಥಿಕ ಜೀವನದ ಹಾದಿಯನ್ನು ಸುಗಮಗೊಳಿಸಿದುದಷ್ಟೇ ಅಲ್ಲದೆ ಉತ್ತಮ ವಚನಕಾರ್ತಿಯೂ ಆಗಿದ್ದಾಳೆ. ಸತಿ–ಪತಿಗಳಿಬ್ಬರೂ ವಿಚಾರಪರರಾಗಿದ್ದು, ವೈಚಾರಿಕ ಜೀವನದಲ್ಲಿ ಸ್ವತಂತ್ರ ಮನೋಭಾವವಿದ್ದುದು ಎದ್ದು ಕಾಣುತ್ತದೆ. ಇದಕ್ಕೆ ನಿದರ್ಶನ ಆಕೆ ತನ್ನ ವಚನಗಳ ಅಂಕಿತವನ್ನು ಇಟ್ಟುಕೊಂಡಿರುವುದೇ ಆಗಿದೆ. ಪತಿ ದಸರಯ್ಯ 'ದಸರೇಶ್ವರಲಿಂಗ' ಎಂದು ಅಂಕಿತನಾಮ ಹೊಂದಿದ್ದರೆ, ವೀರಮ್ಮ ತನ್ನ ಗುರುವಾದ – ಶಾಂತೇಶ್ವರನನ್ನು ತನ್ನ ವಚನದ ಅಂಕಿತನಾಮವಾಗಿ ಇಟ್ಟಿರುವುದು ಅವರಿಬ್ಬರ ಸ್ವತಂತ್ರ ಮನೋವೃತ್ತಿಗೆ ಕುರುಹಾಗಿದೆ.

ಪಾದದಲ್ಲಿ ಪಾದೋದಕ, ಅಪಾದ ತೀರ್ಥವನ್ನು ಲಿಂಗಕ್ಕೆ ಮಜ್ಜನಕ್ಕಿರೆಯಬೇಕೆಂಬ ಇಚ್ಚೆ ಹುಟ್ಟಿದಲ್ಲಿ ಲಿಂಗೋದಕ. ಮಜ್ಜನಕ್ಕೆರೆದಲ್ಲಿ ಮಜ್ಜನೋದಕ. ಜಿಹ್ವೆಯಲ್ಲಿ ಪಂಚಾಂಗುಲದಿ ಸ್ವೀಕರಿಸಿದ್ದೇ ಸ್ಪರ್ಶನೋದಕ. ಎಚ್ಚರಿಕೆ ಸಾವಧಾನದಿಂದ ಸ್ವೀಕರಿಸಿದ್ದೇ ಅವಧಾನೋದಕ. ಸಲಿಸಿ ಸಂತೋಷವಾದರೆ ಅಪ್ಯಾಯನೋದಕ. ಹಸ್ತದೊಳಗಿದ್ದ ತೀರ್ಥವನ್ನು ಸಲಿಸಿದ್ದೇ ಹಸ್ತೋದಕ. ಆ ಬಟ್ಟಲಲ್ಲಿದ್ದ ತೀರ್ಥವನ್ನು ಮೂರು ಸಲ ಸ್ವೀಕರಿಸಿದ್ದೇ ಪರಿಣಾಮೋದಕ. ಆಪಾದೋದಕವನ್ನು ಅಂತಿಂತೆಂದು ಹೆಸರಿಡಲಿಲ್ಲವಾಗಿ ನಿರ್ನಾಮೋದಕ. ಬ್ರಹ್ಮರಂಧ್ರದಲ್ಲಿದುದೇ ಚಿದಮೃತವೆಂದು ಭಾವಿಸುವುದೇ ಸತ್ಯೋದಕ ಇಂತೀ ದಶವಿಧ ಪಾದೋದಕವನ್ನು ಎನ್ನ ಅಂತರಂಗದಲ್ಲಿ ತಿಳಿದು ನಾನು ಸದ್ಯುನ್ಮಕ್ತಳಾದೆನೆಯ್ಯ ಗುರು ಶಾಂತೇಶ್ವರಾ. ಈಕೆಯ ಜೀವನದ ಬಗೆಗೆ ಹೆಚ್ಚಿಗೆ ತಿಳಿದಿಲ್ಲ. 'ದಯವೇ ಧರ್ಮದ ಮೂಲ'. 'ಜೀವಿಯ ನೋವೇ ಲಿಂಗದ ನೋವು'[೩೧] ಎಂದು ಸರ್ವಭೂತಹಿತ ವ್ರತವನ್ನು ಹಿಡಿದು ಸಾಗಿದ ದಸರಯ್ಯನ ವ್ಯಕ್ತಿ ವೈಶಿಷ್ಟ್ಯಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಸಾಗಿದ ಶಿವಾನುಭಾವದ ಸಾತ್ವಿಕ ಶಿರೋಮಣಿ ಈಕೆ. ದುರುಳ ಕಾಯಿನಿಯರಿಗೆ ಎರಗುವ ಮನಸ್ಸನ್ನು "ಹೊಲೆ ಮನಸ್ಸೆಂದು ಕರೆದರೆ, ಗುರುವಿಂಗೆ ಎರಗಿ ಎರಕಡರ್ದಾತನ ಗುರುಕರಜಾತನೆಂದು ಹೇಳುತ್ತಾಳೆ. ಒಂದರಲ್ಲಿ ಏಕಾದಶ ಪ್ರಸಾದಗಳ ವಿವರ

ಬಂದಿದ್ದರೆ ಮತ್ತೊಂದರಲ್ಲಿ ದಶವಿಧ ಪಾದೋದಕದ ಮಹತ್ವವನ್ನು ವರ್ಣಿಸಲಾಗಿದೆ. ಇವರ ವಚನಗಳ ಭಾಷೆ ಸರಳ ಮತ್ತು ನೇರ ನಿರೂಪಣೆಯನ್ನು ಹೊಂದಿವೆ.

**ವೀರಮ್ಮನ ವಚನಗಳು:**

ಅಯ್ಯಾ, ದುರುಳಕಾಮಿನಿಯರಿಗೆ ಎರಗುವ ಹೊಲೆಮನಸೆ,
ಗುರುವಿಂಗೆ ಎರಗಿ ಎರಕಡರ್ದಾತನ ಗುರುಕರಜಾತನೆಂಬೆ.
ಉದರದ ನೆಲೆಯನರಿದಾತನ ಉದಾಸಿಯೆಂಬೆ
ಜನನದ ನೆಲೆಯನರಿದಾತನ ಜಂಗಮವೆಂಬೆ.
ಮರಣದ ನೆಲೆಯನರಿದಾತನ ಮಾಹಂತಿನೊಳಗಣ ಹಿರಿಯನೆಂಬೆ.
ಸಕಲದ ಹಸಿಗೆಯ ನೆಲೆಯನರಿದಾತನ ಹಂಚು ಕಂತೆಯೆಂಬೆ.
ಅತ್ಯತಿಷ್ಠದ್ದಶದಿಂದತ್ತತ್ತ ಬೆಳಗುವ ಮಹಾಬೆಳಗನರಿದಾತನ ಅತೀತನೆಂಬೆ.
ಅರುಹು ಅರತು, ಮರಹು ನಷ್ಟವಾಗಿ ಅರುಹು ಕರಿಗೊಂಡಾತನ
ಮಂಕು ಮರುಳು ಎಂಬೆ.
ತನುಧರ್ಮ ತರಹರಿಸಿ, ಮನದ ಸಂಚಲವಳಿದು ಒಳಗೆ ನುಣ್ಣಗಾಗಬಲ್ಲಡೆ
ಬೋಳಕಾಕಾರ, ಬೋಳನಿರ್ವಾಣಿಗಳೆಂಬೆ.
ಹೀಂಗಲ್ಲದೆ ತಾಯಿಸತ್ತ ತಬ್ಬಲಿಯಂತೆ,
ಹಲಬರಿಗೆ ಹಲ್ಲದೆರೆದು, ಹಲಬರಿಗೆ ಬೋಧಿಸಿ
ತನ್ನ ಉದರವ ಹೊರೆವ ಸಂದೇಹಿಗಳ ಕಂಡು ಎನ್ನ ಮನ
ಸಂದೇಹಿಸಿತ್ತು ಕಾಣಾ ಮಹಾಗುರು ಶಾಂತೇಶ್ವರ ಪ್ರಭುವೆ. (೧)

ಗುರುಮುಖದಿಂದ ಬಂದುದೇ ಗುರುಪ್ರಸಾದ;
ಆ ಪ್ರಸಾದವನು ಲಿಂಗಕ್ಕೆ ಅರ್ಪಿಸಿದಲ್ಲಿ ಲಿಂಗಪ್ರಸಾದ.
ಭೋಜ್ಯ ಕಟ್ಟಿ ಲಿಂಗಕ್ಕೆ ಕೊಟ್ಟು ಸಲಿಸುವುದೇ ಜಂಗಮಪ್ರಸಾದ.
ತತ್ಪ್ರಸಾದಿಗಳಲ್ಲಿ ಯಾಚಿಸಿ,
ಅವರ ಪ್ರಸಾದವ ಕೊಂಬುದೆ ಪ್ರಸಾದಿಯ ಪ್ರಸಾದ.
ಅಪೇಕ್ಷೆಯಿಂದ ಸಲಿಸುವುದೇ ಆಪ್ಯಾಯನಪ್ರಸಾದ.
ಗುರುಲಿಂಗಜಂಗಮವ ಕಂಡು,
ಆ ಸಮಯದಲ್ಲಿ ತೆಗೆದು ಕೊಂಬುವುದೇ ಸಮಯಪ್ರಸಾದ.
ಪಂಚೇಂದ್ರಿಯಂಗಳಲ್ಲಿ ಪಂಚವಿಷಯ ಪದಾರ್ಥಂಗಳನು

ಪಂಚವಿಧಲಿಂಗಕ್ಕೆ ಸಮರ್ಪಣ ಮಾಡುವುದೇ
ಪಂಚೇಂದ್ರಿಯವಿರಹಿತಪ್ರಸಾದ
ಮನವೇ ಲಿಂಗ, ಬುದ್ಧಿಯೇ ಶಿವಜ್ಞಾನ, ಚಿತ್ತವೇ ಶಿವದಾಸೋಹ,
ಅಂಕಾರದಲ್ಲಿ ಶಿವಚಂತಿನೆಯುಳ್ಳವನಾಗಿ ಸಲಿಸಿದ್ದೇ ಅಂತಃಕರಣವಿರಹಿತಪ್ರಸಾದ,
ತ್ರೀವಿಧಾಂಗದಲ್ಲಿ ತ್ರೀವಿಧಲಿಂಗವ ಸಂಬಂಧಿಸಿ
ಆ ಚಿದ್ಘನಲಿಂಗ ತಾನೆಂದರಿದು,
ಆ ತ್ರಿವಿಧಲಿಂಗಕ್ಕೆ ಕೊಡುವುದೇ ಸದ್ಭಾವಪ್ರಸಾದ.
ಬಹಿರಂಗದ ಪ್ರಪಂಚವ ನಷ್ಟಮಾಡಿ,
ಅರಿವುವಿಡಿದು ಸಲಿಸುವುದೇ ಸಮತಾಪ್ರಸಾದ.
ಶ್ರೀಗುರುವಿನ ಪ್ರಸನ್ನತ್ವವೆ ಜ್ಞಾನಪ್ರಸಾದ.
ಇಂತೀ ಏಕದಶ ಪ್ರಸಾದವನು ಒಳಹೊರಗೆ
ಪರಿಪೂರ್ಣಮಾಗಿ ತಿಳಿಯುವುದೇ ಶಿವತಂತ್ರ,
ಗುರುಶಾಂತೇಶ್ವರಾ. (೨)

ಚರಣಾಯುಧ ವೇಳೆಯನರಿವುದಯ್ಯಾ
ಭಕ್ತ ವ್ರತಹೀನನರಿದು ನೆರೆಯನಯ್ಯಾ.
ನೆರೆದಡೆ ನರಕ, ಗುರುಶಾಂತೇಶ್ವರಾ. (೩)

ಪರಿಪೂರ್ಣನಲ್ಲ, ಪ್ರದೇಶಿಕನಲ್ಲ,
ನಿರತಿಶಯದೊಳತಿಶಯ ತಾ ಮುನ್ನಲ್ಲ
ಶರಣನಲ್ಲ, ಐಕ್ಯನಲ್ಲ, ಪರಮನಲ್ಲ, ಜೀವನಲ್ಲ,
ನಿರವಯನಲ್ಲ, ಸಾವಯನಲ್ಲ;
ಪರವಿಹವೆಂಬುಭಯದೊಳಿಲ್ಲದವನು.
ನಿರಾಲಯ ನಿಜಗುರು ಶಾಂತೇಶ್ವರನ ಶರಣನ ನಿಲುವು
ಉಪಮೆಗೆ ತಾನನುಪಮ. (೪)

ಪಾದದಲ್ಲಿ ಪಾದೋದಕ.
ಆ ಪಾದತೀರ್ಥವನು ಲಿಂಗಕ್ಕೆ ಮಜ್ಜನಕ್ಕೆರೆಯಬೇಕೆಂಬ
ಇಚ್ಛೆ ಹುಟ್ಟಿದಲ್ಲಿ ಲಿಂಗೋದಕ.
ಮಜ್ಜನಕ್ಕೆರದಲ್ಲಿ ಮಜ್ಜನೋದಕ.

ಜಿಹ್ವೆಯಲ್ಲಿ ಪಂಚಾಂಗುಲದಿ ಸ್ವೀಕರಿಸಿದ್ದೇ ಸ್ಪರ್ಶನೋದಕ.
ಎಚ್ಚರಿಕೆ ಸಾವಧಾನದಿಂದ ಸೇವಿಸಿದ್ದೇ ಅವಧಾನೋದಕ.
ಸಲಿಸಿ ಸಂತೋಷವಾದರೆ ಆಪ್ಯಾಯನೋದಕ.
ಹಸ್ತದೊಳಗಿರ್ದ ತೀರ್ಥವನು ಸಲಿಸಿದ್ದೇ ಹಸ್ತೋದಕ.
ಆ ಬಟ್ಟಲಲ್ಲಿದ್ದ ತೀರ್ಥವನು ಮೂರುಸಲ
ಸ್ವೀಕರಿಸಿದ್ದೇ ಪರಿಣಾಮೋದಕ.
ಆ ಪಾದೋದಕವನು ಅಂತಿಂತೆಂದು ಹೆಸರಿಡಲಿಲ್ಲವಾಗಿ ನಿರ್ನಾಮೋದಕ.
ಬ್ರಹ್ಮ ರಂಧ್ರದಲ್ಲಿರ್ದುದೇ ಚಿದಮೃತವೆಂದು ಭಾವಿಸುವುದೇ ಸತ್ಯೋದಕ.
ಇಂತೀ ದಶವಿಧ ಪಾದೋದಕವನು ಎನ್ನಂತರಂಗದಲ್ಲಿ ತಿಳಿದು
ನಾನು ಸದ್ಯೋನ್ಮುಕ್ತನಾದೆನಯ್ಯಾ ಗುರುಶಾಂತೇಶ್ವರಾ. (೫)

**೮. ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ**

| | | |
|---|---|---|
| ಪತಿ | :- | ಕೊಂಡೆ ಮಂಚಣ್ಣ |
| ಕಾಯಕ: | :- | ಕೊಂಡೆ(ಚಾಡಿಯ ಮಾತು) |
| ಅಂಕಿತನಾಮ | :- | ಅಗಜೇಶ್ವರಲಿಂಗ |
| ಲಭ್ಯವಾದ ವಚನಗಳ ಸಂಖ್ಯೆ | :- | ೦೧ |

ಬಸವಣ್ಣನವರ ಬಗೆಗೆ ಬಿಜ್ಜಳ ದೊರೆಯಲ್ಲಿ ಚಾಡಿ ಹೇಳಿ, ಕಲ್ಯಾಣ ಕ್ರಾಂತಿಗೆ ಕಾರಣಕರ್ತನಾದವ ಕೊಂಡೆಯ ಮಂಚಣ್ಣನೆ ಎಂದು ಪ್ರಾಚೀನ ವಾಙ್ಮಯದಿಂದ ತಿಳಿದುಬರುತ್ತದೆ.[೩೨] ಈಕೆ ಬಿಜ್ಜಳನ ಆಸ್ಥಾನದಲ್ಲಿದ್ದ ಕೊಂಡೆಯ ಮಂಚಣ್ಣನ ಧರ್ಮಪತ್ನಿ. ಸತಿಪತಿಗಳಿಬ್ಬರೂ ಗುಪ್ತಭಕ್ತಿಯಿಂದ ನಡೆಯುತ್ತಿದ್ದರಂತೆ. ಈ ವಿಷಯವು ಹರಿಹರನ ಮಾದರಚೆನ್ನಯ್ಯನ ಗುಪ್ತಭಕ್ತಿಯನ್ನು ನೆನಪಿಗೆ ತರುತ್ತದೆ. ಈಕೆಯು 'ಅಗಜೇಶ್ವರಲಿಂಗ' ಎಂಬ ಅಂಕಿತದಲ್ಲಿ ವಚನಗಳನ್ನು ಬರೆದಿದ್ದಾಳೆ. ಬಸವತತ್ವಕ್ಕೆ ಆಕರ್ಷಿತರಾದವರಲ್ಲಿ ಬಸವಣ್ಣನ ವಿರೋಧಿಗಳೆಂದು ಭಾವಿಸಲಾಗಿದ್ದ ಕೊಂಡೆಮಂಚಣ್ಣ ಹಾಗೂ ಆತನ ಧರ್ಮಪತ್ನಿ ಲಕ್ಷ್ಮಮ್ಮ ಪ್ರಮುಖರು 'ಹೊಗಳಿ ಹೊಗಳಿ ಎನ್ನ ಹೊನ್ನಶೂಲಕ್ಕಿಕ್ಕಿದರಯ್ಯ ಎಮ್ಮವರು' ಎಂದು ತಮ್ಮನ್ನು ಹೊಗಳುವವರ ಬಗೆಗೆ ಬೇಸರ ತೋರುವ ಬಸವಣ್ಣನವರು, 'ಬೈದವರೆನ್ನ ಬಂಧುಗಳಯ್ಯ' ಎಂದು ಹೇಳಿ, ಅವರನ್ನು ತಮ್ಮ ಬಂಧುಗಳೆಂದು

ಭಾವಿಸಿದ್ದವರು. ದೂಷಿಸಿದವರನ್ನು ತಮ್ಮ ಬಂಧುಗಳೆಂದು ತಿಳಿದಿದ್ದ ಬಸವಣ್ಣನವರಿಗೆ ದೂಷಿಸುವುದರ ಮೂಲಕವೇ ಬಸವಣ್ಣನವರ ಆಪ್ತ ವರ್ಗಕ್ಕೆ ಸೇರಿದವರು ಈ ದಂಪತಿಗಳು. ಈ ದಂಪತಿಗಳ ಕಾಲ ಸುಮಾರು ೧೧೬೦ ಎಂದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖಿಸಲಾಗಿದೆ. ನಿಜವಾಗಿ ಅವರು ಶರಣರಿಗೆ ವಿರೋಧಿಗಳಾಗಿರದೆ, ಅವರಿಗೆ ಗುಪ್ತವಾಗಿ ಸಹಾಯ ಮಾಡುತ್ತಿದ್ದರೆಂದು ಕಂಡುಬರುತ್ತದೆ.[೩೩] ಆದರೆ ಅವರು ಶರಣರಿಗೆ ಸಹಾಯ ಮಾಡಿದ ಬಗೆಗೆ ವಿವರಗಳೇನೂ ದೊರೆತಿಲ್ಲ. ಲಕ್ಷ್ಮಮ್ಮನ ಬಗ್ಗೆ ಹೆಚ್ಚಿನ ಅಂಶಗಳೇನೂ ಲಭ್ಯವಿಲ್ಲ. ಲಕ್ಷ್ಮಮ್ಮನ ಒಂದೇ ವಚನ ದೊರೆತಿದ್ದು, 'ಅಗಜೇಶ್ವರಲಿಂಗ' ಎಂಬ ಅಂಕಿತವನ್ನು ಹೊಂದಿದೆ. ವ್ರತನಿಷ್ಠೆಯೇ ಅದರ ವಸ್ತುವಾಗಿದೆ.

**ಲಕ್ಷ್ಮಮ್ಮನ ವಚನ:**

ಆಯುಷ್ಯ ತೀರಲು ಮರಣ;
ವ್ರತ ತಪ್ಪಲು ಶರೀರ ಕಡೆ.
ಮೇಲುವ್ರತವೆಂಬ ತೂತರ ಮೆಚ್ಚ;
ನಮ್ಮ ಅಗಜೇಶ್ವರಲಿಂಗವು.

**೯. ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ**

| | | |
|---|---|---|
| ಪತಿ | :- | ರಾಯಸದ ಮಂಚಣ್ಣ |
| **ಕಾಯಕ** | :- | ರಾಯಸ(ಪತ್ರ ಬರೆಯುವ ಮತ್ತು ಓದಿ ಹೇಳುವ ವೃತ್ತಿ) |
| ಅಂಕಿತನಾಮ | :- | ಅಮುಗೇಶ್ವರ ಲಿಂಗ |
| ಗುರು | :- | ಅಮುಗೇಶ್ವರ ದೇವ (ಅಮುಗಿದೇವ) |
| ಲಭ್ಯವಾದ ವಚನಗಳ ಸಂಖ್ಯೆ | :- | ೦೧ |

ರಾಯಮ್ಮ ರಾಯಸದ ಮಂಚಣ್ಣನವರ ಪತ್ನಿ, ಇವಳು ತನ್ನ ವಚನಗಳಿಗೆ 'ಅಮುಗೇಶ್ವರ' ಎಂಬ ಅಂಕಿತವನ್ನಿಟ್ಟುಕೊಂಡಿರುವುದರಿಂದ ಈಕೆಯನ್ನು ಅಮುಗಿದೇವಯ್ಯನ ಪತ್ನಿ ಎಂದೂ ಕೆಲವರು ಭಾವಿಸಿದ್ದಾರೆ.[೩೪] ಕೆಲವು ಗ್ರಂಥಗಳು ಅಮುಗಿದೇವನ ಪತ್ನಿ ವರದಾನಿಯಮ್ಮ ಎಂದು

ಉಲ್ಲೇಖಿಸಿವೆ.[೩೫] ರಾಯಮ್ಮನು "ಅಮುಗೇಶ್ವರ" ಎಂಬ ಅಂಕಿತವನ್ನಿಟ್ಟುಕೊಂಡು ವಚನ ರಚಿಸಿರುವುದರಿಂದ, ಇವುಗಳನ್ನು 'ಅಮುಗಿ ರಾಯಮ್ಮನ ವಚನಗಳು' ಎಂದು ಹೆಸರಿಸಿ ಡಾ. ಆರ್.ಸಿ. ಹಿರೇಮಠರು ಆಕೆಯ ಸುಮಾರು ೧೧೬ ವಚನಗಳನ್ನು ಶಿವಶರಣೆಯರ ವಚನಗಳು ಭಾಗ–೪ರಲ್ಲಿ ಸಂಗ್ರಹಿಸಿದ್ದಾರೆ. ಆದರೆ ಅಮುಗೆ ರಾಯಮ್ಮನಿಂದ ಭಿನ್ನಳಾದ ಈಕೆ, ಈಕೆಯ ಹೆಸರಿನಡಿಯಲ್ಲಿ 'ಸಕಲಪುರಾತನರ ವಚನಗಳು' ಮತ್ತು ಶೀಲ ಸಂಪಾದನೆ ಎಂಬ ವಚನ ಸಂಕಲನಗಳಲ್ಲಿ ಒಂದು ವಚನ ಮಾತ್ರ ದೊರೆತಿದ್ದು, ಅದು 'ಅಮುಗೇಶ್ವರಲಿಂಗ' ಎಂಬ ಅಂಕಿತವನ್ನು ಹೊಂದಿದೆ. ಇದೇ ವಚನ ಆರಂಭದ ಒಂದು ವಾಕ್ಯವನ್ನು ಮಾತ್ರ ವ್ಯತ್ಯಾಸಗೊಳಿಸಿಕೊಂಡು ಅಮುಗೆ ರಾಯಮ್ಮನ ಹೆಸರಿನಡಿಯಲ್ಲಿಯೂ ದೊರೆಯುತ್ತದೆ. ಹೀಗೆ ಒಂದೇ ವಿಧದ ಅಂಕಿತವನ್ನು ಇಟ್ಟುಕೊಂಡು ಒಂದು ಭಾವದ ವಚನಗಳನ್ನು ರಚಿಸಿದ ಉದಾಹರಣೆಗಳು ಶಿವಶರಣೆಯರಲ್ಲಿ ಒಂದೆರಡು ಸಿಕ್ಕುತ್ತವೆ.[೩೬] ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮನ ಗುರು – 'ಅಮುಗೇಶ್ವರ' ಈಕೆ ತನ್ನ ಗುರುವಿನ ಅಂಕಿತದಲ್ಲೇ ವಚನಗಳನ್ನು ರಚಿಸಿದ್ದಾಳೆ.

ಬಸವಣ್ಣನ ಆಪ್ತ ಕಾರ್ಯದರ್ಶಿ (ಪತ್ರ ವ್ಯವಹಾರ) ವಚನಕಾರ ರಾಯಸದ ಮಂಚಣ್ಣನ ಪತ್ನಿ ಪತಿಯೊಡನೆ ಮಹಾಮನೆಗೆ ಬರುತ್ತಿದ್ದಳು. ಶರಣರ ಒಡನಾಡಿಯಾಗಿವುದರಿಂದ ಶರಣೆಯರ ಪ್ರೇರಣೆಯಿಂದ ಈಕೆಯು ಕೂಡ ವಚನಗಳನ್ನು ರಚಿಸಿದಳು. ನಂತರ ಅನುಭವ ಮಂಟಪದ ಸದಸ್ಯೆಯು ಆಗಿದ್ದಳು. ಕವಿಗೋಷ್ಠಿಯಲ್ಲಿ ಭಾಗವಹಿಸಿರಬೇಕು. ಈಕೆಯಿಂದ ರಚಿತವಾದ ಒಂದು ವಚನ ಲಭ್ಯವಿದೆ[೩೭].

**ರಾಯಮ್ಮನ ವಚನ:**

ಗರುಡಿಯಲ್ಲಿ ಕೋಲಲ್ಲದೆ ಕಾಳಗದಲ್ಲಿ ಕೋಲುಂಟೆ?
ಭವಿಗೆ ಮೇಲುವ್ರತ ಪುನರ್ದೀಕ್ಷೆಯಲ್ಲದೆ ಭಕ್ತಂಗುಂಟೆ?
ವ್ರತ ತಪ್ಪಲು ಶರೀರವಿಡಿವ ನರಕಿಗೆ ಮುಕ್ತಿಯಿಲ್ಲ
ಅಮುಗೇಶ್ವರಲಿಂಗದಲ್ಲಿ.

**೧೦. ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ**

ಪತಿ :– ಎಡೆಮಠದ ನಾಗಿದೇವಯ್ಯ

ಅಂಕಿತನಾಮ :– ನಿಜಗುಣೇಶ್ವರಲಿಂಗ

ಗುರು :– ನಿಜಗುಣೇಶ್ವರ ಶಿವಯೋಗಿ

ಲಭ್ಯವಾದವಚನಗಳ ಸಂಖ್ಯೆ :– ೦೧

ಗಂಡ ಹೆಂಡರಿಬ್ಬರೂ ನಿಜಗುಣೇಶ್ವರ ಶಿವಯೋಗಿಯ ಶಿಷ್ಯರಾಗಿದ್ದಾರೆ. ಗುರುವಿನ ಹೆಸರನ್ನು ಅಂಕಿತವಾಗಿ ಮಾಡಿಕೊಂಡಿದ್ದಾರೆ. ದೇಶದ ನಾನಾ ಮೂಲೆಗಳಿಂದ ಕಲ್ಯಾಣದ ಕೀರ್ತಿಯನ್ನು ಕೇಳಿ ಕಲ್ಯಾಣಕ್ಕೆ ಬಂದ ಶರಣರಂತೆ, ಈಕೆಯು ಕಾಂಚಿಪಟ್ಟಣದಿಂದ ಬಂದಳೆಂದು ತಿಳಿಯುತ್ತದೆ. ಮೊದಲು ಕೃಷ್ಣಾನದಿ ತೀರದ ಚಿಮ್ಮಲಗಿ ಹತ್ತಿರ ವಾಸಿಸುತ್ತಿದ್ದಳಂತೆ. ಈಕೆಯ ಒಂದೇ ಒಂದು ವಚನ ದೊರೆತಿದೆ. ಎಡೆಮಠದ ನಾಗಿದೇವಯ್ಯಗಳ ಧರ್ಮಪತ್ನಿಯೇ ಮಸಣಮ್ಮ. ಈಕೆಯ ಕಾಲ ಸುಮಾರು ಕ್ರಿ.ಶ. ೧೧೬೦ ಎಂದು ಭಾವಿಸಲಾಗಿದೆ. ಇವಳು ತಮಿಳುನಾಡಿನ ಚೋಳ ಮಂಡಳದ ಕಾಂಚಿಪಟ್ಟಣಕ್ಕೆ ಸೇರಿದವಳು[೩೮] ಆ ಊರಿನ ಸಂಪನ್ನರಾಗಿ, ವೀರಶೈವ ಧರ್ಮ ಪ್ರಚಾರಕರಾಗಿ, ಪರಮಜ್ಞಾನಿಗಳೆನಿಸಿ ಆ ನಾಡಿನಲ್ಲೇ ಪ್ರಸಿದ್ಧರಾಗಿದ್ದರು. ಕಲ್ಯಾಣದ ರಾಜ ಬಿಜ್ಜಳನು ಕಾಂಚಿಪುರದರಸನ ಮೇಲೆ ದಂಡೆತ್ತಿ ಬರುವನು. ಹೀಗೆ ಬಂದಾಗ ಆತನ ಮಂತ್ರಿ ಭಕ್ತಿ ಭಂಡಾರಿ ಬಸವಣ್ಣನವರೂ ಕೂಡ ರಾಜನೊಡಗೂಡಿ ಆಗಮಿಸುವರು. ಹೀಗೆ ಬಂದ ಸಂದರ್ಭದಲ್ಲಿ ಪಟ್ಟಣದ ಹೊರವಲಯದಲ್ಲಿದ್ದು ಗುರು–ಲಿಂಗ–ಜಂಗಮ ಸೇವಾ ತತ್ಪರರಾದ ನಾಗಿದೇವ ದಂಪತಿಗಳ ಕೀರ್ತಿ ಬಸವಣ್ಣನವರ ಕಿವಿಗೆ ಬೀಳುವುದು. ಕೂಡಲೆ ಅವರ ದರ್ಶನಾರ್ಥಿಯಾಗಿ ಆಗಮಿಸುತ್ತಾರೆ. ಹೀಗೆ ಆಗಮಿಸಿದ ಬಸವಣ್ಣನವರು ಅವರ ಆದರ್ಶ ಜೀವನಕ್ಕೆ ಮಾರು ಹೋಗಿ ಅಲ್ಲಿ ಏಳು ದಿವಸವಿದ್ದು ನಂತರ ಅವರನ್ನು ತಮ್ಮೊಡನೆ ಕರ್ನಾಟಕಕ್ಕೆ ಕರೆತರುವರು ಎಂದು ಶಿವಶರಣೆಯರ ಚರಿತ್ರೆಗಳು ಹಾಗೂ ಶಿವಶರಣ ಕಥಾ ರತ್ನಕೋಶದ ಗ್ರಂಥ ಕರ್ತೃಗಳು ಅಭಿಪ್ರಾಯಪಟ್ಟಿದ್ದಾರೆ.

ಮಸಣಮ್ಮ ಮತ್ತು ನಾಗಿದೇವಯ್ಯಗಳು ಕಾಂಚಿಯಿಂದ ಹೊರಟು, ಕರ್ನಾಟಕಕ್ಕೆ ಆಗಮಿಸಿ, ನಂತರ ಬಾಗೇವಾಡಿಯ ಸಮೀಪದಲ್ಲಿ ಕೃಷ್ಣಾನದಿ ದಂಡೆಯ ಚಿಮ್ಮಲಿಗೆಯಲ್ಲಿ ಬೀಡು ಬಿಡುವರು. ಶಿವಶರಣರಲ್ಲಿ ಪ್ರಸಿದ್ಧನಾದ ನಿಜಗುಣೇಶ್ವರನೂ ಅಲ್ಲಿಯೇ ನೆಲೆಸಿದ್ದನು. ಆತನ ಅನುಭಾವಶ್ರೀಗೆ ಮಾರು ಹೋದ ಮಸಣಮ್ಮ ಆತನನ್ನು ತನ್ನ ಗುರುವೆಂದು ಸ್ವೀಕರಿಸಿದಳು. ಆತನಿಂದ

ನಿಜೋಪದೇಶವನ್ನು ಪಡೆದು ಆ ಶ್ರೀಗುರುವಿನ ಹೆಸರನ್ನೇ ತನ್ನ ವಚನದ ಅಂಕಿತನಾಮವನ್ನಾಗಿಟ್ಟುಕೊಂಡು ವಚನಗಳನ್ನು ರಚಿಸಿರುವಳು. ಮಸಣಮ್ಮನು ತನ್ನ ಪತಿ ನಾಗಿದೇವಯ್ಯನೊಡನೆ ವೀರಶೈವ ಧರ್ಮ ಪ್ರಚಾರದಲ್ಲಿ ತೊಡಗಿದ್ದಳೆಂದೂ, ಆಕೆಯು ಪರಮಜ್ಞಾನಿಯೆಂದೂ ಎಲ್ಲ ಗ್ರಂಥಗಳೂ ಅಭಿಪ್ರಾಯಪಟ್ಟಿವೆ.[೩೯] ಮಸಣಮ್ಮನು ತನ್ನ ಪತಿ ನಾಗಿದೇವಯ್ಯನವರಿಗೆ ತಕ್ಕ ಸತಿಯಾಗಿ, ಆತನ ಕಾರ್ಯದಲ್ಲಿ ತಾನು ಭಾಗಿಯಾಗಿ, ಧರ್ಮ ಪ್ರಸಾರ ಮಾಡುವ ಕಾರ್ಯದಲ್ಲಿ ಬಹುಮುಖ್ಯ ಪಾತ್ರವಹಿಸಿದ್ದಾಳೆ,

**ಮಸಣಮ್ಮನ ವಚನ:**

ಕಾಗೆಯ ನಾಯ ತಿಂದವರಿಲ್ಲ;

ವ್ರತಭ್ರಷ್ಟನ ಕೂಡಿದವರಿಲ್ಲ.

ನಾಯಿಗೆ ನಾರಂಗವಕ್ಕುವುದೆ ?

ಲೋಕದ ನರಂಗೆ ವ್ರತವಕ್ಕುವುದೆ ಶಿವಬೀಜಕಲ್ಲದೆ ?

ನೀವೇ ಸಾಕ್ಷಿ ನಿಜಗುಣೇಶ್ವರಲಿಂಗದಲ್ಲಿ

**೧೧. ಕಾಳವ್ವೆ-೧ (ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ)**

| | | |
|---|---|---|
| ಪತಿ | :- | ಉರಿಲಿಂಗಪೆದ್ದಿ |
| ಅಂಕಿತನಾಮ | :- | ಉರಿಲಿಂಗ ಪೆದ್ದಿಗಳರಸ |
| ಲಭ್ಯವಾದವಚನಗಳ ಸಂಖ್ಯೆ | :- | ೧೨ |
| ಕಾಲ | :- | ಸುಮಾರು ೧೧೮೦ |

ಈಕೆ ಉರಿಲಿಂಗಪೆದ್ದಿಯ ಮಡದಿ. ಉರಿಲಿಂಗ ಪೆದ್ದಿಯು ಮೊದಲು ಡಕಾಯಿತನಾಗಿದ್ದು, ಅನಂತರ ದೈವಭಕ್ತಿ ಮೂಡಿ ಶಿವದೀಕ್ಷೆ ವಹಿಸಿ ಶರಣನಾಗಿ ಜೀವನ ನಡೆಸಿದನು. ಅನಾಗರೀಕ ಜೀವನದಲ್ಲಿದ್ದವನು, ಸುಸಂಸ್ಕೃತರ ನಡುವೆ ಶಿವಾನುಭವದಲ್ಲಿ ಸುದೀರ್ಘವಾದ ಅಭ್ಯಾಸ ನಡೆಸಿ ಪಂಡಿತನಾದನು. ತಾನು ಕಂಡುಂಡ ಅನುಭವವನ್ನು ತನ್ನ ಪತ್ನಿಗೂ

ಮಾಡಿಕೊಟ್ಟನು. ಶಿವಶರಣರ ಸಹವಾಸದಲ್ಲಿ ಬೆಳೆಯುವಂತೆ ಅವಕಾಶವನ್ನು ಕಲ್ಪಿಸಿಕೊಟ್ಟನು[೪೦]. ಇದರಿಂದ ಪ್ರಭಾವಿತಳೂ, ಪ್ರೇರಿತಳೂ ಆದ ಕಾಳವ್ವೆ "ಉರಿಲಿಂಗ ಪೆದ್ದಿಗಳರಸ" ಎಂಬ ಅಂಕಿತದಿಂದ ವಚನಗಳನ್ನು ರಚಿಸಿದಳು.

ಭಕ್ತನ ಲಕ್ಷಣ, ವ್ರತಾಚರಣೆಯ ಮಹತ್ವ, ಪ್ರಸಾದದ ಮಹಿಮೆ, ಕಾಯಕ ನಿಷ್ಠೆ ಇವು ಈಕೆಯ ವಚನದ ಪ್ರಮುಖ ಅಂಶಗಳು. ಅಲ್ಲದೇ ವಚನಗಳಲ್ಲಿ ಭಕ್ತಿ, ಕಾಯಕ, ಪ್ರಸಾದದ ಬಗೆಗೆ ಕಾಳವ್ವೆ ಇಟ್ಟುಕೊಂಡ ನಂಬಿಕೆಗಳಿವೆ. ವ್ರತಾಚಾರಗಳ ಬಗೆಗೆ ಇತರ ಶರಣೆಯರಂತೆ ಕಾಳವ್ವೆಯದೂ ಹೆಚ್ಚಿನ ಕಾಳಜಿ ಆಕೆಯ ದೃಷ್ಟಿಯಲ್ಲಿ ವ್ರತವೆಂಬುದು ನಾಯಕರತ್ನ, ವ್ರತವೆಂಬುದು ಸುಪ್ಪಾಣಿಯ ಮುತ್ತು, ವ್ರತವೆಂಬುದು ಜೀವನ ಕಳೆ, ವ್ರತವೆಂಬುದು ಸುಯಿಧಾನ ಇಂಥ ವ್ರತ ಹೋದಾಗಳೆ ಇಷ್ಟಲಿಂಗದ ಕಳೆನಷ್ಟ. ಅವರು ಲಿಂಗವಿದ್ದೂ, ಭವಿಗಳು ಪ್ರಾಣವಿಲ್ಲದ ದೇಹದಂತೆ ವ್ರತ ತಪ್ಪಲು ಉರಿಲಿಂಗ ಪೆದ್ದಿಗಳರಸನೊಲ್ಲೆ; ಇದು ಆಕೆಯ ವ್ರತ ನಿಷ್ಠೆಯ ಪರಾಕಷ್ಠೆಯ ಚಿತ್ರ[೪೧]. ಕಾಳವ್ವೆ ದಲಿತ ವಚನಕಾರ್ತಿ. ಪ್ರಮುಖ ಶೂದ್ರ ವಚನಕಾರನಾದ ಉರಿಲಿಂಗ ಪೆದ್ದಿಯ ಸತಿ. ಇವರ ಕಾಲ ಕ್ರಿ.ಶ. ೧೧೮೦, ಮಹಾರಾಷ್ಟ್ರದ ನಾಂಥೇಡ್ ಜಿಲ್ಲೆಯ ಕಂಧಾರ್ ಗ್ರಾಮಕ್ಕೆ ಸೇರಿದ ಈಕೆ, ಅಸ್ಪೃಶ್ಯ ಜನಾಂಗದಲ್ಲಿ ಹುಟ್ಟಿ ಅತ್ಯಂತ ಬಡತನದ ಕುಟುಂಬದಲ್ಲಿ ಬೆಳೆದು, ಅಂತಹದ್ದೇ ಕುಟುಂಬಕ್ಕೆ ಸೇರಿ ತನ್ನ ಬದುಕನ್ನು ಬಹುಕಷ್ಟದಿಂದ ಸಾಗಿಸುತ್ತಿದ್ದಳು. ಕೇವಲ ಬಡತನವೊಂದೇ ಅಲ್ಲ, ಪತಿ ಪೆದ್ದಣ್ಣನು ಕಳ್ಳನೂ ಆಗಿದ್ದು ಆಕೆಯ ಬಾಳು ಗೋಳಿನ ಕಂತೆಯಾಗಿದ್ದಿತು. ಪತಿಯೇ ಪರಮದೈವವೆಂದು ಭಾವಿಸಿದ ಸಾಧ್ವಿ ಕಾಳವ್ವೆ, ಪತಿಗೆ ಎದುರಾಡದೆ ದುರ್ಭರ ಜೀವನವನ್ನು ಸಾಗಿಸುತ್ತ ಆಶಾವಾದಿಯಾಗಿ ಕಾಲ ಕಳೆಯುತ್ತಿದ್ದಳು. ಇವರ ಕಷ್ಟದ ದಿನಗಳು ಕಳೆದು ಇವರ ಬಾಳಿಗೆ ಸುಖದ ಅರುಣೋದಯವಾಗುವ ಕಾಲ ಸನ್ನಿಹಿತವಾಯಿತು. ಅದೆಂದರೆ, ಒಮ್ಮೆ ಎಂದಿನಂತೆ ಕಾಳವ್ವೆಯ ಪತಿ ಪೆದ್ದಣ್ಣ ಕದಿಯಲು ಊರ ಮನೆಗಳಲ್ಲಿ ಹೊಂಚು ಹಾಕುತ್ತಿದ್ದ ಏನಾಶ್ಚರ್ಯ! ಅಂದು ಕದಿಯಲು ಹೋದ ಮನೆಯಲ್ಲಿ ಶಿವದೀಕ್ಷಾ ಕಾರ್ಯ ನಡೆಯುತ್ತಿದೆ! ಗುರುಗಳಾದ ಉರಿಲಿಂಗದೇವರು ಶಿಷ್ಯ ಸೂರ್ಯನಿಗೆ ಶಾಸ್ತ್ರೋಕ್ತ ಪ್ರಕಾರವಾಗಿ ದೀಕ್ಷಾ ಸಂಸ್ಕಾರವನ್ನೆಸಗಿ, ಧರ್ಮೋಪದೇಶ ಮಾಡುತ್ತಿದ್ದಾರೆ. ಇದಾವುದರ ಗಂಧವೂ ಅರಿಯದ ಕಳ್ಳ ಪೆದ್ದಣ್ಣ ಕುತೂಹಲದಿಂದ ಕಿಂಡಿಯಲ್ಲಿ ಹಣಿಕಿ ನೋಡುತ್ತಾನೆ!!

ನೋಡ ನೋಡುತ್ತಲೆ ಆತನ ಮನ ಪರಿವರ್ತನೆಯಾಗುತ್ತದೆ. ಕಳ್ಳತನವನ್ನು ತ್ಯಜಿಸಿ, ಗುರುಗಳನ್ನು ಒಲಿಸಿಕೊಂಡು ಲಿಂಗ ದೀಕ್ಷೆ ಪಡೆಯುತ್ತಾನೆ.[೪೨]

ಉರಿಲಿಂಗ ಪೆದ್ದಿಯು ಚೋರ ವೃತ್ತಿಯನ್ನು ತೊರೆದು, ವೀರಶೈವ ಧರ್ಮಾಚರಣೆ ಕೈಗೊಂಡ ನಂತರ ಸತಿ ಕಾಳವ್ವೆಯೂ ಸಹ ಪತಿಯ ಮಾರ್ಗವನ್ನನುಸರಿಸಿ, ಆತನನ್ನೇ ತನ್ನ ಗುರುವನ್ನಾಗಿ ಮಾಡಿಕೊಂಡು, ಉನ್ನತ ಶಿವಾನುಭಾವಿಯಾಗಿ ಸೇವೆ ಸಲ್ಲಿಸಿದ್ದಾಳೆ. ಕಾಳವ್ವೆಯ ಕೆಲವೇ ವಚನಗಳು ಲಭಿಸಿದ್ದರೂ ಅವುಗಳಲ್ಲಿಯೇ ಆಕೆಯ ಹಿರಿಯ ವ್ಯಕ್ತಿತ್ವವನ್ನು, ಆಕೆಯ ಮನಃಸ್ಥಿತಿಯನ್ನು, ಲೋಕಾನುಭವವನ್ನು, ಶಿವಾನುಭವವನ್ನು ಅರಿಯಬಹುದಾಗಿದೆ. ಭಕ್ತನ ನಿಲುವು, ಹಿಂಸೆಯ ಖಂಡನೆ, ವ್ರತಹೀನನ ಸ್ಥಿತಿ ಹಾಗೂ ವ್ರತದ ಮಹತ್ವ, ಕಾಯಕದ ರೀತಿ, ಜಂಗಮದ ಹಿರಿಮೆ ಇವೆ ಮೊದಲಾದ ವಿಷಯವನ್ನು ತನ್ನ ವಚನದಲ್ಲಿ ವಿಶ್ಲೇಷಿಸಿದ್ದಾಳೆ. ಒಬ್ಬ ಸಾಮಾನ್ಯ ಹೆಣ್ಣು ಮಗಳು ಸ್ಥಾಪಿತ ವ್ಯವಸ್ಥೆಯ ಎದುರು ಹೀಗೆ ದಿಟ್ಟತನದಿಂದ ಧ್ವನಿ ಎತ್ತಿ ನಿಂತುದು ಶರಣರ ಚಳುವಳಿಯ ಸಾರ್ಥಕತೆಗೆ ಒಂದು ಜೀವಂತ ಸಾಕ್ಷಿಯಾಗಿದೆ.

**೧೨. ಕಾಳವ್ವೆ–೨ (ಬಾಚಿ ಕಾಯಕದ ಬಸವಪ್ಪ ಪುಣ್ಯಸ್ತ್ರೀ ಕಾಳವ್ವೆ**

ಪತಿ :– ಬಸವಪ್ಪ (ಬಸವಯ್ಯ)

ಕಾಯಕ :– ಬಾಚಿಯ ಕಾಯಕ

ಅಂಕಿತನಾಮ :– ಕರ್ಮಹರ ಕಾಳೇಶ್ವರಾ

ಲಭ್ಯವಾದವಚನಗಳ ಸಂಖ್ಯೆ :– ೦೨

ಇವಳ ಕಾಲವನ್ನು ಕವಿ ಚರಿತ್ರೆಕಾರರು ಹಾಗೂ ಸಾಹಿತ್ಯ ಚರಿತ್ರೆಕಾರರು ಕ್ರಿ.ಶ. ಸುಮಾರು ೧೧೬೦ ಎಂದಿದ್ದಾರೆ. ಈಕೆಯು ಕಗ್ಗಲ್ಲಿನಿಂದ ಹಾಲನ್ನು ಕರೆದು ಈಶ್ವರನಿಗೆ ಊಟ ಮಾಡಿಸಿದಳೆಂಬ ಪ್ರತೀತಿಯಿದೆ[೪೩]. ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಈಕೆಯ ಹೆಸರಿನ ಹಿಂದಿನ ವಿಶೇಷಣ ಮತ್ತು ವಚನದಲ್ಲಿ ಬಳಸಿದ ಪರಿಭಾಷೆಗಳನ್ನು ಗಮನಿಸಿದಾಗ ಇವಳು ಬಡಗಜಾತಿಗೆ ಸೇರಿದವಳೆಂಬುದು ಸ್ಪಷ್ಟ[೪೪]. ಈಕೆಯ ವಚನ ಚಿಕ್ಕಚೊಕ್ಕ, ಸರಳ

ಸ್ಪಷ್ಟ, ಮಧುರ–ಸುಂದರ ರಚನೆಗಳಾಗಿವೆ. ವ್ರತವನ್ನು ಕಾಯಕ ವ್ರತದೊಂದಿಗೆ ಸಮೀಕರಿಸುವ ಪ್ರಯತ್ನ ಮಾಡಿ ಸಫಲಳಾಗಿದ್ದಾಳೆ. 'ಕಾಯಕ ತಪ್ಪಿದಡೆ ಸೈರಿಸಬಾರದು....ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ ಎನ್ನುವಲ್ಲಿ ಕಾಯಕ ನಿಷ್ಠೆಯ ಎಚ್ಚರಿಕೆ ನೀಡುತ್ತಾಳೆ. ಸ್ವಲ್ಪ ವ್ಯತ್ಯಾಸವಾದರೂ ತೊಂದರೆಗೆ ಗುರಿಯಾಗುತ್ತದೆ ಎಂಬುದು ಅವಳ ಅಭಿಮತ. ಒಂದೊಂದು ತಪ್ಪಿನಿಂದ ಆಗುವ ಅನಾಹುತಗಳನ್ನು ಮಾರ್ಮಿಕವಾಗಿ ವಿವರಿಸಿದ್ದಾಳೆ.

**ಕಾಳವ್ವೆ–೨ ವಚನಗಳು:**

ಕಾಯಕ ತಪ್ಪಿದಡೆ ಸೈರಿಸಬಾರದು;
ವ್ರತ ತಪ್ಪಲೆಂತೂ ಸೈರಿಸಬಾರದು
ಕರ್ಮಹರ ಕಾಳೇಶ್ವರಾ. (೧)

ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ,
ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ,
ವ್ರತಹೀನನ ನೆರೆಯಲು ನರಕಕ್ಕೆ ಮೂಲ,
ಕರ್ಮಹರ ಕಾಳೇಶ್ವರಾ. (೨)

**೧೩. ಕಾಳವ್ವೆ–೩ (ಸಿದ್ಧ ಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ)**

ಪತಿ :– ಸಿದ್ಧ ಬುದ್ಧಯ್ಯ

ಅಂಕಿತನಾಮ :– ಭೀಮೇಶ್ವರಾ

ಲಭ್ಯವಾದವಚನಗಳ ಸಂಖ್ಯೆ :– ೦೧

ಈಕೆಯ ಬಗೆಗಿನ ಮಾಹಿತಿ ದೊರೆತಿಲ್ಲ. ಕಾಯಕ ಜೀವಿಗಳಾದ ಇವರು ಇಬ್ಬರು ಮಹಾಮನೆಯ ಶರಣರಾಗಿದ್ದವರು. ಈಕೆ ವಚನದಲ್ಲಿ ವ್ರತಭ್ರಷ್ಟರು ಮತ್ತು ಲಿಂಗ ಬಾಹ್ಯರನ್ನು ವಿಡಂಬಿಸಿದ್ದಾಳೆ. ಅಂಥವರೊಡನೆ ಮಾತನಾಡಲಾಗದು, ಅಂಥವರಿಂದ ದೂರವಿರುವುದೇ ಒಳ್ಳೆಯದು ಎಂದು ತೀರ್ಮಾನಿಸಿದಳು. ಅವರನ್ನು ಕಂಡರೆ, 'ಸತ್ತನಾಯ ಕಾಗೆಯ ಕಂಡಂತೆ' ಎಂದು ಹೇಳಿದ್ದಾರೆ.

**ಕಾಳವ್ವೆ–೩ ವಚನ:**

ವ್ರತಭ್ರಷ್ಟನ, ಲಿಂಗಬಾಹ್ಯನ ಕಂಡಡೆ
ಸತ್ತ ನಾಯ, ಕಾಗೆಯ ಕಂಡಂತೆ.
ಅವರೊಡನೆ ನುಡಿಯಲಾಗದು ಭೀಮೇಶ್ವರಾ.

**೧೪. ಕದಿರ ಕಾಯಕದ ಕಾಳವ್ವೆ**

ಅಂಕಿತ ನಾಮ :– ಗುಮ್ಮೇಶ್ವರಾ

ಕಾಯಕ :– ಕದಿರ ಕಾಯಕ

ಲಭ್ಯವಾದವಚನಗಳ ಸಂಖ್ಯೆ :– ೦೧

'ಗುಮ್ಮೇಶ್ವರಾ' ಎಂಬ ಅಂಕಿತವುಳ್ಳ ಕಾಳವ್ವೆಯ ಒಂದು ವಚನ ದೊರೆಯುತ್ತದೆ. ಈ ಕಾಳವ್ವೆಯೂ ಕೂಡ ಕದಿರ ಕಾಯಕವನ್ನು ಕೈಗೊಂಡಿದ್ದಳೆಂಬುದು ಅವಳ ವಚನದಿಂದಲೇ ವ್ಯಕ್ತವಾಗುವುದು. ಈಕೆಯೂ ಸಹ ೧೨ನೇ ಶತಮಾನದವಳೆಂದು ಗುರುತಿಸಬಹುದು. ಈಕೆಯ ಕಾಲವನ್ನು ಸುಮಾರು ಕ್ರಿ.ಶ. ೧೧೬೦ ಎಂದು ಕನ್ನಡ ಸಾಹಿತ್ಯ ಚರಿತ್ರೆಕಾರರು ಹಾಗೂ ಕರ್ನಾಟಕದ ಕವಯಿತ್ರಿಯರು ಎಂಬ ಕೃತಿಗಳಲ್ಲಿ ಗ್ರಂಥಕಾರರು ಹೇಳಿದ್ದಾರೆ. ಈಕೆಯ ಜೀವನದ ಯಾವ ವಿವರಗಳೂ ನಮಗೆ ದೊರೆತಿಲ್ಲ. ದೊರೆತ ಅವಳ ಒಂದು ವಚನ ಆಕೆಯು ಕದಿರ ಕಾಯಕವನ್ನು ಕೈಗೊಂಡಿದ್ದಳೆಂಬುದನ್ನೂ, ವ್ರತನಿಷ್ಠಳಾಗಿದ್ದಳೆಂಬುದನ್ನು ವ್ಯಕ್ತಪಡಿಸುತ್ತದೆ. ಹೆಸರಿನ ಹಿಂದೆ ಸೇರಿದ ವಿಶೇಷಣದಿಂದ ಈಕೆ ರಾಟೆಯಿಂದ ನೂಲು ತೆಗೆಯುವ ಕಾಯಕದವಳೆಂದು ತಿಳಿದು ಬರುತ್ತದೆ.[೪೫]

ಕೇವಲ ಎರಡು ಸಾಲಿನ ವಚನದಲ್ಲಿ ಕಾಳವ್ವೆ ತನ್ನ ಕಾಯಕದ ಪರಿಭಾಷೆಯನ್ನು ಬಳಸಿ ವ್ರತಹೀನರನ್ನು ಕೂಡದಿರಲು ತಿಳಿಸುತ್ತಾಳೆ. ಕಾಯಕಕ್ಕೆ ಬೇಕಾದ ಕದಿರು ಮುರಿದದ್ದೆ ಆದರೆ ತನಗೆ ಏನೂ ಉಳಿಯಲಿಲ್ಲವೆಂದು ಹೇಳುತ್ತಾಳೆ. ಅವಳ ಕಾಯಕಕ್ಕೆ ಬೇಕಾದ ಕದಿರೆ ಮುರಿದಿದ್ದಾದರೆ ಕಾಯಕವನ್ನು ಮುಂದುವರಿಸುವುದೆಂತು? 'ಕಾಯಕ' ಶರಣರ ದೃಷ್ಟಿಯಲ್ಲಿ ಬಹಳ ಮಹತ್ವವಾದದ್ದು ಶರಣೆಯರಿಗೆ ಕಾಯಕ ಹಾಗೂ ವ್ರತಾಚರಣೆಗಳು ಹಿರಿದಾದವು. ಇಂತಹ ಮಹತ್ವದ ವ್ರತಾಚರಣೆಗೆ ಗಮನ ಕೊಡದೆ, ಯಾರು ವ್ರತಹೀನರಾಗುವರೋ ಅಂತಹವರ ಸಹವಾಸ ಸಲ್ಲದು ಎನ್ನುತ್ತಾಳೆ. ಅವಳ

ದೃಷ್ಟಿಯಲ್ಲಿ ಕಾಯಕ ಹಾಗೂ ಅದಕ್ಕೆ ಅನ್ವಯವಾದ ವ್ರತ ಇವುಗಳೇ ಮುಖ್ಯ. ಅವಳ ಪ್ರಕಾರ ಅವುಗಳಿಲ್ಲವಾದರೆ ಎಲ್ಲವೂ ಶೂನ್ಯ.[೪೬] (ಕಾಳವ್ವೆಯ ಕಾಯಕವನ್ನು ರಾಟೆಯಿಂದ ನೂಲು ತೆಗೆಯುವುದೆಂದು ಶಿವಶರಣೆಯರ ವಚನ ಸಂಪುಟದಲ್ಲಿ ಹೇಳಿದರೆ, ಬಿದಿರನ್ನು ಹೆಣೆಯುವ ಕಾಯಕವೆಂದು, ಇಪ್ಪತ್ತೈದು ವಚನಕಾರ್ತಿಯರು : ಜೀವನ ಹಾಗೂ ಸಾಧನೆ ಎಂಬ ಕೃತಿಯಲ್ಲಿ ಹೇಳಲಾಗಿದೆ). ಏನೇ ಆದರೂ ಕಾಳವ್ವೆಯೂ ಸಹ ತನ್ನ ಸಮಕಾಲೀನರಂತೆ ಕಾಯಕ ಹಾಗೂ ವ್ರತಾಚರಣೆಗಳಿಗೆ ಮಹತ್ವಕೊಟ್ಟು ಅದರಂತೆ ತಾನೂ ಆಚರಿಸಿದ ಶಿವಶರಣೆ ಎಂಬುದು ಅರಿವಾಗದಿರದು.

**ಕದಿರ ಕಾಯಕದ ಕಾಳವ್ವೆಯ ವಚನ:**

ಕದಿರು ಮುರಿಯೆ ಏನು ಇಲ್ಲ.
ವ್ರತಹೀನನ ನೆರೆಯಲಿಲ್ಲ, ಗುಮ್ಮೇಶ್ವರಾ.

**೧೫. ಸತ್ಯಕ್ಕ**

| | | |
|---|---|---|
| ಅಂಕಿತನಾಮ | :– | ಶಂಭುಜಕ್ಕೇಶ್ವರಾ |
| ಕಾಯಕ | :– | ಶಿವಭಕ್ತರ ಮನೆಯ ಅಂಗಳ ಗೂಡಿಸುವುದು. |
| ಜನ್ಮ ಸ್ಥಳ | :– | ಶಿವಮೊಗ್ಗ ಜಿಲ್ಲೆ, ಶಿಕಾರಿಪುರ ತಾಲ್ಲೂಕ್,<br>ಶಿರಾಳಕೊಪ್ಪದ ಹತ್ತಿರದ ಹಿರೇಜಂಬೂರು ಗ್ರಾಮ |
| ಲಭ್ಯವಾದವಚನಗಳ ಸಂಖ್ಯೆ | :– | ೨೭ |

ಸತ್ಯಕ್ಕ ಎಂಬ ಹೆಸರೇ ಸೂಚಿಸುತ್ತದೆ ಆಕೆಯ ವ್ಯಕ್ತಿತ್ವವನ್ನು, ಶರಣೆ ಸತ್ಯಕ್ಕ ತಾನು ನಂಬಿದ ಸತ್ಯವನ್ನು ಆಚರಿಸಿ, ಅದರಂತೆ ನುಡಿದು ಆದರ್ಶಪ್ರಾಯಳಾಗಿದ್ದಾಳೆ. ಈಕೆಯು ಏಕದೇವೋಪಾಸನೆಗೆ, ಏಕದೇವನಿಷ್ಠೆಗೆ ಹೆಸರಾದವಳು. ಈಕೆಯು ಶಿವಭಕ್ತರ ಮನೆಯ ಅಂಗಳವನ್ನು ಗುಡಿಸಿ ಜೀವನ ನಿರ್ವಹಿಸುತ್ತಿದ್ದಳು[೪೭]. ಶಿವನಲ್ಲದೇ ಅನ್ಯ ದೈವರಿಗೆ ನಮಸ್ಕರಿಸಲಾರೆ, ಶಿವನಲ್ಲದೆ

ಅನ್ಯ ದೇವರ ಹೆಸರನ್ನು ನನ್ನ ಕಿವಿ ಕೇಳಲಾರವು ಎಂಬ ಪ್ರತಿಜ್ಞೆ ಮಾಡಿದಳು. ಅನ್ಯ ದೇವರನ್ನು ಪೂಜಿಸದ ಹೆಸರನ್ನು ಹೇಳದ ಕಠೋರ ನಿಯಮ ಇವಳದು. ಶಿವನು ಒಮ್ಮೆ ಇವಳ ಕಠೋರ ನಿಯಮವನ್ನು ಪರೀಕ್ಷಿಸಲು ಭಿಕ್ಷುಕನ ವೇಷದಲ್ಲಿ ಬಂದು ಪರೀಕ್ಷಿಸಿದನು. ಅವಳು ಧಾನ್ಯದ ಭಿಕ್ಷೆಯನ್ನು ನೀಡಲು, ಹರಿದ ಜೋಳಿಗೆಯಿಂದ ಅದು ನೆಲಕ್ಕೆ ಬೀಳುತ್ತದೆ. 'ಹರಿದ ಹರಿಯಿಂದ ಕಾಳು ಹರಿದು ಹೋಯ್ತು' ಎಂದು ಭಿಕ್ಷುಕ ಉದ್ಗಾರ ತೆಗೆಯುತ್ತಾನೆ. 'ಹರಿ' ಎಂಬ ಶಬ್ಧ ಕಿವಿಗೆ ಬೀಳುತ್ತಲೇ ಸತ್ಯಕ್ಕ ಸಿಟ್ಟಾಗಿ ಕೈಯಲ್ಲಿದ್ದ ಸಟ್ಟುಗದಿಂದ ಅವನನ್ನು ಹೊಡೆಯುತ್ತಾಳೆ. ಅವಳ ಈ ಸ್ಥೈರ್ಯಕ್ಕೂ, ದೃಢಭಕ್ತಿಗೂ ಮೆಚ್ಚಿ ಹರಸಿ ಶಿವ ತನ್ನಲ್ಲಿಯೇ ಐಕ್ಯ ಮಾಡಿಕೊಂಡನು.[೪೮] ಶರಣರ ಪ್ರಭಾವದಿಂದ ಅರಿವಿನ ಹಿರಿತನ ಸಾಧಿಸಿದ ಶರಣೆ ಸತ್ಯಕ್ಕನ ವಚನದಲ್ಲಿ ವೈಚಾರಿಕತೆ, ಧೈರ್ಯ, ಛಲ ಇವು ಎದ್ದುಕಾಣುವ ಅಂಶಗಳು. ಅಲ್ಲದೆ ಅರ್ಚನೆ–ಪೂಜನೆ, ಮಂತ್ರ–ತಂತ್ರ, ಧೂಪಾರತಿ ನೇಮವಲ್ಲ, ಪರಧನ, ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೇ ನೇಮ ಎಂಬ ವ್ರತಶೀಲೆಯಾದ ಆಕೆ ಡಾಂಭಿಕ ಗುರುಶಿಷ್ಯರನ್ನು, ಭವಿಗಳನ್ನು 'ಹುಟ್ಟಂಧಕರು', 'ಕೆಟ್ಟಗಣ್ಣವರು', 'ಜಡಜೀವಿಗಳು', 'ಭಾಷೆಹೀನರು' ಎಂದು ಟೀಕಿಸುತ್ತಾಳೆ. "ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ" ಎಂಬ ವಚನದಲ್ಲಿ ಅನುಭಾವಕ್ಕೆ ಲಿಂಗಭೇದವಿಲ್ಲ ಎಂದು ಹೇಳುವುದರ ಮೂಲಕ ಸ್ತ್ರೀ ಪುರುಷ ಸಮಾನತೆಯ ಉದಾತ್ತತೆಯನ್ನು ಎತ್ತಿ ಹಿಡಿಯುತ್ತಾಳೆ.

ಸತ್ಯಕ್ಕನ ವಚನಗಳಲ್ಲಿ ಲಿಂಗ ತಾರತಮ್ಯದ ಖಂಡನೆ, ಗಂಡು–ಹೆಣ್ಣಿನ ಸಂಬಂಧ, ಪ್ರೇಮ–ಕಾಮದ ಕಲ್ಪನೆ, ಸತಿ–ಪತಿ ಭಾವದ ವಚನಗಳಿವೆ. ಈಕೆ ಅತ್ಯಂತ ಪ್ರಾಮಾಣಿಕ ಸಾಧಕಿ. ಇವಳ ವಚನದಲ್ಲಿ ಇವಳ ಮನಸ್ಸಿನ ಪ್ರಾರ್ಥನೆಯನ್ನು ಸೊಗಸಾಗಿ ಸಮರ್ಥಿಸಿದ್ದಾಳೆ. ಅವಳದು ದೃಢನಿಲುವಿನ ನಿಷ್ಠಭಕ್ತಿ. "ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯ, ಏಕೆ ಎನಗೆ ಕರುಣಿಸಲೊಲ್ಲದೆ ಕಾಡಿಹೆ, ಏಕೆ ಹೇಳು ಎಲೆ ಲಿಂಗವೆ, ತಾನು ಮಾಡಿದ ತಪ್ಪೇನು?" ಎಂಬ ವಚನವನ್ನು ನೋಡಬಹುದು. ಇವಳ ಮಧುರಭಾವದ ವಚನಗಳು "ಇನಿಯಂಗೆ ತವಕವಿಲ್ಲ, ಎನಗೆ ಸೈರಣೆಯಿಲ್ಲ..., ದಿನ ವೃಥಾ ಹೋಯಿತಾಗಿ ಯೌವನ ಬೀಸರವಾಗದ ಮುನ್ನ ಪಿನಾಕಿಯ ನೆರಹವ್ವಾ ಎಂಬ ವಚನವು ಅವಳ ಮನಸ್ಸಿನ ಮೊರೆಯನ್ನು ಪ್ರತಿನಿಧಿಸುತ್ತದೆ. "ತನ್ನ ಗಂಡ ಹೊರಗಿರುವನೆಂದು ಏನೋ ಮಾತಾಡಿದೆ; ತಿಳಿಯದೆ ಇಲ್ಲೇ

ಅಂತರಂಗದಲ್ಲಿಯೇ ಕುಳಿತುಬಿಟ್ಟಿದ್ದ, ಏನು ಮಾಡಲಿ" ಎಂದು ಪೇಚಾಡುವ ಭಾವದ ವಚನ ಅವಳ ಅಂತರಂಗದ ಹೋರಾಟದ ಕುರುಹಾಗಿದೆ.

**೧೬. ಗೊಗ್ಗವ್ವೆ (ಧೂಪದ ಗೊಗ್ಗವ್ವೆ)**

ಅಂಕಿತನಾಮ :– ನಾಸ್ತಿನಾಥ

ಕಾಯಕ :– ಶಿವಭಕ್ತರಿಗೆ ಧೂಪ ಅರ್ಪಿಸುವ ಕಾಯಕ

ಜನ್ಮಸ್ಥಳ :– ಕೇರಳ

ಲಭ್ಯವಾದವಚನಗಳ ಸಂಖ್ಯೆ :– ೦೬

ಕಾಲ :– ೧೧೬೦

ಈಕೆ ಬಾಲ್ಯದಿಂದಲೇ ವೈರಾಗ್ಯ ತಾಳಿ, ಶಿವಭಕ್ತಿಯನ್ನು ಮೈಗೊಡಿಸಿಕೊಂಡಿದ್ದಳು. ಪ್ರತಿದಿನವೂ ದೇವಾಲಯಕ್ಕೆ ಹೋಗಿ ಗುಗ್ಗುಳ ಧೂಪ ಹಾಕಿ ಬರುತ್ತಿದ್ದರಿಂದ 'ಧೂಪದ ಗೊಗ್ಗವ್ವೆ' ಎಂಬ ಹೆಸರೂ ವಾಡಿಕೆಯಲ್ಲಿದೆ[೪೯]. ಇವಳ ವಚನಗಳು ಅಪಾರ ಅರ್ಥದಿಂದ ತುಂಬಿದವುಗಳಾಗಿವೆ. ಒಮ್ಮೆ ಇವಳು ವಯಸ್ಸಿಗೆ ಬರಲು ತಂದೆ ತಾಯಿಗಳು ಮದುವೆ ಮಾಡಬೇಕೆಂದು ವಿಚಾರಿಸಿದಾಗ, ಮನೆಯಿಂದ ಓಡಿ ಹೋಗಿ ಶಿವಾಲಯದಲ್ಲಿ ಅಡಗಿಕೊಂಡಳು. ಆಗ ಅವಳ ಮನದಿಂಗಿತ ಅರಿತ ತಂದೆ ತಾಯಿಗಳು ಒತ್ತಾಯ ಮಾಡದೆ ಅವಳ ಇಚ್ಛೆಯಂತೆ ಇರಲು ಬಿಡುತ್ತಾರೆ. ಗೊಗ್ಗವ್ವೆ ಧೂಪ ಅರ್ಪಿಸುವ ಕಾಯಕ ಕೈಗೊಂಡು ಶಿವಪೂಜೆಯಲ್ಲಿ ತೊಡಗುತ್ತಾಳೆ. ಒಮ್ಮೆ ಶಿವ ಇವಳ ನಿಷ್ಠೆ ಪರೀಕ್ಷಿಸಲು ಸ್ಪುರದ್ರೂಪಿ ಯುವಕನ ವೇಷದಲ್ಲಿ ಕಾಣಿಸಿಕೊಂಡು ತನ್ನನ್ನು ಮದುವೆಯಾಗಲು ಗೊಗ್ಗವ್ವೆಗೆ ಒತ್ತಾಯಿಸುತ್ತಾನೆ.

ಆಕೆ ಒಪ್ಪದೆ ತನ್ನ ನಿಷ್ಠೆಯನ್ನು ಮೆರೆಯಲು, ಮೆಚ್ಚಿ ಶಿವಭಕ್ತರಿಗೆ ಧೂಪವನ್ನು ಅರ್ಪಿಸುತ್ತ ಜೀವನ ಸಾಗಿಸು ಎಂದು ಹೇಳುತ್ತಾನೆ[೫೦]. ಅಂದಿನಿಂದ ಗೊಗ್ಗವ್ವೆ ಧೂಪದ ಕಾಯಕವನ್ನು ನಿಷ್ಠೆಯಿಂದ ಮಾಡುತ್ತ ಮುನ್ನಡೆಯುತ್ತಾಳೆ. ಒಮ್ಮೆ ಕೂಡುಗಲೂರ ದೊರೆ ಚೇರಮರಾಯ ಕೈಲಾಸದ ದಾರಿ ಹುಡುಕುತ್ತ ಹೊರಟಾಗ, ಅವನಿಗೆ ಧೂಪದ ಹೊಗೆಯ ಮೂಲಕ ದಾರಿ ತೋರಿಸುತ್ತಾಳೆ. ಹೀಗೆ ನಿಷ್ಠೆಯಿಂದ ಕಾಯಕ ಮಾಡುತ್ತ ತನ್ನಿಷ್ಟಲಿಂಗ ನಾಸ್ತಿನಾಥನಲ್ಲಿ

ಐಕ್ಯಳಾಗುತ್ತಾಳೆ. ಇವಳ ವಚನಗಳಲ್ಲಿ ಗಂಡು-ಹೆಣ್ಣಿನ ಸಮಾನತೆಯ ಚಿಂತನೆಗಳಿವೆ. ಅನಾದಿಕಾಲದಿಂದಲೂ ಹೆಣ್ಣನ್ನು ಒಂದು ಒಡವೆಯೆಂದು ಕಾಣುತ್ತ ಬಂದಿದ್ದ ಸ್ಥಾಪಿತ ಮೌಲ್ಯವನ್ನು ಧಿಕ್ಕರಿಸುವುದರ ಜೊತೆಗೆ ಮೋಹಿಸುವ ಕ್ರಿಯೆ ಹೆಣ್ಣು ಗಂಡಿಗೆ ಸಮಾನವಾದುದು ಎಂಬ ಒಳಸತ್ಯವನ್ನು ಪ್ರಕಟಿಸುತ್ತ, ಸ್ತ್ರೀಪುರುಷ ಸಮಾನತೆಯ ಕಹಳೆಯನ್ನು ಮೊಳಗಿಸುತ್ತಾಳೆ. ಗೊಗ್ಗವ್ವೆ ಕೇರಳ ದೇಶದ ಮಲಬಾರ್ ಪ್ರಾಂತ್ಯಕ್ಕೆ ಸೇರಿದ ಅವಲೂರು ಎಂಬ ಗ್ರಾಮದವಳು. ಈಕೆಯ ಕಾಲ ಕ್ರಿ.ಶ. ೧೧೬೦ ಎಂದು ಭಾವಿಸಲಾಗಿದೆ.[೫೧] ಗೊಗ್ಗವ್ವೆಯು ತನ್ನ ಕಾಯಕದ ಮಹಿಮೆಯಿಂದ, ಆಳರಸನಿಂದ ಮೊದಲುಗೊಂಡು ಆತನ ಸಮಸ್ತ ಅನುಯಾಯಿಗಳಿಗೂ ಅಲ್ಲದೆ, ಅನೇಕ ಜನ ಶರಣರಿಗೂ ಕೈಲಾಸದ ಮಾರ್ಗವನ್ನು ತೋರಿಸಿ ತಾನೂ ಅದರಂತೆ ನಡೆದು, ಶಿವನ ಕೃಪೆಗೆ ಪಾತ್ರಳಾಗುವಳು. "ಕಾಯಕದಿಂದ ಕೈಲಾಸ" ಎಂಬ ಶರಣ ಸಂದೇಶವನ್ನು ತನ್ನ ನಿಜ ಜೀವನದಲ್ಲಿ ತಾನು ಅಳವಡಿಸಿಕೊಂಡು ಇತರರಿಗೂ ಮಾರ್ಗದರ್ಶಕಳಾದಳು.

**ಗೊಗ್ಗವೆಯ ವಚನಗಳು:**

ಅನಲಕೊಂಡ ಭೋಗಕ್ಕೆ ಪರಿಪ್ರಕಾರವುಂಟೆ ?
ಶರಧಿಕೊಂಡ ಸಾಗರಕ್ಕೆ ಕುರುಹಿನ ತಲೆಯೆ ?
ಲಿಂಗ ಮುಟ್ಟಿದ ಅಂಗಕ್ಕೆ ಮತ್ತೆ ಪುಣ್ಯವುಂಟೆ ?
ಹುಸಿ, ನಾಸ್ತಿನಾಥಾ. (೧)

ಉದ್ದವನೇರುವುದಕ್ಕೆ ಗದ್ದುಗೆಯಿಲ್ಲದೆ ಎಯ್ದಬಾರದು.
ಚಿದ್ರೂಪನನರಿವುದಕ್ಕೆ ಅರ್ಚನೆ ಪೂಜನೆ
ನಿತ್ಯನೇಮವಿಲ್ಲದೆ ಕಾಣಬಾರದು.
ಅದ ಸತ್ಯದಿಂದ ಮಾಡಿ ಅಸತ್ಯವ ಮರೆದಡೆ
ಇದೇ ಸತ್ಯ ನಾಸ್ತಿನಾಥಾ. (೨)

ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು.

ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ.
ಭಕ್ತರು ಜಂಗಮದಲ್ಲಿ ಕಟ್ಟಿ ಹೋರಲೇಕೆ? (೩)

ಧೂಪದ ಹೊಗೆ ಎತ್ತ ಹೋದಡೂ ಸರಿ.
ಇದು ಸತ್ಯವೆಂದೆ ನಾಸ್ತಿನಾಥಾ. (೪)

ಮಾರುತನಲ್ಲಿ ಬೆರೆದ ಗಂಧದಂತೆ,
ಸುರತದಲ್ಲಿ ಬೆರೆದ ಸುಖದಂತೆ,
ಮಚ್ಚಿದಲ್ಲಿ ಕೊಡುವ ಉಚಿತದಂತೆ,
ಭಕ್ತರಿಗದೆ ಹಾದಿ ಎಂದೆ ನಾಸ್ತಿನಾಥಾ. (೫)

ಮೊಲೆ ಮುಡಿ ಬಂದಡೆ ಹೆಣ್ಣೆಂಬರು.
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೋ ನಾಸ್ತಿನಾಥಾ ? (೬)

**೧೭. ಕಾಳಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ**

| | | |
|---|---|---|
| ಪತಿ | :– | ಕಾಳಕೂಟಯ್ಯ |
| ಅಂಕಿತನಾಮ | :– | ಕುಂಭೇಶ್ವರ / ನಿಜಶಾಂತೇಶ್ವರ |
| ಲಭ್ಯವಾದವಚನಗಳ ಸಂಖ್ಯೆ | :– | ೦೧ (ಭಿನ್ನ ಮಾದರಿಯಲ್ಲಿ ದೊರೆತಿದೆ) |
| ಕಾಲ | :– | ಸುಮಾರು ೧೧೬೦ (ಈಕೆ ಈ ಕಾಲದಲ್ಲಿ ಇದ್ದಿರಬಹುದೆಂದು ಕವಿ ಚರಿತ್ರೆಕಾರರು ಊಹಿಸಿದ್ದಾರೆ). |

ಈಕೆಯ ಒಂದು ವಚನಮಾತ್ರ ಲಭ್ಯವಿದೆ. ಇವಳ ಸ್ವವಿವರ ಸ್ವಲ್ಪವೂ ಸಿಕ್ಕಿಲ್ಲ, ಸಿಕ್ಕ ಈ ವಚನವು ಬೇರೆ – ಬೇರೆ ಪುಸ್ತಕದಲ್ಲಿ ಬೇರೆ ಬೇರೆ ಅಂಕಿತನಾಮವನ್ನು ಹೊಂದಿದೆ. ಕರ್ನಾಟಕ ಕವಿಚರಿತ್ರೆಯಲ್ಲಿ ಈಕೆಯ ಅಂಕಿತ ಕುಂಭೇಶ್ವರ ಎಂದು ಹೇಳಿದ್ದಾರೆ, ಕರ್ನಾಟಕ ಕವಯಿತ್ರಿಯರು ಗ್ರಂಥದಲ್ಲಿ ಇವಳ

ಅಂಕಿತ 'ನಿಜ ಕುಂಬೇಶ್ವರ' ಎಂದಿದೆ. ಆದರೆ ಕನ್ನಡ ಸಾಹಿತ್ಯ ಚರಿತ್ರೆ, ಇಪ್ಪತ್ತೈದು ವಚನಕಾರ್ತಿಯರು, ಇಪ್ಪತ್ತೇಳು ಶಿವಶರಣೆಯರ ವಚನಗಳು ಎಂಬ ಗ್ರಂಥಗಳಲ್ಲಿ ಈಕೆಯ ವಚನದ ಅಂಕಿತ 'ನಿಜ ಶಾಂತೇಶ್ವರಾ' ಎಂದು ಉಲ್ಲೇಖಿಸಲ್ಪಟ್ಟಿದೆ. ಅಲ್ಲದೆ ರೇಚವ್ವೆಯ ಒಂದು ವಚನ ಮಾತ್ರ ಲಭಿಸಿದೆ. ಕ್ರಿ.ಶ. ೧೧೬೦ ಕಾಲವೆಂದು ಕವಿಚರಿತ್ರಕಾರರು ಹೇಳುತ್ತಾರೆ. ಕಾಟ/ಕಾಳಕೂಟಯ್ಯಗಳ ಪತ್ನಿ. ಈಕೆಯ ಪತಿಯ ಹೆಸರು 'ಕಾಟಕೂಟಯ್ಯ' ಎಂದು ಕೆಲವು ಗ್ರಂಥಗಳು ಉಲ್ಲೇಖಿಸಿದ್ದರೆ[೫೨] ಮತ್ತೆ ಕೆಲವು ಗ್ರಂಥಗಳಲ್ಲಿ 'ಕಾಳಕೂಟಯ್ಯ' ಎಂದಿದೆ.[೫೩] ರೇಚವ್ವೆ ಒಬ್ಬ ನಿಷ್ಠಾವಂತ ವ್ರತಾಚರಣೆಯ ಅನುಸಾರಿಣಿ. ಅವಳ ಪ್ರಕಾರ ಬಂಜೆ ಹಸುವಿನಲ್ಲಿ ಕ್ಷೀರವನ್ನು ಹೊಂದಲು ಸಾಧ್ಯವೇ? ಅಂತೆಯೇ ವ್ರತಹೀನರ ಸಂಪರ್ಕ ಸಲ್ಲದು. ವ್ರತಹೀನರೆಂದು ಗೊತ್ತಿದ್ದರೂ ಅವರ ಸಹವಾಸ ಮಾಡಲು ಮುಂದಾದರೆ, ಹಾಗೆ ಬೆರೆಯುವ ವ್ಯಕ್ತಿಯೇ ಅದಕ್ಕೆ ಹೊಣೆ. ತಾವು ಮಾತ್ರ ಅಂತಹವರ ಸಹವಾಸವನ್ನು ಮಾಡುವುದಿಲ್ಲ ಎಂದು ತಮ್ಮ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾಳೆ.

ಈಕೆಯ ವಚನಗಳ ಆಶಯ ವ್ರತ, ಆಚಾರ, ನಿಷ್ಠೆ, ಬಂಜೆ ಆವಿಂಗೆ ಕ್ಷೀರವುಂಟೆ? ವ್ರತಹೀನನ ಬೆರೆಯಲುಂಟೆ? ಎಂದು ಪ್ರಶ್ನಿಸುವುದರ ಮೂಲಕ ವ್ರತಹೀನರನ್ನು ಬೆರೆಯಬಾರದು. ಬೆರೆತರೆ ಬಂಜೆ ಆಕಳಿನ ಸಹವಾಸದಂತೆ ವ್ಯರ್ಥ ಎಂದು ತಿಳಿಸುತ್ತಾಳೆ. ಆಕೆ ತನ್ನ ವಚನಗಳಲ್ಲಿ ನಿಜವ್ರತ ನಿಷ್ಠಾಭಕ್ತಿಯ ನಿಲುವನ್ನು ನಿರ್ಧಾರದ ಮಾತುಗಳಲ್ಲಿ ಸ್ಪಷ್ಟಪಡಿಸುತ್ತಾಳೆ.

**ರೇಚವ್ವೆಯವಚನ:**

ಬಂಜೆಯಾವಿಂಗೆ ಕ್ಷೀರವುಂಟೆ ?

ವ್ರತಹೀನನ ಬೆರೆಯಲುಂಟೆ ?

ನೀ ಬೆರೆದಡೂ ಬೆರೆ; ನಾನೊಲ್ಲೆ ನಿಜಶಾಂತೇಶ್ವರಾ (ಶಿವಶರಣೆಯರ ವಚನ ಸಂಪುಟ)

ಬಂಜೆ ಆವಿಂಗೆ ಕ್ಷೀರ ಉಂಟೆ?

ವ್ರತಹೀನನ ಬೆರೆಯಲಾಗದು ಬೆರೆದಡೆ

ನರಕ ತಪ್ಪದು, ನಾನೊಲ್ಲೆ ಬಲ್ಲೆನಾಗಿ

ಕುಂಭೇಶ್ವರಾ" (ವಚನಕಾರ್ತೆಯರು)

## ೧೮. ಗುಡ್ಡವ್ವೆ– ೧ (ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ)

| | | |
|---|---|---|
| ಕಾಲ | :– | ೧೪೩೦ರಲ್ಲಿ ಇದ್ದವಳೆಂದು ಕವಿಚರಿತೆಕಾರರು ಹೇಳಿದ್ದಾರೆ. |
| ಪತಿ | :– | ಬತ್ತಲೇಶ್ವರ |
| ಅಂಕಿತನಾಮ | :– | ನಿಂಬೇಶ್ವರ |
| ಲಭ್ಯವಾದವಚನಗಳಸಂಖ್ಯೆ | :– | ೦೧ |

ಬತ್ತಲೇಶ್ವರ ಪುಣ್ಯಸ್ತ್ರೀಯಾದ ಗುಡ್ಡವ್ವೆಯು ವಚನಕಾರ್ತಿ. ಇವಳ ಕಾಲವನ್ನು ಕರ್ನಾಟಕ ಕವಯಿತ್ರಿಯರು ಎಂಬ ಗ್ರಂಥದಲ್ಲಿ ಕ್ರಿ.ಶ. ೧೪೩೦ (ಪುಟ ಸಂಖ್ಯೆ : ೧೭೨) ಎಂದಿದೆ. ಇವಳ ಒಂದೇ ಒಂದು ವಚನ ಲಭಿಸಿದೆ. ಅವಳ ವಚನದ ಅಂಕಿತನಾಮ 'ನಿಂಬೇಶ್ವರಾ'.

ಈಕೆಯ ವಚನದಲ್ಲಿ ವ್ರತ, ಆಚಾರ, ನಿಷ್ಠೆಯ ವಿಚಾರವೇ ವಸ್ತು, ಅಂತರಂಗ–ಬಹಿರಂಗ ಎರಡೂ ಶುದ್ಧವಾಗಿ ಮಾಡುವ ವ್ರತವೇ ನಿಜವಾದುದು; ಶ್ರೇಷ್ಠವಾದುದು. ಅಂತರಂಗ ಶುದ್ಧಿಯಿಲ್ಲದೇ ಕೇವಲ ಬಹಿರಂಗದಲ್ಲಿ ವ್ರತಾಚರಣೆ ಮಾಡುವವ ವ್ರತಿಯಲ್ಲ; ಅವನು ವ್ರತಹೀನ. ಅಂಥವನ ಸಹವಾಸ ನರಕವಾಸ ಎಂಬುದು ಈಕೆಯ ನಿಲುವು. ತನು ಬತ್ತಲೆಯಾದಡೇನು ಮನ ಬತ್ತಲೆಯಾಗದನ್ನಕ್ಕ? ವ್ರತವಿದ್ದಡೇನು ವ್ರತ ಹೀನನಾದ ಬಳಿಕ? ಎಂಬ ಹೇಳಿಕೆ ಸೂತ್ರಬದ್ಧವಾಗಿದೆ; ನೇರವಾಗಿ ಮನಕ್ಕೆ ನಾಟುವಂತಿದೆ. ಬತ್ತಲೆಯೆಂಬ ಪರಿಭಾಷೆಗೆ ತನು ಬೋಳಾದಡೇನು ಮನ ಬೋಳಾಗದನ್ನಕ್ಕ ; ಎಂದು ಬಸವಣ್ಣನವರ ವಚನನವು ಇಂಬು ನೀಡಬಲ್ಲದು. ಅಂದರೆ ಕೇವಲ ಶರೀರದ ನಗ್ನತೆಯಿಂದ ಶ್ರೇಷ್ಠರಾಗಲು ಸಾಧ್ಯವಿಲ್ಲ. ಅವರ ಮನ ತಿಳಿಯಾಗಿರಬೇಕು ಎಂದರ್ಥವನ್ನು ಬಿಂಬಿಸುತ್ತದೆ. ಗುಡ್ಡವ್ವೆ ವ್ರತಾಚಾರಣೆ, ವ್ರತಹೀನರ ಸಂಪರ್ಕದ ಪರಿಣಾಮ ಇವುಗಳನ್ನು ಹೇಳುತ್ತಾಳೆ. ಇವಳು ವ್ರತಕ್ಕೆ ಪ್ರಾಧಾನ್ಯತೆ ನೀಡಿದ್ದಾಳೆ.

**ಗುಡ್ಡವ್ವೆ–೧ ವಚನ:**

ತನು ಬತ್ತಲೆಯಾದಡೇನು, ಮನ ಬತ್ತಲೆಯಾಗದನ್ನಕ್ಕ?
ವ್ರತವಿದ್ದಡೇನು, ವ್ರತಹೀನರಾದ ಬಳಿಕ ?

ನೆರೆದಡೆ ನರಕವಯ್ಯಾ ನಿಂಬೇಶ್ವರಾ.

## ೧೯. ಗುಡ್ಡವ್ವೆ–೨ (ಶಾಂತನ ಪುಣ್ಯಸ್ತ್ರಿ, ಗುಡ್ಡವ್ವೆ)

| | | |
|---|---|---|
| ಪತಿ | :– | ಶಾಂತ |
| ಅಂಕಿತನಾಮ | :– | 'ಗುಡ್ಡವ್ವೆಯ ಲಿಂಗ' |
| ಲಭ್ಯವಾದವಚನಗಳಸಂಖ್ಯೆ | :– | ಸಿಕ್ಕಿಲ್ಲ. |

ಈಕೆಯು ಶಾಂತನ ಪತ್ನಿ ಗುಡ್ಡವ್ವೆ[೫೪]. ಈಕೆಯ ಸ್ವವಿವರ ಸಿಕ್ಕಿಲ್ಲ, ವೀರಶೈವ ಕಾವ್ಯಗಳಲ್ಲಿ ಸದ್ಯ ಮೂರು ಜನ 'ಗುಡ್ಡವ್ವೆ'ಯರ ಹೆಸರಿದೆ[೫೫]. ೧. ಬತ್ತಲೇಶ್ವರನ ಗುಡ್ಡವ್ವೆ, ೨. ವರದಾನಿ ಗುಡ್ಡವ್ವೆ, ೩. ನಾವದಿಗೆಯ ಗುಡ್ಡವೆ ಎಂದೂ ಇವರಲ್ಲಿ ವರದಾನಿ ಗುಡ್ಡವ್ವೆ ಮತ್ತು ನಾವದಿಗೆಯ ಗುಡ್ಡವ್ವೆ ಒಂದೇ ಎಂದು ತಿಳಿದುಬರುತ್ತದೆ. ಅದು ಈ ಶಾಂತಯ್ಯನ ಪುಣ್ಯಸ್ತ್ರೀ ಗುಡ್ಡವೆಯೇ ಇರಬಹುದೆಂದು ಊಹಿಸಲಾಗಿದೆ. ಈ ಶಾಂತ ಎಂಬುವವನಿಗೆ ಒಟ್ಟು ಮೂರು ಜನ ಪತ್ನಿಯರು[೫೬] (೧) ಗುಡ್ಡವ್ವೆ – ಗುಡ್ಡವ್ವೆಯ ಲಿಂಗ (೨) ಸಣ್ಣ ಸುಗ್ಗಲೆ – ಸಣ್ಣ ಸುಗ್ಗಲೆ ಪ್ರಿಯ (೩) ಕಾಮಾಲಿ – ಕಾಮಲೆ ಕಾಮಹರಗಳೆಂಬ ಅಂಕಿತನಾಮದಿಂದ ವಚನಗಳನ್ನು ಬರೆದಿದ್ದಾರೆಂದು ತಿಳಿದುಬಂದಿದೆ. ಆದರೆ ವಚನಗಳು, ಸ್ವವಿವರ ಯಾವುದು ಲಭ್ಯವಾಗಿಲ್ಲ.

ಬಸವಾದಿ ಶರಣರಿಗಿಂತ ಪೂರ್ವದವಳಾದ 'ವರದಾನಿ ಗುಡ್ಡವ್ವೆ' ತದ ನಂತರದಲ್ಲಿ "ನಾವದಿಗೆಯ ಗುಡ್ಡವ್ವೆ" ಎಂದು ಖ್ಯಾತಳಾಗಿದ್ದಾಳೆ. ಅನೇಕ ಕನ್ನಡ ಕಾವ್ಯಗಳಲ್ಲಿ ಉಲ್ಲೇಖಿತಳಾದ ಶರಣೆಯ ಕಥೆ ಪಾಲ್ಕುರಿಕೆ ಸೋಮನಾಥನ ತೆಲಗು 'ಬಸವಪುರಾಣ'ದಲ್ಲಿಯೂ ಬಂದಿದೆ. ಅಲ್ಲಿ ಪ್ರಸ್ತಾಪಿಸಲ್ಪಟ್ಟಂತೆ ಗುಡ್ಡವ್ವೆ ಕನಿಷ್ಠ ಕುಲದಲ್ಲಿ ಹುಟ್ಟಿದವಳಾದರೂ ಶಿವಭಕ್ತಳು. ಆಕೆಯಲ್ಲಿ ಭಕ್ತಿ ಬಲಿತಂತೆ ರೋಗಗ್ರಸ್ತಳಾಗಿ, ಕುಷ್ಠರೋಗಕ್ಕೆ ತುತ್ತಾಗುತ್ತಾಳೆ. ಒಮ್ಮೆ ಬ್ರಾಹ್ಮಣ ಕೇರಿಯಲ್ಲಿ ಹೊರಟಾಗ, ಬ್ರಾಹ್ಮಣರೆಲ್ಲ ಆಕೆಯನ್ನು ಕಂಡು, ಜರೆದು, ಹೀಯಾಳಿಸಿ ಕನಿಷ್ಠ ಕುಲದಲ್ಲಿ ಹುಟ್ಟಿದ ರೋಗಿಷ್ಠೆ ಎಂದು ತಿರಸ್ಕರಿಸಿ ಹೊರ ಹಾಕುತ್ತಾರೆ. ಆಗ ಆಕೆ ಸೌರಾಷ್ಟ್ರಕ್ಕೆ ಸೋಮನಾಥನಲ್ಲಿ ಮೊರೆಯಿಡುವುದಕ್ಕಾಗಿ ಹೊರಡುತ್ತಾಳೆ. ಹೋಗುತ್ತಿರುವಂತೆ ಅನೇಕ ತಾಪತ್ರಯಗಳನ್ನು ಈಕೆ ಎದುರಿಸಬೇಕಾಗುತ್ತದೆ. ಕೊನೆಗೆ "ಪಕ್ಕದಿ ಮೈಯಲ್ಲ ಬಿಕ್ಕನೆ ಬಿರಿಯಲು" ಶಿವ ಪ್ರತ್ಯಕ್ಷನಾಗಿ ಬೇಕಾದ ವರ ಕೇಳುವಂತೆ ಹೇಳುತ್ತಾನೆ.

"ನೀನಿಂತು ಸುಸ್ಥಿರ ಲೀಲೆಯಿಂದಲಲ್ಲಿಯೆ ನೆಲೆಸಯ್ಯ ನನಗಷ್ಟೆ ಸಾಕು, ಮಿಕ್ಕಲ್ಲ ವರಗಳ ನಾನೊಲ್ಲೆ" ಎಂದು ಶರಣೆ ತನ್ನ ಮನದಾಸೆಯನ್ನು ಅರಹುತ್ತಾಳೆ. ಶಿವನ ಅನುಗ್ರಹದಿಂದ ಆಕೆಯ ಅಂಗಗಳು ದಿವ್ಯಾಂಗವಾಗುತ್ತವೆ. ಆಕೆಯ ಭಕ್ತಿಗೆ ಮೆಚ್ಚಿದ ಶಿವ 'ನಾವಂದಿಗೆ'ವೆಂಬ ಪುರದಲ್ಲಿ ಸೋಮೇಶ್ವರನದ್ಭುತ ಮೂರ್ತಿಯಾಗಿ ನೆಲೆಯೂರುತ್ತಾನೆ. ಗುಡ್ಡವ್ವೆಯ ಸಾಧನೆ ಫಲಿಸಿ 'ಗುಡ್ಡವ್ವೆಯ ಭಕ್ತಿ' ಗುಡ್ಡವ್ವೆ ಆಗುತ್ತದೆ. ಆಕೆಯನ್ನು ನಿಂದಿಸಿದ ಬ್ರಾಹ್ಮಣರಿಗೆ ರೋಗ ತಗುಲಿ, ಅವರಿಗೆ ಪಶ್ಚಾತ್ತಾಪವೂ ಆಗುತ್ತದೆ. ಕೊನೆಗೆ ಕವಿ ಕುಲಹೀನರೆಂಬತನಬಹುದು ನಿಟಲಾಕ್ಷಭಕ್ತರನು ಎಂದು ಆಕೆಯ ಮಹಿಮೆಯನ್ನು ಕೊಂಡಾಡುತ್ತಾನೆ[೫೭]

**೨೦. ರೇಕಮ್ಮ (ರೇವಣ ಸಿದ್ಧಯ್ಯಗಳ ಪುಣ್ಯಸ್ತ್ರೀ)**

| | | |
|---|---|---|
| ಪತಿ | :– | ರೇವಣಸಿದ್ಧಯ್ಯ |
| ಕಾಯಕ | :– | ಶಿವಲಿಂಗಕ್ಕೆ ನಿತ್ಯ ಹೂವಿನ ದಂಡೆಕಟ್ಟಿ ಅರ್ಪಿಸುವುದು |
| ಅಂಕಿತನಾಮ | :– | ಶ್ರೀಗುರು ಸಿದ್ಧೇಶ್ವರ |
| ಲಭ್ಯವಾದ ವಚನಗಳ ಸಂಖ್ಯೆ | :– | ೦೧ |

ಕ್ರಿ.ಶ. ಸುಮಾರು ೧೧೬೦ರಲ್ಲಿ ಆಗಿಹೋದ ಶರಣ ದಂಪತಿಗಳಲ್ಲಿ ರೇವಣಸಿದ್ಧಯ್ಯ ಮತ್ತು ಅವರ ಪತ್ನಿ ರೇಕಮ್ಮ ಮುಖ್ಯರಾದವರು. ಈಕೆಗೆ ರೇಕಮ್ಮ, ರೇಕವ್ವೆ ಎಂಬ ಹೆಸರುಗಳಿದ್ದುದು ಕಂಡು ಬರುತ್ತದೆ. ಈಕೆಯು ವ್ರತಾಚಾರಗಳನ್ನು ಬಹಳ ನಿಷ್ಠೆಯಿಂದ ತಾನು ಆಚರಿಸಿರುವುದಲ್ಲದೆ, ಇತರರಿಗೂ ಅದನ್ನು ಕಟ್ಟುನಿಟ್ಟಾಗಿ ಆಚರಿಸುವಂತೆ ಅರುಹಿದ್ದಾಳೆ. ಈಕೆಯ ಜೀವನದ ವೈಶಿಷ್ಟ್ಯದ ಬಗೆಗೆ ಸೋಮೇಶ್ವರ ಪುರಾಣ, ಭೈರವೇಶ್ವರ ಕಾವ್ಯಕಥಾಮಣಿ ಸೂತ್ರ ರತ್ನಾಕರ, ಶಿವಶರಣ ಕಥಾರತ್ನ ಕೋಶ, ಪ್ರಭುದೇವರ ಪುರಾಣ, ವೀರಶೈವಾಮೃತ ಮಹಾಪುರಾಣ, ಕನ್ನಡ ಸಾಹಿತ್ಯ ಚರಿತ್ರೆ ಮುಂತಾದ ಗ್ರಂಥಗಳಲ್ಲಿ ಉಲ್ಲೇಖಗಳು ಕಂಡುಬರುತ್ತವೆ.

ಈಕೆಯ ಹೆಸರಿನಲ್ಲಿ ಒಂದೇ ಒಂದು ವಚನ ಮಾತ್ರ ಸಿಕ್ಕಿರುತ್ತದೆ. 'ಶ್ರೀ ಗುರುಸಿದ್ದೇಶ್ವರ' ಎಂಬ ಅಂಕಿತನಾಮದಲ್ಲಿ ವಚನ ರಚಿಸಿದ್ದಾಳೆ. ಶಿವಲಿಂಗಕ್ಕೆ ನಿತ್ಯ ಹೂವಿನ ದಂಡೆಕಟ್ಟಿ ಅರ್ಪಿಸುವುದು ಇವಳ ಕಾಯಕ. ಹಾಗೆ ದಂಡೆ

ಕಟ್ಟುವಾಗ ಮಧ್ಯದಲ್ಲಿ ಒಂದು ಕೆಂಪಿನ ಸಂಪಿಗೆಯನ್ನು ಇಡುವುದು ಇವಳ ಕ್ರಮವತ್ತಾದ ವ್ರತವಾಗಿತ್ತಂತೆ. ಒಮ್ಮೆ ಸಂಪಿಗೆ ಹೂವು ಸಿಗದಾಗಲು ತನ್ನ ದೇಹದ ಮಾಂಸವನ್ನೇ ತೆಗೆದು ದಂಡೆಯ ಮದ್ಯ ಇರಿಸಿ ಅರ್ಪಿಸಿದಳಂತೆ, ಈ ಉಗ್ರಭಕ್ತಿಗೆ ಶಿವ ಮೆಚ್ಚಿದನಂತೆ. ಇವಳ ವಚನಗಳಲ್ಲಿ ಆಚಾರ ಭ್ರಷ್ಟ, ವ್ರತ ತಪ್ಪುಕ, ಗುರುಲಿಂಗ ಜಂಗಮವನ್ನು ಕೊಂದವ, ಪಾದೋದಕ ಪ್ರಸಾದ ದೂಷಕ, ವಿಭೂತಿ, ರುದ್ರಾಕ್ಷಿ, ನಿಂದಕರನ್ನು ಕಂಡರೆ, ಶಕ್ತಿ ಇದ್ದರೆ ಸಂಹಾರ ಮಾಡು. ಶಕ್ತಿ ಇಲ್ಲದಿದ್ದರೆ ಕಣ್ಣು ಕಿವಿ ಮುಚ್ಚಿಕೊಂಡು ಶಿವಮಂತ್ರ ಜಪಿಸು, ಅದೂ ಆಗದಿದ್ದರೆ ಆ ಸ್ಥಳವನ್ನೇ ಬಿಟ್ಟು ಹೋಗು ಎಂದು ತಿಳಿಸುತ್ತಾಳೆ[೫೮]. ಹಾಗೆ ಮಾಡದೆ ಇದ್ದರೆ ಅವರನ್ನು ಗುರುಸಿದ್ದೇಶ್ವರ ನರಕದಲ್ಲಿಕ್ಕುತ್ತಾನೆ ಎಂದು ಎಚ್ಚರಿಸುತ್ತಾಳೆ. ಅವಳ ವಚನಗಳಲ್ಲಿ ಗಣಾಚಾರನಿಷ್ಠೆ ಗಟ್ಟಿ ಧ್ವನಿಯಲ್ಲಿ ವ್ಯಕ್ತವಾಗಿದೆ.

**ರೇಕಮ್ಮನ ವಚನ:**

> ಲಿಂಗಬಾಹ್ಯನ, ಆಚಾರಭ್ರಷ್ಟನ, ವ್ರತತಪ್ಪುಕನ,
> ಗುರುಲಿಂಗಜಂಗಮವ ಕೊಂದವನ,
> ಪಾದೋದಕ ಪ್ರಸಾದ ದೂಷಕನ,
> ವಿಭೂತಿ ರುದ್ರಾಕ್ಷಿ ನಿಂದಕನ ಕಂಡಡೆ,
> ಶಕ್ತಿಯುಳ್ಳಡೆ ಸಂಹಾರವ ಮಾಡುವುದು.
> ಶಕ್ತಿಯಿಲ್ಲದಿದ್ದಡೆ ಕಣ್ಣು ಕರ್ಣವ ಮುಚ್ಚಿಕೊಂಡು
> ಶಿವಮಂತ್ರ ಜಪಿಸುವುದು
> ಅಷ್ಟೂ ಆಗದಿದ್ದಡೆ, ಆ ಸ್ಥಳವ ಬಿಡುವುದು
> ಅದಲ್ಲದಿದ್ದಡೆ, ಕುಂಭೀಪಾತಕ ನಾಯಕನರಕದಲ್ಲಿಕ್ಕುವ
> ಶ್ರೀಗುರುಸಿದ್ಧೇಶ್ವರನು.

**೨೧. ಕಾಲಕಣ್ಣಿಯ ಕಾಮಮ್ಮ**

ಅಂಕಿತನಾಮ :– ನಿರ್ಭೀತ ನಿಜಲಿಂಗ

ಕಾಲ :– ಸುಮಾರು ೧೫೦೦

| | | |
|---|---|---|
| ಕಾಯಕ | :– | ಹಗ್ಗವನ್ನು ಹೊಸೆಯುವುದು. (ಕಾಲಕಣ್ಣಿಯ ಎಂಬ ಪದದ ವಿಶೇಷಣವನ್ನು ಗ್ರಹಿಸಿಕೊಂಡಾಗ ಈ ಮೇಲ್ಕಂಡಂತೆ ಹೇಳಬಹುದು) |
| ಲಭ್ಯವಾದ ವಚನಗಳ ಸಂಖ್ಯೆ | :– | ೦೧ |

ಕಾಲಕಣ್ಣಿಯ ಕಾಮಮ್ಮನೆಂದು ಕರೆಯಲ್ಪಟ್ಟಿರುವ ಈ ಶರಣೆಯ ಜೀವನ ಸಂಗತಿಗಳೇನೂ ಲಭ್ಯವಿಲ್ಲ. (ಕರ್ನಾಟಕ ಕವಯಿತ್ರಿಯರು ಎಂಬ ಗ್ರಂಥದಲ್ಲಿ ಈಕೆಯನ್ನು ಕಾಲಕಣ್ಣಿಯ ಕಾಯಮ್ಮ (ಕಾಮಲವ್ವೆ) ಎಂದು ಹೆಸರಿಸಿದ್ದಾರೆ. "ಕಾಲಕಣ್ಣಿಯ ಕಾಮಮ್ಮ' ಎಂದು ಶಿವಶರಣೆಯ ವಚನ ಸಂಪುಟ, ಇಪ್ಪತ್ತೈದು ವಚನಕಾರ್ತಿಯರು ; ಜೀವನ ಮತ್ತು ಸಾಧನೆ ಗ್ರಂಥಗಳಲ್ಲಿ ಉಲ್ಲೇಖಿತವಾಗಿದೆ). ಆದರೆ ಈ ಕಾಲಕಣ್ಣಿ ಎಂದರೆ ಏನು? ಊರ ಹೆಸರೆ? ಅಥವಾ ಅವಳ ಇಷ್ಟದೈವವೇ? ಎಂದು ಒಂದೂ ತಿಳಿದುಬಂದಿಲ್ಲ. ಈಕೆಯ ಕಾಲ ಕನ್ನಡ ಸಾಹಿತ್ಯ ಚರಿತ್ರಕಾರರ ಪ್ರಕಾರ ಸುಮಾರು ಕ್ರಿ.ಶ. ೧೧೬೦ ಇದ್ದಿರಬಹುದೆಂದು ಊಹಿಸಿದೆ. 'ಕಾಲಕಣ್ಣಿ' ಎಂಬುದು ವೃತ್ತಿ ಸೂಚಕ ವಿಶೇಷಣವಾಗಿರಬಹುದು. 'ಕಣ್ಣಿ' ಎಂದರೆ ದನಕರುಗಳನ್ನು ಕಟ್ಟುವ ಒಂದು ಹಗ್ಗ ವಿಶೇಷ. ಇಂತಹ ಹಗ್ಗವನ್ನು ಹೊಸೆದು ಮಾರುವ ಕಾಯಕ ಇವಳದಾಗಿರಬೇಕು. ಹಿಂದೆ ಕುಂಚಿಕೊರವರು ಈ ಕಾಯಕವನ್ನು ಮಾಡುತ್ತಿದ್ದುದನ್ನು ಇಂದಿಗೂ ಕೊರವರು ಇದನ್ನು ಮುಂದುವರೆಸಿಕೊಂಡು ನಡೆದಿರುವುದನ್ನು ಗಮನಿಸಿದರೆ ಈಕೆ ಕೊರವ ಜಾತಿಗೆ ಸೇರಿದವಳಾಗಿರಬೇಕೆಂದು ಊಹಿಸಲವಕಾಶವಿದೆ.[೫೯]

ಈಕೆಯ ಸ್ವವಿವರ ಲಭ್ಯವಿಲ್ಲ. 'ನಿರ್ಭೀತ ನಿಜಲಿಂಗ' ಎಂಬ ಅಂಕಿತನಾಮದಲ್ಲಿ ಈಕೆಯ ಒಂದು ವಚನ ಮಾತ್ರ ದೊರೆತಿದೆ. ಅಂಕಿತನಾಮಕ್ಕನುಗುಣವಾಗಿ ಈಕೆಯು ಸ್ವಭಾವತಃ ನಿರ್ಭೀಡೆಯ ವ್ಯಕ್ತಿಯಾಗಿ ನಿರ್ಭೀತಿಯಿಂದ ವ್ರತಭ್ರಷ್ಟರನ್ನು ನಿಂದಿಸುತ್ತಾಳೆ. ಈಕೆಯ ವಚನದಲ್ಲಿ ಗಡುಸಾದ ಆಡುನುಡಿಯ ಪ್ರಯೋಗ ಧ್ವನಿ ರಮ್ಯತೆಯನ್ನು ಹೆಚ್ಚಿಸಿದೆ. ಗುರು–ಲಿಂಗ ಜಂಗಮದ ಸುತ್ತ ಸುತ್ತುವ ಸಾಧಕನ ಮನಸ್ಸು ಅಂತಃಕರಣಗಳ ವ್ಯಾಪಾರವನ್ನು

ತುಂಬಾ ಸೊಗಸಾಗಿ ಚಿತ್ರಿಸಿದ್ದಾಳೆ. 'ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ ಗುರುಲಿಂಗ ಜಂಗಮರ ಕಾಲ ಕಟ್ಟುವೆ, ಎಂಬಲ್ಲಿ ಸದಾ ಸಂಚರಿಸುವ ಕರಣಂಗಳನ್ನು ಲಿಂಗದಲ್ಲಿ ಕಟ್ಟಿಹಾಕುವ ಈ ಕಲ್ಪನೆ ನಿಜಕ್ಕೂ ಅರ್ಥಪೂರ್ಣವಾದುದು. ವ್ರತಭ್ರಷ್ಟರನ್ನು ನಿರ್ಭೀತಿಯಿಂದ ಖಂಡಿಸುತ್ತಾಳೆ. ಇವಳ ವಚನದ ಉದ್ದೇಶ ಗುರುಲಿಂಗಜಂಗಮದ ಮಹತ್ವವನ್ನು ಹೇಳುವುದೇ ಆಗಿದೆ.

**ಕಾಮಮ್ಮನ ವಚನ:**

ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ;
ಗುರುಲಿಂಗಜಂಗಮದ ಕಾಲ ಕಟ್ಟುವೆ;
ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತರುತುರನೆ ತೂರುವೆ,
ನಿರ್ಭೀತ ನಿಜಲಿಂಗದಲ್ಲಿ ?

**೨೨. ಕನ್ನಡಿ ಕಾಯಕದ ರೇಮಮ್ಮ**

| | | |
|---|---|---|
| ಕಾಲ | :– | ೧೧೬೦ |
| ಅಂಕಿತ | :– | 'ಸದ್ಗುರು ಸಂಗ ನಿರಂಗಲಿಂಗ |
| ಕಾಯಕ | :– | ಕನ್ನಡಿ ಕಾಯಕ (ಕ್ಷೌರಿಕ ವೃತ್ತಿ) |
| ಲಭ್ಯವಾದವಚನಗಳಸಂಖ್ಯೆ | :– | ೦೧ |

ಈಕೆಗೆ ರೇಮಮ್ಮ, ರೆಮ್ಮವ್ವೆಗಳೆಂಬ ಹೆಸರುಗಳಿವೆ. ಕನ್ನಡಿಯ ಕಾಯಕ ಎಂಬ ಪದವನ್ನು ಗಮನಿಸಿದಾಗ ಈಕೆಯು ಕ್ಷೌರಿಕ ವೃತ್ತಿಯವಳು ಆಗಿರಬಹುದು. ಅಥವಾ ಕನ್ನಡಿ ಮಾರುವ ಕಾಯಕದವಳು ಆಗಿರಬಹುದು[೬೦]. ಇನ್ನೊಂದೆಡೆ ಈಕೆಯು ಪ್ರತಿದಿನವು ದೇವರಿಗೆ ಕನ್ನಡಿ ತೋರಿಸುವ ಕಾಯಕ ಮಾಡುತ್ತಿದ್ದಳಂತೆ[೬೧] ಎಂದು ಹೇಳಲಾಗಿದೆ. ರೇಮಮ್ಮ ತನ್ನ ವಚನದಲ್ಲಿ ಕನ್ನಡಿಯ ಉಲ್ಲೇಖ ಮಾಡಿದ್ದಾಳೆ. ರೇಮಮ್ಮನ ಒಂದೇ ಒಂದು ವಚನ ದೊರೆತಿದ್ದು, "ಸದ್ಗುರುಸಂಗ ನಿರಂಗಲಿಂಗ" ಎಂಬ ಅಂಕಿತನಾಮ ಹೊಂದಿದೆ. "ಕೈಯಲ್ಲಿ ಕನ್ನಡಿ ಇರಲು ತನ್ನತಾ ನೋಡಬಾರದೆ? ಲಿಂಗ ಜಂಗಮ ಪ್ರಸಾದಕ್ಕೆ ತಪ್ಪಿದ್ದಲ್ಲಿ ಕೊಲ್ಲಬಾರದೆ?.. ಪ್ರಸಾದ ಪ್ರೀತಿ, ವ್ರತ, ಆಚಾರ, ನಿಷ್ಠೆ ಇವುಗಳಿಗೆ ದಕ್ಕೆ ತಂದವರನ್ನು ವಿಡಂಬಿಸುತ್ತಾಳೆ.

**ರೇಮಮ್ಮನ ವಚನ:**

ಕೈಯಲ್ಲಿ ಕನ್ನಡಿಯಿರಲು ತನ್ನ ತಾ ನೋಡಬಾರದೆ ?
ಲಿಂಗಜಂಗಮದ ಪ್ರಸಾದಕ್ಕೆ ತಪ್ಪಿದಲ್ಲಿ ಕೊಲ್ಲಬಾರದೆ ?
ಕೊಂದಡೆ ಮುಕ್ತಿಯಿಲ್ಲವೆಂಭವರ ಬಾಯಲ್ಲಿ
ಪಡಿಹಾರನ ಪಾದರಕ್ಷೆಯನಿಕ್ಕುವೆ.
ಮುಂಡಿಗೆಯನೆತ್ತಿರೂ ಭ್ರಷ್ಟ ಭವಿಗಳಿರಾ!
ಎತ್ತಲಾರದಡೆ ಸತ್ತ ಕುನ್ನಿನಾಯ ಬಾಲವ
ನಾಲಗೆ ಮುರುಟಿರೋ ಸದ್ಗುರುಸಂಗ ನಿರಂಗಲಿಂಗದಲ್ಲಿ.

**೨೩. ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ**

| | | |
|---|---|---|
| ಪತಿ | :– | ಮಾರಯ್ಯ |
| ಅಂಕಿತನಾಮ | :– | ಗಂಗೇಶ್ವರ ಲಿಂಗ |
| ಕಾಯಕ | :– | ಹಾದರ ಕಾಯಕ |
| ಲಭ್ಯವಾದವಚನಗಳಸಂಖ್ಯೆ | :– | ೦೧ |

ಹಾದರಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ ಮಾರಯ್ಯನ ಸತಿ, ಸಂಕವ್ವೆಯಂತೆ ಈಕೆಯೂ ಮೊದಲು ವೇಶ್ಯ ವೃತ್ತಿಯಿಂದ ಜೀವನ ಸಾಗಿಸಿದಂತಿದೆ. 'ಗಂಗೇಶ್ವರ ಲಿಂಗ' ಎಂಬ ಅಂಕಿತದಲ್ಲಿ ಈಕೆಯ ಒಂದು ವಚನ ದೊರೆತಿದೆ. 'ಆವ ಕಾಯಕ ಮಾಡಿದಡೂ ಒಂದೇ ಕಾಯಕವಯ್ಯ' ಎಂಬ ಅವಳ ಮಾತಿನಲ್ಲಿ ತಾನು ಕೀಳು ಕುಲದಿಂದ ಬಂದವಳೆಂಬ ಧ್ವನಿ ಇದ್ದಂತಿದೆ[೨]. ಕಾಯಕ, ಸಮಾನತೆ, ವ್ರತನಿಷ್ಠೆ ಇವಳ ವಚನಗಳ ಮುಖ್ಯ ಆಶಯ. ಎಲ್ಲ ಕಾಯಕಗಳಲ್ಲಿ ಸಮಾನ ಗೌರವವನ್ನು ತಾಳಿದ ಗಂಗಮ್ಮ ಎಲ್ಲ ವ್ರತಗಳನ್ನು ಒಂದೇ ಎಂದು ಭಾವಿಸುತ್ತಾಳೆ. ವ್ರತ ಹೀನರನ್ನು ಬೆರೆಯುವುದು ಕೋಗಿಲೆ ಕಾಗೆಯ ಸಂಗ ಬೆಳೆಸಿದಂತೆನಿಸುತ್ತದೆ. ಅಂಥವರಿಗೆ ಘೋರ ನರಕ ತಪ್ಪಿದ್ದಲ್ಲ ಎಂದು ಹೇಳುತ್ತಾ ವ್ರತಾಚಾರದ ಮಾಹಿತಿಯನ್ನು ಎತ್ತಿ ಹಿಡಿದಿದ್ದಾಳೆ.

**ಗಂಗಮ್ಮನ ವಚನ:**

ಆವ ಕಾಯಕವ ಮಾಡಿದಡೂ ಒಂದೇ ಕಾಯಕವಯ್ಯಾ.
ಆವ ವ್ರತವಾದಡೂ ಒಂದೇ ವ್ರತವಯ್ಯಾ.

ಆಯ ತಪ್ಪಿದಡೆ ಸಾವಿಲ್ಲ; ವ್ರತತಪ್ಪಿದಡೆ ಕೂಡಲಿಲ್ಲ.
ಕಾಕಪಿಕದಂತೆ ಕೂಡಲು ನಾಯಕನರಕ
ಗಂಗೇಶ್ವರಲಿಂಗದಲ್ಲಿ.

**೨೪. ಸೂಳೆ ಸಂಕವ್ವೆ**

| | | |
|---|---|---|
| ಅಂಕಿತನಾಮ | :– | 'ನಿರ್ಲಜ್ಜೇಶ್ವರ' |
| ಲಭ್ಯವಾದವಚನಗಳಸಂಖ್ಯೆ | :– | ೦೧ |
| ಕಾಯಕ | :– | ಸೂಳೆತನ |

ಗಂಗಮ್ಮನಂತೆ ಈಕೆಯು ವೇಶ್ಯಾವೃತ್ತಿಯನ್ನು ಮಾಡುತ್ತಿದ್ದಳು. ಈಕೆಯ ಬಗೆಗೂ ಏನು ವಿವರ ದೊರೆತಿಲ್ಲ. ಮೊದಲು ವೇಶ್ಯಾವೃತ್ತಿಯನ್ನು ಮಾಡಿ ನಂತರ ಮಹಾಮನೆಯ ಪ್ರಭಾವಕ್ಕೆ ಒಳಗಾಗಿ ಸಾತ್ವಿಕ ಬದುಕಿನತ್ತ ತಿರುಗಿದಳು. ಆಕೆಯ ಹೆಸರಿನ ಹಿಂದೆ ಹತ್ತಿದ ವಿಶೇಷಣ ಹಾಗೂ ವಚನದಲ್ಲಿ ವ್ಯಕ್ತವಾದ ವಿಷಯಗಳು ಆಕೆಯ ಬುದಕಿನ ಬವಣೆಯನ್ನು ತಿಳಿಸುತ್ತವೆ. ಇವಳೊಬ್ಬಳು ಸ್ವಾಭಿಮಾನದ ದಿಟ್ಟ ಮಹಿಳೆ. ವ್ರತಹೀನರ ಸಂಗ ಶಿಕ್ಷಾರ್ಹ ಎಂಬುದು ಈಕೆಯ ನಿರ್ಧಾರವಾಗಿತ್ತು. "ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ....." ತನ್ನ ವೃತ್ತಿಯ ಅನುಭವದ ಹಿನ್ನೆಲೆಯಲ್ಲಿ ಯಾವ ಅಂಜಿಕೆ, ಆತ್ಮ ವಂಚನೆಯಿಲ್ಲದೆ ಅತ್ಯಂತ ಸಹಜವಾಗಿ ಪ್ರಕಟಿಸಿದ್ದಾಳೆ. ಸರಳ ದೇಸೀ ನುಡಿಗಳಲ್ಲಿ ಒಡಮೂಡಿದ ಸಾಮಾನ್ಯ ಸ್ತ್ರೀಯೊಬ್ಬಳ ಸಹಜ ಅಭಿವ್ಯಕ್ತಿ ಅಪೂರ್ವವೆನಿಸಿದೆ.

**ಸೂಳೆ ಸಂಕವ್ವೆಯ ವಚನ:**

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ.
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ.
ವ್ರತಹೀನನರಿದು ಬೆರೆದಡೆ
ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯಾ.
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ.

**೨೫. ಚಿಕ್ಕಗೌರಾದೇವಿ**

| | | |
|---|---|---|
| ಅಂಕಿತನಾಮ | :– | ಚಿಕ್ಕಗೌರಾಪ್ರಿಯಲಿಂಗ ಕೇದಾರಯ್ಯ |

ಸ್ವವಿವರ :– ತಿಳಿದು ಬಂದಿಲ್ಲ

ಲಭ್ಯವಾದವಚನಗಳಸಂಖ್ಯೆ :– ೦೧

ಈಕೆ ರಚಿಸಿದ ಒಂದು ವಚನ ಲಭ್ಯವಿದೆ. ಸಕ್ಕರೆ ಸಕ್ಕರೆಯನ್ನ, ಘೃತ ಘೃತವನ್ನ, ಜ್ಞಾನ ಜ್ಞಾನವನ್ನ ಧರಿಸಲು ಹೇಗೆ ಸಾಧ್ಯವಿಲ್ಲವೋ? ಹಾಗೆ ಲಿಂಗ ಲಿಂಗವನ್ನು ಧರಿಸಲು ಸಾಧ್ಯವಿಲ್ಲ ಎಂದು ಹೇಳುವ ಮೂಲಕ ಆತ್ಮ – ಪರಮಾತ್ಮನ ಚರ್ಚೆಯನ್ನು ವಿಡಂಬನ ನೆಲೆಯಲ್ಲಿ ಮುಂದುವರೆಸಿರುವುದನ್ನು ಗಮನಿಸಬೇಕಾಗುತ್ತದೆ. ಕೇದಾರಯ್ಯ ಎಂದು ಪದ್ಯದ ಕೊನೆಯಲ್ಲಿರುವುದರಿಂದ ಇದು ವ್ಯಕ್ತಿಯ ಹೆಸರೋ? ಅಥವಾ ತನ್ನ ಆಧ್ಯಾತ್ಮದ ನಿಲುವಿನ ಹೆಸರೋ? ಅಥವಾ ಗುರುವಿನ ಹೇಸರೋ ತಿಳಿಯದಾಗಿದೆ.

**ಚಿಕ್ಕಗೌರಾದೇವಿಯ ವಚನ**

"ಸಕ್ಕರೆ ಸಕ್ಕರೆ ತಿನ್ನಬಹುದೇ ?
ಘೃತ ಘೃತವ ಕುಡಿಯಬಹುದೇ ?
ಜ್ಞಾನ ಜ್ಞಾನವ ತಿಳಿಯಬಹುದೆ ?
ಅದು ಕಾರಣ ಲಿಂಗ ಲಿಂಗವ ಧರಿಸಬಹುದೆ ?
ಚಿಕ್ಕಗೌರಾದೇವಿ ಪ್ರಿಯಲಿಂಗ ಕೇಳಾ ಕೇದಾರಯ್ಯ[೬೩]"

**೨೬. ಕಲ್ಲವ್ವೆ**

ಅಂಕಿತನಾಮ :– ಕಲ್ಲಿನಾಥ

ಸ್ವವಿವರ :– ಲಭ್ಯವಿಲ್ಲ.

ಲಭ್ಯವಾದವಚನಗಳಸಂಖ್ಯೆ :– ೦೧

ಚಿಕ್ಕಗೌರಾದೇವಿಯ ವಚನದ ಕೊನೆಯ ಪದ, ಕಲ್ಲವ್ವೆಯ ವಚನದ ಕೊನೆಗೂ 'ಕೇದಾರಯ್ಯ' ಅಂತ ಕಾಣಿಸುವುದರಿಂದ, ಇವರಿಬ್ಬರು ಒಬ್ಬರೆ? ಅಥವಾ ಇವರಿಬ್ಬರು ಒಂದೆ ಮೂಲ (ವಾಸಸ್ಥಳ)ದವರಾಗಿರಬೇಕು ಎಂದು ಊಹಿಸಬಹುದು ಅಥವಾ ಒಬ್ಬ ಪುರುಷನಿಗೆ ಚಿಕ್ಕಗೌರದೇವಿ,ಕಲ್ಲವ್ವೆ ಮತ್ತು ಭೀಮವ್ವೆ ಈ ಮೂವರು ಪತ್ನಿಯರು ಇರಬಹುದೆಂದು ಊಹಿಸಲವಕಾಶವಿದೆ.

**ಕಲ್ಲವ್ವೆಯ ವಚನ:**

"ತೃಷೆಯಡಗುವ ತನಕ ನೀರಿನಾಶೆ
ಕ್ಷುಧೆಯಡಗುವ ತನಕ ಅನ್ನದಾಶೆ
ಪಾಪ ಹೋಗುವ ತನಕ ಜಪತಪದ ಕರ್ಮಗಳಾಶೆ
ಕಲ್ಲಿನಾಥನೆಂದು ಅರಿಯುವ ತನಕ ಜ್ಞಾನ
ದಾಶೆಯುಳ್ಳ ಕಲ್ಲೇ ಜಡದೇವರೆಂದನ್ನಬಹುದೋ
ಹೇಳಾಕೇದಾರಯ್ಯ"[೬೪]

**೨೭.ಭೀಮವ್ವೆ**

| | | |
|---|---|---|
| ಅಂಕಿತನಾಮ | :– | 'ಭೀಮಾಪ್ರಿಯ ಭೀಮಲಿಂಗ' |
| ಸ್ವವಿವರ | :– | ಲಭ್ಯವಿಲ್ಲ. |
| ಲಭ್ಯವಾದ ವಚನಗಳ ಸಂಖ್ಯೆ | :– | ೦೧ |

ಭೀಮವ್ವೆ, ಕಲ್ಲವ್ವೆ, ಚಿಕ್ಕಗೌರಾದೇವಿಯರ ವಚನಗಳ ಧಾಟಿ ಒಂದೇ ಬಗೆಯದಾಗಿದೆ. ಈ ಮೂವರ ವಚನಗಳಲ್ಲಿ ವಿಡಂಬನಾತ್ಮಕ ಪ್ರಶ್ನೆಗಳು ಬಂದಿರುವುದು ಸಹಜ ಎನ್ನುವಂತೆ ತೋರುತ್ತವೆ. ಈ ಪ್ರಶ್ನೆಗಳನ್ನು ಮೂವರು ಒಂದೇ ಬಗೆಯಲ್ಲಿ ಹಾಕಲು ಸಾಧ್ಯವಿಲ್ಲ. ಹಾಗಾಗಿ ಇವರು ಒಬ್ಬರೆ ಆಗಿರಬೇಕು. ಹೀಗಾಗಿ ಹೆಚ್ಚಿನ ಅಧ್ಯಯನಕ್ಕೆ ಒಳಪಡಿಸುವುದು ಸೂಕ್ತ ಎಂದು ತೋರುತ್ತದೆ.

**ಭೀಮವ್ವೆಯ ವಚನ:**

"ಆನೆ ಮುನಿದು ಸಿಂಹನೇನ ಮಾಡುವುದು ?
ಸಿಂಹ ಮುನಿದು ಶರಭನೇನು ಮಾಡುವುದು ?
ಶರಭ ಮುನಿದು ಗಂಡಭೇರುಂಡನೇನ ಮಾಡುವುದು
ಭೀಮಾಪ್ರಿಯ
ಭೀಮಲಿಂಗವಿರಲು ಏನಮಾಡುವುದು ಕೇಳಾ ಕೇದಾರಯ್ಯ"[೬೫] (೧)

**೨೮. ಕೇತಲದೇವಿ (ಗುಂಡಯ್ಯಗಳ ಪುಣ್ಯಸ್ತ್ರೀ)**

| | | |
|---|---|---|
| ಪತಿ | :– | ಗುಂಡಯ್ಯ (ಕುಂಬಾರ ಗುಂಡಯ್ಯ) |
| ಅಂಕಿತನಾಮ | :– | ಕುರಂಗೇಶ್ವರ / ಕುಂಭೇಶ್ವರ |

| | | |
|---|---|---|
| ಕಾಯಕ | :– | ಗಡಿಗೆ ಸಿದ್ಧಪಡಿಸುವ ಕಾಯಕ (ಪಾವುಡ ಹಾಕುವ ಕಾಯಕ) |
| ವಚನಗಳ ಸಂಖ್ಯೆ | :– | ೦೨ |
| ಜನ್ಮ ಸ್ಥಳ | :– | ಬೀದರ ಜಿಲ್ಲೆಯ ಭಲ್ಲುಕೆ (ಭಾಲ್ಕಿ) |

ಈಕೆ ಕುಂಭದ ಗತಿಗೆ ಶಿವನನ್ನೆ ಕುಣಿಯುವಂತೆ ಮಾಡಿದ ಕುಂಬಾರ ಗುಂಡಯ್ಯನ ಸತಿ. ಬೀದರ್ ಜಿಲ್ಲೆಯ ಭಲ್ಲುಕೆ (ಭಾಲ್ಕಿ) ಗ್ರಾಮಕ್ಕೆ ಸೇರಿದವಳು. ಪತಿಯ ಜೊತೆ ಗಡಿಗೆ ಸಿದ್ಧಪಡಿಸುವ ಕಾಯಕದಲ್ಲಿ ತೊಡಗಿದ ಈಕೆ ಶರಣರ ಪ್ರಭಾವದಿಂದ ವಚನರಚನೆಗೂ ಕೈಹಾಕಿದಳು. ಭುವನಕೋಶದಲ್ಲಿ ಈಕೆಯ ಬಗೆಗೆ ಒಂದು ಪವಾಡದ ವಿವರ ಬರುತ್ತದೆ.

ಕುಂಬಾರ ಗುಂಡಯ್ಯನ ಸತಿ. ಪತಿಯ ಜೊತೆ ಗಡಿಗೆ ಸಿದ್ಧಪಡಿಸುವ ಕಾಯಕ, ಶಿವಶರಣೆಯರ ಪ್ರಭಾವದಿಂದ ವಚನಗಳ ರಚನೆ. ಕೇತಲೆಯು ನಿತ್ಯ ಲಿಂಗಕ್ಕೆ ಪಾವುಡವನ್ನು ಹಾಕುವ ವ್ರತವನ್ನು ಕೈಗೊಂಡಿದ್ದಳಂತೆ. ಒಮ್ಮೆ ಪಾವುಡ ದೊರೆಯದೆ ಹೋಗಲು ತನ್ನ ಎದೆಯ ಚರ್ಮವನ್ನೇ ತೆಗೆದು ಹಾಕಿದಳಂತೆ. ಅದಕ್ಕೆ ಶಿವನು ಅವಳ ವ್ರತವನ್ನು ಮೆಚ್ಚಿದನೆಂದು ತಿಳಿದುಬರುತ್ತದೆ. ಲಭ್ಯವಾದ ಎರಡು ವಚನಗಳಲ್ಲಿ ಒಂದರಲ್ಲಿ ತನ್ನ ವೃತ್ತಿ ಪರಿಭಾಷೆಯನ್ನು ಬಳಸಿ ವ್ರತಭ್ರಷ್ಟರನ್ನು ಬೆರೆಯಬಾರದೆಂದು ತಿಳಿಸಿದರೆ, ಇನ್ನೊಂದರಲ್ಲಿ ಲಿಂಗಾಚಾರಿಗಳ ಅಂಗಳಕ್ಕೆ ಹೋಗಿ ಲಿಂಗಾರ್ಪಿತ ಮಾಡುವಲ್ಲಿ ಸಂದೇಹವಿಲ್ಲದಿರಬೇಕೆಂದು ತಿಳಿಸುತ್ತಾಳೆ. ಒಂದು ವಚನವು ಸಂಸ್ಕೃತ ಶ್ಲೋಕದಿಂದ ಕೂಡಿರುವುದರಿಂದ ಈಕೆ ಸುಶಿಕ್ಷಿತಳಾಗಿರಬಹುದೆಂದು ಊಹಿಸಬಹುದು.

**ಕೇತಲದೇವಿಯ ವಚನಗಳು:**

ಹದ ಮಣ್ಣಲ್ಲದೆ ಮಡಕೆಯಾಗಲಾರದು
ವ್ರತಹೀನನ ಬೆರೆಯಲಾಗದು.
ಬೆರೆದಡೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ, ಕುಂಭೇಶ್ವರಾ (೧)
ಲಿಂಗವಂತರ ಲಿಂಗಾಚಾರಿಗಳ ಅಂಗಳಕ್ಕೆ ಹೋಗಿ

ಲಿಂಗಾರ್ಪಿತವ ಮಾಡುವಲ್ಲಿ ಸಂದೇಹವಿಲ್ಲದಿರಬೇಕು
ಅದೆಂತೆಂದಡೆ:
"ಭಿಕ್ಷಲಿಂಗಾರ್ಪಿತಂ ಗತ್ವಾ । ಭಕ್ತಸ್ಯ ಮಂದಿರಂ ತಥಾ ।
ಜಾತಿ ಜನ್ಮ ರಜೋಚ್ಛಿಷ್ಟಂ । ಪ್ರೇತಸ್ಯ ವಿವರ್ಜಿತಃ ॥
ಇಂತೆಂದುದಾಗಿ, ಕಾಣದುದನೆ ಚರಿಸದೆ, ಕಂಡುದನು ನುಡಿಯದೆ.
ಕಾಣದುದನು ಕಂಡುದನು ಒಂದೆಸಮವೆಂದು ಅರಿಯಬಲ್ಲರೆ
ಕುಂಭೇಶ್ವರಲಿಂಗವೆಂಬೆನು (೨)

**೨೯. ದುಗ್ಗಳೆ**

ಪತಿ :– ಜೇಡರ ದಾಸಿಮಯ್ಯ

ಕಾಯಕ :– ಬಟ್ಟೆ ನೇಯುವುದು

ಅಂಕಿತನಾಮ :– ದಾಸಯ್ಯ ಪ್ರಿಯ ರಾಮನಾಥ

ವಚನಗಳ ಸಂಖ್ಯೆ :– ೦೨

ಈಕೆ ದಾಸಿಮಯ್ಯನ ಪತ್ನಿ. 'ಸತಿ–ಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ' ಎಂಬ ದಾಸಿಮಯ್ಯನ ಮಾತಿನಂತೆ ಪತಿಯೊಂದಿಗೆ ಹೊಂದಾಣಿಕೆಯಿಂದ ಬೆರೆದು ಹಿತವಾದ ಶಿವಭಕ್ತಿಯಲ್ಲಿ ನಿರತಳಾದ ಶಿವಶರಣೆ. ಈಕೆಯ ಕಾಯಕ ಬಟ್ಟೆ ನೇಯುವುದು. ದಾಸಿಮಯ್ಯನ ಮನದಿಂಗಿತವನ್ನು ಅರಿತು ನಡೆಯುತ್ತಿದ್ದ ಸತಿ ಇವಳು. ಈಕೆಯ ಗುಣ, ಶೀಲ, ಸ್ವಭಾವವನ್ನು ಪತಿ ಬಣ್ಣಿಸುತ್ತಾನೆ. ಈಕೆಯು ತನ್ನ ವಚನಗಳಲ್ಲಿ ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಮರುಳಶಂಕರದೇವ, ಸಿದ್ಧರಾಮ, ಅಜಗಣ್ಣರನ್ನು ನೆನೆದಿದ್ದಾಳೆ.

**ದುಗ್ಗಳೆಯ ವಚನಗಳು:**

ಬಸವಣ್ಣನಿಂದ ಗುರುಪ್ರಸಾದಿಯಾದೆನು.
ಚೆನ್ನಬಸವಣ್ಣನಿಂದ ಲಿಂಗಪ್ರಸಾದಿಯಾದೆನು.
ಪ್ರಭುದೇವರಿಂದ ಜಂಗಮಪ್ರಸಾದಿಯಾದೆನು.
ಮರುಳಶಂಕರದೇವರಿಂದ ಮಹಾಪ್ರಸಾದಿಯಾದೆನು.
ಇಂತೀ ಚತುರ್ವಿಧವು ಏಕೀಭವಿಸಿ ಪ್ರಾಣಲಿಂಗವಾದ

ಮಹಾಮಹಿಮಂಗೆ ಶರಣೆಂದು ಬದುಕಿದೆನಯ್ಯಾ
ದಾಸಯ್ಯಪ್ರಿಯ ರಾಮನಾಥಾ (೧)

ಭಕ್ತನಾದಡೆ ಬಸವಣ್ಣನಂತಾಗಬೇಕು.
ಜಂಗಮವಾದಡೆ ಪ್ರಭುದೇವರಂತಾಗಬೇಕು.
ಯೋಗಿಯಾದಡೆ ಸಿದ್ಧರಾಮನಂತಾಗಬೇಕು.
ಭೋಗಿಯಾದಡೆ ಚೆನ್ನಬಸವಣ್ಣನಂತಾಗಬೇಕು.
ಐಕ್ಯನಾದಡೆ ಅಜಗಣ್ಣನಂತಾಗಬೇಕು.
ಇಂತಿವರ ಕಾರುಣ್ಯಪ್ರಸಾದವ ಕೊಂಡು
ಸತ್ತಹಾಗಿರಬೇಕಲ್ಲದೆ ತತ್ವದ ಮಾತು ಎನಗೇಕಯ್ಯಾ
ದಾಸಯ್ಯಪ್ರಿಯ ರಾಮನಾಥಾ ? (೨)

**೩೦. ಕುರಂಗೇಶ್ವರ ಲಿಂಗಾಂಕಿತ ವಚನ**

ಕಟ್ಟಕಡೆಯ ಕಟ್ಟಲು ಬಲಿವುದೆ?
ವ್ರತ ಹೋದಲ್ಲಿ ವ್ರತ ಒಪ್ಪುವುದೆ?
ಕೆಟ್ಟ ಕಣ್ಣಿಂಗೆ ದೃಷ್ಟಿಯುಂಟೆ?
ಭವಹರ ಕುರಂಗೇಶ್ವರ ಲಿಂಗಾ?

**೩೧. ಮಸಣಯ್ಯ ಪ್ರಿಯ ಮಾರೇಶ್ವರಲಿಂಗ ಅಂಕಿತದ ವಚನ**

ಅಯ್ಯಾ, ಅಸ್ಥಿ ಚರ್ಮ ಮಾಂಸ ಶುಕ್ಲ ಶೋಣಿತರ ಗುಡಿಯ ಕಟ್ಟಿ,
ಹಂದಿಯ ದೇವರ ಮಾಡಿಕುಳ್ಳಿರಿಸಿ,
ಪಾದರಕ್ಷೆಯ ಪೂಜೆಯ ಮಾಡಿ
ನೈವೇದ್ಯವ ಹಿಡಿದು, ಮೂತ್ರವ ನೀರ ಕುಡಿಸಿ,
ಶ್ವಾನ ಕುಕ್ಕಟನಂತೆ ಕೂಗಿ ಬೊಗಳಿ,
ದಡದಡ ನೆಲಕ್ಕೆ ಬಿದ್ದು ಕಾಡಿಕೊಂಡು
ಆ ದೇವರ ಒಡೆಯ ಮಾರೇಶ್ವರ
ಕಂಡ ಹೆಂಡ ಕೊಡುವನಲ್ಲದೆ ಅನ್ನ ನೀರು ಕೊಡುವನೆ?
ಆ ದೇವರಿಗೆ ಹೊಲೆಯರು ಮಚ್ಚುವರಲ್ಲದೆ,
ಉತ್ತಮವರು ಮಚ್ಚರು ನೋಡಯ್ಯ,
ಮಸಣಯ್ಯಪ್ರಿಯ ಮಾರೇಶ್ವರಲಿಂಗವೆ.

**ಅಡಿ ಟಿಪ್ಪಣಿ :**

೧ ಅಲಕ್ಷಿತ ವಚನಕಾರ್ತಿಯರು (ಕಾಲ್ನಡಿಗೆ) – ಪ್ರೊ. ಬಿ.ಎಂ. ಪುಟ್ಟಯ್ಯ– ಪುಟ ಸಂಖ್ಯೆ: ೧೦೩, ೧೦೪

೨ ಅಲಕ್ಷಿತ ವಚನಕಾರ್ತಿಯರು – ಪುಟ ಸಂಖ್ಯೆ : ೧೦೨, ೧೦೩, ೧೦೪

೩. ಸಂಕ್ಷಿಪ್ತ ಕನ್ನಡ ನಿಘಂಟು –ಪುಟ ಸಂಖ್ಯೆ: ೫೨೬, ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ – ಪರಿಷ್ಕೃತ ೨೦೦೧

೪. ಕನ್ನಡ ರತ್ನಕೋಶ – ಪುಟ ಸಂಖ್ಯೆ; ೧೧೯, ಪ್ರಕಟಣೆ – ಪರಿಷ್ಕೃತ ೨೦೧೫

೫. ಸಂಕ್ಷಿಪ್ತ ಕನ್ನಡ ನಿಘಂಟು– ಪುಟ ಸಂಖ್ಯೆ; ೧೩೪೭,

೬. ಭಾರತೀಯ ಸಮಾಜದ ಅಧ್ಯಯನ, ಸಂಪುಟ–೨– ಲೇಖಕ – ಚ. ನ. ಶಂಕರರಾವ್, ಪುಟ ಸಂಖ್ಯೆ; ೦೭ ಪರಿಷ್ಕೃತ ಆವೃತ್ತಿ ೨೦೦೦, ಜೈ ಭಾರತ್ ಪ್ರಕಾಶನ ಮಂಗಳೂರು.

೭. ಶಿವಶರಣೆಯರ ವಚನಸಂಪುಟ –ಪುಟ ಸಂಖ್ಯೆ : ೨೪

೮. ವಚನಕಾರ್ತೆಯರು – ಪುಟ ಸಂಖ್ಯೆ : ೨೨

೯. ಶಿವಶಣೆಯರ ವಚನ ಸಂಪುಟ – ಪುಟ ಸಂಖ್ಯೆ : ೪೨, ೪೩

೧೦. ವಚನಕಾರ್ತೆಯರು – ಪುಟ ಸಂಖ್ಯೆ : ೨೩

೧೧. ಶಿವಶರಣೆಯರು : ಜೀವನ ಮತ್ತು – ಪ್ರೊ. (ಶ್ರೀಮತಿ) ಎಚ್.ಎಂ. ಬೀಳಗಿ, ಪ್ರಕಾಶಕರು ಸಾಧನೆ ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, ಪುಟ ಸಂಖ್ಯೆ : ೫೨

೧೨. ಶಿವಶರಣೆಯರು : ಜೀವನ ಮತ್ತು – ಶೂನ್ಯ ಸಂಪಾದನೆ–ಗೂಳೂರು ಶಿ. ಸಾಧನೆ ಪುಟ ಸಂಖ್ಯೆ : ೫೨

೧೩. ಶಿವಶರಣೆಯರು : ಜೀವನ ಮತ್ತು – ಪುಟ ಸಂಖ್ಯೆ : ೫೪–೫೫ ಸಾಧನೆ

೧೪. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೬೯

೧೫. ಶಿವಶರಣೆಯರ <u>ವಚನ ಸಂಪುಟ</u> – ಪುಟ ಸಂಖ್ಯೆ : ೬೯, ೭೦

೧೬. ವಚನಕಾರ್ತೆಯರು – ಪುಟ ಸಂಖ್ಯೆ : ೨೬, ೨೭

೧೭. ಶಿವಶರಣೆಯರು : ಜೀವನ ಮತ್ತು ಸಾಧನೆ – ಪುಟ ಸಂಖ್ಯೆ : ೬೯

೧೮. ಇಪ್ಪತ್ತೈದು ವಚನಕಾರ್ತಿಯರ ಜೀವನ – ಲೇಖಕರು ಶ್ರೀಮತಿ ಜಗದಾಂಬ ಮಲ್ಲೇದೇವರು ಹಾಗೂ ಸಾಧನೆ ಪುಟ ಸಂಖ್ಯೆ : ೧೯೨

೧೯. ವಚನಕಾರ್ತೆಯರು – ಪುಟ ಸಂಖ್ಯೆ : ೩೦, ೩೧

೨೦. ವಚನಕಾರ್ತೆಯರು – ಪುಟ ಸಂಖ್ಯೆ : ೩೧

೨೧. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೪೭, ೪೮

೨೨. ಇಪ್ಪತ್ತೈದು ವಚನಕಾರ್ತಿಯರ – ಪುಟ ಸಂಖ್ಯೆ : ೯೭, ೯೮, ೯೯

ಜೀವನ ಹಾಗೂ ಸಾಧನೆ (ಲೇ. ಶ್ರೀಮತಿ ಜಗದಂಬಾ ಮಲ್ಲೇದೇವರು, ಪ್ರಕಾಶಕರು–ಮೂರು ಸಾವಿರ ಮಠ–ಹುಬ್ಬಳ್ಳಿ)

೨೩. ವಚನಕಾರ್ತೆಯರು – ಪುಟ ಸಂಖ್ಯೆ : ೩೨, ೩೩

೨೪. ವಚನಕಾರ್ತೆಯರು – ಪುಟ ಸಂಖ್ಯೆ : ೩೧

೨೫. ವಚನಕಾರ್ತೆಯರು – ಪುಟ ಸಂಖ್ಯೆ : ೩೧, ೩೨

೨೬. ವಚನಕಾರ್ತೆಯರು – ಪುಟ ಸಂಖ್ಯೆ : ೧೪೪, ೧೪೫

೨೭. ಶಿವಶರಣೆಯರು : ಜೀವನ ಮತ್ತು ಸಾಧನೆ – ಪುಟ ಸಂಖ್ಯೆ : ೮೭

೨೮. ಕರ್ನಾಟಕ ಕವಿ ಚರಿತ್ರೆ –ಪುಟ ಸಂಖ್ಯೆ : ೨೪೧

೨೯. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೧೩೧

೩೦. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೫೫

೩೧. ವಚನಕಾರ್ತೆಯರು – ಪುಟ ಸಂಖ್ಯೆ : ೩೫, ೩೬

೩೨. ಶಿವಶರಣೆಯರು : – ಪುಟ ಸಂಖ್ಯೆ : ೧೩೧ಜೀವನ ಹಾಗೂ ಸಾಧನೆ ಪ್ರೊ. ಶ್ರೀಮತಿ ಹೆಚ್.ಎಂ. ಬೀಳಗಿ),

ಪ್ರಕಾಶಕರು–ಸಮಾಜ ಪುಸ್ತಕಾಲಯ, ಧಾರವಾಡ

೩೩. ಇಪ್ಪತ್ತೈದು ವಚನಕಾರ್ತಿಯರ –ಪುಟ ಸಂಖ್ಯೆ : ೧೬೮, ೧೬೯, ೧೭೦ ಜೀವನ ಹಾಗೂ ಸಾಧನೆ (ಲೇ. ಶ್ರೀಮತಿ ಜಗದಂಬಾ ಮಲ್ಲೇದೇವರು)

೩೪. ಇಪ್ಪತ್ತೈದು ವಚನಕಾರ್ತಿಯರ – ಪುಟ ಸಂಖ್ಯೆ : ೧೨೭ ಜೀವನ ಹಾಗೂ ಸಾಧನೆ

೩೫. ಇಪ್ಪತ್ತೈದು ವಚನಕಾರ್ತಿಯರ – ಪುಟ ಸಂಖ್ಯೆ : ೧೨೭ ಜೀವನ ಹಾಗೂ ಸಾಧನೆ

೩೬. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೬೫, ಪ್ರಾಧನ ಸಂಪಾದಕರು–ಡಾ. ಎಂ.ಎಂ ಕಲಬುರ್ಗಿ

೩೭. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೩೬೨

೩೮. ಇಪ್ಪತ್ತೈದು ವಚನಕಾರ್ತಿಯರ – ಪುಟ ಸಂಖ್ಯೆ : ೨೫, ೨೬ ಜೀವನ ಹಾಗೂ ಸಾಧನೆ

೩೯. ಇಪ್ಪತ್ತೈದು ವಚನಕಾರ್ತಿಯರ –ಪುಟ ಸಂಖ್ಯೆ : ೨೫, ೨೬, ೨೭ ಜೀವನ ಹಾಗೂ ಸಾಧನೆ

೪೦. ವಚನಕಾರ್ತಿಯರು – ಪುಟ ಸಂಖ್ಯೆ : ೩೭,೩೮

೪೧. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೪೪, ೪೫

೪೨. ಇಪ್ಪತ್ತೈದು ವಚನಕಾರ್ತಿಯರ – ಪುಟ ಸಂಖ್ಯೆ : ೪೪,೪೫,೪೬,೪೭ ಜೀವನ ಹಾಗೂ ಸಾಧನೆ

೪೩. ವಚನಕಾರ್ತೆಯರು – ಪುಟ ಸಂಖ್ಯೆ : ೩೮

೪೪. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೬೧

೪೫. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೪೫

೪೬. ಇಪ್ಪತ್ತೈದು ವಚನಕಾರ್ತಿಯರ – ಪುಟ ಸಂಖ್ಯೆ : ೧೯೦, ೧೯೧ ಜೀವನ ಹಾಗೂ ಸಾಧನೆ

೪೭. ವಚನಕಾರ್ತೆಯರು – ಪುಟ ಸಂಖ್ಯೆ : ೩೯

೪೮. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೬೬, ೬೭

೪೯. ವಚನಕಾರ್ತೆಯರು – ಪುಟ ಸಂಖ್ಯೆ : ೪೦, ೪೧

೫೦. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೫೩, ೫೪

೫೧. ಇಪ್ಪತ್ತೈದು ವಚನಕಾರ್ತಿಯರ – ಪುಟ ಸಂಖ್ಯೆ : ೮೨, ೮೩, ೮೪ ಜೀವನ ಹಾಗೂ ಸಾಧನೆ

೫೨. ಕರ್ನಾಟಕ ಕವಿ ಚರಿತ್ರೆ, ಕನ್ನಡ ಸಾಹಿತ್ಯ ಚರಿತ್ರೆಗಳಲ್ಲಿ ಕ್ರಮವಾಗಿ ಪುಟ ಸಂಖ್ಯೆ : ೨೪೧, ೭೪೦

೫೩. ಇಪ್ಪತ್ತೈದು ವಚನಕಾರ್ತಿಯರ – ಪುಟ ಸಂಖ್ಯೆ : ೧೮೬, ೧೮೭ ಜೀವನ ಹಾಗೂ ಸಾಧನೆ

೫೪. ವಚನಕಾರ್ತೆಯರು – ಪುಟ ಸಂಖ್ಯೆ : ೪೨

೫೫. ಶಿವಶರಣೆಯರು : ಜೀವನ ಮತ್ತು ಸಾಧನೆ – ಪುಟ ಸಂಖ್ಯೆ : ೧೨೨

೫೬. ವಚನಕಾರ್ತೆಯರು – ಪುಟ ಸಂಖ್ಯೆ : ೪೨, ೪೩

೫೭. ಶಿವಶರಣೆಯರು: – ಪುಟ ಸಂಖ್ಯೆ : ೧೨೨, ೧೨೩, ೧೨೪ ಜೀವನ ಮತ್ತು ಸಾಧನೆ

೫೮. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೬೫, ೬೬

೫೯. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೪೮, ೪೯

೬೦. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ : ೪೭

೬೧. ವಚನಕಾರ್ತೆಯರು – ಪುಟ ಸಂಖ್ಯೆ : ೪೪

೬೨. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೭೧, ೭೨

೬೩. ವಚನಕಾರ್ತೆಯರು – ಪುಟ ಸಂಖ್ಯೆ : ೪೭

೬೪. ವಚನಕಾರ್ತೆಯರು – ಪುಟ ಸಂಖ್ಯೆ : ೪೬

೬೫. ವಚನಕಾರ್ತೆಯರು – ಪುಟ ಸಂಖ್ಯೆ : ೪೮

೬೬. ಈ ಅಧ್ಯಾಯದಲ್ಲಿ ಬರುವ ವಚನಗಳನ್ನು ಶಿವಶರಣೆಯರ ವಚನ ಸಂಪುಟದಿಂದ ಆಯ್ದುಕೊಳ್ಳಲಾಗಿದೆ.

## ಅಧ್ಯಾಯ–೦೩

## ತಳಸ್ತರದ ವಚನಕಾರ್ತಿಯರ ಸಮಾಜ ಕಲ್ಪನೆ

**Society** ಎನ್ನುವ ಪದವು ಲ್ಯಾಟಿನ್‌ನ **Socius** ನಿಂದ ಬಂದಿದೆ. ಸಮಾಜವೆಂದರೆ ಏಕ ರೀತಿಯ ಮನಸ್ಸುಳ್ಳ ಮಾನವರ ಸಮೂಹ, ಅವರು ಈ ರೀತಿಯ ಏಕ ಮನಸ್ಸಿನಿಂದ ಸಂತೋಷಪಡುತ್ತಾರೆ. ಹಾಗೂ ಸಮಾಜದಿಂದ ಮಾತ್ರ ಗುಂಪುಗೂಡಿ ಕಲಿತು ಕೆಲಸ ಮಾಡಿ ತಮ್ಮ ಏಕ ರೀತಿಯುತವಾದ ಸಾಮಾನ್ಯ ಗುರಿಗಳನ್ನು ತಲುಪಲು ಸಾಧ್ಯವಾಗುತ್ತದೆ ಎಂದಿದ್ದಾರೆ ಗಿಡ್ಡಿಂಗ್ಸ್‌ರವರು.[೧]

**'**ಸಮಾಜವು ಸಾಮಾಜಿಕ ಸಂಬಂಧಗಳ ಬಲೆ**'** ಎಂದಿದ್ದಾರೆ ಮೈಕವರ್ ಮತ್ತು ಪೇಜ್[೨].

ಸಮಾಜವು ಮಾನವರ ಸುಖಕ್ಕೆಂದೇ ಉದಯಿಸಿದೆ. ಜನರ ಸುಖಕ್ಕೆಂದೇ ಸಮಾಜವು ಅನೇಕ ಕಟ್ಟಳೆಗಳನ್ನು ನಿರ್ಮಿಸಿದೆ. ಸಾಮಾನ್ಯವಾಗಿ ಸಮಾನವಾದ ಭಾಷೆ, ಆಚಾರ–ವಿಚಾರ ಹಾಗೂ ವ್ಯವಹಾರ ಪದ್ಧತಿಗಳು ಸಮಾಜ ಬೆಳವಣಿಗೆಗೆ ಸಹಕಾರಿಯಾಗುತ್ತವೆ. ಸಮಾಜವು ನಿಯಮಬದ್ಧವಾದ, ಶಾಂತಿ, ಸಹನೆ, ಸಹಕಾರಗಳಿಂದ ಕೂಡಿದ ಸಮೂಹ[೩] ಎಂದು ಹೇಳಬಹುದು.

ಇಲ್ಲಿ ಸಾಮಾನ್ಯವಾಗಿ ಎರಡು ಅಂಶಗಳನ್ನು ಗಮನಿಸಲೇಬೇಕು. ಮೊದಲನೆಯದಾಗಿ ಸಮಾಜವೆಂದರೆ ಏಕ ರೀತಿಯ ಮನಸ್ಸುಳ್ಳ ಮಾನವರ ಸಮೂಹ. ಇದು ವೇದಿಕೆಯ ಮೇಲೆ ಮಾತಿನ ಕೌಶಲ ಆಗಿಬಿಟ್ಟಿದೆ! ಹೊರತು ವಾಸ್ತವದಲ್ಲಿಲ್ಲ, ಏಕೆಂದರೆ ಇದ್ದಿದ್ದರೆ ಸ್ತ್ರೀ–ಪುರುಷ, ವರ್ಗ–ವರ್ಣ, ಮೇಲು–ಕೀಳು, ಬಡವ–ಶ್ರೀಮಂತ ಮತ್ತು ಜಾತಿಯಾಧಾರಿತ ತಾರತಮ್ಯ ಇರುತ್ತಿರಲಿಲ್ಲ. ಜಾತಿಯ ನೆಲೆಯ ವಿಚಾರವನ್ನು ೧೨ನೇ ಶತಮಾನದ ತಳಸ್ತರದ ವಚನಕಾರ್ತಿಯರು ಅಂದೇ ಖಂಡಿಸಿದ್ದಾರೆ.

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಕ್ಕ,
ಅಡಿಯ ಹಲಗೆ ಬ್ರಹ್ಮ; ತೋರಣ ವಿಷ್ಣು ;
ನಿಂದ ಬೊಂಬೆ ಮಹಾರುದ್ರ;
ರುದ್ರನ ಬೆಂಬಳಿಯವೆರಡು ಸೂತ್ರಕರ್ಣ
ಅರಿವೆಂಬ ಕದಿರು ಭಕ್ತಿಯೆಂಬ ಕೈಯಲ್ಲಿ ತಿರುಹಲಾಗಿ,

ಸುತ್ತಿತು ನೂಲು; ಕದಿರು ತುಂಬಿತ್ತು,
ರಾಟೆಯ ತಿರುಹಲಾರೆ ಎನ್ನ ಗಂಡ ಕುಟ್ಟಿಹ;
ಇನ್ನೇವೆ ಕದಿರ ರಮ್ಮಿಯೊಡೆಯ ಗುಮ್ಮೇಶ್ವರಾ![೪]

ನಾ ತಿರುಹುವ ರಾಟೆಯ ಕುಲಜಾತಿಯ ಕೇಳಿರಣ್ಣಾ ; ಎಂದು ಗುಡುಗುವ ರೀತಿ ವಿಶಿಷ್ಟವಾದುದು. ಜಾತಿ ಮತ್ತು ಲಿಂಗ ತಾರತಮ್ಯದ ಬಗ್ಗೆ ಕದಿರ ರೆಮ್ಮವ್ವೆಯ ನಿಲುವು ಏಕ ರೀತಿಯ ಮನಸ್ಸುಳ್ಳ ಮಾನವ ಸಮೂಹ ಎನ್ನುವುದರ ವಿರುದ್ಧವಿದೆ. ಜೊತೆಗೆ ಅದನ್ನು ಖಂಡಿಸುತ್ತಾಳೆ, ರೆಮ್ಮವ್ವೆಯು ಕಾಯಕದಲ್ಲಿಯೇ ತ್ರಿಮೂರ್ತಿಗಳನ್ನು ಕಂಡಿದ್ದಾಳೆ. ಸೃಷ್ಟಿ–ಸ್ಥಿತಿ–ಲಯಕ್ಕೆ ಕಾರಣರಾದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ತನ್ನ ರಾಟೆಯಲ್ಲಿಯೇ ಕಂಡಿದ್ದಾಳೆ. ಸಾಮಾನ್ಯರ ದೃಷ್ಟಿಯಲ್ಲಿ 'ಕಾಯಕ' ಕೇವಲ ಕೆಲಸವಾಗಿ ಕಂಡರೆ ರೆಮ್ಮವ್ವೆಯ ದೃಷ್ಟಿಯಲ್ಲಿ ಕಾಯಕದಲ್ಲಿ ಸರ್ವವೂ ಅಡಗಿದೆ. ಕಾಯಕ ಒಲಿದರೆ ದೇವರು ಒಲಿವರು. ಕಾಯಕ ಅಥವಾ ದೇವರು ಒಲಿಯಲು 'ಜಾತಿ' ಮುಖ್ಯವಾಗುವುದಿಲ್ಲ. ಕಾಯಕನಿಷ್ಠೆ ಮತ್ತು ಕರ್ತವ್ಯ ಮುಖ್ಯವಾಗುತ್ತದೆ.[೫]

ಎರಡನೆಯದಾಗಿ ಸಮಾಜವು ಅನೇಕ ಕಟ್ಟಳೆಗಳನ್ನು ನಿರ್ಮಿಸಿದೆ. ಈ ಕಟ್ಟಳೆಗಳನ್ನು ಒಡೆಯುವ ಪ್ರಯತ್ನ ತಳಸ್ತರದ ವಚನಕಾರ್ತಿಯರು ಅಂದೇ ಮಾಡಿದ್ದಾರೆ. ಈ ಕಟ್ಟಳೆಗಳೂ ವ್ರತದ ರೂಪದಲ್ಲಿ, ಆಚಾರ–ವಿಚಾರದ ರೂಪದಲ್ಲಿ, ರೂಢಿ–ಸಂಪ್ರದಾಯದ ರೂಪದಲ್ಲಿ, ಪತಿವ್ರತ ರೂಪದಲ್ಲಿದ್ದವು.

ಕಾಗೆಯ ನಾಯ ತಿಂದವರಿಲ್ಲ;
ವ್ರತಭ್ರಷ್ಟನ ಕೂಡಿದವರಿಲ್ಲ;
ನಾಯಿಗೆ ನಾರಂಗವಕ್ಕುವುದೇ?
ಲೋಕದ ನರಂಗೆ ವ್ರತವಕ್ಕುವುದೆ ಶಿವಬೀಜಕ್ಕಲ್ಲದೆ?
ನೀವೆ ಸಾಕ್ಷಿ ನಿಜಗುಣೇಶ್ವರ ಲಿಂಗದಲ್ಲಿ[೬]

ಕಾಗೆಯನ್ನು, ನಾಯ ಮಾಂಸವನ್ನು ಯಾರು ತಿನ್ನುವುದಿಲ್ಲ. ಅದಕ್ಕೆ ಆಸೆಪಡುವವರು ಯಾರಿದ್ದಾರೆ? ಅದರಂತೆ ವ್ರತಭ್ರಷ್ಟನನ್ನು ಯಾರು ಕೂಡಲಾರರು.[೭] ಈ ವ್ರತಾಚರಣೆ ಎಲ್ಲರಿಗೂ ದಕ್ಕುವುದಿಲ್ಲ. ದಕ್ಕಬೇಕಾದರೆ ಶಿವನ ಭಕ್ತನಾಗಬೇಕು, ಭಕ್ತನಾದರೆ ಸಾಲದು ಭಕ್ತ, ನಿಷ್ಠೆ, ತಪಸ್ಸು ಇವುಗಳನ್ನು ಕಠಿಣವಾಗಿ ಪಾಲಿಸಬೇಕು. ಹೀಗೆ ಸ್ವಾರ್ಥ ನೆಲೆಯ ಭಕ್ತರು ನಿಜ ಭಕ್ತರಾಗಲು

ಸಾಧ್ಯವಿಲ್ಲ, ಹಾಗೆಯೇ ಭ್ರಷ್ಟರು ಆಚಾರವಂತರಾಗಲು ಸಾಧ್ಯವಿಲ್ಲ ಇಂತಹವರು ನರಕಕ್ಕೆ ಹೋಗುವರು. ಇದಕ್ಕೆ ಅಕ್ಕಮ್ಮನ ವಚನವೊಂದನ್ನು ನೋಡಬಹುದು.

ಹೋತಿನ ಗಡ್ಡದಂತೆ ಗಡ್ಡದ ಹಿರಿಯರ ನೋಡಾ!
ಬಿಡಾರ ಬಿಡಾರವೆಂದು ಹಿರಿಯ ತನಕೆ ಅಹಂಕರಿಸಿ,
ಆಚಾರವಂ ಬಿಟ್ಟು ಅನಾಚಾರವಂ ಸಂಗ್ರಹಿಸಿ,
ಭಕ್ತರೊಳು ಕ್ರೋಧ, ಭ್ರಷ್ಟರೊಳು ಮೇಳ –
ಇವರು ನರಕಕ್ಕೆ ಯೋಗ್ಯರು.
ಆಚಾರವೆ ಪ್ರಾಣವಾದ ರಾಮೇಶ್ವರ ಲಿಂಗದಲ್ಲಿ![೮]

ಹೀಗೆ ಸಮಾಜದಲ್ಲಿ ನಡೆಯುತ್ತಿದ್ದ ಅನ್ಯಾಯ, ಅಧರ್ಮ, ಢಾಂಬಿಕತನ ಮುಂತಾದವುಗಳನ್ನು ಕುರಿತು ಕಟುವಾಗಿ ಟೀಕಿಸುತ್ತಾಳೆ. ಹೀಗೆ ವಚನ ಚಳುವಳಿಯ ಹೋರಾಟದ ಫಲವೋ ಏನೋ ಎನ್ನುವಂತೆ ಮಹಿಳೆ ಒಂದು ಶಕ್ತಿಯಾಗಿ ಸಬಲೆಯಾಗಿ, ಪುರುಷ ಸಮನಳಾಗಿ, ಅರ್ಥಿಕ ಸ್ವಾವಲಂಬಿಯಾಗಿ ಇವತ್ತಿನ ದಿನಮಾನದಲ್ಲಿ ಬದುಕನ್ನು ಸ್ವತಂತ್ರ್ಯವಾಗಿ ಕಟ್ಟಿಕೊಂಡಳು. ವಚನಗಳನ್ನು ಅಸ್ತ್ರವಾಗಿ ಮಾಡಿಕೊಂಡ ಮಹಿಳೆಯರಲ್ಲಿ ಎರಡು ನೆಲೆಯ ಚಿಂತನೆಯನ್ನು ಕಾಣಬಹುದು. ಮೊದಲನೆಯದಾಗಿ ಪುರುಷನ ಒಡನಾಡಿಯಾಗಿದ್ದು, ಪುರುಷ ಪ್ರಧಾನ ಸಮಾಜವೆಂಬ ಸ್ಥಾಪಿತ ಕಲ್ಪನೆಯ ಧೋರಣೆಯನ್ನು ಒಪ್ಪಿಕೊಂಡು ಪಾಲಿಸುವ ಮಹಿಳೆಯರು ಅವರುಗಳೆಂದರೆ ಅಜಗಣ್ಣನ ಸಹೋದರಿ ಮುಕ್ತಾಯಕ್ಕ, ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ, ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಆಯ್ದಕ್ಕಿ ಮಾರಯ್ಯನ ಪುಣ್ಯಸ್ತ್ರೀ ಆಯ್ದಕ್ಕಿ ಲಕ್ಕಮ್ಮ, ದಸರಯ್ಯನ ಪುಣ್ಯಸ್ತ್ರೀ ವೀರಮ್ಮ ಮುಂತಾದವರು. ಪುರುಷ ಪ್ರಧಾನ ಸಮಾಜದ ಬಂಧನದಿಂದ ಮುಕ್ತರಾಗಲು ಬಯಸುವ ಮಹಿಳೆಯರು ಪುರುಷನೆಲೆಯ ಆಲೋಚನೆಯನ್ನು ಸಂಪೂರ್ಣ ತಿರಸ್ಕರಿಸಿ ಅದರ ಮೇಲೆ ಪುರುಷ–ಸ್ತ್ರೀ ಸಮಾನತೆಯ ಸಮಾಜ ಕಟ್ಟುವ ಪ್ರಯತ್ನ ಇನ್ನೊಂದು ನೆಲೆಯಲ್ಲಿದೆ. ಸತ್ಯಕ್ಕ, ಗೊಗ್ಗವ್ವೆ, ಕದಿರ ರೆಮ್ಮವ್ವೆ, ಸೂಳೆ ಸಂಕವ್ವೆ, ಅಕ್ಕಮ್ಮ, ಗುಡ್ಡವ್ವೆ ಮುಂತಾದವರನ್ನು ನಾವಿಲ್ಲಿ ಗುರುತಿಸಬಹುದು.

ಕೆಲವು ತಳಸ್ತರದ ವಚನಕಾರ್ತಿಯರು ಗಂಡನ ಸೇವೆಯೇ ದೇವರ ಸೇವೆಯೆಂದು ಭಾವಿಸಿ, ಗಂಡನನ್ನು ದೈವವಾಗಿಸಿ ವ್ರತ, ನಿಯಮ, ಆಚಾರ,

ನಿಷ್ಠೆಗಳ ಮೂಲಕ ತಮ್ಮ ಪತಿವ್ರತ ಧರ್ಮವನ್ನು ಪಾಲಿಸುವವರು ಇದ್ದಾರೆ. ಇಂತಹ ಗಂಡನನ್ನು ಪಡೆದ ಈಕೆಯು ಪುಣ್ಯಸ್ತ್ರೀಯೆಂಬ ಹೊಗಳಿಕೆಯ ಶೂಲಕ್ಕೆ ತನ್ನನ್ನು ತಾನೆ ಬಂಧಿಸಿಕೊಂಡಿರುವುದು ಕಂಡು ಬರುತ್ತದೆ.

ಕೆಲವು ತಳಸ್ತರದ ವಚನಕಾರ್ತಿಯರು ಗಂಡನನ್ನು, ಗಂಡನ ನಿಯಮವನ್ನು, ವ್ರತ, ಆಚಾರ, ನಿಷ್ಠೆಯನ್ನು ತಿರಸ್ಕರಿಸಿ ಅಂಗದ ಬದಲು ಲಿಂಗದ ಮೋಹದಿಂದ ಶರಣೆಯರಾದವರಿದ್ದಾರೆ. ಈ ಶರಣೆಯರು ಮಹಾಮನೆಯ ಪ್ರವೇಶ ಪಡೆದು ಶರಣರ ಮಾರ್ಗದರ್ಶನದಲ್ಲಿ ವಚನಚಳುವಳಿಯಲ್ಲಿ ಭಾಗವಹಿಸಿದರು. ತಾವು ಕಂಡುಂಡ ಅನುಭವಗಳನ್ನು ಅನುಭಾವಿಕ ನೆಲೆಯಲ್ಲಿ ದಾಖಲಿಸಿದ್ದಾರೆ. ಅದೇ ಇವತ್ತು ವಚನವೆಂಬ ಅಸ್ತ್ರ ವಚನಗಳ ಮೂಲಕ ವಚನಕಾರ್ತಿಯರು ಸಮಾನತೆಯ ಸಮಾಜ ಕಟ್ಟುವ ಪ್ರಯತ್ನ ಮಾಡಿದ್ದಾರೆ. ಸ್ತ್ರೀಗೆ ಸಾಮಾಜಿಕ ಸಮಾನತೆಯೊಂದೇ ಸಾಲದು, ವರ್ಣಭೇದದ ಜೊತೆ ಲಿಂಗಬೇಧವನ್ನು ತೊಡೆದು ಹಾಕುವುದು, ಜಾತಿಯ ಗೋಡೆಯನ್ನು ಕುಸಿದು ಬೀಳುವಂತೆ ಮಾಡುವುದು, ಸ್ತ್ರೀಯು ಅಬಲೆಯಲ್ಲ ಸಬಲೆ ಎನ್ನುವುದು, ಹೆಣ್ಣು ಮಾಯೆಯಲ್ಲ, ಆತ್ಮಕ್ಕೆ ಲಿಂಗಭೇದವಿಲ್ಲ, ಹೆಣ್ಣು ಅಸ್ಪೃಶ್ಯಳಲ್ಲ[೯] ಎಂಬ ನಿಲುವುಗಳಿಂದ ಮುಕ್ತಳಾಗಲು ಬಯಸಿದ್ದಾಳೆ. ಜೊತೆಗೆ ಆರ್ಥಿಕ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಮಾನತೆಯೂ ಮುಖ್ಯವೆಂದು ಸಾರಿದಳು. ಇಂತಹ ವಿಷಯಗಳನ್ನು ತಳಸ್ತರದ ವಚನಕಾರ್ತಿಯರು ತಮ್ಮ ವಚನಗಳಲ್ಲಿ ನಿರೂಪಿಸಿದ್ದಾರೆ.

ತಳಸ್ತರದ ವಚನಕಾರ್ತಿಯರ ಸಮಾಜ ಕಲ್ಪನೆಯ ಚಿಂತನೆಗಳಲ್ಲಿನ ಅನೇಕ ಅಂಶಗಳು ಪ್ರಸ್ತುತ ಸಂದರ್ಭಕ್ಕೆ ಅಗತ್ಯವಾಗಿ ಕಂಡು ಬರುತ್ತವೆ. ಅದಾಗ್ಯೂ ಶರಣೆಯರಲ್ಲಿ ಹೊಸ ಸಮಾಜದ ಸಾಧ್ಯತೆಗಳ ಜೊತೆಗೆ ಮಿತಿಗಳೂ ಇವೆ. ಅನೇಕ ವಚನಕಾರ್ತಿಯರು ಶರಣರ ನೆರಳನ್ನು ಅನುಸರಿಸಿದಂತೆ ತೋರುತ್ತದೆ. ಕೆಲವರು ಸ್ವತಂತ್ರವಾಗಿ ಆಲೋಚಿಸಿ, ಶರಣರ ಚಿಂತನೆಗಳಿಗಿಂತ ಭಿನ್ನ ನೆಲೆಯಲ್ಲಿ ವಚನಗಳನ್ನು ರಚಿಸಿರುವುದು ಗೋಚರವಾಗುತ್ತದೆ. ಕೆಲವೊಮ್ಮೆ ದಾರಿ ತಪ್ಪಿದ ಶರಣರನ್ನು ಸರಿದಾರಿಗೆ ತಂದ ಬದ್ಧತೆ ವಚನಕಾರ್ತಿಯರಲ್ಲಿ ಇದ್ದುದನ್ನು ಕಾಣುತ್ತೇವೆ[೧೦]. ಇದಕ್ಕೆ ಉದಾಹರಣೆಯಾಗಿ ಆಯ್ದಕ್ಕಿ ಲಕ್ಕಮ್ಮನ ವಚನವನ್ನು ನೋಡಬಹುದು. "ಒಂದು ಸಲ ತನ್ನ ಪತಿಯು ಆಯ್ದು ತಂದ ಅಕ್ಕಿಯ ಮೊತ್ತವು ನಿತ್ಯಕ್ಕಿಂತ ಅಧಿಕವಾಗಿದ್ದುದನ್ನು ಕಂಡು ತನ್ನ ಮನಸ್ಸಿನಲ್ಲಿ

‘ಜೀವನಾಧಾರಕ್ಕಿಂತ ಅತಿ ಮಾಡಿ ತರುವುದು ದುರಾಸೆ” ಎಂಬ ಭಾವನೆ ಮೂಡುತ್ತದೆ. ಅದನ್ನು ತನ್ನ ವಚನದಲ್ಲಿ ಹೀಗೆ ಹೇಳುತ್ತಾಳೆ.

ಆಸೆ ಎಂಬುದು ಅರಸಿಂಗಲ್ಲದೆ,
ಶಿವಭಕ್ತರಿಗುಂಟೇ ಅಯ್ಯಾ?
ರೋಷವೆಂಬುದು ಯಮದೂತರಿಗಲ್ಲದೆ,
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯ ಆಸೆ ನಿಮಗೇಕೆ? ಈಶ್ವರನೊಪ್ಪ.
ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯ.
ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ,
ಇದು ನಿಮ್ಮ ಮನವೊ, ಬಸವಣ್ಣನ ಅನುಮಾನದ ಚಿತ್ತವೊ?
ಈ ಮಾತು ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ಸಲ್ಲದ ಬೋನ,
ಅಲ್ಲಿಯೇ ಸುರಿದು ಬನ್ನಿ ಮಾರಯ್ಯ

ಲಕ್ಕಮ್ಮಳು ಪತಿಯ ಆಸೆಗೆ ನೀರೆರೆದು ವಿನಾಶದ ಹಾದಿಯನ್ನು ಉತ್ತು ಬೆಳೆಯದೆ ಅಂದೇ ಅದನ್ನು ತಡೆದು, ನಾಳೆಗೆಂದು ತಂದರೆ ನಾಳಿನ ಕಾಯಕಕ್ಕೆ ಸಂಚುಕಾರ ಎಂದು ಅರಿವು ಮೂಡಿಸುತ್ತಾಳೆ. ಈ ಮೂಲಕ ದುರಾಸೆಯ ದಾರಿಗೆ ಹೋದ ಪತಿಯನ್ನು ಸರಿದಾರಿಗೆ ತರುವ ಪ್ರಯತ್ನ ಮಾಡುತ್ತಾಳೆ.

ಸಾಮಾಜಿಕ, ಆರ್ಥಿಕ, ಧಾರ್ಮಿಕ ಅಸಮಾನತೆಯ ದಾಸ್ಯವನ್ನು ಕಿತ್ತೊಗೆದು ಸಮಾನತೆಯ ಸಮಾಜವನ್ನು ಪ್ರತಿಪಾದಿಸುವುದಕ್ಕಾಗಿ ಅನೇಕ ಜನ ತಳಸ್ತರದ ವಚನಕಾರ್ತಿಯರು ವಚನಗಳನ್ನೇ ‘ಅಸ್ತ್ರ’ ಮಾಡಿಕೊಂಡರು. ಜಾತಿಯ ಗೋಡೆ ಕುಸಿದು, ಆತ್ಮಾಭಿಮಾನ ಮತ್ತು ಸ್ವಾಭಿಮಾನದ ಕಿಚ್ಚು ಒಡಮೂಡಿದ, ಲಿಂಗಭೇದ ತೊರೆದ ಹಾಗೂ ನಿಜಭಕ್ತಿಯೊಂದೆ ಶರಣರ ಧರ್ಮವೆಂದ ಕಾಲವದು. ವಚನಗಳ ರಚನೆಯ ಕಾಲ ಅಸಮಾನತೆ ತೊರೆದು ಸಮಾನತೆ ಮೆರೆದ ಕಾಲವಾಗಿತ್ತು. ಈ ಕಾಲದ ಸಮಾಜದಲ್ಲಿ ಸ್ತ್ರೀಯರು ಪಡೆದ ಮೊದಲ ಸಮಾನ ಅವಕಾಶವೆಂದರೆ ಅಭಿವ್ಯಕ್ತಿ ಸ್ವಾತಂತ್ರ್ಯ. ಈ ವಚನ ಧ್ವನಿಯಿಂದಲೇ ಸ್ತ್ರೀಯು ಸ್ತ್ರೀಯನ್ನು ಪುರುಷ ಸಮಾಜದ ಬಂಧನದ ನೆಲೆಯಿಂದ ಮುಕ್ತಗೊಳಿಸಲು ಹೈರಾಣಾಗಿದ್ದಾಳೆ.

ಸ್ತ್ರೀಯು ಪಾರಂಪರಿಕವಾಗಿ ಬಂದ ರೂಢಿ ಸಂಪ್ರದಾಯ, ಮೂಢನಂಬಿಕೆ, ಅಂಧಶ್ರದ್ಧೆ ಅಂಧಾಚರಣೆ ಮತ್ತು ಸ್ಪೃಶ್ಯ–ಅಸ್ಪೃಶ್ಯಗಳೆಂಬ

ನಂಬಿಕೆಗಳನ್ನು ಕಿತ್ತೊಗೆಯಲು ಪ್ರಯತ್ನಿಸಿದಳು. ಶತಶತಮಾನದಿಂದಲೂ ಸಾಹಿತ್ಯ ಸೃಷ್ಟಿ ಕೇವಲ ಪುರುಷರ ಸ್ವತ್ತು ಎಂದುಕೊಂಡಿದ್ದ ಸ್ಥಾಪಿತ ಕಲ್ಪನೆಯನ್ನು ಹುಸಿಗೊಳಿಸಿ ತನ್ನ ಬದುಕಿನ ಪಯಣದಲ್ಲಿ ಕಂಡುಂಡ ಅನುಭವಗಳನ್ನು ಅನುಭಾವಿ ಸಾಹಿತ್ಯದ ನೆಲೆಯಲ್ಲಿ ಪ್ರತಿಪಾದಿಸಿದಳು. ವಚನಗಳನ್ನು ರಚಿಸಿ ಸ್ತ್ರೀಯು ಕೂಡ ಅವಕಾಶ ಸಿಕ್ಕರೆ ಅತ್ಯುತ್ತಮ ಸಾಹಿತ್ಯದ ಸೃಷ್ಟಿ ಮಾಡಬಲ್ಲಳು ಎಂಬುದನ್ನು ತೋರಿಸಿಕೊಟ್ಟಳು. ಅಲ್ಲದೆ ತಾವುಗಳು ಅನುಭವಿಸಿದ ಅವಮಾನ, ನೋವು, ಜೀವನದ ಕಡುಕಷ್ಟಗಳನ್ನೇ ತಮ್ಮ ವಚನಗಳ ಜೀವಾಳವಾಗಿಸಿದರು. ವೈದಿಕ ವರ್ಣಾಶ್ರಮ ವ್ಯವಸ್ಥೆ ಮತ್ತು ಪಿತೃಪ್ರಧಾನ ಕುಟುಂಬ ಪದ್ಧತಿಯಲ್ಲಿದ್ದ ಸ್ತ್ರೀಯರ ಮೌಲ್ಯವನ್ನು ಪಲ್ಲಟಗೊಳಿಸಿ ಕಾಯಕ ಸಮಾಜದ ಮಹತ್ವ ಸಾರಿದ್ದಾಳೆ[೧೧]. ಸಾಮಾಜಿಕ ವ್ಯವಸ್ಥೆಯಲ್ಲಿನ ಕ್ರೂರ ಮನಸ್ಥಿತಿಗಳು ಮೊದಲಿನಿಂದಲೂ ಸ್ತ್ರೀಯನ್ನು ಅಬಲೆಯೆನಿಸಿ, ಅವಳಲ್ಲಿ ಕೀಳರಿಮೆಯನ್ನು ಮೈಗೂಡಿಸಿಕೊಳ್ಳುವಂತೆ ಮಾಡಿದ್ದರು ಹಾಗೂ ಉಸಿರುಗಟ್ಟುವ ವಾತಾವರಣದಲ್ಲಿ ಆಕೆ ಜೀವಂತ ಶವವಾಗಿ ಬದುಕ ತೊಡಗಿದ್ದಳು. ಪುರುಷ ಸ್ತ್ರೀಗೆ ಏನೆಲ್ಲ ಕಟ್ಟು ಪಾಡುಗಳನ್ನು ಹಾಕಿ, ಅವಳಿಗೆ ನಿಯಮ ನಿರ್ಬಂಧಗಳ ಸಂಕೋಲೆಯನ್ನು ತೊಡಿಸಿದನು. ಹೀಗೆ ಹೆಣ್ಣಿನ ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ, ನೈತಿಕ, ಸಾಂಸ್ಕೃತಿಕ ಅವಕಾಶಗಳನ್ನೆಲ್ಲ ಕಿತ್ತುಕೊಂಡು ಅವಳನ್ನು ಮತ್ತಷ್ಟು ಕನಿಷ್ಠಳನ್ನಾಗಿ ಮಾಡಲಾಗಿತ್ತು. ಈ ನಿಯಮಗಳು ಸ್ತ್ರೀಯು ಸ್ವತಂತ್ರಕ್ಕೆ, ಮೋಕ್ಷಕ್ಕೆ ಯೋಗ್ಯಳಲ್ಲವೆಂದು ಸಾರಿದವು. ಹೀಗಾಗಿ ಅಸಮಾನತೆ ಮತ್ತು ಶೋಷಣೆಯ ವಿರುದ್ಧದ ಧ್ವನಿಯಾಗಿ ತಳಸ್ತರದ ವಚನಕಾರ್ತಿಯರ ವಚನಗಳನ್ನು ಕಾಣಬಹುದು.

ತಳಸ್ತರದ ವಚನಕಾರ್ತಿಯರ ವಚನಗಳು ಕೆಳ ವರ್ಗದ ಜನರ ಬದುಕನ್ನು, ಸಂಸ್ಕೃತಿಯನ್ನು, ಸಮಾಜವನ್ನು ಪ್ರತಿನಿಧಿಸುತ್ತವೆ. ಜೊತೆಗೆ ಅವರ ಸಾತ್ವಿಕ ಬದುಕನ್ನು ಅನಾವರಣ ಮಾಡಿವೆ. ತಳಸ್ತರದ ವಚನಕಾರ್ತಿಯರಾದ ಗೊಗ್ಗವ್ವೆ, ಕಾಳವ್ವೆ, ಸತ್ಯಕ್ಕ, ಸಂಕವ್ವೆ, ಸೋಮವ್ವೆ, ಕದಿರ ರೆಮ್ಮವ್ವೆ, ಲಿಂಗಮ್ಮ, ಲಕ್ಕಮ್ಮ, ಅಕ್ಕಮ್ಮ ಮೊದಲಾದ ಸ್ತ್ರೀ ರತ್ನಗಳು ವಚನಕಾರ್ತಿಯರಾಗಿ ವಚನಗಳನ್ನು ಸ್ತ್ರೀಯರ ಶಕ್ತಿಯಾಗಿ ಬಳಸಿರುವುದನ್ನು ಕಾಣಬಹುದು. ತಳಸ್ತರ ಸಮುದಾಯದ ಕಾಯಕ ಜೀವಿಗಳು ತಲೆಯೆತ್ತಿ ಸ್ವಾಭಿಮಾನದಿಂದ ಮಾತನಾಡುವಂತಾದದ್ದು ಈ ವಚನಕಾರ್ತಿಯರ ವಚನಗಳಲ್ಲಿ ಸ್ಫುಟವಾಗಿ ಗೋಚರಿಸುತ್ತದೆ.

## ೧. ಕುಟುಂಬದ ಕಲ್ಪನೆ

ಕುಟುಂಬವು ಸಮಾಜದ ಅತಿ ಚಿಕ್ಕ ಘಟಕವಾಗಿದೆ. ಸಾಮಾಜಿಕ ವಿಕಾಸಕ್ಕೆ ಮೂಲಭೂತವಾದ ಘಟಕವಾಗಿದೆ. ಇಲ್ಲಿ ಮಾನವ ಶಿಶುವಿಗೆ ಇತರೆ ಪ್ರಾಣಿಗಳಿಗಿಂತ ದೀರ್ಘಕಾಲದ ಪಾಲನೆ ಪೋಷಣೆ ಲಭಿಸುತ್ತದೆ. ಪತಿ–ಪತ್ನಿಯರಿಗೆ ದೀರ್ಘಾವಧಿಯ ಬದುಕಿಗೆ ಸಂಬಂಧಿಸಿದ ಕುಟುಂಬವು ಒಂದು ಆಶ್ರಯ ತಾಣ. ಈ ಕುಟುಂಬಗಳ ಸಮೂಹವೇ ಸಮಾಜಕ್ಕೆ ಆಧಾರ. ಹೀಗಾಗಿ ಕುಟುಂಬ ಬಿಟ್ಟು ಸಮಾಜವಿಲ್ಲ ಸಮಾಜ ಬಿಟ್ಟು ಕುಟುಂಬಗಳಿಲ್ಲ ಆದ್ದರಿಂದ ಕುಟುಂಬವು ಸಮಾಜದ ಒಂದು ಪ್ರಮುಖ ಅಂಗ ಸಂಸ್ಥೆಯಾಗಿದೆ. ಕುಟುಂಬವು ಬಹು ಪುರಾತನವಾದ ಸಾಮಾಜಿಕ ಸಂಸ್ಥೆಯಾಗಿದೆ. ಇದು ಪ್ರೀತಿ, ನಂಬಿಕೆ ಮತ್ತು ವಾತ್ಸಲ್ಯದಿಂದ ಹೊರಹೊಮ್ಮಿದ ವ್ಯವಸ್ಥೆಯಾಗಿದೆಯೇ ಹೊರತು ಒತ್ತಾಯವಾಗಿ ಹೇರಿದ ಸಂಸ್ಥೆಯಲ್ಲ. ಮನೆಯೆ ಮಗುವಿಗೆ ಮೊದಲ ಪಾಠಶಾಲೆ. ತಾಯಿಯೆ ಮೊದಲ ಗುರು. ಏಕೆಂದರೆ ಮಗು ಜನನದಿಂದ ಮರಣದವರೆಗೆ ಕುಟುಂಬವನ್ನೇ ಆಶ್ರಯಿಸಿರುತ್ತದೆ. ಪ್ರೀತಿ, ತ್ಯಾಗ, ಸಹಕಾರ ಮತ್ತು ವಿಧೇಯತೆ ಮೊದಲಾದ ಗುಣಗಳೆಲ್ಲವನ್ನು ಮಗು ಕಲಿಯುವುದು ಮನೆಯಲ್ಲಿಯೆ ಜೊತೆಗೆ ಮಗು ತಾನು ಜನಿಸಿದ ಕುಟುಂಬದಲ್ಲಿ ರೀತಿ, ನೀತಿ, ಭಾಷೆ ಹಾಗೂ ನಡುವಳಿಕೆಗಳನ್ನೇ ಕಲಿಯುತ್ತದೆ. ಸಂಸ್ಕೃತಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ಸಾಗಲು ಕುಟುಂಬ ಒಂದು ಸಾಧನವಾಗಿದೆ[೧೨].

ಹೀಗಾಗಿ ವಚನಕಾರ್ತಿಯರು ತಮ್ಮ ತಮ್ಮ ಕುಟುಂಬದಿಂದಲೇ ಮೊದಲು ಹೋರಾಟಗಳನ್ನು ಆರಂಭಿಸಿದರು. ಕುಟುಂಬದ ಒಡೆಯನ ವಿರುದ್ಧ, ಒಡೆಯನಿಂದ ಹೇರಲ್ಪಟ್ಟ ವ್ರತ, ಆಚರಣೆ, ನಿಯಮ ನಿಷ್ಠೆಗಳ ವಿರುದ್ಧ, ಸ್ತ್ರೀಯರ ಅಸಮಾನತೆಯ ವಿರುದ್ಧ ಹೋರಾಡಿದರು. ವಚನಕಾರ್ತಿಯರು ತಮ್ಮ ಪೂರ್ಣ ಅವಶ್ಯಕತೆಗಳನ್ನು ಇಲ್ಲಿ ಪೂರೈಸಿಕೊಳ್ಳಲು ಸಿದ್ಧರಾದರು.

ಬರ್ಗೆನ್ ಮತ್ತು ಲಾಕ್‌ರವರ ಪ್ರಕಾರ: "ಕುಟುಂಬವು ವಿವಾಹ ರಕ್ತ ಸಂಬಂಧ ಐಕ್ಯತೆಯಿಂದ ಕೂಡಿದ್ದು, ಒಂದೇ ಮನೆಯವರಿಂದ ಏರ್ಪಟ್ಟ ಪತಿ ಪತ್ನಿ, ಮಾತಾಪಿತ, ಅಕ್ಕ, ತಂಗಿ, ಪುತ್ರ, ಪುತ್ರಿ, ಸಾಮಾಜಿಕ ಪಾತ್ರದಲ್ಲಿ ಪರಸ್ಪರ ಪ್ರಭಾವ ಬೀರುತ್ತಾ ಪರಸ್ಪರರೊಡನೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುವ ಸಮಾನ ಸಂಸ್ಕೃತಿಯನ್ನು ಸೃಷ್ಟಿಸಿ ಉಳಿಸಿಕೊಂಡು ಬಾಳುವ ವ್ಯಕ್ತಿಗಳ ಒಂದು

ಗುಂಪು" ಎಂದಿದ್ದಾರೆ. ಸಮಾಜಶಾಸ್ತ್ರಜ್ಞೆಯಾದ – ಡಾ. ಇರಾವತಿ ಕರ್ವೆಯವರು ರಕ್ತ ಸಂಬಂಧಿಗಳ ಸಮೂಹವೊಂದು ಒಂದೇ ಮನೆಯಲ್ಲಿ ವಾಸಿಸುತ್ತಾ ಒಂದೇ ಒಲೆಯಲ್ಲಿ ತಯಾರಿಸಿದ ಅಡಿಗೆಯನ್ನು ಸೇವಿಸುತ್ತಾ, ಆಸ್ತಿಯ ಮೇಲೆ ಸಮಾನವಾದ ಒಡೆತನವನ್ನು ಹೊಂದಿರುತ್ತಾ ಮತ್ತು ಕುಟುಂಬದ ಪೂಜಾ ಕಾರ್ಯಗಳಲ್ಲಿ ಸಾಮೂಹಿಕವಾಗಿ ಪಾಲ್ಗೊಳ್ಳುತ್ತಾ ಬರುವಂತಿರಬೇಕು[೧೩] ಎಂದು ಸಾಮಾಜಿಕ ನೆಲೆಯಲ್ಲಿ ಕುಟುಂಬವನ್ನು ಪ್ರತಿಪಾದಿಸುತ್ತಾರೆ. ಆದರೆ ಸಮಾಜಶಾಸ್ತ್ರಜ್ಞರ ವ್ಯಾಖ್ಯೆಗೂ ತಳಸ್ತರದ ವಚನಕಾರ್ತಿಯರ ಕುಟುಂಬದ ಬಗೆಗಿನ ವ್ಯಾಖ್ಯೆಗೂ ವ್ಯತ್ಯಾಸಗಳಿವೆ. ತಳಸ್ತರದ ವಚನಕಾರ್ತಿಯರು ಕುಟುಂಬ ವ್ಯವಸ್ಥೆಯನ್ನು ಕುರಿತು ಹೇಳುವಲ್ಲಿ ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ, ಅರಿವಿಂಗೆ ಬೇರೊಂದೊಡಲುಂಟೆ? ಎಂದು ಒಬ್ಬ ವಚನಕಾರ್ತಿಯು ಪ್ರಶ್ನಿಸಿದರೆ ಮತ್ತೊಬ್ಬಳು ಸತಿ–ಪತಿಯೊಳ ಒಂದಾದಭಕ್ತಿ ಹಿತವಪ್ಪುವುದು ಶಿವಂಗೆ, ಎಂದು ಕುಟುಂಬವನ್ನು ಭಕ್ತಿನೆಲೆಯಲ್ಲಿ ಸಮರ್ಥಿಸಿದ್ದಾರೆ.

**ಕುಟುಂಬದ ವಿಧಗಳು:**

(೧) **ಪಿತೃ ಪ್ರಧಾನ ಕುಟುಂಬ:** ಪಿತೃ ಪ್ರಧಾನ ಕುಟುಂಬದಲ್ಲಿ ತಂದೆಯು ಕುಟುಂಬದ ಮುಖ್ಯಸ್ಥನಾಗಿದ್ದು ತನ್ನ ಹೆಂಡತಿ ಮತ್ತು ಮಕ್ಕಳ ಮೇಲೆ ಆತನಿಗೆ ಸಂಪೂರ್ಣ ಅಧಿಕಾರವಿರುತ್ತದೆ. ಆತನೇ ಅವರ ಸಂರಕ್ಷಕನಾಗಿದ್ದು, ಸರ್ವ ರೀತಿಯ ಜವಾಬ್ದಾರಿಯನ್ನು ತಂದೆಯೇ ವಹಿಸುತ್ತಾನೆ. ಪುರಾತನ ಕಾಲದಿಂದಲೂ ಮಾನವ ಜನಾಂಗಗಳಲ್ಲಿ ಪಿತೃ ಪ್ರಧಾನ ಕುಟುಂಬವು ಅಸ್ತಿತ್ವದಲ್ಲಿದೆ. ಕುಟುಂಬದ ಅಧಿಕಾರ ಮನೆಯ ಯಜಮಾನನಾದ ತಂದೆಗೆ ಸೇರಿದ್ದು ಇವನು ತೀರಿದ ನಂತರ ಹಿರಿಯ ಮಗನಿಗೆ ಅಧಿಕಾರ, ಆಸ್ತಿಯಲ್ಲಿ ಗಂಡು ಮಕ್ಕಳಿಗೆ ಸಮಾನವಾದ ಪಾಲಿತ್ತು. ಪಿತೃಪ್ರಧಾನ ಕುಟುಂಬದಲ್ಲಿ ಗಂಡನಿದ್ದ ಕಡೆ ಹೆಂಡತಿ ಜೀವನ ಸಾಗಿಸಬೇಕು. ಈ ರೀತಿಯ ನಿಯಮಗಳಿಂದ ವಚನಕಾರ್ತಿಯರು ಹೊರಬರುವ ಪ್ರಯತ್ನ ಮಾಡಿದ್ದಾರೆ. ಈ ಬಗೆಯನ್ನು ತಳಸ್ತರದ ವಚನಕಾರ್ತಿಯಾದ ಒಕ್ಕಲ ತಿಮ್ಮವ್ವೆಯ ಈ ವಚನದಲ್ಲಿ ಕಾಣಬಹುದು.

"ತಾನೇ ಮಾಡಿಕೊಂಡ ಕೃಷಿ ವ್ಯವಸಾಯವಿಲ್ಲದೆ
ಒಡೆಯರು ಕಟ್ಟಪ್ಪಣೆ ಮಾಡುವರೆಂತು

ಹೀಗಲ್ಲದೆ ಎನ್ನ ಒಡಲ ಪೊರೆದಿಹೆನೆಂದು
ಹೋದ ಕಾವಿನಲ್ಲಿ ಜಗಳವನಿಕ್ಕುವಲಾಗದ
ಶೀಲವಂತರ ಮನದ ಭೇದವ ನೀವೇ ಬಲ್ಲಿರಿ ಏಲೇಶ್ವರ ಲಿಂಗವೇ”[೧೪]

ಜಲ–ನೆಲ–ಶಿಲೆ ತಾಮೂಡುವ ಹೊಲ ಮುಂತಾಗಿ ಸರ್ವವೆಲ್ಲವೂ ಲಿಂಗಾಯತ ಸಂಬಂಧವಾಗಿ ಭವಿಸಂಗ, ಭವಿ ನಿರೀಕ್ಷಣೆ, ಭವಿ ಅಪೇಕ್ಷೆ, ಭವಿ ದ್ರವ್ಯಂಗಳನೊಲ್ಲದೆ ಶಿವನರಿತಲ್ಲಿ, ಶಿವನ ಪೂಜೆಯ ಮಾಡುವಲ್ಲಿ, ಶಿವಮೂರ್ತಿ ಧ್ಯಾನದಿಂದ ಶಿವ ಲಿಂಗಾರ್ಚನೆಯ ಮಾಡುವಲ್ಲಿ ಶಿವ ಪ್ರಸಾದವ ತಂದು ಒಡೆಯನಿಗಿತ್ತು. ಆದರೆ ಸಹಬಾಳ್ವೆ ಮಾಡುವ ಪುರುಷ ಒಡೆಯನಾದರೆ, ಸ್ತ್ರೀಯು ಗುಲಾಮಳಲ್ಲ. ಅವಳು ಕೂಡ ಮನೆಯ ಒಡತಿ. ಆಸ್ತಿ ಗಂಡು ಮಕ್ಕಳಿಗೆ ಮಾತ್ರ ಎನ್ನುವ ನೀತಿಯನ್ನು ಬದಲಿಸಿ ಹೆಣ್ಣಿಗೂ ಆಸ್ತಿ ಸೇರಬೇಕು ಎಂಬ ಸಂದೇಶ ಸಾರಿದರು. ಒಕ್ಕಲುತನವನ್ನು ಪುರುಷನ ಸರಿಸಮಾನಳಾಗಿ ಒಕ್ಕಲ ತಿಮ್ಮವ್ವೆ ಮಾಡಿರುವುದನ್ನು ಇಲ್ಲಿ ಗಮನಿಸಬೇಕು.

**(೨) ಮಾತೃ ಪ್ರಧಾನ ಕುಟುಂಬ:** ಪುರಾತನ ಕಾಲದಲ್ಲಿ ಮಾತೃ ಪ್ರಧಾನ ಕುಟುಂಬ ಪದ್ಧತಿ ಜಾರಿಯಲ್ಲಿತ್ತೆಂದು ಹಲವರ ಅಭಿಪ್ರಾಯ. ಈ ಮಾದರಿಯ ಕುಟುಂಬದಲ್ಲಿ ತಾಯಿಯೇ ಮನೆಯ ಯಜಮಾನಳು. ಅವಳ ಮರಣದ ನಂತರ ಮನೆಯ ಹಿರಿಯ ಮಗಳೇ ಯಜಮಾನಳು ಅಲ್ಲದೇ ಆಸ್ತಿಯು ಹೆಣ್ಣು ಮಕ್ಕಳಿಗೆ ಮಾತ್ರ ಹಂಚಲಾಗಿತ್ತು. ಇಂದಿಗೂ ಈ ಮಾದರಿಯ ಕುಟುಂಬ ವ್ಯವಸ್ಥೆಯನ್ನು ದಕ್ಷಿಣ ಕನ್ನಡ ಮತ್ತು ಕೇರಳ ಪ್ರಾಂತ್ಯದ ಹಲವು ಕಡೆಗಳಲ್ಲಿ ಕಾಣಬಹುದು[೧೫]. ಇವತ್ತು ಸ್ತ್ರೀಯು ಇಷ್ಟು ಸ್ವಾರ್ಥದ ನೆಲೆಯಲ್ಲಿ ಯೋಚಿಸುವಳಲ್ಲ. ಅವಳ ಗುರಿ ಸಮಾನತೆಯ ನಿರ್ಮಾಣವೇ ಆಗಿದೆ. ವಚನಕಾರ್ತಿಯರ ವಚನಗಳೆ ಇದಕ್ಕೆ ಸ್ಪಷ್ಟ ಉತ್ತರ ನೀಡಬಲ್ಲವು. ಗೊಗ್ಗವ್ವೆಯ ದೃಷ್ಟಿಯಲ್ಲಿ ಹೆಣ್ಣುಗಂಡುಗಳೆಂಬ ಭೇದ–ಭಾವ ಸಲ್ಲದು.

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೊ ನಾಸ್ತಿನಾಥ.
ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು

ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು
ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ
ನಾಸ್ತಿನಾಥನು ಪರಿಪೂರ್ಣನೆಂಬೆ[೧೬]

ಮೊದಲ ವಚನದಲ್ಲಿ ಕೇವಲ ಶಾರೀರಿಕ ರಚನೆಯಿಂದ ನಾವು ಹೆಣ್ಣು–ಗಂಡುಗಳಲ್ಲಿ ಭೇದವನ್ನು ಕಲ್ಪಿಸಬಹುದು. ಆದರೆ ಕಾಯಕದ ನೆಲೆಯಲ್ಲಿ, ಆಧ್ಯಾತ್ಮದ ನೆಲೆಯಲ್ಲಿ ಗುರುತಿಸಲಾಗದು, ಆದರೆ ಕಾಯಕದ ಸಮಾನತೆಯನ್ನು ಈ ವಚನವು ಆಧ್ಯಾತ್ಮದ ನೆಲೆಯಲ್ಲಿ ಬಿಂಬಿಸುತ್ತದೆ. ಎರಡನೆ ವಚನದಲ್ಲಿ ಗಂಡು ಹೆಣ್ಣಿನ ಹಾಗೂ ಹೆಣ್ಣು ಗಂಡಿನ ಮೋಹದ ಬಲೆಯನ್ನು ಕಳಚಿದ್ದೇ ಆದರೆ ಸುಖಿ ತಾನಾಗಬಹುದು. ಆಗ ಆತನೇ ಪರಿಪೂರ್ಣನೂ ಆಗಬಲ್ಲ ಎಂಬ ಅಭಿಪ್ರಾಯ ಗೊಗ್ಗವ್ವೆಯದು. ಹೀಗೆ ಸತ್ಯಕ್ಕ, ಅಕ್ಕಮ್ಮ ಮತ್ತಿತರ ವಚನಕಾರ್ತಿಯರ ವಚನಗಳಲ್ಲೂ ಕಾಣಬಹುದು.

**(೩) ಅವಿಭಕ್ತ ಕುಟುಂಬ:** ಅವಿಭಕ್ತ ಕುಟುಂಬದಲ್ಲಿ ತಂದೆಯು ಸರ್ವಾಧಿಕಾರಿ. ಕುಟುಂಬದಲ್ಲಿ ಹುಟ್ಟಿದ ಗಂಡು ಮಕ್ಕಳಿಗೆ ಆಸ್ತಿಯ ಮೇಲೆ ಹಕ್ಕಿದ್ದರೂ ತಂದೆಯು ಕುಟುಂಬದ ಯಜಮಾನನಾಗಿರುವುದರಿಂದ ಆತನು ಕೆಲವು ವಿಶೇಷವಾದ ಹಕ್ಕುಗಳನ್ನು ಹೊಂದಿರುತ್ತಾನೆ.. ತಂದೆ ತೀರಿಕೊಂಡರೆ ಹಿರಿಯಮಗ ಮನೆಯ ಯಜಮಾನ ಆತನನ್ನು **'ಕರ್ತ'** ಎಂದು ಕರೆಯಲಾಗಿದೆ. ಕುಟುಂಬದ ಆದಾಯ ಮತ್ತು ವೆಚ್ಚಗಳು ಆತನ ಜವಾಬ್ದಾರಿಗೆ ಸೇರಿದ್ದು ಸಂಪೂರ್ಣ ಜವಾಬ್ದಾರಿ ಕರ್ತನಿಗೆ ಸೇರಿರುತ್ತದೆ. ಇಂತಹ ಕುಟುಂಬಗಳು ಮೂರು ಅಥವಾ ಅದಕ್ಕೂ ಹೆಚ್ಚಿನ ಪೀಳಿಗೆಯವರನ್ನು ಹೊಂದಿವೆ. ಕುಟುಂಬದ ಎಲ್ಲಾ ಸದಸ್ಯರೂ ಕುಟುಂಬದ ಆಸ್ತಿ, ಆದಾಯ, ಹಕ್ಕು–ಬಾದ್ಯತೆ ಮತ್ತು ಕರ್ತವ್ಯಗಳಲ್ಲಿ ಭಾಗಿಗಳಾಗಿರುವ ಕುಟುಂಬವೇ ಅವಿಭಕ್ತ ಕುಟುಂಬವೆನಿಸುತ್ತದೆ. ಒಂದೇ ಮನೆಯಲ್ಲಿ ವಾಸ ಮಾಡಿಕೊಂಡು ಒಂದೇ ಪಾಠಶಾಲೆಯನ್ನು ಹೊಂದಿದ್ದು, ಕುಟುಂಬದ ಸದಸ್ಯರೆಲ್ಲರಿಗೂ ಒಂದೇ ರೀತಿಯ ಪೂಜಾ ಗೃಹವನ್ನು ಹೊಂದಿದ್ದು, ಕುಟುಂಬದ ಆಸ್ತಿಯು ಸಾಮೂಹಿಕ ಸ್ವಾಮ್ಯವನ್ನು ಹೊಂದುವುದೇ ಅವಿಭಕ್ತ ಕುಟುಂಬ[೧೭]. ಈ ಕುಟುಂಬದಲ್ಲಿ ಕರ್ತನ ಜವಾಬ್ದಾರಿಯನ್ನು ವಚನಕಾರ್ತಿಯರು ಪ್ರಶ್ನಿಸುತ್ತಾರೆ. ಆದರೆ, ಒಂದೇ ಪಾಠಶಾಲೆ, ಒಂದೇ ಕುಟುಂಬ, ಒಂದೇ ನಿಯಮ, ಒಂದು ಪೂಜಾವಿಧಾನ ಮತ್ತು ಕುಟುಂಬದ ಆಸ್ತಿ ಸಾಮೂಹಿಕ ಸ್ವಾಮ್ಯವನ್ನು ಹೊಂದುವ ವಿಷಯವನ್ನು

ಪ್ರೋತ್ಸಾಹಿಸುತ್ತಾರೆ. ಇದನ್ನು ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮನ ವಚನದಲ್ಲಿ ನೋಡಬಹುದು

> ಆವ ಕಾಯಕವ ಮಾಡಿದಡೂ ಒಂದೆ ಕಾಯಕವಯ್ಯಾ
> ಆವ ವ್ರತವಾದಡೂ ಒಂದೆ ವ್ರತವಯ್ಯ,
> ಆಯ ತಪ್ಪಿದಡೆ ಸಾವಿಲ್ಲ ; ವ್ರತ ತಪ್ಪಿದಡೆ ಕೂಡಲಿಲ್ಲ
> ಕಾಕಪಿಕದಂತೆ ಕೂಡಲು ನಾಯಕ ನರಕ
> ಗಂಗೇಶ್ವರಲಿಂಗದಲ್ಲಿ.[೧೮]

**(೪) ವಿಭಕ್ತ ಕುಟುಂಬ:** ಇದು ಚಿಕ್ಕ ಕುಟುಂಬ. ದೊಡ್ಡ ಗಾತ್ರದ ಕುಟುಂಬಗಳು ಇಂದು ತೀರಾ ವಿರಳ. ಇಲ್ಲಿ ಪಾಶ್ಚಾತ್ಯರಲ್ಲಿ ಕಾಣುವಂತೆ ಇಬ್ಬರು ಮೂವರನ್ನು ಮಾತ್ರ ಒಳಗೊಂಡಿರುವ ಅತಿ ಚಿಕ್ಕ ಕುಟುಂಬ. ಈ ಕುಟುಂಬವೊಂದರ ವ್ಯಾಪ್ತಿಯಲ್ಲಿ ವಾಸಿಸುವವರ ತಲೆಮಾರುಗಳ ಸಂಖ್ಯೆ ಕೂಡ ಕಡಿಮೆಯಾಗಿದೆ. ಈ ಸಂಖ್ಯೆ ಎರಡಕ್ಕೆ ಇಳಿದು ಕುಟುಂಬವು ವಿಭಕ್ತ ಸ್ವರೂಪದ್ದಾಗಿದೆ. ದೂರದ ಬಳಗದವರಿಗೆ ಸಿಗುವ ಪ್ರಾಶಸ್ತ್ಯ ಈಗ ಕಡಿಮೆಯಾಗಿದೆ. ಹೆಣ್ಣಿನ, ಗಂಡಿನ ಕಡೆಯವರಲ್ಲಿ ಬಹಳ ಹತ್ತಿರದ ಸಂಬಂಧಿಕರಿಗೆ ಮಾತ್ರ ಆಶ್ರಯ ನೀಡಲಾಗುತ್ತಿದೆ. ಕುಟುಂಬ ಸಾಮಾಜಿಕ ವ್ಯವಸ್ಥೆಯ ಕೇಂದ್ರಬಿಂದು. ಈ ಸಾಮಾಜಿಕ ವ್ಯವಸ್ಥೆಯು ಕುಟುಂಬ ವ್ಯವಸ್ಥೆಯ ಮೇಲೆ ನಿಂತಿದೆ. ಕುಟುಂಬ ಒಂದು ಸಾಮಾಜಿಕ ಸಂಸ್ಥೆ. ನಗರೀಕರಣ, ಜಾಗತೀಕರಣ, ಆಧುನೀಕರಣದ ಪ್ರಭಾವ ಪರಿವರ್ತನೆಯ ದಾಳಿಯನ್ನು ಎದುರಿಸಿಯೂ ತಮ್ಮ ಅಸ್ತಿತ್ವವನ್ನು ಕಾಯ್ದುಕೊಂಡಿರುವ ಸಂಸ್ಥೆ. ಇದು ಎಷ್ಟು ಸಾರ್ವತ್ರಿಕವಾಗಿವೆಯೋ ಅಷ್ಟೇ ಸದೃಢವಾಗಿ ಮುಂದುವರಿದಿದೆ.

ಕುಟುಂಬವೇ ಭಾರತೀಯರ ಸಮಸ್ತ ಚಟುವಟಿಕೆಗಳ ಕೇಂದ್ರಸ್ಥಾನ. ಕುಟುಂಬದ ಸಂರಚನೆಯಲ್ಲಿ ಹಾಗೂ ಕಾರ್ಯಗಳಲ್ಲಿ ಬಹಳಷ್ಟು ಬದಲಾವಣೆಗಳೂ ಆಗಿವೆ. ಕುಟುಂಬದ ರೂಪ–ಸ್ವರೂಪಗಳು ಒಂದೇ ರೀತಿಯಲ್ಲಿರುವುದಿಲ್ಲ. ಕುಟುಂಬದ ಗಾತ್ರ ಅಥವಾ ಸಂರಚನಾ ಸ್ವರೂಪ ಹಾಗೂ ಅದರಲ್ಲಿ ವಾಸಿಸುವ ಪೀಳಿಗೆಗಳ ಸಂಖ್ಯೆ, ಸದಸ್ಯರ ಸಂಖ್ಯೆ ಇವುಗಳನ್ನು ಆಧರಿಸಿ ಕುಟುಂಬವನ್ನು ಸಾಮಾನ್ಯವಾಗಿ ಪಿತೃ, ಮಾತೃ, ಅವಿಭಕ್ತ, ವಿಭಕ್ತ ಕುಟುಂಬ[೧೯] ಎಂದು ವರ್ಗೀಕರಿಸಲಾಗಿದೆ. ಹೀಗೆ ವಿಭಿನ್ನ ಆಯಾಮದ ಚೌಕಟ್ಟಿನೊಳಗೆ ಸ್ತ್ರೀಯನ್ನು ಬಂಧಿಸಿಡಲಾಗಿತ್ತು. ಸಂಸಾರದ ಹೊಣೆಗಾರಿಕೆ,

ಅಡಿಗೆ ಮನೆಯೇ ಅವಳ ಕಾರ್ಯಕ್ಷೇತ್ರವನ್ನಾಗಿ ಮಾಡಿ ಅದರಲ್ಲಿಯೇ ಆಕೆ ಸ್ವರ್ಗ ಸುಖವನ್ನೂ, ನರಕಯಾತನೆಯನ್ನೂ ಒಟ್ಟೊಟ್ಟಿಗೆ ಅನುಭವಿಸಬೇಕಾಗಿತ್ತು. ಹೀಗೆ ಭಾರತದ ಇತಿಹಾಸವು ಸ್ತ್ರೀಯರನ್ನು ಚರಿತ್ರೆಯ ಉದ್ದಕ್ಕೂ ಶೋಷಣೆ ಮಾಡಿಕೊಂಡೆ ಬಂದಿದೆ[೨೦].

ಹೆಣ್ಣು ಮಗಳಾಗಿ, ಹೆಂಡತಿಯಾಗಿ, ಸ್ನೇಹಿತೆಯಾಗಿ, ತಾಯಿಯಾಗಿದ್ದರೂ ಪುರುಷ ಮಾತ್ರ ಆಕೆಯನ್ನು ಹಾಸಿಗೆಯಲ್ಲಿ ಪಾಲ್ಗೊಳ್ಳುವ ಮತ್ತು ಸಂತಾನಾಭಿವೃದ್ಧಿಗಾಗಿ ಮಕ್ಕಳನ್ನು ಹೆರುವ ಯಂತ್ರವಾಗಿ ನೋಡಿದ್ದಾನೆ. ಅಲ್ಲದೆ ಅವಳಿಗೆ ಅವಳದೆ ಆದ ಬದುಕಿದೆ, ಅಸ್ತಿತ್ವವಿದೆ ಎಂಬುದನ್ನು ಪರಿಗಣಿಸಿರಲಿಲ್ಲ. ಮುಖ್ಯವಾಗಿ ಅವಳ ಕಾರ್ಯಕ್ಷೇತ್ರ ಕುಟುಂಬವಾಗಿತ್ತು. ಇಲ್ಲಿಯು ಸಂಪೂರ್ಣ ಸ್ವತಂತ್ರವಿರಲಿಲ್ಲ. ಕೇವಲ ಅಡಿಗೆ ಮನೆ ಮತ್ತು ಮಲಗುವ ಕೋಣೆ ಸೀಮಿತವಾಗಿತ್ತು. ಇದೊಂದು ರೀತಿಯ ಶೋಷಣೆ. ಹೀಗಾಗಿ ಭಾರತದ ಇತಿಹಾಸದಲ್ಲಿ ಅಲ್ಲಲ್ಲಿ ಸ್ತ್ರೀಯರ ಉಲ್ಲೇಖ ಬಿಟ್ಟರೆ ಉಳಿದಂತೆ ಇದು ಗಂಡಸರ ಇತಿಹಾಸ, ಆಡಳಿತಕಾರರು, ಗ್ರಂಥಕರ್ತರು, ಕವಿಗಳು, ಕಲಾವಿದರು, ವಿಜ್ಞಾನಿಗಳು ಎಲ್ಲರೂ ಪುರುಷರು[೨೧]. ಸ್ತ್ರೀಯರ ಸ್ವಾತಂತ್ರ್ಯ ಪುರುಷರ ಕೈಮುಷ್ಠಿಯಲ್ಲಿತ್ತು. ಅದಕ್ಕೆ ಧರ್ಮದ, ವ್ರತದ ಆಚಾರ–ವಿಚಾರದ, ನೀತಿ–ನಿಯಮ, ರೂಢಿ–ಸಂಪ್ರದಾಯದ ಚೌಕಟ್ಟುಗಳಲ್ಲಿ ಬಂಧಿಸಿಡಲಾಗಿತ್ತು. ಅದರಿಂದ ವಿಮುಕ್ತಿಗಾಗಿ ಕಾಯುತ್ತಿದ್ದವರಿಗೆ ಶಿವಶರಣೆಯರ ವಚನಗಳು ಸೋಪಾನವಾದವು.

"ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ? ಎಂದು ಗಜೇಶ ಮಸಣಯ್ಯನ ಪುಣ್ಯಸ್ತ್ರೀಯು ಪ್ರಶ್ನಿಸಿದ ರೀತಿ ಉಲ್ಲೇಖಾರ್ಹ. ಹೀಗೆ ಅಂಗ, ಲಿಂಗದ ಪ್ರಶ್ನೆಯನ್ನು ಹಾಕಿದಾಗ ಶರಣೆಯರು ಸ್ಪಷ್ಟವಾಗಿ ಖಂಡಿಸಿದ್ದು ಪರಸತಿ ಸಂಗವನ್ನೇ ಹೊರತು, ಗೃಹಸ್ಥ ಜೀವನವನ್ನಲ್ಲ. ಶರಣೆಯರು ಪತಿಯರೊಡನೆ ತೃಪ್ತ ಸಂಸಾರ ಮಾಡಿದವರೂ ಇದ್ದಾರೆ. ಸಂಸಾರ ಬಿಟ್ಟು ಆಧ್ಯಾತ್ಮದ ದೇವರನ್ನು ಹುಡುಕುತ್ತ ಬಂದವರೂ ಇದ್ದಾರೆ. ಹೀಗೆ ಸ್ವತಂತ್ರವಾಗಿ ಬದುಕಬಲ್ಲೆವು ಎಂಬ ಮನಸ್ಥಿತಿಯೇ ಸ್ತ್ರೀ ಪರ

ಆಲೋಚನೆಯ ಕುರುಹು ಎಂದು ನಾನು ಭಾವಿಸುತ್ತೇನೆ. ಸ್ತ್ರೀ ಪರ ಆಲೋಚನೆಗೆ ಕೈ ಹಾಕಿದವರಲ್ಲಿ ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮ, ಕದರಿ ಕಾಳವ್ವೆ, ಸೂಳೆ ಸಂಕವ್ವೆ, ಸತ್ಯಕ್ಕ, ಅಕ್ಕಮ್ಮ, ಕದಿರ ರೆಮ್ಮವ್ವೆ.., ಮೊದಲಾದವರನ್ನು ಗುರುತಿಸಹಬುದು. ಲಿಂಗಮ್ಮ ತನ್ನ ವಚನಗಳನ್ನು "ಮನವನ್ನು ಹದಗೊಳಿಸಲು

ದೇಹವನ್ನು ಶೋಷಿಸಬೇಕು" ಎನ್ನುವವರ ವಾದವನ್ನು ಈಕೆ ತಿರಸ್ಕರಿಸುತ್ತಾಳೆ. 'ಸಂದೇಹದಲ್ಲಿ ಮುಳುಗಿರುವ ಮನುಜರಿರಾ ನೀವು ಕೇಳಿರೊ ಹೇಳಿಹೆನು" ಎಂದು ಮನುಜಕುಲಕ್ಕೆ ಬುದ್ಧಿವಾದ ಹೇಳುವ ಸ್ಥಾನದಲ್ಲಿ ನಿಂತು ಮಾತಾಡುತ್ತಾಳೆ.

**(೨) ಸಾಮಾಜಿಕ ನೆಲೆ:**

ವಚನ ಚಳುವಳಿಯ ಸಂದರ್ಭದಲ್ಲಿ ಸಮಾಜದ ವಿವಿಧ ಸ್ತರಗಳಿಂದ ಬಂದ ಜನ ಇದರಲ್ಲಿ ಪಾಲುಗಾರರಾಗಿ, ಹಲವಾರು ವಿಷಯಗಳ ಬಗೆಗೆ ಸಮಷ್ಟಿ ಚಿಂತನೆ ನಡೆಸಿದರು. ಜಾತಿ, ವೃತ್ತಿ ಭೇದಗಳನ್ನು ತೊಡೆದುಹಾಕಿದರು. ಅನಂತ ಕಾಲದಿಂದ ಧಾರ್ಮಿಕ, ಸಾಮಾಜಿಕ ವ್ಯವಹಾರಗಳಿಂದ ದೂರ ಉಳಿದ, ಶೂದ್ರ ಸಮಾನಳೆಂದು ಪರಿಗಣಿಸಲ್ಪಟ್ಟ ಮಹಿಳೆಗೆ ಸಮಾಜದಲ್ಲಿ ಸಮಾನ ಅವಕಾಶ, ಗೌರವ ಸಲ್ಲುವಂತೆ ಮಾಡಿದರು.ಕುಟುಂಬವು ಸಮಾಜದ ಒಂದು ಭಾಗ. ಸಮಾಜವೆಂದರೆ 'ಸಾಮಾಜಿಕ ಸಂಬಂಧಗಳ ಬಲೆ' ಒಡನಾಡಿಗಳ ಒಡನಾಟದ ಕೂಟ, ರಕ್ತ ಸಂಬಂಧಿಗಳ, ರಕ್ತ ಸಂಬಂಧಿಗಳಲ್ಲದವರ, ಪರಿಚಯವಿರುವವರ, ಪರಿಚಯವಿಲ್ಲದವರ ನಡುವಿನ ಸಾಮರಸ್ಯದ ಒಂದು ನೆಲೆಯಾಗಿ ಸಾಮಾಜಿಕತೆ ಕಂಡು ಬರುತ್ತದೆ. ಇಲ್ಲಿ ಮೇಲು-ಕೀಳೆಂಬ, ಸ್ಪೃಶ್ಯ-ಅಸ್ಪೃಶ್ಯ, ಕನಿಷ್ಠ-ಉತ್ತಮಗಳೆಂಬ ಕಲ್ಪನೆಯನ್ನು ತೊಡೆದು ಹಾಕುವ ಪ್ರಯತ್ನವನ್ನು ವಚನಕಾರ್ತಿಯರು ಮಾಡಿದ್ದಾರೆ.

ಹೆಣ್ಣಿನ ನೈಸರ್ಗಿಕ ಕ್ರಿಯೆಯ ಋತುಚಕ್ರವನ್ನು ಅಪವಿತ್ರವೆಂದು ಕಲ್ಪಿಸಿ ಅವಳನ್ನು ವೈದಿಕ ಪರಂಪರೆಯಲ್ಲಿ ಶೂದ್ರರ ಸಾಲಿಗೆ ಸೇರಿಸಲಾಗಿತ್ತು[೨೨]. ಇವಳು ಇಲ್ಲಿಂದ ಬಂಧಮುಕ್ತವಾಗಬೇಕಿತ್ತು. ಹೆಣ್ಣನ್ನು ಮಾಯೆಯ ಸೆರೆಯಿಂದ ಮತ್ತು ಅಸ್ಪೃಶ್ಯತೆಯ ಸಂಕೋಲೆಯಿಂದ ಬಿಡಿಸಬೇಕಿತ್ತು. ಕೆಳವರ್ಗದವರಲ್ಲಿ ಅರಿವನ್ನು ಮೂಡಿಸುವ ಮತ್ತು ಧೈರ್ಯ ತುಂಬುವ ಕೆಲಸಗಳಾಗಬೇಕಿತ್ತು. ಮಡಿಯ ಮನೋಧರ್ಮವನ್ನು ನಿರ್ಭೀಡೆಯಿಂದ ತರಾಟೆಗೆ ತೆಗೆದುಕೊಳ್ಳಬೇಕಿತ್ತು. ಸಾಮಾನ್ಯ ಜನತೆಯಲ್ಲಿ ವೈಚಾರಿಕತೆಯನ್ನು ಬಿತ್ತಬೇಕಿತ್ತು. ದೇವರು ಧರ್ಮಗಳ ಗೊಂದಲಗಳನ್ನು ಪರಿಹರಿಸಿಕೊಳ್ಳುವ ಅರಿವು ವಚನಕಾರ್ತಿಯರ ವಚನಗಳಲ್ಲಿ ಸ್ಫುಟವಾಗಿ ಗೋಚರಿಸುತ್ತದೆ. ಹೀಗೆ ತಳಸ್ತರದ ಶರಣೆಯರು ಮಾಡಿದ ಮೊದಲ ಕೆಲಸವೆಂದರೆ ವರ್ಗ-ವರ್ಣಭೇದದ ಜೊತೆಗೆ ಲಿಂಗಭೇದವನ್ನು ತೊಡೆದು ಹಾಕಿ, ಸ್ತ್ರೀಯರ ಸಾಮಾಜಿಕ ಸಮಾನತೆಯನ್ನು ಸಾರಿದರು.

ಅಕ್ಕಮ್ಮ ತನ್ನ ವಚನಗಳಲ್ಲಿ ಶೀಲ, ವ್ರತ, ಆಚಾರ, ನೇಮಗಳನ್ನು ಮೂಲದ್ರವ್ಯವಾಗಿಸಿದ್ದಾಳೆ. ಜಾತಿ ವ್ಯವಸ್ಥೆಯ ಬಗ್ಗೆ ಇದ್ದ ಧೋರಣೆಯನ್ನು ವ್ಯಂಗ್ಯವಾಡುತ್ತ, ಸಾಮಾಜಿಕ ಸಮಾನತೆಗಾಗಿ ಹಾತೊರೆಯುತ್ತಾಳೆ. "ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು. ತಲೆಬೋಳಾದವರೆಲ್ಲ ಮುಂಡೆಯ ಮಕ್ಕಳು. ತಲೆ ಜಡೆಗಟ್ಟಿದವರೆಲ್ಲ ಹೊಲೆಯ ಸಂತಾನ. ಎಂದು ಜಾತಿಯ ಸೂಚ್ಯವಾಗಿ ಹೇಳಿದ್ದಾಳೆ. ಮತ್ತೆ ಕೆಲವು ಕಡೆ ಶೀಲದ ಪ್ರಾಮುಖ್ಯತೆಯನ್ನು ಒತ್ತಿ ಹೇಳುತ್ತಾಳೆ. ಅರವತ್ತು ನಾಲ್ಕು ಶೀಲದ ಪ್ರಸ್ತಾಪ ಮಾಡಿದ್ದಾಳೆ. ಲಿಂಗ ಮಜ್ಜನಕ್ಕೆ ಚಿಲುಮೆಯನ್ನು ತೋಡಿ ತಂದ ನೀರನ್ನು ಬಳಸುವುದು ಸಪ್ಪೆಯ ವ್ರತ, ಅಕ್ಕಿ ಬೇಳೆ ಬೆಲ್ಲ ಉಪ್ಪು ಮೆಣಸು ಅಡಕೆ ಫಲ ರಸದ್ರವ, ಹೆಣ್ಣು-ಹೊನ್ನು ಮಣ್ಣಿಗಾಗಿ ವ್ರತವೆಂಬ ನೇಮವ ಮಾಡಿಕೊಳ್ಳಬಹುದೇ? ಕೂಲಿಗೆ ಬಳಿನೀರ ಕುಡಿದಡೆ ಅದಾರ ಮುಟ್ಟುವುದು? ಹೊಳೆಯ ಹರುಗೋಲಲ್ಲಿಯೆ ಮೆಟ್ಟಡಿಯ ಮೆಟ್ಟಿಹನೆಂದು ಚರ್ಮಕ್ಕೆ ಕೊಟ್ಟ ತನ್ನ ಠಾವಿನಲ್ಲಿ ಕಚ್ಚಾಡಲೇತಕ್ಕೆ? ಆಗುಣ ವ್ರತ ನೇಮಿಗಳಿಗೆ ನಿಶ್ಚಯವೇ? ಎಲ್ಲಾ ಯೋನಿಗೆ ಕಡೆಯಪ್ಪ ಶ್ವಾನನಯೋನಿಯಲ್ಲಿ ಬಪ್ಪೆ ಈ ಗುಣ ತಪ್ಪದು. ಅಕ್ಕಮ್ಮನ ಈ ಬಗೆಗಿನ ಆಲೋಚನೆಯೇ ಅವಳ ಸಾಮಾಜಿಕ ಮನೋಭಾವಕ್ಕೆ ಹಿಡಿದ ಕನ್ನಡಿ. ಲಿಂಗಮ್ಮಳ ವಚನದಲ್ಲಿ "ಅಯ್ಯಾ ನರರೊಳು ಹುಟ್ಟಿ ಮರಹಿನೊಳಗೆ ಬಿದ್ದವಳ ತಂದ ಮಹಾಶರಣರು ಎನಗೆ ಕುರುಹ ತೋರಿದರು.." "ಅಯ್ಯಾ ನಾನು ಮರ್ತ್ಯದಲ್ಲಿ ಹುಟ್ಟಿ – ಕಷ್ಟಸಂಸಾರಿ ಎನಿಸಿಕೊಂಡೆ". ಎಂದು ವಚನದಲ್ಲಿ ಹೇಳಿಕೊಂಡಿದ್ದಾಳೆ. ಹಡಪದಪ್ಪಣ್ಣನ ಪುಣ್ಯಸ್ತ್ರೀಯಾದ ಈಕೆ ತಾನು ಮನುಷ್ಯ ಜಾತಿಯಲ್ಲಿ ಹುಟ್ಟಿದವಳೆಂದು ಹೇಳಿದ್ದಾಳೆ. ಅಲ್ಲದೆ ಸಮಾಜದಲ್ಲಿ ತಳಸ್ತರ ಎಂದು ಗುರುತಿಸಿರುವ ವ್ಯವಸ್ಥೆಯಲ್ಲಿ ಬೆಳೆದವಳಿಗೆ ಮಹಾಶರಣರು ಕುರುಹು ತೋರಿದರು. ವ್ಯವಸ್ಥೆಯಲ್ಲಿ ತಳಸ್ತರದವರು ಎಂದರೆ ಸಾಕ್ಷಾತ್ ಮರ್ತ್ಯದಲ್ಲಿ ಹುಟ್ಟಿ ಬಂದವರು. ಇವರುಗಳಿಗೆ ಕಷ್ಟ ಜೀವನ ತಪ್ಪಿದ್ದಲ್ಲ, ಅಸ್ಪೃಶ್ಯರು ಎನ್ನುವ ಸ್ಥಿತಿಯಿಂದ ಹೊರಬರುವ ಕುತೂಹಲ ಇದ್ದವಳಿಗೆ ಮಹಾಶರಣರ ದರ್ಶನದ ಕುರುಹು ಸಿಕ್ಕಿತ್ತು ಎನ್ನುತ್ತಾಳೆ.

ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ, ಸತ್ಯ ಶರಣರ ಪಾದವಿಡಿದೆ.., ಇಂತಿವರ ಕಂಡೆನ್ನ ಕಂಗಳ ಮುಂದಣಕತ್ತಲೆ ಹರಿಯಿತ್ತು; ಕಂಗಳ ಮುಂದಣ ಕತ್ತಲೆ ಹರಿಯಲೊಡನೆ, ಮಂಗಳದ ಮಹಾ ಬೆಳಗಿನೊಳಗೋಲಾಡಿ ಸುಖಿಯಾದೆನಯ್ಯ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ. ಈಕೆ ತಳಸ್ತರದಿಂದ ಬಂದ ಒಬ್ಬ ಶರಣೆಯಾಗಿದ್ದು ಮಹಾಮನೆಯ

ಮಾರ್ಗದರ್ಶನದಿಂದ. ಈಕೆ ಮನುಷ್ಯಳಾಗಿದ್ದು ಶರಣರಿಂದ. ಈಕೆಯ ವಚನಗಳು ಹರಿತವಾದ ನಾಲಿಗೆಗೆ ಒಳ್ಳೆಯ ಉದಾಹರಣೆ. ತಾನು ಸಾಮಾನ್ಯ ಜಾತಿಯಿಂದ ಬಂದವಳಾದರೂ ಬಸವಣ್ಣ, ಚೆನ್ನಬಸವಣ್ಣ ಮುಂತಾದವರಿಂದ ತಾನೊಬ್ಬಳು ಮನುಷ್ಯಳಾದೆ ಎಂದೂ ವಚನಗಳಲ್ಲಿ ಹೇಳಿಕೊಂಡಿದ್ದಾಳೆ. ಕಾಳವ್ವೆಯು ಉರಿಲಿಂಗಿ ಪೆದ್ದಿಗಳ ಪುಣ್ಯಸ್ತ್ರೀ. ಜಾತಿ ವ್ಯವಸ್ಥೆಯ ವಿರುದ್ಧ ದಿಟ್ಟತನದ ಪ್ರತಿರೋಧದ ಧ್ವನಿಯಾಗಿ ಈಕೆಯ ವಚನಗಳು ಕಂಡು ಬರುತ್ತವೆ. ಆಹಾರ ಪದ್ಧತಿಯ ಆಧಾರದ ಮೇಲೆ ಜಾತಿಗಳಲ್ಲಿ ಮೇಲು ಕೀಳಿನ ಭೇದಭಾವವನ್ನು ಹುಟ್ಟು ಹಾಕಿ, ಶಾಕಾಹಾರಿಗಳು ಶ್ರೇಷ್ಠರು, ಮಾಂಸಹಾರಿಗಳು ಕನಿಷ್ಠರು ಎಂಬ ಹುರುಳಿಲ್ಲದ ಧಾರ್ಮಿಕ ತತ್ವಗಳನ್ನು, ಜಾತಿಯ ಸೂತ್ರಗಳನ್ನು ಪ್ರಶ್ನಿಸುತ್ತಾಳೆ.

"ಕುರಿ, ಕೋಳಿ, ಕಿರಿಮೀನು ತಿಂಬುವವರಿಗೆಲ್ಲ ಕುಲಜ, ಕುಲಜರೆಂದೆಂಬರು. ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳು ಜಾತಿಯೆಂಬರು. ಅವರೆಂತು ಕೀಳು ಜಾತಿಯಾದರು? ಜಾತಿಗಳು ನೀವೇಕೆ ಕೀಳಾಗಿರೋ? ಈ ವಚನಗಳಲ್ಲಿ ಆಹಾರ ಪದ್ಧತಿಯ ಆಧಾರದ ಮೇಲೆ ಜಾತಿಯನ್ನು ಪರಿಗಣಿಸುವ ವ್ಯವಸ್ಥೆಯನ್ನು ಪ್ರಶ್ನಿಸುತ್ತಾಳೆ. ಮಾಂಸಹಾರಿಗಳಲ್ಲಿ ಕೆಲವರು ಶ್ರೇಷ್ಠರು ಮತ್ತೆ ಕೆಲವರು ಕನಿಷ್ಠವೇಕೆ? ಎಂದು ಮಾಂಸಹಾರಿಗಳಲ್ಲಿ ಕುರಿ, ಕೋಳಿ, ಮೀನು ತಿನ್ನುವವರಿಗೆ ಕುಲಜ ಎನ್ನುವ ನಿಮ್ಮ ನಿಲುವು ಪಶುವಿನ ಮಾಂಸವನ್ನು ತಿನ್ನುವ ಮಾದಿಗನಿಗೆ ಕೀಳು ಜಾತಿ ಎನ್ನುವುದು ಸರಿಯೇ? ಜಾತಿಯ ವಿಷ ಬೀಜವ ಬಿತ್ತುವ ನೀವು ಏಕೆ ಕೀಳಾಗಿಲ್ಲ. ಅವರುಗಳು (ಕೆಳವರ್ಗದವರು) ಕೀಳಲ್ಲ! ಕೀಳು ಎನ್ನುವ ನೀವುಗಳು ಕೀಳು ಎಂದು ಪ್ರಶ್ನಿಸಿ ವಿಡಂಬಿಸುತ್ತಾಳೆ. ಕುಲ-ಕುಲವೆಂದು ಹೊಡೆದಾಡುವರನ್ನು ಕಂಡು ಕುಲದ ನೆಲೆಯ ನೀವು ಬಲ್ಲಿರಾ ಎನ್ನುವ ದಾಸರ ಮಾತನ್ನು ನಮಗೆ ನೆನಪಿಗೆ ತರುತ್ತದೆ. ಹೀಗಾಗಿ ಇಹದಲ್ಲಿ ಜಾತಿಗಿಂತ ನೀತಿ ಮುಖ್ಯ. ಸಮಾನತೆಯ ಬದುಕು ಮುಖ್ಯ. ಅಲ್ಲದೆ ಕೀಳಿನ ಭಾವನೆ ಶುದ್ಧ ಅವೈಜ್ಞಾನಿಕವಾದುದು ಎಂದು ಮಾರ್ಮಿಕವಾಗಿ ನುಡಿಯುತ್ತಾಳೆ. ಸ್ತ್ರೀಯರಿಗೆ ಧರ್ಮದ, ವ್ರತದ, ಆಚಾರದ, ಸಂಪ್ರದಾಯದ ನೀತಿ ನಿಯಮಗಳ ಚೌಕಟ್ಟನ್ನು ಹಾಕಿ ಬಂಧಿಸಿಡಲಾಗಿತ್ತು. ಅದರಿಂದ ವಿಮುಕ್ತಿಗಾಗಿ ಕಾಯುತ್ತಿದ್ದವರಿಗೆ ಶರಣೆಯರ ವಚನಗಳು ಸೋಪಾನವಾದವು.

## (೩) ಗಂಡು–ಹೆಣ್ಣಿನ ಕಲ್ಪನೆ:

ವಚನ ಚಳುವಳಿಯ ಪರಿಣಾಮವಾಗಿ ಮಹಿಳೆಯಲ್ಲಿ ಜಾಗೃತಿ ಉಂಟಾಯಿತು. ಇಂತಹ ಜಾಗೃತಿಯ ಕುರುಹನ್ನು ಆ ಕಾಲದ ಶಿವಶರಣೆಯರಲ್ಲಿ ನಿಚ್ಚಳವಾಗಿ ಗುರುತಿಸಬಹುದು. ದೀರ್ಘಕಾಲದ ನಂತರ ವಾಕ್‌ಸ್ವಾತಂತ್ರ್ಯವನ್ನು ಪಡೆದ ಅವರು ಸ್ತ್ರೀ–ಪುರುಷ ಸಮಾನಳೆಂಬ ವಾದವನ್ನು ಎತ್ತಿಹಿಡಿದರು. ಕೆಲವರು ಅದನ್ನು ವಾಚ್ಯವಾಗಿ ಹೇಳಿಯೂಬಿಟ್ಟರು.

ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ
ಅದು ಜಗದ ಹಾಹೆ ಬಲ್ಲವರ ನೀತಿಯಲ್ಲ

ಎಂದಳು ಸತ್ಯಕ್ಕ. "ಮೊಲೆ ಮುಡಿ ಬಂದರೆ ಹೆಣ್ಣೆಂಬರು" ಎಂದು ಹೇಳಿದ ಗೊಗ್ಗವ್ವೆಯು ದೇವರ ದಾಸಿಮಯ್ಯನವರ ವಚನಗಳನ್ನು ಅಲ್ಪ ವ್ಯತ್ಯಾಸದೊಂದಿಗೆ ಮತ್ತೊಮ್ಮೆ ಬದಲಿಸಿ ಹೇಳಿದ್ದಾಳೆ. ಸಾಮಾಜಿಕವಾಗಿ ಹತ್ತಿಕ್ಕಲ್ಪಟ್ಟ ಅಂದಿನ ಸಂಕೀರ್ಣ ಸ್ಥಿತಿಯಲ್ಲಿ ಸ್ತ್ರೀ ಸಮಾನತೆಯನ್ನು ಕುರಿತು ಮಾತನಾಡಿದುದು ಅವರ ದಿಟ್ಟ ಕ್ರಮವೆಂದೇ ಹೇಳಬೇಕು.

ಶರಣೆಯರು ಪರಂಪರಾನುಗತವಾಗಿ ಬಂದ ಸಾಮಾಜಿಕ ಸಂಪ್ರದಾಯಗಳನ್ನು ಮುರಿದು, ವ್ಯಕ್ತಿ ಸ್ವಾತಂತ್ರ್ಯದಂತಹ ಮೌಲ್ಯವನ್ನು ಬದುಕಿ ತೋರಿದರು. ಶ್ರೇಷ್ಠ ಶರಣೆ ಅಕ್ಕಮಹಾದೇವಿಯ ಜೀವನವೇ ಇದಕ್ಕೊಂದು ಜ್ವಲಂತ ನಿದರ್ಶನ. ಕೂಟಕ್ಕೆ ಸತಿ–ಪತಿಯೆಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ? ಎಂದು ಆಯ್ದಕ್ಕಿ ಲಕ್ಕಮ್ಮ ಹೇಳುತ್ತಾಳೆ.

"ನಿಮ್ಮ ಭಕ್ತಿ ಸೂತ್ರದಿಂದ ಎನ್ನ ಸ್ತ್ರೀ ಜಾತಿ ನಿಮ್ಮ ಶ್ರೀಪಾದದಲ್ಲಿ ಅಡಗಿತ್ತು. ಎನಗೆ ಭಿನ್ನದ ಮಾತಿಲ್ಲ" – ಎಂದು ಮೋಳಿಗೆಯ ಮಹಾದೇವಿ ಹೇಳಿದಳು. ಭಕ್ತಿ, ಜ್ಞಾನ, ಆಧ್ಯಾತ್ಮ ಮುಂತಾದ ವಿಷಯಗಳ ಬಗೆಗೆ ಸ್ತ್ರೀ ಪುರುಷರೆಂಬ ಭೇದ ಅರ್ಥಹೀನ ಎಂದರು. ಅಣ್ಣ ಅಜಗಣ್ಣನ ಅವಸಾನವಾದಾಗ ವ್ಯಥಿತಳಾದ ಮುಕ್ತಾಯಕ್ಕ ತನ್ನನ್ನು ಸಂತೈಸಲು ಬಂದ ಶೂನ್ಯ ಸಿಂಹಾಸಾಧಿಪತಿ ಅಲ್ಲಮಪ್ರಭು ಅವಾಕ್ಕಾಗುವಂತೆ ಕೇಳಿದ ಪ್ರಶ್ನೆಗಳು ಅನುಭವ ಮಂಟಪದ ಶರಣರೆದುರಿಗೆ ತನ್ನನ್ನು ಒರೆಗಲ್ಲಿಗೆ ಹಚ್ಚಿದಾಗ ಮಹಾದೇವಿಯಕ್ಕ ಅಲ್ಲಮನಿಗೆ ನೀಡಿದ ಉತ್ತರಗಳು ಯಾವುದೆ ವಿಷಯದಲ್ಲಾಗಲಿ ಸ್ತ್ರೀಯು ಪುರುಷನನ್ನು ಮೀರಬಲ್ಲಳು; ಅಂತಹ ಅದ್ಭುತ

ಶಕ್ತಿ, ಧೈರ್ಯ, ಆತ್ಮ ಪ್ರತ್ಯಯಗಳು ಆಕೆಯಲ್ಲಿವೆ ಎಂಬುದನ್ನು ಧ್ವನಿಸುತ್ತವೆ. ಅಂತೆಯೆ ಕೊನೆಗೆ "ಮಹಾದೇವಿಯಕ್ಕಂಗಳ ನಿಲುವಿಂಗೆ ನಮೋ ನಮೋ[೨೩] ಎಂದು ಪ್ರಭುದೇವ ಹೇಳಬೇಕಾಯ್ತು. ಹೀಗೆ ಸ್ತ್ರೀ ಪುರುಷ ಸಮಾನಳು ಎಂದು ಘೋಷಿಸಿ, ಮುಂದಿನ ಮಹಿಳಾ ಪ್ರಪಂಚಕ್ಕೆ ದಾರಿ ದೀಪವಾದರು. ಸ್ತ್ರೀಯರ ಬಗ್ಗೆ ಸಮಾಜದಲ್ಲಿ ಎರಡು ಪ್ರಮುಖ ಅಭಿಪ್ರಾಯಗಳಿವೆ. ಸ್ತ್ರೀಯರು ಪುರುಷರಿಗೆ ಎಲ್ಲಾ ದೃಷ್ಟಿಯಿಂದಲೂ ಸಮಾನರು ಮತ್ತು ಸಮಾನ ಗೌರವಗಳಿಗೆ ಪಾತ್ರರು ಎಂಬುದು ಒಂದು ನೆಲೆ. ಸ್ತ್ರೀಯರಿಗೆ ಕೆಳ ದರ್ಜೆಯ ಸ್ಥಾನ ನೀಡಲಾಗಿತ್ತು. ಅಲ್ಲದೆ ಅವರ ಬಗ್ಗೆ ಅನಾದರ, ಅಸಡ್ಡೆ, ಹಾಗೂ ತಿರಸ್ಕಾರ ಇದ್ದಿದರಿಂದಲೇ ವ್ರತ, ಧರ್ಮ, ಆಚರಣೆಗಳೆಂಬ ಚೌಕಟ್ಟಿನೊಳಗೆ ಬಂಧಿಸಿಡಲಾಗಿದೆ ಎಂಬುದು ಮತ್ತೊಂದು ವಾದ. ಈ ವಾದಗಳನ್ನು ಆಧಾರವಾಗಿಟ್ಟುಕೊಂಡು ತಳಸ್ತರದ ವಚನಾಕಾರ್ತಿಯರ ವಚನಗಳನ್ನು ಗಂಡು–ಹೆಣ್ಣಿನ ಕಲ್ಪನೆಯ ನೆಲೆಯಲ್ಲಿ ವಿವರಿಸುವ ಪ್ರಯತ್ನ ಮಾಡಿದ್ದೇನೆ.

ಈ ಹಿಂದೆ ಸ್ತ್ರೀಯನ್ನು ಭೋಗದ ವಸ್ತುವಾಗಿ, ಸಂತಾನೋತ್ಪತ್ತಿಯ ಜೀವಿಯಾಗಿ, ಸುಖದ ಸಾಧನವಾಗಿಸಿಕೊಂಡಿದ್ದರು. ಪುರುಷ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಮನುಷ್ಯತ್ವವುಳ್ಳವಳಾಗಿ, ಮನುಷ್ಯಳನ್ನಾಗಿ, ಆತ್ಮವುಳ್ಳ ಅರಿವಿನ ಜೀವಿಗಳಾಗಿ ಗೌರವಿಸಿದವರು ಶರಣರು. ಸ್ತ್ರೀ ಪರವಾದ ಶರಣರ ವಚನಗಳ ಮತ್ತು ಶರಣೆಯರ ವಚನಗಳ ಧೋರಣೆಗಳಿಂದಾಗಿ ಸ್ತ್ರೀ ಸಂಬಂಧಿತ ಅಮಾನವೀಯ ಆಲೋಚನ ಕ್ರಮದಲ್ಲಿ ಪರಿವರ್ತನೆ ಸಾಧ್ಯವಾಯಿತು. ಇದರಿಂದ ಸಾಮಾಜಿಕ, ಧಾರ್ಮಿಕ ಪ್ರವೇಶವನ್ನು ನಿರ್ಬಂಧಿಸಿದ್ದ ಕಟ್ಟುಪಾಡುಗಳು ಬಿಗಿಯನ್ನು ಕಳೆದುಕೊಂಡವು. ಹೆಣ್ಣಿನ ಜನನ ಮತ್ತು ದೇಹ ರಚನೆಯ ನೆಲೆಯಲ್ಲಿ ಮಹಿಳೆಯ ಅಸ್ತಿತ್ವವನ್ನು ಶೂದ್ರನೆಲೆಗೆ ತಳ್ಳಲು ಕಾರಣವಾಗಿದ್ದ ಭಾವಸೂತಕಗಳು ನಿಧಾನಕ್ಕೆ ಕರಗಲಾರಂಭಿಸಿದವು. ಈ ಕಾರಣಗಳಿಗಾಗಿ ಸಮಾಜದ ವಿಭಿನ್ನ ಸ್ತರದ ಮಹಿಳೆಯರು ಶರಣಧರ್ಮದ ಅನುಯಾಯಿಗಳಾದರು ಜೊತೆಗೆ ಸಮಾನ ಮನ್ನಣೆ ಪಡೆದರು.

ಸತ್ಯಕ್ಕನ ವಚನದಲ್ಲಿ ಗಂಡು–ಹೆಣ್ಣಿನ ಕಲ್ಪನೆ "ಮೊಲೆ ಮುಡಿ ಇದ್ದುದೇ ಹೆಣ್ಣೆಂದು ಪ್ರಮಾಣಿಸಲಿಲ್ಲ. ಕಾಸೆ ಮೀಸೆ ಕಠಾರಿ ಇದ್ದುದೇ ಗಂಡೆಂದು ಪ್ರಮಾಣಿಸಲಿಲ್ಲ ಅದು ಜಗದ ಹಾಹೆ; ಬಲ್ಲವರ ನೀತಿಯಲ್ಲ. ಏತರ ಹಣ್ಣಾದರೂ ಮಧುರವೇ ಕಾರಣ. ಅಂದವಲ್ಲದ ಕುಸುಮಕ್ಕೆ ವಾಸನೆಯೇ ಕಾರಣ. ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ" ಈ ವಚನದಲ್ಲಿ

ಗಂಡು ಶ್ರೇಷ್ಠ, ಹೆಣ್ಣು ಕನಿಷ್ಠ ಎಂಬ ಕಲ್ಪನೆಯನ್ನು, ಲಿಂಗ ತಾರತಮ್ಯದ ನೆಲೆಯಲ್ಲಿ ಖಂಡಿಸಲಾಗಿದೆ[೨೪]. ಗಂಡು–ಹೆಣ್ಣಿನ ನಡುವೆ ಇರುವ ಆತ್ಮ ನಿಷ್ಠೆ, ಅನನ್ಯತೆಯ ಪ್ರಜ್ಞೆಯನ್ನು ಜಾಗೃತಗೊಳಿಸುವ ಪ್ರಯತ್ನ ಈ ವಚನದಲ್ಲಿ ಮಾಡಲಾಗಿದೆ. ಯಾವ ಬಗೆಯ ಹಣ್ಣಾದರೂ ಅದರ ರುಚಿಯು (ಮಧುರ) ಪ್ರಮುಖವಾಗುತ್ತದೆ. ಯಾವ ಬಗೆಯ ಹೂ (ಕುಸುಮ)ವಾದರೂ ಇದರ ಪರಿಮಳ(ವಾಸನೆ)ವೇ ಪ್ರಮುಖವಾಗುತ್ತದೆ. ಹಾಗೆಯೇ ಮನುಷ್ಯನಲ್ಲಿರುವ ಆತ್ಮಕ್ಕೆ ಹೆಣ್ಣು–ಗಂಡಿನ ಸ್ವರೂಪವಿಲ್ಲ. ಆತ್ಮ ಆತ್ಮವೇ, ಆತ್ಮದ ಅಸ್ತಿತ್ವ, ಅನನ್ಯತೆಯನ್ನು ಬಲ್ಲವನೇ ಬಲ್ಲ ಎಂಬ ನೆಲೆಯ ಚಿಂತನೆಯಿಂದ ಸೃಷ್ಟಿಯ ಮೂಲ ಹೆಣ್ಣು, ಅವಳ ವ್ಯಕ್ತಿತ್ವವನ್ನು, ಸ್ವರೂಪವನ್ನು ಕೇವಲ ದೇಹದ ರಚನೆಯಿಂದ ಗುರುತಿಸುವುದಲ್ಲ, ಅದರ ಜೊತೆಗೆ ಅವಳ ಬೌದ್ಧಿಕತೆ, ಆರ್ಥಿಕತೆ, ಸಾಮಾಜಿಕತೆ, ಧಾರ್ಮಿಕತೆಯ ನೆಲೆಯಲ್ಲಿಯು ಗ್ರಹಿಸಬೇಕು. ಹೆಣ್ಣು ಕೂಡ ಕಾಯಕ, ಕರ್ಮ ಜೀವಿಯಾಗಿದ್ದಳು. ಆದರೆ ಅದನ್ನು ಮರೆಮಾಚಿರುವ ನೀತಿಯು ಬಲ್ಲವರ ನೀತಿಯಲ್ಲ, ಅದು ಜಗತ್ತು ಹೀಗೆ ಇರಬೇಕು ಎಂದು ಕೊಂಡಾಡುವರ ನೀತಿ. ಈ ನೀತಿಯನ್ನು ತಿರಸ್ಕರಿಸಿ, ಗಂಡು ಹೆಣ್ಣಿನ ಸೃಷ್ಟಿಯ ಮೂಲದಲ್ಲಿ ಇಲ್ಲಿ ಯಾರೂ ಶ್ರೇಷ್ಠರಲ್ಲ, ಯಾರು ಕನಿಷ್ಠರಲ್ಲ, ಸರ್ವರು ಸಮಾನರು. ಗಂಡು ಹೆಣ್ಣಿನ ಸಂಬಂಧ ಹಣ್ಣಿನ ಮಧುರ, ಕುಸುಮದ ಪರಿಮಳದಂತೆ ಎಂದು ಸಾರಿದ್ದಾಳೆ.

ಗಜೇಶ ಮಸಣಯ್ಯನ ಹೆಂಡತಿಯ ಒಂದು ವಚನ. "ಹೊನ್ನ ಬಿಟ್ಟು ಲಿಂಗವನೊಲಿಸಬೇಕೆಂಬರು. ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?
ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು. ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ?"[೨೫] ಎಂದು ಈ ವಚನದಲ್ಲಿ ಸ್ತ್ರೀ ಪರವಾದ ನಿಲುವನ್ನು ತಾಳುತ್ತಾಳೆ. ಈ ವಚನದಲ್ಲಿ ಸ್ತ್ರೀ ಕೇವಲ 'ಆತ್ಮ'ವಾಗಿ ಕಂಡದ್ದು ಬಹಳ ಸಹಜವಾಗಿದೆ. ಆದರೆ 'ಸನ್ಯಾಸತ್ವ' ಎಂಬ ಪರಿಕಲ್ಪನೆಯು ಪುರುಷ ಭೂವೀಷ್ಠವಾದ ಪೀಠ. ಅಲ್ಲಿ ಪುರುಷನಿಗೆ ಮಾತ್ರ ಅವಕಾಶ, ಸ್ತ್ರೀಗೆ ನಿರಾಕರಣೆ ಇತ್ತು ಏಕೆಂದರೆ ಸ್ತ್ರೀಯು ಮಾಯೆಯ ಸಂಕೇತವಾಗಿದ್ದಳು. ಹೀಗಾಗಿ ಈ ವಚನದಲ್ಲಿ ಗಂಡಸ್ಸಿನ ಸನ್ಯಾಸತ್ವವನ್ನು ಮಾತ್ರ ತಿರಸ್ಕರಿಸಿ, ಗಂಡಿಗೆ ಸನ್ಯಾಸತ್ವ ಎಂಬ ಅನಗತ್ಯ ಮಹತ್ವವನ್ನು ಒಡೆಯುತ್ತಾಳೆ.

ಗಂಡು–ಹೆಣ್ಣಿನ ವ್ಯತ್ಯಾಸ ದೈಹಿಕವಾಗಿ ಮಾತ್ರ ಬೇರೆ–ಬೇರೆ. ಆದರೆ ಬೌದ್ಧಿಕವಾಗಿ ಇಬ್ಬರೂ ಒಂದೇ, ಹೆಣ್ಣು, ಹೊನ್ನು ಮತ್ತು ಲಿಂಗ, ಇಂದ್ರಿಯ

ಜಗತ್ತುಗಳನ್ನು ಬಿಟ್ಟು ಲಿಂಗವನ್ನು ಒಲಿಸಬೇಕೆಂದು ಹೇಳುವುದು ಮೂರ್ಖತನ, ಲಿಂಗವೇ ಆತ್ಮವಾದಾಗ ಹೆಣ್ಣನ್ನು ಹೆಣ್ಣಾಗಿ ಕಾಣು ಇಲ್ಲವೇ ಹೆಣ್ಣಿಗೂ ಒಂದು ಆತ್ಮವಿರುವುದು ನಿನಗೆ ತಿಳಿದಿರಲೆಂದು ವಾದಿಸುತ್ತಾಳೆ. ಹೀಗಾಗಿ ಭಿನ್ನತೆ ಇನ್ನೂ ಎಲ್ಲಿಯದು ಎಂದು ಪ್ರಶ್ನಿಸುತ್ತಾಳೆ. ಇದಕ್ಕೆ ಅತೀ ಸರಳ ಪರಿಹಾರ ಹೆಣ್ಣನ್ನು ಕೀಳಾಗಿ ಕಂಡರೆ ಅದು ಪ್ರಕೃತಿಯ ನಿಯಮಕ್ಕೆ ವಿರುದ್ಧವೆಂದು ಮನವರಿಕೆಯನ್ನು ಮಾಡುತ್ತಾಳೆ. ಈ ವಚನಕಾರ್ತಿ ಸ್ಪಷ್ಟವಾಗಿ ಖಂಡಿಸಿದ್ದು ಗಂಡಸನ್ನಲ್ಲ, ಗಂಡಸು ಎನ್ನುವವನಿಗೆ ಹಾಕಿಕೊಂಡ ಗಂಡಸ್ಸಿನ ಅಹಂ ಚೌಕಟ್ಟನ್ನೂ, ಗೃಹಸ್ಥನಾದ ಗಂಡಸಿನಿಂದ ಹೇರಲ್ಪಟ್ಟ ವ್ರತವನ್ನು, ಆಚಾರಣೆಯನ್ನೂ, ಹೆಂಡತಿಯನ್ನು ಗೌರವಿಸದ ಗಂಡಸ್ಸನ್ನು ತಿರಸ್ಕರಿಸುತ್ತಾಳೆ.ಹೀಗಾಗಿ ಪೂಜಿಸಲಿಲ್ಲ ಸಹಬಾಳ್ವೆ ಮಾಡಿದಳು ಅಷ್ಟೆ! ಭಾರತದ ಸಾಂಸ್ಕೃತಿಕ ಇತಿಹಾಸದಲ್ಲಿ ಅಥವಾ ಬೌದ್ಧಿಕ ಇತಿಹಾಸದಲ್ಲಿ ಸ್ತ್ರೀಯು ಯಾವ ಪಾತ್ರವನ್ನು ನಿರ್ವಹಿಸುತ್ತಿದ್ದಳೋ ಅದನ್ನು ಮರೆಮಾಚಲಾಗಿತ್ತು. ಅದನ್ನು ಹೊರತರುವ ಪ್ರಯತ್ನ ವಚನಕಾರ್ತಿಯರು ಮಾಡಿದ್ದಾರೆ.[೨೬]

ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮನ ಒಂದು ವಚನದಲ್ಲಿ "ಏನೇನು ಇಲ್ಲದಾಗ ನೀವಿಲ್ಲದಿದ್ದಡೆ ನಾನಾಗಬಲ್ಲೆ ಅಯ್ಯಾ? ಆದಿ ಅನಾದಿ ಇಲ್ಲದಂದು ನೀವಿಲ್ಲದಿದ್ದಡೆ ನಾನಾಗಬಲ್ಲನೆ ಅಯ್ಯಾ? ಮುಳುಗಿ ಹೋದವಳ ತೆಗೆದುಕೊಂಡು. ನಿಮ್ಮ ತೊತ್ತಿನ ಪಡಿದೊತ್ತಿನ ಮಗಳೆಂದು. ರಕ್ಷಣೆಯ ಮಾಡಿದ ಶಿಶುವಾದ ಕಾರಣ. ಹಡಪದಪ್ಪಣ್ಣನೆ ಎನ್ನ ಕರಸ್ಥಲಕ್ಕೆ ಲಿಂಗವಾಗಿ ಬಂದು ನೆಲೆಗೊಂಡನು". ಅಯ್ಯಾ ನರರೊಳು ಹುಟ್ಟಿ ಮರಹಿನೊಳಗೆ ಬಿದ್ದವಳ ತಂದು ಮಹಾಶರಣರು ಎನಗೆ ಕುರುಹ ತೋರಿದರು. ಅಯ್ಯಾ ನಾನು ಮರ್ತ್ಯದಲ್ಲಿ ಹುಟ್ಟಿ ಕಷ್ಟ ಸಂಸಾರಿ ಎನಿಸಿಕೊಂಡೆ ಎಂಬಲ್ಲಿ ಗಣಗಳ ಬಗೆಗಿನ ಭಕ್ತಿಯನ್ನು ತೋರಿದ್ದಾಳೆ.

ಪುರುಷನ ಅನುಪಸ್ಥಿತಿಯಲ್ಲಿ ಸ್ತ್ರೀಯು ಪುರುಷನಾಗಬಲ್ಲಳೆ? ಸೃಷ್ಟಿ ಲಯವಿಲ್ಲದಿದ್ದಾಗ ನಾನೇ (ಸ್ತ್ರೀ) ಸೃಷ್ಟಿ – ಲಯ ಆಗಬಹುದೆ? ಹೆಣ್ಣಾಗಿ ಹುಟ್ಟಿ, ಕೀಳೆಂಬ ಭಾವನೆಯಲ್ಲಿ ಮುಳುಗಿದವಳನ್ನು ಮಗಳಾಗಿ ಸ್ವೀಕರಿಸಿ, ರಕ್ಷಣೆ ನೀಡುವ, ಶಿವಲಿಂಗವಾಗಿ ಹಡಪದಪ್ಪಣ್ಣನೆ ತನ್ನ ಕರಸ್ಥಲದಲ್ಲಿ ಬಂದು ನೆಲೆಸಿದನೆಂದು ಸಾರಿದಳು. ಇದು ಅವಳ ವಚನದ ಆಶಯವಿರಬಹುದು. ಗಂಡನನ್ನು ದೈವವಾಗಿಸಿ ಆತನನ್ನು ತನ್ನ ಕೈಯಲ್ಲಿನ ಲಿಂಗವಾಗಿಸಿದ ರೀತಿ,

ಗಂಡನೇ ಅವಳ ಕರಸ್ಥಲದಲ್ಲಿ ಬಂದು ನೆಲೆಗೊಳ್ಳುವ ಬಗೆ ವಿಶಿಷ್ಟವಾದುದು. ಆ ಮೂಲಕ ಸ್ತ್ರೀಯರ ರಕ್ಷಣೆ ಪುರುಷನಿಂದ ಕರಸ್ಥಲ ಲಿಂಗಕ್ಕೆ ವರ್ಗವಾಗುತ್ತದೆ.

ಗೊಗ್ಗವೆಯ ಒಂದು ವಚನದಲ್ಲಿ "ಮೊಲೆ ಮುಡಿ ಬಂದಡೆ ಹೆಣ್ಣೆಂಬರು. ಮೀಸೆ ಕಾಸೆ ಬಂದಡೆ ಗಂಡೆಂಬರು. ಈ ಉಭಯದ ಜ್ಞಾನ ಹೆಣ್ಣೋ ಗಂಡೋ ನಾಸ್ತಿನಾಥಾ? ಇಂತಹದ್ದೆ ಗಂಡು–ಹೆಣ್ಣಿನ ಕಲ್ಪನೆಯ ವಚನಗಳನ್ನು ದಾಸಿಮಯ್ಯ, ಅಂಬಿಗರ ಚೌಡಯ್ಯ, ಅಲ್ಲಮ, ಬಸವಣ್ಣ ಮತ್ತು ಸತ್ಯಕ್ಕರಲ್ಲೂ ಗುರುತಿಸಬಹುದು. ಇಲ್ಲಿ ಗೊಗ್ಗವೆ ಆತ್ಮನಿಷ್ಠೆಯ ಪ್ರಶ್ನೆಯನ್ನು ಜ್ಞಾನಕ್ಕೆ ವರ್ಗಾಯಿಸುತ್ತಾಳೆ. ಗಂಡು–ಹೆಣ್ಣುಗಳಲ್ಲಿ ಜ್ಞಾನ ದೈವಸ್ವರೂಪವಾದುದು. ಈ ಜ್ಞಾನವನ್ನು ಹೆಣ್ಣು–ಗಂಡು ಎಂದು ವಿಭಾಗಿಸಲು ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಗಂಡು–ಹೆಣ್ಣಿನ ನಡುವೆ ಅಸಮಾನತೆ ಸಲ್ಲದು ಎಂದಿದ್ದಾಳೆ.

ಗಂಡು–ಹೆಣ್ಣು ಭೌತಿಕವಾಗಿ ಭಿನ್ನವಾಗಿ ಕಾಣಬಹುದು. ಆದರೆ ಬೌದ್ಧಿಕವಾಗಿ ಗುರುತಿಸಲಾಗುವುದಿಲ್ಲ. ಈ ಬೌದ್ಧಿಕತೆಯನ್ನು ಹೆಣ್ಣೋ ಗಂಡೋ ಎಂದು ಗುರುತಿಸಲು ಸಾಧ್ಯವಿದೆಯೇ? ಇಲ್ಲ. ಅಲ್ಲದೆ ಹೆಣ್ಣು ಜ್ಞಾನ ವಿಧಾನ, ಗಂಡು ಜ್ಞಾನ ವಿಧಾನಗಳೆಂಬ ವಿಭಾಗ ಕ್ರಮಗಳಿಲ್ಲ. ಭೌತಿಕ ಮತ್ತು ಬೌದ್ಧಿಕತೆಯು ನಿರ್ಮಾಣಗೊಳ್ಳುವುದು ಸೃಷ್ಟಿಯ ಮೂಲದಲ್ಲಿ ಅದ್ದರಿಂದ ಗಂಡು–ಹೆಣ್ಣಿನ ನಡುವಿನ ಜ್ಞಾನ ಮತ್ತು ಆತ್ಮ ಇವು ಪ್ರಕೃತಿ ಮೂಲ. ಅವೆಡರಲ್ಲಿ ಶ್ರೇಷ್ಠ–ಕನಿಷ್ಠ ಎನ್ನುವುದು ಮೂರ್ಖತನ, ತಾನೊಬ್ಬಳು ಆಸ್ತಿಕಳು ಎಂಬುದನ್ನು ನಂಬದ ನಾಸ್ತಿಕರಿಗೆ ಬಹಿರಂಗ ಸವಾಲು ಹಾಕುತ್ತಾಳೆ. ಈಕೆಯ ಇನ್ನೊಂದು ವಚನವು ಗಂಡಿನ ಬುದ್ಧಿವಂತಿಕೆಯನ್ನು ಮತ್ತು ಹೆಣ್ಣಿನ ಜಾಣ್ಮೆಯನ್ನು ಪ್ರತಿನಿಧಿಸುತ್ತದೆ. ಗಂಡು ಮೋಹಿಸಿ ಹೆಣ್ಣ ಹಿಡಿದಡೆ, ಅದು ಒಬ್ಬರ ಒಡವೆ ಎಂದು ಅರಿಯಬೇಕು. ಹೆಣ್ಣು ಮೋಹಿಸಿ ಗಂಡ ಹಿಡಿದಡೆ, ಉತ್ತರವಾವುದೆಂದರಿಯಬೇಕು. ಈ ಎರಡರ ಉಭಯವ ಕಳೆದು ಸುಖಿ ತಾನಾಗಬಲ್ಲಡೆ. ನಾಸ್ತಿನಾಥನುಪರಿಪೂರ್ಣನೆಂಬೆ.

ಕದಿರೆ ರೆಮ್ಮವ್ವನ ಒಂದು ವಚನದಲ್ಲಿ "ಎಲ್ಲ ಗಂಡಂದಿರು ಪರದಳವಿಭಾಡರು; ಎನ್ನ ಗಂಡ ಮನದಳವಿಭಾಡ. ಎಲ್ಲರ ಗಂಡಂದಿರು ಗಜವೇಂಟೆಕಾರರು; ಎನ್ನ ಗಂಡ ಮನವೇಂಟೆಕಾರರು. ಎಲ್ಲರ ಗಂಡಂದಿರು ತಂದಿಕ್ಕಿಸಿಕೊಂಬರು; ಎನ್ನ ಗಂಡ ತಾರದೆ ಇಕ್ಕಿಸಿಕೊಂಬ, ಎಲ್ಲರ ಗಂಡಂದಿರಿಗೆ ಮೂರು, ಎನ್ನ ಗಂಡಂಗೆ ಅದೊಂದೆ; ಅದೊಂದೂ ಸಂದೇಹ,

ಕದಿರರೆಮ್ಮಿಯೊಡೆಯ ಗುಮ್ಮೇಶ್ವರಾ ಎಂಬುವಲ್ಲಿ ಪುರುಷನ ಪೌರುಷವನ್ನು ಮಾರ್ಮಿಕವಾಗಿ ಪ್ರಶ್ನಿಸುತ್ತಾಳೆ. ಇಲ್ಲಿ ಹೆಣ್ಣೊಬ್ಬಳ ಆಸೆ ಆಕಾಂಕ್ಷೆಗಳನ್ನು ಅರಿತು ಈಡೇರಿಸುವಲ್ಲಿ ಪುರುಷನು ವಿಫಲವಾದಂತಿದೆ. "ಎಲ್ಲರ ಹೆಂಡಿರು ತೊಳಸಿಕ್ಕುವರು; ಎನ್ನ ಗಂಡಂಗೆ ತೊಳಸುವುದಿಲ್ಲ. ಎಲ್ಲರ ಗಂಡಂದಿರಿಗೆ ಬಸಿವರು; ಎನ್ನ ಗಂಡಂಗೆ ಬಸಿವುದಿಲ್ಲ. ಎಲ್ಲರ ಗಂಡಂದಿರಿಗೆ ಬೀಜವುಂಟು; ಎನ್ನ ಗಂಡಂಗೆ ಅಂಡದ ಬೀಜವಿಲ್ಲ. ಎಲ್ಲರ ಗಂಡಂದಿರು ಮೇಲೆ, ಎನ್ನ ಗಂಡ ಕೆಳಗೆ, ನಾ ಮೇಲೆ ಕದಿರ ರೆಮ್ಮಿಯೊಡೆಯ ಗುಮ್ಮೇಶ್ವರಾ ಎಂಬುವಲ್ಲಿ ಗಂಡನ ಮೇಲೆ ಆಕೆಗೆ ನಂಬಿಕೆ ಇಲ್ಲದಿರುವುದನ್ನು ಗುರುತಿಸಬೇಕು. ರೆಮ್ಮವ್ವೆ ರಾಟೆಯಿಂದ ತೆಗೆದ ದಾರವನ್ನು ಮಾರಿ ಜೀವನ ನಿರ್ವಹಿಸುವ ಕಾಯಕದ ಹೆಣ್ಣು ಮಗಳು ಇವಳು. ಗಂಡು ಹೆಣ್ಣಿನ ನಡುವಿನ ಸಂಬಂಧದ ಕುರಿತು ವಿಡಂಬಿಸುತ್ತಾಳೆ. ಗಂಡನ ಅಸಡ್ಡೆ, ಅಸಹಕಾರ, ಸೋಮಾರಿತನ ಮತ್ತು ಪುರುಷಪ್ರಧಾನ ಸಮಾಜದಿಂದ ಹೇರಲ್ಪಟ್ಟ ವ್ರತನಿಯಮಾದಿಗಳನ್ನು ವಿರೋಧಿಸಿದ್ದಾಳೆ.

ಸತ್ಯಕ್ಕನ ವಚನದಲ್ಲಿ ಇನಿಯಂಗೆ ತವಕವಿಲ್ಲ; ಎನಗೆ ಸೈರಣೆಯಿಲ್ಲ ಮನದಿಚ್ಛೆಯನರಿವ ಸಖಿಯರಿಲ್ಲ, ಇನ್ನೇವೆನವ್ವಾ? ಮನುಮಥ ವೈರಿಯ ಅನುಭಾವದಲ್ಲಿ ಎನ್ನ ಮನ ಸಿಲುಕಿ ಬಿಡದು. ಇನ್ನೇನ ಮಾಡುವೆನೆಲೆ ಕರುಣವಿಲ್ಲ ತಾಯೆ? ದಿನ ವೃಥಾ ಹೋಯಿತ್ತಾಗಿ ಯೌವ್ವನ ಬೀಸರವಾಗದ ಮುನ್ನ ಪಿನಾಕಿಯನ್ನು ನೆರಹವ್ವಾ ಶಂಭುಜಕ್ಕೇಶ್ವರನಾ. ಈ ವಚನದಲ್ಲಿ ಪ್ರೇಮ–ಕಾಮದ, ಇಷ್ಟ ದೈವದ, ಅಂಗ–ಲಿಂಗದ ಬಗೆಗಿನ ಕುತೂಹಲ, ವ್ಯಾಮೋಹವನ್ನು ಪ್ರತಿಪಾದಿಸುತ್ತಾಳೆ. ಹೆಣ್ಣು ಒಬ್ಬಳು ತನ್ನ ಇನಿಯನ ನಿರೀಕ್ಷೆಯಲ್ಲಿದ್ದರೆ ಇನಿಯನಿಗೆ ಯಾವುದೇ ರೀತಿಯ ತವಕಗಳಿಲ್ಲ, ಹೆಣ್ಣಿನ ಮನಸ್ಸಿನಾಸೆಯನ್ನು ಈಡೇರಿಸುವ ಸಖಿರಿಲ್ಲ, ಹೀಗಾಗಿ ಹೆಣ್ಣು ಸೈರಣೆಯನ್ನು ಕಳೆದುಕೊಳ್ಳಬಹುದು. ಏಕೆಂದರೆ ಮನಸ್ಸಿನೊಳಗಿನ ಆಸೆ–ಆಕಾಂಕ್ಷೆಗಳು ಮನ್ಮಥನೆಂಬ ವೈರಿಯ ಕೈಯಲ್ಲಿ ಸಿಲುಕಿ ಬಿಡಬಹುದು. ದೇಹ ಮತ್ತು ಮನಸ್ಸಿನ ದ್ವಂದ್ವಕ್ಕೆ, ನಿಲುವಿಗೆ ಕರುಣೆ ಬಾರದೆ, ಯೌವ್ವನಕ್ಕೆ, ಕಾಮದ ಆತುರಕ್ಕೆ ಬಲಿಯಾಗುವ ಮುನ್ನ ಶಿವನನ್ನು ಸಾಕ್ಷಾತ್ಕರಿಸುವಂತೆ ನೆರಹವ್ವಾ ಎಂದು ಕೇಳಿ ಕೊಂಡಿದ್ದಾಳೆ.

'ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಸಲಿಲ್ಲ, ಕಾಸೆ ಮೀಸೆ ಕಠಾರವಿದ್ದುದೆ ಗಂಡೆಂದು ಪ್ರಮಾಣಿಸಲಿಲ್ಲ, ಅದು ಜಗದ ಬಗ್ಗೆ ಬಲ್ಲವರ

ನೀತಿಯಲ್ಲ ಈ ಮೊದಲು ಚರ್ಚಿಸಿದ ರೀತಿಗಿಂತ ಭಿನ್ನವಾಗಿ ಇಲ್ಲಿ ಸ್ತ್ರೀ–ಪುರುಷ ದೇಹದ ಸ್ವರೂಪಗಳ ಆಧಾರದ ಮೇಲೆ ಹೆಣ್ಣನ್ನೂ, ಪುರುಷನನ್ನು ಬೇರೆ–ಬೇರೆಯಾಗಿ ಕಾಣಬಹುದು. ಹಾಗೆಯೇ ದೇಹವನ್ನು ಕಾಣುವಂತೆ ಆತ್ಮವನ್ನು ಕಾಣಲಿಕ್ಕೆ ಅಸಾಧ್ಯ. ಈ ಆತ್ಮಕ್ಕೆ ಗಂಡು ಆತ್ಮ ಅಥವಾ ಹೆಣ್ಣು ಆತ್ಮವೆಂದು ಪ್ರಮಾಣಿಸಲು ಅಸಾಧ್ಯ. ಆತ್ಮ ಅಮೂರ್ತ ಸ್ವರೂಪದ್ದು, ಇದು ಆತ್ಮ ನಿಷ್ಠೆ, ಅನನ್ಯತೆಯ ಪ್ರಜ್ಞೆಯನ್ನು ಮೂಡಿಸುತ್ತದೆ. ಹೀಗಾಗಿ ವಚನಕಾರ್ತಿಯರಿಗೆ ಆತ್ಮವಿವೇಚನೆಯ ಜೊತೆಗೆ ಪುರುಷ ಸಮಾನ ಮನ್ನಣೆ ನೀಡಿದರು. ಹೀಗೆ ಸ್ತ್ರೀಯನ್ನು ಆತ್ಮವುಳ್ಳ ಅರಿವಿನ ಜೀವಿಯಾಗಿ ಗೌರವಿಸಿದರು.

ಸುಖದ ಸಾಧನವಾಗಿದ್ದ ಸ್ತ್ರೀ ಶರಣರ ಧೋರಣೆಗಳಿಂದಾಗಿ ವ್ಯವಸ್ಥೆಯಿಂದ ಬಂಧ ಮುಕ್ತಳಾದಳು. ಸ್ತ್ರೀ ಸಂಬಂಧಿತ ಅಮಾನವೀಯ ಆಲೋಚನಾ ಕ್ರಮದಲ್ಲಿ ಪರಿವರ್ತನೆ ಸಾಧ್ಯವಾಯಿತು. ಇದರಿಂದ ಸಾಮಾಜಿಕ, ಧಾರ್ಮಿಕ ಪ್ರವೇಶವನ್ನು ನಿರ್ಬಂಧಿಸಿದ್ದ ಕಟ್ಟುಪಾಡುಗಳು ಬಿಗಿಯನ್ನು ಕಳೆದುಕೊಂಡವು. ಹೆಣ್ಣಿನ ಜನನ ಮತ್ತು ದೇಹರಚನೆಯ ನೆಲೆಯಲ್ಲಿ ಮಹಿಳೆಯ ಅಸ್ತಿತ್ವವನ್ನು ಶೂದ್ರನೆಲೆಗೆ ತಳ್ಳಲು ಕಾರಣವಾಗಿದ್ದ ಭಾವ ಸೂತಕಗಳು ನಿಧಾನಕ್ಕೆ ಕರಗಲಾರಂಭಿಸಿದವು.

### ೪. ಸತಿ–ಪತಿ ಭಾವದ ಕಲ್ಪನೆ:

ಸಾಮಾಜಿಕ ಜೀವನವನ್ನು ಪರಿಶೋಧಿಸಿ, ಸಮಾನತೆಯ ತಳಹದಿಯ ಮೇಲೆ ಮಾನವೀಯ ಮೌಲ್ಯಗಳ ಸಮಾಜಸೌಧ ನಿರ್ಮಿಸುವುದು ಶರಣರ ಧೋರಣೆಯಾಗಿತ್ತು. ರೂಢಿಗತವಾಗಿದ್ದ ಜಾತಿಭೇದ, ವರ್ಗಭೇದ, ಲಿಂಗಭೇದ, ವೃತ್ತಿಭೇದಗಳಂತಹ ಜಾಡ್ಯಗಳನ್ನು ಪರಿಹರಿಸಿ, ಕಾಯಕ ಮಹತ್ವವನ್ನು ನೆಲೆಗೊಳಿಸಿ, ಸಮಾಜದಲ್ಲಿ ಮಾನವತೆಯ ಏಕತೆಯನ್ನು ಸ್ಥಾಪಿಸಲು ಶರಣೆಯರು ಮುಂದಾದರು. ಸ್ತ್ರೀಯರಿಗೆ ಸಮಾನ ಅವಕಾಶ ಕಲ್ಪಿಸಿಕೊಡುವ ಸಂಕಲ್ಪ ಮಾಡಿದರು.

> ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ
> ಅರಿವಿಂಗೆ ಬೇರೊಂದೊಡಲುಂಟೆ?[೨೭]

ಎಂಬ ವಚನದಲ್ಲಿ ಆಯ್ದಕ್ಕಿ ಲಕ್ಕಮ್ಮ ಸತಿ–ಪತಿ ಭಾವದ ಮಹತ್ವ ಕುರಿತು ಹೇಳಿದ್ದಾಳೆ.

ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಮೀಸೆ ಕಾಸೆ ಬಂದರೆ ಗಂಡೆಂಬರು ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ; ಗಂಡೂ ಅಲ್ಲ ಎಂದು ಜೇಡರ ದಾಸಿಮಯ್ಯ, "ಅಂಗದ ಮೇಲೆ ಲಿಂಗವಿದ್ದವರೆಲ್ಲರನ್ನೂ ಸಂಗಮನಾಥನೆಂಬೆ" ಎಂದು ಬಸವಣ್ಣ, "ಹೆಣ್ಣು ಮಾಯೆಯಲ್ಲ ಮನದ ಮುಂದಣ ಆಸೆಯೆ ಮಾಯೆ" ಎಂದು ಅಲ್ಲಮಪ್ರಭು, "ಹೆಣ್ಣು ರಾಕ್ಷಸಿಯಲ್ಲ ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ"[೨೮] ಎಂದು ಸಿದ್ಧರಾಮ ಹೇಳಿದ್ದಾರೆ. ಹೀಗೆ ಶರಣರು ಸಾಮಾಜಿಕ ವ್ಯವಹಾರ, ಧಾರ್ಮಿಕ ಆಚರಣೆ, ಆಧ್ಯಾತ್ಮಿಕ ಸಾಧನೆಗಳಲ್ಲಿ ಸ್ತ್ರೀಗೆ ಸ್ವಾತಂತ್ರ್ಯ ಸಮಾನತೆಗಳನ್ನು ಕಲ್ಪಿಸಿಕೊಟ್ಟರು. ಆಯ್ದಕ್ಕಿ ಲಕ್ಕಮ್ಮನ ಈ ಮೇಲಿನ ವಚನವನ್ನು ಈ ರೀತಿಯಾಗಿ ವಿಶ್ಲೇಷಣೆಗೂ ಒಳಪಡಿಸಬಹುದು. ಇದು ಹಲವು ವಿಶ್ಲೇಷಣೆಯಲ್ಲಿ ಒಂದು. ಲೌಕಿಕ ಸುಖದ ಅನುಭವವನ್ನು ಮೀರಿ ಆಧ್ಯಾತ್ಮ ಅನುಭವದ ಮೂಲಕ ಸತಿಪತಿಗಳು ಸತಿಯಾಗಿ ಲಿಂಗವೆಂಬ ಪತಿಯನ್ನು ಒಲಿಸಿಕೊಳ್ಳುವ ಭಾವವಿದು. ಅಂದರೆ ಇಲ್ಲಿ ಹೆಣ್ಣು, ಗಂಡು, ಮೇಲು–ಕೀಳು, ಶ್ರೇಷ್ಠ–ಕನಿಷ್ಠಗಳೆಂಬ ಭೇದ ಭಾವಗಳಿಲ್ಲ. ಅಂತಿಮವಾಗಿ ಸತಿ–ಪತಿಗಳೆಂಬ ಭಾವ ಸಂಪೂರ್ಣ ನಾಶವಾಗಿ, 'ಶರಣಸತಿ ಲಿಂಗಪತಿ' ಎನ್ನುವ ಭಾವ ವಚನ ಧರ್ಮದಲ್ಲಿ ಒಡಮೂಡುತ್ತದೆ. ಗಂಡು–ಹೆಣ್ಣು ಇಬ್ಬರೂ ಲಿಂಗಪತಿಯ ಸತಿಯರಾಗಿ ತೋರುತ್ತಾರೆ. ಶರಣೆಯರು ಸಂಸಾರಿಗಳಾಗಿ ಅನ್ಯೋನ್ಯ ದಾಂಪತ್ಯವನ್ನು ಅನುಭವಿಸಿ ಪತಿಗಳೊಂದಿಗೆ ಶಿವನಿಗೆ (ಇಷ್ಟದೈವ) ಹಿತವಾದ ಭಕ್ತಿಯನ್ನು ಅರ್ಪಿಸಿದ್ದಾರೆ. ಇದೇ ಸಂದರ್ಭದಲ್ಲಿ ಸಾಹಿತ್ಯ ರಚನೆ ಕೇವಲ ಪುರುಷರ ಹಕ್ಕು ಎಂಬ ಕಲ್ಪನೆಯನ್ನು ಸುಳ್ಳಾಗಿಸಿ, ತಾನು ಕೂಡ ವಚನಗಳನ್ನು ಬರೆದು ಆ ಮೂಲಕ ಸಾಹಿತ್ಯ ಸೃಷ್ಟಿ ಮಾಡಿ ತೋರಿಸಿಕೊಟ್ಟಳು.

ವಚನಧರ್ಮದಲ್ಲಿ ಸ್ತ್ರೀಯರಿಗೆ ಎರಡು ರೀತಿಯ ಸ್ವತಂತ್ರ ನೀಡಲಾಗಿತ್ತು. ಕೈ ಹಿಡಿದ ಗಂಡನು ಭಕ್ತನಾಗಿದ್ದರೆ ಆಕೆಗೆ ಯಾವ ಯೋಚನೆಯಿಲ್ಲ. (ಭಕ್ತನಾಗಿಸುವ ನಿಟ್ಟಿನಲ್ಲಿ) ಎಂಬುದು ಒಂದು ನೆಲೆ. ಗಂಡಭಕ್ತನಲ್ಲದಿದ್ದರೆ ಭಕ್ತನಾಗಿಸುವ ಆಲೋಚನೆ ಮಾಡಬೇಕಿತ್ತು ಎಂಬುದು ಇನ್ನೊಂದು ನೆಲೆ. ಇಂತಹ ಅಪೂರ್ವ ಸಂದರ್ಭಗಳು ವಚನಧರ್ಮದಲ್ಲಿ ತಲೆ ಎತ್ತಿದ ಕಾಲದಲ್ಲಿ ಶರಣೆಯರು ಭವಿಯನ್ನು ಭಕ್ತನನ್ನಾಗಿ ಮಾಡಲು ಪ್ರಯತ್ನ ಪಡಬೇಕಿತ್ತು. ಒಂದು ವೇಳೆ ಅವು ಸಾಧ್ಯವಾಗದಿದ್ದರೆ ಪತಿಯನ್ನು ಬಿಟ್ಟು ಆತ್ಮ ಸಾರ್ಥಕ್ಯವನ್ನು ಸಾಧಿಸಿಕೊಳ್ಳಬೇಕು. ಜೊತೆಗೆ ಸತಿಪತಿಯರ ಪಾಲಿಗೆ

'ಲಿಂಗದೇವನೆ ಪತಿ' ಎಂದು ನಂಬಿ, ಶರಣ/ಣೆ ಸತಿ-ಲಿಂಗಪತಿ ಎಂಬ ಭಾವಕ್ಕೆ ಬರುತ್ತಿದ್ದರು. ಸ್ತ್ರೀಯು ವಿವಾಹವಾಗಿ ಅಥವಾ ವಿವಾಹವಾಗದೆಯು ಶರಣಸತಿ ಲಿಂಗಪತಿ' ಭಾವದಿಂದ ಇರಬಹುದು. ಹೆಣ್ಣಾಗಿ ಹುಟ್ಟಿದ ಕಾರಣಕ್ಕೆ ಮದ್ವೆಯಾಗಲೇಬೇಕೆಂಬ ನಿಯಮವೇನಿಲ್ಲ, ಇಂತಹ ಸಂದರ್ಭದಲ್ಲಿ ಸಂಸಾರದಲ್ಲಿದ್ದುಕೊಂಡು ವಚನ ರಚಿಸಿರುವವರುಂಟು, ಸಂಸಾರಕ್ಕೆ ಒಳಗಾಗದೆ ವಚನ ರಚಿಸಿದವರು ಇದ್ದಾರೆ. ಈ ದಿಟ್ಟತನ ಕೆಲವು ವಚನಕಾರ್ತಿಯರ ಕೆಲ ವಚನಗಳಲ್ಲಿ ಸತಿ-ಪತಿ ಭಾವವನ್ನು ಕಾಣಬಹುದು.

ಗಂಡಿಗೆ ಲಿಂಗದೀಕ್ಷೆ ಮಾಡುವಂತೆ ಹೆಣ್ಣಿಗೂ ಲಿಂಗ ದೀಕ್ಷೆ ಮಾಡುವ ಈ ಮೂಲಕ ಲಿಂಗ ತಾರತಮ್ಯವನ್ನು ಒಡೆದರು. ಹೆಣ್ಣು ಕೂಡ ಆಲೋಚನೆ, ವಿದ್ಯೆ, ಅಭಿವ್ಯಕ್ತಿ, ಮತ್ತು ಆತ್ಮ-ಪರಮಾತ್ಮನ ಚಿಂತನೆ ಮಾಡಿದಳು. ಕೆಳವರ್ಗದ ಕಾಯಕ ಜೀವಿ ಸ್ತ್ರೀಯರು ಭಕ್ತಿಯ ಸಾಧಕಿಯರಾದವರು. ಕಾಯಕ ತತ್ವದ ಮೂಲಕ ಜಾತಿ, ಲಿಂಗ ತಾರತಮ್ಯಗಳನ್ನು ಪ್ರಶ್ನಿಸಿದರು. ವೇಷಧಾರಿ ಭಕ್ತ ವಿರಕ್ತರನ್ನು, ಅನಾಚಾರಿಗಳನ್ನು ಕಟುವಾಗಿ ಟೀಕಿಸುವಲ್ಲಿ ಪ್ರಮುಖ ಪಾತ್ರವಹಿಸಿದರು. ಈ ಮೂಲಕ ಸ್ತ್ರೀಯರು ಮೊದಲ ಬಾರಿಗೆ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಸಹಭಾಗಿತ್ವದ ಅವಕಾಶ ಪಡೆದುಕೊಂಡರು. ದೇವಾಲಯವು ಮಹಿಳೆಯರನ್ನು ಬಹಿಷ್ಕರಿಸಿದರೆ, ವಚನಕಾರ್ತಿಯರು ದೇವಾಲಯವನ್ನೇ ಬಹಿಷ್ಕರಿಸಿದರು. ಈ ಕಾರಣಗಳಿಗಾಗಿ ಸಮಾಜದಲ್ಲಿನ ವಿಭಿನ್ನ ಸ್ತರದ ಮಹಿಳೆಯರು ಶರಣಧರ್ಮದ ಅನುಯಾಯಿಗಳಾದರು ಜೊತೆಗೆ ಸಮಾನತೆಯ ಸತಿ-ಪತಿ ಭಾವ ಕಲ್ಪನೆಯ ವಚನಗಳನ್ನು ರಚಿಸಿದರು.

ಆಯ್ದಕ್ಕಿ ಲಕ್ಕಮ್ಮನ ವಚನದಲ್ಲಿ, "ಕೂಟಕ್ಕೆ ಸತಿ-ಪತಿ ಎಂಬ ನಾಮವಲ್ಲದೆ, ಅರಿವಿಂಗೆ ಬೇರೊಂದೊಡಲುಂಟೇ?" ಎಂಬಲ್ಲಿ ಸತಿಪತಿಗಳ ಅಭೇದ ಕಲ್ಪನೆಯನ್ನು ಸ್ಪಷ್ಟಪಡಿಸಿದ್ದಂತಿದೆ. ಗಜೇಶ ಮಸಣಯ್ಯನ ಪುಣ್ಯಸ್ತ್ರೀಯ ವಚನದಲ್ಲಿ "ಹೆಣ್ಣು ಬಿಟ್ಟು ಲಿಂಗವನೊಲಿಸಬೇಕೆಂಬರು ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೇ" ವಚನಧರ್ಮದಲ್ಲಿ ಸ್ತ್ರೀಯರಿಗೆ ಪುರುಷರಂತೆಯೇ ಸಮಾನವಾದ ಹಕ್ಕು ಗೌರವವುಂಟು. ಶಿವಶರಣೆಯರು-ಶರಣರಂತೆ ಶಿವಾನುಭವ ಮಂಟಪದ ಚರ್ಚೆಗಳಲ್ಲಿ ಭಾಗಿಗಳಾಗುತ್ತಿದ್ದರಲ್ಲದೆ ಮನೆಗಳಲ್ಲಿ ತಂತಮ್ಮ ಪತಿಗಳಿಗೆ ಹಲವು ಸಂದರ್ಭಗಳಲ್ಲಿ ತತ್ವೋಪದೇಶವನ್ನು ಮಾಡುತ್ತಿದ್ದರು. ಆ ಶಿವಶರಣೆಯರ ಜ್ಞಾನ, ಸಂಸ್ಕೃತಿ, ಪರಂಪರೆ ಮೊದಲಾದ

ಗುಣ ಸ್ವರೂಪಗಳನ್ನು ನೋಡಿದರೆ ಶಿವಶರಣೆಯರ ಸತಿ-ಪತಿ ಭಾವ ವಚನಗಳಲ್ಲಿ ಅನಾವರಣಗೊಳ್ಳುತ್ತದೆ.

**ಮೋಳಿಗೆ ಮಹಾದೇವಿಯ ಒಂದು ವಚನದಲ್ಲಿ "ಅದೇತಕೆ ಅಯ್ಯಾ,** ಶಿವನೊಳಗೆ ಕೂಟಸ್ಥನಾದೆಹೆನೆಂಬ ಹಲುಬಾಟ? ಇದು ನಿತ್ಯ ಸತ್ಯದ ಆಟವಲ್ಲ; ಇನ್ನಾರಿಗೆ ಕೇಳಿ, ಮತ್ತಿನ್ನಾರಿಗೆ ಹೇಳುವೆ ನೀ ಮಾಡುವ ಮಾಟ? ಮುನ್ನ ನೀನಾರೆಂದಿದ್ದೆ ಹೇಳಾ? ಆ ಭಾವವನರಿದು ನಿನ್ನ ನೀನೆ ತಿಳಿ, ಎನ್ನಯ್ಯ ಪ್ರಿಯ ಇಮ್ಮಡಿ ನಿಃಕಳಂಕ ಮಲ್ಲಿಕಾರ್ಜುನಾ[೨೯]". ಮೋಳಿಗೆ ಮಾರಯ್ಯನ ಮಹಾದೇವಿಯಮ್ಮನ ವಚನದಲ್ಲಿ ಇಲ್ಲಿ ಮೋಳಿಗೆ ಮಾರಯ್ಯನು ತಾನು ಲಿಂಗದಲ್ಲಿ ಐಕ್ಯನಾಗುವೆನೆಂದು ತನ್ನ ಸತಿಯಾದ ಮಹಾದೇವಿಯಮ್ಮನಿಗೆ ತಿಳಿಸಿದನು. ಆಕೆ ಗಂಡನ ಅಜ್ಞಾನಕ್ಕೆ ವ್ಯಥೆಪಟ್ಟಳು. ತಾನು ಬೇರೆ, ಲಿಂಗ ಬೇರೆ ಎಂಬ ಭಿನ್ನಭಾವದಿಂದ ಗಂಡನು ವರ್ತಿಸುತ್ತಿರುವವನಲ್ಲದೆ, ತಾನೇ ಲಿಂಗವೆಂಬ ಏಕಾರ್ಥ ಉದಯಿಸಲಿಲ್ಲ ಎಂದುಕೊಂಡಳು. ಮೋಳಿಗೆ ಮಹಾದೇವಿ ಬೇಕೆಂದೇ ಬಡತನವನ್ನು ಆಯ್ದುಕೊಂಡವಳು. ತನ್ನ ಒಂದೆರಡು ವಚನಗಳಲ್ಲಿ ತನ್ನ ಮತ್ತು ಮಾರಯ್ಯನ ಬದುಕಿನ ಬಡತನದಲ್ಲಿನ ಭಕ್ತಿಯ ಶ್ರೀಮಂತಿಕೆಯನ್ನು ಜ್ಞಾಪಿಸಿಕೊಂಡಿದ್ದಾಳೆ.

ಸತ್ಯಕ್ಕನ ವಚನದಲ್ಲಿ "ಶಿವನನ್ನಲ್ಲದೆ ಅನ್ಯ ದೇವರ ಪೂಜಿಸೆ, ಶಿವಶಬ್ದವನ್ನಲ್ಲದೆ ಅನ್ಯ ದೈವರ ಶಬ್ದ ಕೇಳೆ[೩೦] ಇಲ್ಲಿ ಸತ್ಯಕ್ಕಳು ಲಿಂಗವೇ ಪತಿ, ಶರಣರೇ ಸತಿ ಎಂಬ ವಚನಧರ್ಮವನ್ನು ಹೇಳುತ್ತಾಳೆ. ಲಿಂಗಪೂಜೆ ಅಥವಾ ಶಿವಪೂಜೆ ಮಾಡುವವರಿಗೆ, ಶಿವನೇ ಮೂರ್ತ ರೂಪದ ಸಾಕ್ಷಾತ್ ದೇವರಾಗಿರುವಾಗ ಬೇರೆ ದೇವರ ನಾನು ಪೂಜಿಸುವುದಿಲ್ಲ. ಶಿವನಾಮವನಲ್ಲದೇ ಬೇರೆಯ ನಾಮವನ್ನು ನಾನು ಕೇಳೆನು ಎಂದು ವ್ರತವನ್ನು ಹಿಡಿದ ದಿಟ್ಟ ಶಿವಶರಣೆ. ಕಾಯಾ, ವಾಚಾ ಮನಸ್ಸುಗಳಿಂದ ಶಿವನನ್ನಲ್ಲದೆ, ಮತ್ತೆ ಯಾವ ದೇವರನ್ನು ನೆನೆಯುವುದಿಲ್ಲ. ಲಿಂಗ ದೀಕ್ಷೆಯ ಮೂಲಕ ಜಾತಿ ಸೂತಕವನ್ನು ಕಳೆದುಕೊಂಡವಳು. ಸಮಾಜದ ಮತ್ತು ಮಹಾಮನೆಯ ಸಹಭಾಗಿತ್ವ ಪಡೆದುಕೊಂಡವಳು. ಕಾಯಕ ಜೀವಿಯಾಗಿದ್ದು, ಭಕ್ತಿಯ ಸಾಧಕಿಯಾಗಿದ್ದವಳು.

ಸೂಳೆಸಂಕವ್ವೆಯು ನಿರ್ಲಜ್ಜೇಶ್ವರಾ ಎಂಬ ಅಂಕಿತನಾಮದ ಮೂಲಕ ವಚನಗಳಲ್ಲಿ ಆತ್ಮ ವಿಶ್ವಾಸವನ್ನು ದಿಟ್ಟಎದೆಗಾರಿಕೆಯನ್ನು ತೋರಿದ್ದಾಳೆ. ತಾನು

ಮಾಡುವ ವೃತ್ತಿಯನ್ನೇ ಲಿಂಗವಾಗಿಸಿ, ತಾನೇ ಶರಣೆಯಾಗಿ ವೃತ್ತಿ ಮತ್ತು ವ್ಯಕ್ತಿಯನ್ನು ಸತಿಪತಿಭಾವದ ನೆಲೆಗೆ ತಂದ ಹಿರಿಮೆ ಈಕೆಯದು. 'ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ, ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯ ವ್ರತ ಹೀನನರಿದು ಬೆರೆದಡೆ' ಕಾದಕತ್ತಿಯಲ್ಲಿ ಕೈ, ಕಿವಿ, ಮೂಗ ಕೊಯ್ವರಯ್ಯ ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ[೩೧]. ತನ್ನ ವೃತ್ತಿಯಲ್ಲಿ ನೋವು, ಅವಮಾನ, ಹಿಂಸೆಗಳನ್ನು ಸಹಿಸಿಕೊಂಡಿರಬೇಕು, ಒಂದು ವೇಳೆ ಪ್ರತಿರೋಧಿಸಿದರೆ ಬತ್ತಲೆ ನಿಲ್ಲಿಸಿ ಕೊಲ್ಲುವರು? ವ್ರತ ಹೀನನೆಂದು ಅರಿತು ಸೇರಿದರೆ ಕೈ, ಕಿವಿ, ಮೂಗು ಕೊಯ್ಯುವರು. ಹೀಗಾಗಿ ಸಂಕವ್ವೆ, ಸಾಮಾಜಿಕ ನ್ಯಾಯದ ಪ್ರಶ್ನೆ ಎತ್ತುತ್ತಾಳೆ. ವೃತ್ತಿಯನ್ನೇ ದೈವವಾಗಿಸಿಕೊಂಡ ಪ್ರೀತಿ ಈಕೆಯದು. ತನ್ನ ವೃತ್ತಿಯಲ್ಲೇ ತಾನು ಅನುಭವಿಸಿದ, ಅನುಸರಿಸಿದ ನೀತಿಯನ್ನು ಹೇಳಿಕೊಳ್ಳಲು ಅವಳಿಗೆ ಯಾವುದೇ ನಾಚಿಕೆಗಳಿಲ್ಲ.

ಅಮುಗೆ ರಾಯಮ್ಮನ ವಚನಗಳಲ್ಲಿ ಅಂಗದ ಮೇಲೆ ಲಿಂಗವಿಲ್ಲದವರಲ್ಲಿ, ಲಿಂಗಾರ್ಪಿತವ ಬೇಡಲೇಕೆ? ಅಂಗದ ಮೇಲೆ ಲಿಂಗವುಳ್ಳ ಲಿಂಗವಂತರಲ್ಲಿ, ಲಿಂಗಾರ್ಪಿತವ ಬಿಡಲೇತಕ್ಕೆ? ಜಾತಿಗೋತ್ರವನೆತ್ತಿ ನುಡಿಯಲೇಕೆ? ಸಹಜ ಶಿವಭಕ್ತರೆಂದು, ಶೀಲವಂತರೆಂದು, ವ್ರತಾಚಾರಿಗಳೆಂದು, ವ್ರತಭ್ರಷ್ಟರೆಂದು ಅವರ ಕುಲಛಲವ ಕೇಳಿಕೊಂಡು, ಆಚಾರವುಳ್ಳವರು ಅನಾಚಾರಿಗಳು ಎಂದು, ಬೇಡುವ ಭಿಕ್ಷವ ಬಿಡಲೇತಕ್ಕೆ? ಮದ್ಯಮಾಂಸವ ಭಂಜಿಸುವವರು ಅನಾಚಾರಿಗಳು, ಆವ ಕುಲವಾದಡೇನು, ಅಂಗದ ಮೇಲೆ ಲಿಂಗವುಳ್ಳವರೆಲ್ಲರೂ ಆಚಾರವುಳ್ಳದರೆಂಬೆನಯ್ಯಾ; ಅಮುಗೇಶ್ವರಲಿಂಗಕ್ಕೆ ಅವರೆ ಸದ್ಭಕ್ತರೆಂಬೆನಯ್ಯಾ. ಇಲ್ಲಿ ನಿಜಶಿವಭಕ್ತರಿಗೆ ಜಾತಿ, ಕುಲ, ಗೋತ್ರಗಳೆಂಬ ಭೇದ ಭಾವಗಳಿಲ್ಲ.  ಜಾತಿ, ಕುಲ ಎನ್ನುವ ಡಾಂಭಿಕ ಶಿವಭಕ್ತರನ್ನು ವಿಡಂಬಿಸುತ್ತಾಳೆ. "ನಾನೇ ಗುರುವಾದ ಬಳಿಕ ಗುರುವೆಂಬುದಿಲ್ಲ. ನಾನೇ ಲಿಂಗವಾದ ಬಳಿಕ ಲಿಂಗವೆಂಬುದಿಲ್ಲ. ನಾನೇ ಜಂಗಮವಾದ ಬಳಿಕ ಜಂಗಮವೆಂಬುದಿಲ್ಲ. ನಾನೇ ಪ್ರಸಾದವಾದ ಬಳಿಕ ಪ್ರಸಾದವೆಂಬುದಿಲ್ಲ. ಅಮುಗೇಶ್ವರನೆಂಬ ಲಿಂಗವು ತಾನೆಯಾದ ಬಳಿಕ ಲಿಂಗವನರಿದೆನೆಂಬ ಹಂಗಿನವನಲ್ಲ".

ಹೀಗೆ ಉಪದೇಶಗಳನ್ನು ಹೇಳಿಕೊಂಡು ತಿರುಗುವ, ತನ್ಮೂಲಕ ತಾವು ಜ್ಞಾನಿಗಳೆಂದು ಸುಳ್ಳು ಚಿತ್ರವನ್ನು ಕೊಡುವ ಜನರನ್ನು ಅದರಲ್ಲೂ 'ವಿರಕ್ತ'ರನ್ನು ಟೀಕಿಸುತ್ತಾಳೆ. 'ಮಾತಿನಲ್ಲಿ ಮಹಾಜ್ಞಾನಿಗಳೆಂಬ ವೇಷಧಾರಿಗಳ ಕಂಡು ನಾಚುವೆ' ಎನ್ನುತ್ತಾಳೆ. ಗುರು, ಲಿಂಗ, ಆತ್ಮ, ದೇವರು, ಪತಿಗಳಾದರೆ, ಕರ,

ಅಂಗ, ದೇಹ, ಶರಣ, ಶರಣೆಯರು ಸತಿಗಳಾಗುವ ಪರಿ ಇದು, ಸತಿ–ಪತಿಯೊಂದಾದ ಭಕ್ತಿಯನ್ನು ಈ ರೀತಿಯಾಗಿ ಹೇಳುತ್ತದೆ. ಜೊತೆಗೆ ವಿಡಂಬನೆಯು ಇದೆ. ಬೆಟ್ಟದನೆಲ್ಲಿಕಾಯಿಯನ್ನು ಹೊತ್ತುಕೊಂಡು ಹೋಗಿ ಪಟ್ಟಣದಲ್ಲಿ ಮಾರಿ ಹೊಟ್ಟೆ ಹೊರೆಯುವವನಂತೆ, ಉತ್ತಮ ಕುದುರೆಯ ಹೆಸರು ಹೇಳಿ ಕಡಲೆ ತಿನ್ನುವನಂತೆ ಆದ್ಯರ ವಚನಗಳನ್ನು ಅಲ್ಲಿಗಲ್ಲಿಗೆ ಉಸುರಿ ಅನ್ನ ಕೂಳಿಂಗೆ ಹರಿದಾಡುವ ಅಜ್ಞಾನಿಗಳ ಅನುಭವಿಗಳೆಂಬೆನೆ ಅಯ್ಯಾ ವಿರಕ್ತರೆಂಬೆನೆ ಎಂದು ಅವಳು ಟೀಕಿಸುವುದು ಗಮನಾರ್ಹ. ಕಂಡ–ಕಂಡ ಜಾಗದಲ್ಲಿ ವಚನಗಳನ್ನು ಓದುವ ವೇಷಧಾರಿಗಳ ಟೀಕೆ ಇನ್ನೊಂದೆಡೆ ಇದೆ. ಒಂಟಿ ವಸ್ತ್ರವನ್ನು ಧರಿಸಿ ಲಿಂಗಧಾರಿಯಾಗಿ ತಿರುಗುವವನು ನಿಜವಾದ ವಿರಕ್ತ. ವಚನಗಳನ್ನು ಎಲ್ಲರೂ ಓದುತ್ತಾರೆ, ಕೇಳುತ್ತಾರೆ, ಎಂದು ಅವಳು ವ್ಯಂಗ್ಯವಾಗಿ ನುಡಿದಿದ್ದರೂ ಜ್ಞಾನವೆಂಬುದೊಂದು ಬೀದಿಯ ಪಸರವೇ ಬೊಕ್ಕಣಕ್ಕೆ ತುಂಬುವ ಹುರುಳಿಯೆ? ಚೀಲದೊಳಗಣ ಜೀರಿಗೆಯೆ? ಗಾಣದೊಳಗಣ ಹಿಂಡಿಯೆ? ಜ್ಞಾನವೆಂಬುದ ಎಲ್ಲರೊಡನೆ ಬೀರಿರಬೇಕು. ಸೋಲು–ಗೆಲ್ಲುವಿನ ಮಾತು ಒಂದೆಡೆಯಾದರೆ, ಗೆಲುವನ್ನು ನುಡಿಯಬೇಕು ಎಂದು ಸಾರಿದ ರಾಯಮ್ಮನ ವಚನಗಳು ನಯ–ನಾಜೂಕುಗಳಿಂದ ಬಲುದೂರ. ಪವಿತ್ರವಾದ ಜೀವನದಿಂದ ಮನಸ್ಸೂ ಪರಿಶುದ್ಧವಾಗುತ್ತದೆ. ಮಾನಸಿಕ ಪರಿಶುದ್ಧತೆಯನ್ನು ಪಡೆದುಕೊಂಡ ಶರಣೆಯರು ಜನಕಂಜಿ ನಡೆಯದೆ ಮನಕಂಜಿ ನಡೆಯುವ, ಧೈರ್ಯದಿಂದ ಜೀವನವನ್ನು ಎದುರಿಸಿದವರು. ಸಮಾಜ ಜೀವಿಯಾಗಿದ್ದುಕೊಂಡೇ ಆತ್ಮೋನ್ನತಿಯನ್ನು ಸಾಧಿಸಿಕೊಂಡವರು. ಲೌಕಿಕರಲ್ಲಿದ್ದೂ ಪರಮಾರ್ಥ ಸಾಧನೆ ಮಾಡಿದ ಇವರು ಸಂಸಾರ ಕೇವಲ ಭೋಗ ಭೂಮಿಯಲ್ಲ ; ಅದೊಂದು ಸಾಧನಾ ಕ್ಷೇತ್ರ ಎಂದು ಸಾರಿದರು.

**(ಆ) ವೈಚಾರಿಕ ನೆಲೆ:**

ಭಾರತೀಯ 'ವೈಚಾರಿಕತೆ'ಗೆ ಪರಂಪರೆ ಹಾಗೂ ಭಿನ್ನ ನೆಲೆಗಳಿವೆ. ಈ ಬಗೆಯ ವೈಚಾರಿಕ ಕೂಟಗಳನ್ನು ಚರಿತ್ರೆ, ಸಮಾಜ, ಪಂಡಿತರು ಒಟ್ಟಾಗಿ ಎಂಬಂತೆ ಒಂದು ದೂರದ ಅಂತರದಲ್ಲಿಯೇ ಇಟ್ಟು ವ್ಯವಸ್ಥಿತವಾಗಿ ಅವಜ್ಞೆಗೆ ಗುರಿ ಮಾಡಿರುವುದನ್ನು ಗುರುತಿಸಬಹುದು. 'ವೈಚಾರಿಕತೆ' ಎರಡು ನೆಲೆಗಳಲ್ಲಿ ಅಸ್ತಿತ್ವ ಹೊಂದಿರುತ್ತದೆ. ಒಂದು ಬೌದ್ಧಿಕ, ಮತ್ತೊಂದು ಕ್ರಿಯೆ. ಆಧುನಿಕ ವೈಚಾರಿಕತೆಗೆ ಜಾತ್ಯಾತೀತತೆ, ಪ್ರಜಾಪ್ರಭುತ್ವ, ಹೊಂದಾಣಿಕೆ, ಪರ್ಯಾಯ ಚಿಂತನೆ,

ಬದ್ಧತೆಗಳೇ ಬುನಾದಿ. ಪ್ರತಿಭಟನೆ, ಕ್ರಾಂತಿ, ಹೋರಾಟ, ಸಂಘಟನೆಗಳೇ ಅಂಗ–ಅಂಶಗಳು.

ವೈದಿಕ ವಿಚಾರಧಾರೆ ತನ್ನ ಕಬಂಧ ಬಾಹುಗಳಿಂದ ಭಾರತೀಯ ಆಲೋಚನ ಕ್ರಮವನ್ನು ಆವರಿಸಿರುವುದಲ್ಲದೆ; ತನಗೆ ಸೆಡ್ಡು ಹೊಡೆದ, ಹೊಸ ಜ್ಞಾನ ಮಾರ್ಗಗಳನ್ನು ಅನ್ವೇಷಿಸಿದ, ಪ್ರಯೋಗಿಸಿದ ಬೌದ್ಧ, ಜೈನ, ಚಾರ್ವಾಕ ಮತ್ತು ಉಳಿದ ವೈಚಾರಿಕ ಪಂಥಗಳನ್ನು ಬೌದ್ಧಿಕ ವಲಯದಿಂದ ದೂರವಿಟ್ಟಿರುವುದು ವೇದ್ಯ. ಅವೈದಿಕ ದನಿ ಕೇಳಿದಾಗಲೆಲ್ಲಾ ಅದು ಏಕಾಂಗಿಯಾಗುವಂತೆ ಮಾಡಿದ ವ್ಯವಸ್ಥೆ ಪ್ರಭುತ್ವದೊಂದಿಗೆ ಮಧುರ ಸಂಬಂಧ ಹೊಂದಿತ್ತು, ಹೊಂದಿದೆ ಎಂಬುದೂ ಸತ್ಯ.

ವಚನ ಸಾಹಿತ್ಯ ಒಂದು ಜಾತಿಗೆ, ಧರ್ಮಕ್ಕೆ ಸಂಬಂಧಪಟ್ಟದ್ದೆಂಬ ಗ್ರಹಿಕೆ ಬೆಳೆದಿದೆ. ಅಲ್ಲಮನ ಕಟುಟೀಕೆ, ಬಸವನ ಅನುನಯದ ಮಾತು, ಅಕ್ಕನ ಪ್ರತಿಭಟನೆ, ಸಿದ್ಧರಾಮನ ಕ್ರಿಯೆಗಳನ್ನು ಗಮನಿಸಿದಾಗ 'ವಚನಗಳ' ವಿಶಾಲ ತಳಹದಿಯ ಗ್ರಹಿಕೆ ದಕ್ಕುತ್ತದೆ. ಜಾತಿ, ಭಾಷೆ, ವ್ಯವಸ್ಥೆ, ಪ್ರಭುತ್ವಗಳನ್ನು ವಿರೋಧಿಸಿದ, ಗಂಡು–ಹೆಣ್ಣಿನ ವ್ಯಕ್ತಿ ಸ್ವಾತಂತ್ರ್ಯಕ್ಕೆ 'ಭಾಷ್ಯ' ಬರೆದ ಈ ಚಿಂತನಾಕ್ರಮ ಭಾಷಿಕ ಸಂರಚನೆಗಳಾಗಿಯೂ ಬೆರಗುಂಟು ಮಾಡುತ್ತಿದೆ. ಈ ಬಗೆಯ ಬಹುಮುಖ ಆಯಾಮಗಳಿರುವ ವಚನದ ಭಿನ್ನ ಪಾತಳಿಗಳನ್ನು ವೈಚಾರಿಕ ನೆಲೆಯಲ್ಲಿ ಗುರುತಿಸಲಾಗಿದೆ[೩೨].

ವಚನಕಾರ್ತಿಯರ ವಚನಗಳಲ್ಲಿ ಗಂಡನನ್ನು ಪ್ರಶ್ನಿಸುವ, ಗಂಡನ ತಪ್ಪು ದಾರಿಗಳನ್ನು ತಿದ್ದುವ, ಹೆಣ್ಣನ್ನು ದೇವತಾ ಸ್ವರೂಪಿಣಿ ಎಂದು ಹೊಗಳಿರುವುದರ ಹಿಂದಿನ ದುರುದ್ದೇಶದ ವಿಡಂಬನೆಗಳಿವೆ. ವ್ರತ, ಆಚಾರಣೆ, ಧರ್ಮ, ಸಂಪ್ರದಾಯ, ರೂಢಿ ಹಾಗೂ ವರ್ಣ– ವರ್ಗಗಳೆಂಬ ಇತ್ಯಾದಿ ವಿಷಯಗಳನ್ನು ಕುರಿತು ನಮ್ಮ ವಚನಕಾರ್ತಿಯರು ವೈಚಾರಿಕ ದೃಷ್ಟಿಯನ್ನು ತೆಳೆದಿರುವುದನ್ನು ಗಮನಿಸಬೇಕಾಗುತ್ತದೆ. ಆಯ್ದಕ್ಕಿ ಲಕ್ಕಮ್ಮನ ವಚನದಲ್ಲಿ 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ? ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೆ? ಘನ ಶಿವಭಕ್ತರಿಗೆ ಬಡತನವಿಲ್ಲ ಸತ್ಯರಿಗೆ ದುಷ್ಕರ್ಮವಿಲ್ಲ. ಎನಗೆ ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗವುಳ್ಳನ್ನಕ್ಕ ಆರ ಹಂಗಿಲ್ಲ ಮಾರಯ್ಯಾ'. ಇಲ್ಲಿ ನಿಜಶಿವಭಕ್ತನಿಗೆ ಬಡತನವೆಂಬುದಿಲ್ಲ.

ಅವನು ಸತ್ಯದ ಮಾರ್ಗದಲ್ಲಿ ನಡೆಯುವವನಾಗಿದ್ದರೆ ಕೇಡೆಂಬುದು ಸುಳಿಯುವುದಿಲ್ಲ.

"ಆವ ಬೀಜವು ಬೀಳುವಲ್ಲಿ ಮೊಳೆ ಮುಖ ಹಿಂಚು ಮುಂಚುಂಟೆ? ನೀ ಮರೆದಲ್ಲಿ ನಾನರಿದಲ್ಲಿ ಬೇರೊಂದೊಡಲುಂಟೆ? ಮೂಲ ನಷ್ಟವಾದಲ್ಲಿ ಅಂಕುರ ನಿಂದಿತ್ತು. ಕೂಟಕ್ಕೆ ಸತಿಪತಿ ಎಂಬ ನಾಮವಲ್ಲದೆ ಅರಿವಿಂಗೆ ಬೇರೊಂದೊಡಲುಂಟೆ? ಬೇರೊಂದಡಯಿಡದಿರು ಮಾರಯ್ಯ ಪ್ರಿಯ ಅಮಲೇಶ್ವರಲಿಂಗವನರಿಯಬಲ್ಲಡೆ. ಈ ವಚನದಲ್ಲಿ ಲಕ್ಕಮ್ಮಳು ಕೃಷಿ ಪದ್ಧತಿಯಲ್ಲಿ ಅನುಸರಿಸುವ ನಿಯಮಗಳು ಹಿಂದುಮುಂದಾದಲ್ಲಿ ಬೆಳೆಗಳು ಹೇಗೆ ಕೈಗೆ ಸಿಗುವುದಿಲ್ಲವೋ ಹಾಗೆ ಸತಿಪತಿಯೆಂಬ ನಾಮವನ್ನು ಹೊಂದಿರುವ ದೇಹಧಾರಿಗಳಲ್ಲಿ ಅಡಗಿರುವ ಅಮೂರ್ತ ಸ್ವರೂಪದ ಆತ್ಮ ಮೂರ್ತವಾಗಲು ಸಾಧ್ಯವೇ ಎಂದು ಪ್ರಶ್ನಿಸುತ್ತಾಳೆ. ಈ ಮೂಲಕ ಆತ್ಮದ ಕುರಿತಾದ ವೈಚಾರಿಕ ಪ್ರಜ್ಞೆಯನ್ನು ತಳೆಯುತ್ತಾಳೆ. ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲ ಅಕ್ಕಿಯ ತಂದು ನಿಚ್ಚೈಸಿ ಮಾಡಬೇಕು ಮಾರಯ್ಯಪ್ರಿಯ ಅಮಲೇಶ್ವರ ಲಿಂಗಕ್ಕೆ ಬೇಗ ಹೋಗು ಮಾರಯ್ಯ. ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ ಅಯ್ಯಾ? ರೋಷವೆಂಬುದು ಯಮ ದೂತರಿಗಲ್ಲದೆ, ಅಜಾತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ ಮಾರಯ್ಯ ಪ್ರಿಯ ಅಮಲೇಶ್ವರ ಲಿಂಗಕ್ಕೆ ದೂರ ಮಾರಯ್ಯ. ವಚನಧರ್ಮದಲ್ಲಿ ಸ್ತ್ರೀಯರಿಗೆ ಪುರುಷರಂತೆಯೇ ಸಮಾನವಾದ ಹಕ್ಕು ಗೌರವವೂ ಉಂಟು. ಆದರೆ ಅದನ್ನು ಸ್ಮೃತಿಯಿಂದ ಹೊರತರಲಾಗಿತ್ತು. ಈ ವಚನದಲ್ಲಿ ಸ್ತ್ರೀ ತನ್ನ ಗಂಡನ ಕಾಯಕ ನಿಷ್ಠೆಯನ್ನು ಜಾಗೃತಗೊಳಿಸುತ್ತಾಳೆ. ಆ ಮೂಲಕ ಮಹಾಮನೆಯ ಅಂಗಳದಲ್ಲಿ ಬಿದ್ದ ಅಕ್ಕಿಯನ್ನು ಹೆಚ್ಚಾಗಿ ಆಯ್ದು ತಂದ ಪತಿಯ ದುರಾಸೆಯನ್ನು ಪ್ರೋತ್ಸಾಹಿಸದೆ ಅದನ್ನು ಮತ್ತೆ ಅಲ್ಲಿಯೇ ಸುರಿದು ಬರುವಂತೆ ಕಳಿಸುತ್ತಾಳೆ. ಗಂಡನಲ್ಲಿ ಅಂದಂದಿಗೆ ಬೇಕಾಗಿರುವ ಅಕ್ಕಿಯನ್ನು ಮಾತ್ರ ಆಯ್ದು ತರುವಂತೆ ಮಾರ್ಗದರ್ಶನ ಮಾಡುತ್ತಾಳೆ. ಪತಿಯ ದುರಾಸೆಯ ಮನೋಸ್ಥಿತಿಯನ್ನು ಕೈ ಬಿಡುವಂತೆ ವೈಚಾರಿಕವಾಗಿ ಹೇಳುತ್ತಾಳೆ. ಆಸೆಯೆಂಬುದು ಶಿವಭಕ್ತರಿಗೆ ಇರುವುದಿಲ್ಲವೆಂಬುದನ್ನು ಮನಗಾಣುವಂತೆ ಮಾಡಿದ್ದಾಳೆ. ಈಕೆಯ ಕಾಯಕ ನಿಷ್ಠೆ, ವಿವೇಕ, ಜ್ಞಾನ ವಿಶಿಷ್ಟವಾದವು. ತನ್ನ ಪತಿಗೆ ವಿವೇಕ ಹೇಳುವ ಇವಳ

ನಿಲುವು ವಿಶಿಷ್ಟವಾದುದು. ಈಕೆಯ ವಿವೇಕ ನಮ್ಮ ಸಮಾಜಕ್ಕೆ ಎಂದು ಅರಿವಾಗುವುದೋ ಶಿವನೇ ಬಲ್ಲ![೩೩].

ಸತ್ಯಕ್ಕನ ವಚನಗಳಲ್ಲಿ ಅರ್ಚನೆ ಪೂಜೆ ನೇಮವಲ್ಲ; ಮಂತ್ರ, ತಂತ್ರ ನೇಮವಲ್ಲ; ಧೂಪ ದೀಪಾರತಿ ನೇಮವಲ್ಲ; ಪರಧನ, ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ. ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣ ನಿತ್ಯನೇಮ. ಹೊರಗಿದ್ದಹನೆಂದು ನಾನು ಮರೆದು ಮಾತನಾಡಿದೆ; ಅರಿಯಲೀಯದೆ ಬಂದೆನ್ನ ಅಂತರಂಗದಲ್ಲಿಪ್ಪನು, ತೆರಹಿಲ್ಲದ ಭವ ನುಡಿಗೆಡೆಗೊಡನು; ಆತನ ಬಯಲಿಂಗೆ ಬೇಟಗೊಂಡೆನವ್ವಾ. ನಾನೇನ ಮಾಡುವೆನೆಲೆ ತಾಯೆ, ಮರೆದೆಡೆ ಎಚ್ಚರಿಸುವ ಕುರುಹಿಲ್ಲದ ಗಂಡನು ತನ್ನನರಿದಡೆ ಒಳ್ಳಿದನವ್ವಾ ನಮ್ಮ ಶಂಭುಜಕ್ಕೇಶ್ವರನು. ನೇಮದ ಬಗ್ಗೆ ಬಲ್ಲವರ ಚಿಂತನೆಯನ್ನು ವಿಂಡಬಿಸುತ್ತಾಳೆ. ಅರ್ಚನೆ, ಪೂಜೆ, ಮಂತ್ರ, ತಂತ್ರ, ಧೂಪ, ದೀಪಾರತಿಗಳೆಲ್ಲ ನೇಮವಲ್ಲ, ನಿಜವಾದ ನೇಮ ಪರಸ್ತ್ರೀಯರನ್ನು, ಪರರ ಧನವನ್ನು, ಪರರ ದೈವಗಳಿಗೆ ಗೌರವಿಸುವುದು, ಆರಾಧಿಸುವುದು ನಿಜನೇಮ ಎನ್ನುತ್ತಾಳೆ. ಲಂಚ ವಂಚನಕ್ಕೆ ಕೈಯಾನದ ಭಾಷೆ, ಬಟ್ಟೆಯಲ್ಲಿ ಹೊನ್ನು ವಸ್ತ್ರ ಬಿದ್ದಿದ್ದಡೆ ಕೈ ಮುಟ್ಟಿ ಎತ್ತಿದೆನಾದಡೆ ಅಯ್ಯಾ ನಿಮ್ಮಾಣೆ, ನೀವಿಕ್ಕಿದ ಭಿಕ್ಷೆಯೊಳಗಿಪ್ಪೆನಯ್ಯಾ. ಕಾಯಕ ಪ್ರೀತಿ, ಅನ್ಯರ ವಸ್ತು ಸ್ವೀಕರಣೆ ನಿರಾಕರಣೆ, ಸದ್ಯದ ಬದುಕಿನ ಬದ್ಧತೆ, ಇಟ್ಟಂತೆ ಇರುವೆ ಎಂಬ ಛಲ, ಆತ್ಮವಿಶ್ವಾಸ, ಪ್ರಾಮಾಣಿಕತೆ, ಅರಿವಿನ ಹಿರಿತನ, ಧೈರ್ಯಗಳನ್ನೊಳಗೊಂಡ ವೈಚಾರಿಕ ನೆಲೆ ಇವಳ ವಚನಗಳ ವಿಶೇಷತೆಯಾಗಿದೆ. ಹೊರಗಿರುವನೆಂದು ತಿಳಿದು ಅಥವಾ ಮರೆತು ಮಾತನಾಡಬಾರದು. ಅರಿವೆ ದೇವರಾಗಿ, ನಮ್ಮನ್ನು ನಾವು ಅರಿತರೆ ಅಂತರರಂಗದಲ್ಲಿ ದೇವರು ಕಾಣುವನು. ಆತ್ಮ, ಮನಸ್ಸು, ದೇವರುಗಳು ಬಯಲಿನ ಸ್ವರೂಪ ಬಯಲಿಗೆ ಹೇಗೆ ಕುರುಹುವಿಲ್ಲವೋ ತನ್ನ ಗಂಡನ ಆತ್ಮಕ್ಕೂ – ತನ್ನ ಆತ್ಮ ಕುರುಹು ಇಲ್ಲ ತನ್ನ ತಾನೇ ಅರಿತರೇ ಅದೇ ಕುರುಹು ಎಂದು ಮೂರ್ತ ಅಮೂರ್ತ ಸ್ವರೂಪದ ನೆಲೆಯನ್ನು ವಿಡಂಬಿಸುತ್ತಾಳೆ.

ಗಜೇಶ ಮಸಣಯ್ಯನ ಪುಣ್ಯಸ್ತ್ರೀಯ ವಚನದಲ್ಲಿ "ಅಯ್ಯಾ, ಅಸ್ಥಿ ಚರ್ಮ ಮಾಂಸ ಶುಕ್ಲ ಶೋಣಿತದ ಗುಡಿಯ ಕಟ್ಟಿ, ಹಂದಿಯ ದೇವರ ಮಾಡಿ ಕುಳ್ಳಿರಿಸಿ, ಪಾದರಕ್ಷೆಯ ಪೂಜೆಯ ಮಾಡಿ, ನೈವೇದ್ಯವ ಹಿಡಿದು, ಮೂತ್ರದ ನೀರ ಕುಡಿಸಿ, ಶ್ವಾನ ಕುಕ್ಕಟನಂತೆ ಕೂಗಿ ಬೊಗಳಿ, ದಡದಡ ನೆಲಕ್ಕೆ ಬಿದ್ದು ಕಾಡಿಕೊಂಡು, ಆ ದೇವರ ಒಡೆಯ ಮಾರೇಶ್ವರ, ಕಂಡ ಹೆಂಡ ಕೊಡುವನಲ್ಲದೆ

ಅನ್ನ ನೀರು ಕೊಡುವನೆ? ಆ ದೇವರಿಗೆ ಹೊಲೆಯರು ಮಚ್ಚುವರಲ್ಲದೆ, ಉತ್ತಮರು ಮಚ್ಚರು ನೋಡಯ್ಯ, ಮಸಣಯ್ಯ ಪ್ರಿಯ ಮಾರೇಶ್ವರಲಿಂಗವೆ[೩೪].

ಅಲ್ಲಮನ ಮಾತೆಂಬುದು ಜ್ಯೋತಿರ್ಲಿಂಗವಾಗಿರಬೇಕು. ಬಸವಣ್ಣನ ಮಾತೆಂಬುದು ನುಡಿದರೆ ಮುತ್ತಿನಹಾರದಂತಿರಬೇಕು. ಉಳ್ಳವರು ಶಿವಾಲಯವ ಮಾಡುವರು ನಾನೇನು ಮಾಡಲಯ್ಯ ಎನ್ನ ಕಾಲೆ ಕಂಬ. ದೇಹವೇ ದೇಗುಲ ಎಂದು ಹೇಳಿರುವ ಬಸವಣ್ಣನ ಮಾತನ್ನು ನೆನಪಿಗೆ ತರುತ್ತದೆ. ಆದರೆ ಅಸ್ಥಿ, ಚರ್ಮ, ಮಾಂಸ, ಶುಕ್ಲ, ಶೋಣಿತದಿಂದ ನಿರ್ಮ್ಮಾಣವಾದ ಗುಡಿಗಳು, ಅಲ್ಲಿ ದೇವರ ಮೂರ್ತಿಯಾಗಿ ಹಂದಿ, ಪಾದರಕ್ಷೆ, ಶ್ವಾನ (ನಾಯಿ) ಕುಕ್ಕಟ, ಕೂಗಿಗಳನ್ನು ಕೂರಿಸಿ ಪೂಜೆ ಮಾಡುವರು. ಈ ದೇವರುಗಳು ಕಂಡ (ಮಾಂಸ) ಹೆಂಡ (ಮದ್ಯ)ವನ್ನು ಕೊಡುವನಲ್ಲದೆ ಅನ್ನ–ನೀರನ್ನು ಕೊಡುವುದಿಲ್ಲ. ಹೀಗೆ ದೇವರ ಅಸ್ತಿತ್ವವನ್ನು ಪ್ರಶ್ನಿಸಿ, ದೇವರ ಸೃಷ್ಟಿಯ ಹಿಂದಿನ ವ್ಯಕ್ತಿ ಸ್ವಾರ್ಥವನ್ನು ಬಿಚ್ಚಿಡುವ ಪ್ರಯತ್ನವನ್ನು ಮಾಡಿದ್ದಾಳೆ. ದೇವರುಗಳಲ್ಲೂ ಕೂಡ ಮೇಲುಕೀಳಿನ ದೇವರುಗಳಿದ್ದಾರೆ. ಜಾತಿಯ ನೆಲೆಯನ್ನ ಆಧಾರಸಿ ದೇವರುಗಳ ಅಸ್ತಿತ್ವ ನಿರ್ಮಾಣವಾಗಿವೆ ಇದು ಎಂತಹ ವಿಪರ್ಯಾಸ ಎಂದು ವಿಚಾರಗಳನ್ನು ಖಂಡಿಸುತ್ತಾಳೆ. ಜೊತೆಗೆ ಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸುತ್ತಾಳೆ.  ನರರ ಬೇಡೆನು, ಸುರರ ಹಾಡೆನು, ಕರಣಂಗಳ ಹರಿಯ ಬಿಡೆನು, ಕಾಮನ ಬಲೆಗೆ ಸಿಲ್ಕೆನು ಮರೆವೆಗೊಳಗಾಗೆನು. ಪ್ರಣವ ಪಂಚಾಕ್ಷರಿಯ ಜಪಿಸಿದೆನೆಂದು, ತನುವ ಮರೆದು ನಿಜಮುಕ್ತಳಾದೆನಯ್ಯಾ, ಸಾಕಯ್ಯ, ಲೋಕದ ಹಂಗು ಹರಿಯಿತು. ತನುವಿನಾಸೆ ಬಿಟ್ಟಿತ್ತು. ಮನದ ಸಂಚಲ ನಿಂದಿತ್ತು. ನುಡಿ ಗಡಣ ಹಿಂಗಿತ್ತು. ಘನವ ಬೆಲೆಯಿತ್ತು ಬೆಳಗ ಕೂಡಿತ್ತು, ಬಯಲಿನೊಳಗೋಲಾಡಿ ಸುಖಿಯಾದೆನಯ್ಯಾ ಎನ್ನುವ ವಚನದ ಹಡಪದಪ್ಪಣ್ಣನ ಪುಣ್ಯಸ್ತ್ರೀ ಲಿಂಗಮ್ಮನ 'ಎಚ್ಚರ'ದ ನಿಲುವು ಬೆರಗುಂಟು ಮಾಡುತ್ತದೆ. ಗಟ್ಟಿ ಬದುಕು ಮತ್ತು ದೃಢ ವ್ಯಕ್ತಿತ್ವ ಇವಳದು. ತನ್ನ ಸೂಕ್ಷ್ಮ ಪ್ರಜ್ಞೆ ಮತ್ತು ಗ್ರಹಿಕೆಯಲ್ಲಿನ ಎಚ್ಚರದಿಂದಾಗಿ ಇವಳ ವಚನ ಉಳಿದ ಸ್ತ್ರೀ ವಚನಗಳಿಂದ ಭಿನ್ನವೆನಿಸುತ್ತವೆ.

ಮನವ ಗೆದ್ದನೆಂದು ತನುವ ಕರಗಿಸಿ, ಕಾಯಕವ ಮರುಗಿಸಿ ನಿದ್ರೆಯ ಕೆಡಿಸಿ, ವಿದ್ಯೆಯ ಕಲಿತಿಹನೆಂದು ಬುದ್ಧಿ ಹೀನರಾ ನೀವು ಕೇಳಿರೋ, ನಮ್ಮ ಶರಣರು ಮನ ಏನೆಂತು ಗೆದ್ದಹರೆಂದರೆ, ಕಾಮ ಕ್ರೋಧವ ನೀಗಿ, ಲೋಭ ಮೋಹ ಮದ ಮತ್ಸರವ ಭೇದಿಸಿ ಆಸೆ ರೋಷವ ಅಳಿದರು.., ತನ್ನ

ತಾನರಿಯದೆ ಅನ್ಯರಿಗೆ ಬೋಧಿಸುವ ಅಣ್ಣಗಳಿರಾ, ನೀವು ಕೇಳಿರೋ, ಅವರ ಬಾಳುವೆ ಕುರುಡ ಕನ್ನಡಿ ಹಿಡಿದಂತೆ. ಈಕೆ ನಿಜಶರಣರ ವ್ಯಕ್ತಿತ್ವದ ಸ್ವರೂಪ ಪ್ರತಿಪಾದಿಸಿದ್ದಾಳೆ. ತನ್ನ ಹಾಡು ಪಾಡು ತನ್ನದು. ಇಹ–ಪರ, ಸ್ವರ್ಗ–ನರಕ ಈ ಭೇದವನ್ನು ತಿರಸ್ಕರಿಸಿದ್ದಾಳೆ. ಕೈಲಾಸ, ದೇವರು, ಸಾರಲೋಕ ಈಕೆಗೆ ನಗಣ್ಯ, ಸರಳತೆ, ಸಹಜತೆ, ನಿರ್ಭೀಡೆ, ಸ್ವತಂತ್ರ ವ್ಯಕ್ತಿತ್ವ ಇವಳ ವಚನಗಳ ಓದಿನಿಂದ ಅರಿವಾಗುತ್ತದೆ. ಅರಿಷಡ್ವರ್ಗಗಳನ್ನು ಗೆಲ್ಲುವ, ಶರಣತ್ವ ಪಡೆವ ಬಗೆಯನ್ನು ಪುನರ್‌ರಚಿಸಿದ್ದಾಳೆ. ಹಾಗೆಯೇ ಬೋಧಿಸುವ ಅಥವಾ ಉಪದೇಶಿಸುವವರಿಗೆ ವೈಚಾರಿಕತೆ ಚಾಟಿಯೇಟಿನಿಂದ ಪ್ರತಿಕ್ರಿಯೆ ನೀಡಿದ್ದಾಳೆ. ವರ್ಣಾಶ್ರಮ ವ್ಯವಸ್ಥೆಯನ್ನು ವಿರೋಧಿಸಿ ಅದರಲ್ಲಿನ ಅಮಾನವೀಯ ಮುಖಗಳ ಅನಾವರಣಕ್ಕೆ ಯತ್ನಿಸಿದ್ದು; ಮಾನವೀಯ ಸಂಬಂಧಗಳನ್ನು ಗುರುತಿಸಲು ಆಶಿಸಿದ್ದು; "ಅರಿವಿಗೆ" ಆದ್ಯತೆ ನೀಡಿದ್ದು, ಅಂತರಂಗ ಶುದ್ಧಿಗೆ ಬದ್ಧವಾದದ್ದು, ವೇಷ ಧರಿಸಿ ಆಚರಣೆ, ಧರ್ಮದ ಹೆಸರಿನಲ್ಲಿ ನಡೆಸುತ್ತಿದ್ದ ಶೋಷಣೆಯನ್ನು ಗುರುತಿಸಿ ಧಿಕ್ಕರಿಸಿದ್ದು, ಜಾತಿ ಭೇದ ಬೇಡ ಎಂದು ಆಯಾ ಜನರ ವೃತ್ತಿ ಉಪಯೋಗದ ಮಾದರಿಗಳಿಂದಲೋ ನಿದರ್ಶನ ನೀಡಿದ್ದು' ಕುರಿ, ಕೋಳಿ, ಕಿರಿಮೀನು ತಿಂಬವರಿಗೆಲ್ಲ ಕುಲಜರೆಂಬಿರಿ, ಶಿವಗೆ ಪಂಚಾಮೃತವ ಕರೆವ, ಪಶುವ ತಿಂಬ ಮಾದಿಗ ಕೀಳೆ? ಏನಯ್ಯಾ ವಿಪ್ರರು ನುಡಿದಂತೆ ನಡೆಯರು ಇದೆಂತಯ್ಯ, ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ[೩೫] ಎಂದು ವೈದಿಕ ಆಚರಣೆ, ನಂಬಿಕೆಗಳಿಗೆ ಪ್ರಶ್ನೆ ಹಾಕಿದ್ದು ವಿಶೇಷ ಧೈರ್ಯ.

ಬತ್ತಲೆ ಇದ್ದವರೆಲ್ಲ ಕತ್ತೆಯ ಮಕ್ಕಳು. ತಲೆ ಬೋಳಾದವರೆಲ್ಲ ಮುಂಡೆಯ ಮಕ್ಕಳು, ತಲೆ ಜಡೆಗಟ್ಟಿದವರೆಲ್ಲಾ ಹೊಲೆಯ ಸಂತಾನ..... ಆವ ಪ್ರಕಾರ ವಾದಡೇನು? ಅರಿವೇ ಮುಖ್ಯವಯ್ಯಾ. ಎಂದು ಹೇಳಿದ ಅಕ್ಕಮ್ಮನ ಮಾತು ಕಠೋರವೆನಿಸಿದರೂ ಸತ್ಯವಾಗಿದೆ. ವ್ರತಾಚರಣೆಯಲ್ಲಿನ ದ್ವಂದ್ವಗಳನ್ನು ಖಂಡಿಸುವ ಈಕೆ 'ಅರಿವೇ' ಮುಖ್ಯ ಎನ್ನುತ್ತಾಳೆ. ಅಯ್ಯಾ, ಸೂಳೆಗೆ ಹುಟ್ಟಿದ ಮಕ್ಕಳಿಗೆ ಕೊಟ್ಟವರೊಳು ಸಮ್ಮೇಳ, ಕೊಡದವರೊಳು ಕ್ರೋಧ, ವ್ರತಿಹೀನರೊಳು ಮೇಳ, ವ್ರತನಾಯಕರೊಳು ಅಮೇಳ, ಸುಡುಸುಡು ಅವರ ಕೂಡಿದಡೆ ಉರಿಲಿಂಗಪೆದ್ದಿಗಳರಸನೊಲ್ಲನವ್ವಾ. ಕಾಳವ್ವೆಯು ಈ ವಚನದಲ್ಲಿ ವೈದಿಕರನ್ನು ಅವರ ಧರ್ಮ, ಅವರ ಅಚರಣೆಗಳನ್ನು ಕಟುವಾಗಿ ಟೀಕಿಸಿದ್ದಾಳೆ. ಸತ್ಯಶುದ್ಧವಿಲ್ಲದುದು ಕಾಯಕವಲ್ಲ ಎನ್ನುತ್ತಾಳೆ. ಭಕ್ತರ ಕುಲವನೆತ್ತಿ ನಿಂದಿಸುವಾತ ಭಕ್ತನೆ' ಎಂದು ವೈಚಾರಿಕವಾಗಿ ಪ್ರಶ್ನಿಸುತ್ತಾಳೆ. ಮತ್ತೊಂದು ವಚನದಲ್ಲಿ

ಈಕೆಯು ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ, ನಿತ್ಯ ಶುದ್ಧವಿಲ್ಲದುದು ಕಾಯಕವಲ್ಲ, ಆಸೆಯೆಂಬುದು ಕಾಯಕವಲ್ಲ, ಆಸೆಯೆಂಬುದು ಭವದ ಬೀಜ, ನಿರಾಸೆಯೆಂಬುದು ನಿತ್ಯ ಮುಕ್ತಿ, ಉರಿಲಿಂಗಪೆದ್ದಿಗಳರಸನಲ್ಲಿ ಸದಾವಲ್ಲ ಕಾಣವ್ವಾ ಎಂದು ಬುದ್ಧಿಗೇಡಿಗೆ ನಾಯಕ ನರಕ ತಪ್ಪದಯ್ಯಾ ಎಂದು ವೈಚಾರಿಕ ಪ್ರಜ್ಞೆ ಮೂಡಿಸುತ್ತಾಳೆ. ಸಾಮಾಜಿಕ ಅಸಮಾನತೆಗೆ ಕಾರಣವಾಗಿರುವ ಬ್ರಾಹ್ಮಣ್ಯರ ಬಗೆಗೆ ಈಕೆಯದು ಕಡು ಕೋಪ, ಕಡು ಟೀಕೆ. ಇದು ಸರಿಯಾದ ನಿಲುವು! ಅಂತ ನನಗೆ ಅನಿಸುತ್ತದೆ. ಅನಲಕೊಂಡ ಭೋಗಕ್ಕೆ ಪರಿಪ್ರಕಾರವುಂಟೆ, ಶರಧಿಕೊಂಡ ಸಾಗರಕ್ಕೆ ಕುರುಹಿನ ತಲೆಯೆ? ಲಿಂಗ ಮುಟ್ಟಿದ ಅಂಗಕ್ಕೆ ಮತ್ತೆ ಪುಣ್ಯವುಂಟೆ ಹುಸಿ ನಾಸ್ತಿನಾಥ ಎಂದು ಧೂಪದ ಗೊಗ್ಗವ್ವೆಯು ವೈಚಾರಿಕವಾಗಿ ಪ್ರಶ್ನಿಸುತ್ತಾಳೆ. ಸುಳ್ಳನ್ನು ಸತ್ಯವೆಂದು ನಂಬಿಸಿ, ಅದನ್ನು ಪಾಲಿಸುವಂತೆ ನಿಯಮದ ಮೂಲಕ ಹೇಳಲ್ಪಟ್ಟಿದ್ದನ್ನು ವಿರೋಧಿಸುತ್ತಾಳೆ. ಆ ಮೂಲಕ ಜನಸಾಮಾನ್ಯರಲ್ಲಿ ವೈಚಾರಿಕ ಪ್ರಜ್ಞೆಯನ್ನು ಮೂಡಿಸುವ ಪ್ರಯತ್ನ ಮಾಡಿದ್ದಾಳೆ.

ರಾಯಮ್ಮ ತನ್ನ ಹರಿತವಾದ ಮಾತುಗಳಿಂದ ವೇಷಧಾರಿ ಶರಣರನ್ನು ಖಂಡಿಸಿ, ವಿಡಂಬಿಸಿ, ವೈಚಾರಿಕ ಪ್ರಜ್ಞೆಯನ್ನು ಮೂಡಿಸುವ ಪ್ರಯತ್ನ ಮಾಡಿದ್ದಾಳೆ. 'ಮಂಡೆಯ ಬೋಳಿಸಿಕೊಂಡು ತುಂಡುಗಂಬಳಿಯ ಹೊದ್ದವರ ಕಂಡಡೆ ನಂಬಲಾರೆ ನಚ್ಚಲಾರೆ ಈ ವೇಷವ ಕಂಡು ನಾಚಿದೆ. ತಾನು ನಿರವಯಸ್ಥಲದಲ್ಲಿರುವಳಾದ್ದರಿಂದ ತನಗೆ ಗುರುಲಿಂಗ ಜಂಗಮಗಳ ಅಗತ್ಯವಿಲ್ಲವೆಂದೂ ಮೈ ಮೇಲೆ ಲಿಂಗವನ್ನು ಧರಿಸುವುದಿಲ್ಲವೆಂದೂ ಧೈರ್ಯವಾಗಿ ಹೇಳಿಕೊಂಡಿದ್ದಾಳೆ. ಎನ್ನ ಲಿಂಗಕ್ಕೆ ಸೆಜ್ಜೆ ಶಿವದಾರವ ಬಾಯೆತ್ತಿ ಭಕ್ತ ಜಂಗಮದ ಬೇಡಿದೆನಾದಡೆ ಎನ್ನ ಆರುವಿಂಗೆ ಭಂಗ ನೋಡ' ರಾಯಮ್ಮ – ಹೆಣ್ಣಾದರೂ ಕಡುಗಲಿಯಾಗಿದ್ದಳು. ಆಚರಿಸಿ ಜಡಿದೆನು ಅಜ್ಞಾನಿಗಳ ಬಾಯಕೆರಹಿನಲ್ಲಿ, ಎನ್ನುವ ಬೈಗುಳದ ಮಾತನ್ನು ಆಡಲು ಅವಳು ಹಿಂಜರಿಯಳು. ಒಂದು ಬಗೆಯ ನಿರ್ಲಕ್ಷ್ಯದ ಹೆಣ್ಣು ಮಗಳಂತೆ ತೋರಿದರೂ ಅವಳಿಗೆ ಸಮಾಜದ ಬಗ್ಗೆ ತೀವ್ರ ಕಳಕಳಿಯಿದೆ ಜಾತಿ ಭೇದವನ್ನು ಅವಳು ಖಂಡಿಸುತ್ತಾಳೆ.

ಅವಳ ವಚನದಲ್ಲಿ ಹಂದಿ, ಕತ್ತೆ, ಕಳ್ಳ, ಹೊತ್ತು ಹೋಕರು ಪಟ್ಟಣದ ಸೂಳೆಯರ ಪ್ರತಿಮೆಗಳು ಬರುತ್ತವೆ. ಹೀಗೆ ಅವಳ ವಚನಗಳ ಒರಟುತನವೇ ವೈಚಾರಿಕ ಅಭಿವ್ಯಕ್ತಿಗೆ ನಾವೀನ್ಯತೆಯನ್ನು ತಂದುಕೊಟ್ಟಿವೆ. ಈ ಬಗೆಯ ಆಲೋಚನೆಗಳು ಬಿಂಬಿತವಾಗಿರುವ ಕೆಲವು ವಚನಗಳನ್ನು

ಗಮನಿಸಿದ್ದೇವೆ. ಇಲ್ಲೆಲ್ಲಾ ಅದು ವೈಜ್ಞಾನಿಕ, ಧನಾತ್ಮಕ, ಪ್ರಾಯೋಗಿಕ ಎಂದು ಸಾರಾಸಗಟಾಗಿ ಒಪ್ಪಿಕೊಳ್ಳುವ ಬದಲು ಬಹುಶಃ ದೊಡ್ಡ ಪ್ರಮಾಣದಲ್ಲಿ ಕನ್ನಡ ನೆಲದಲ್ಲಿ ನಡೆದ ಪರ್ಯಾಯ ಆಲೋಚನಾ ಕ್ರಮದ ವಿವಿಧ ವಿನ್ಯಾಸಗಳ ಮೊತ್ತ ಎಂದು ವಚನ ಚಳುವಳಿಯನ್ನು ಪೃಥಕ್ಕರಿಸಿದಲ್ಲಿ ವಚನಕಾರರ ಆಲೋಚನೆ ಮತ್ತು ಅಭಿವ್ಯಕ್ತಿ ವಿಧಾನಗಳನ್ನು ಗ್ರಹಿಸಬಹುದು. ಇಲ್ಲಿನ 'ವೈಚಾರಿಕತೆ' ವಚನಕಾರ್ತಿಯರ ಕಾಲದ ಭಿನ್ನಧ್ವನಿಅಷ್ಟೇ.

**ಅಡಿ ಟಿಪ್ಪಣಿ :**

೧. ಸಮಾಜಶಾಸ್ತ್ರ – ಚ.ನ. ಶಂಕರರಾವ್–ಜೈ ಭಾರತ ಪ್ರಕಾಶನ, ಮಂಗಳೂರು, ಪರಿಷ್ಕೃತ ಆವೃತ್ತಿ–೨೦೦೦ – ಪುಟ ಸಂಖ್ಯೆ: ೪೧,೪೨.

೨. ಸಮಾಜಶಾಸ್ತ್ರ – ಚ.ನ ಶಂಕರರಾವ್ – ಪುಟ ಸಂಖ್ಯೆ: ೪೨.

೩. ಸಮಾಜ ವಿಜ್ಞಾನ – ಪುಟ ಸಂಖ್ಯೆ: ೮೮.

೪. ವಚನ ಕಮ್ಮಟ – ಸಂಪಾದಕರು, ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ, ಆರನೇ ಮುದ್ರಣ–ಮೇ–೨೦೧೫ – ಪುಟ ಸಂಖ್ಯೆ: ೫೧೩.

೫. ಇಪ್ಪತ್ತೈದು ವಚನಕಾರ್ತಿಯರ ಜೀವನ ಹಾಗೂ ಸಾಧನೆ – ಲೇ.ಶ್ರೀಮತಿ ಜಗದಾಂಬ ಮಲ್ಲೇದೇವರು. ಪುಟಸಂಖ್ಯೆ ೯೯, ೧೦೦

೬. ವಚನ ಕಮ್ಮಟ – ಸಂಪಾದಕರು, ಕೆ. ಮರುಳಸಿದ್ದಪ್ಪ, ಕಿ.ರಂ. ನಾಗರಾಜ – ಪುಟ ಸಂಖ್ಯೆ: ೫೧೪

೭. ಇಪ್ಪತ್ತೈದು ವಚನಕಾರ್ತಿಯರು ಜೀವನ ಹಾಗೂ ಸಾಧನೆ – ಲೇ.ಶ್ರೀಮತಿ ಜಗದಾಂಬ ಮಲ್ಲೇದೇವರು– ಪ್ರಕಾಶಕರು ಮೂರು ಸಾವಿರ ಮಠ, ಹುಬ್ಬಳ್ಳಿ – ಪುಟ ಸಂಖ್ಯೆ: ೨೭.

೮. ವಚನ ಕಮ್ಮಟ – ಪುಟ ಸಂಖ್ಯೆ: ೫೭೯.

೯. ಶಿವಶರಣೆಯರ ವಚನಸಂಪುಟ – ಪ್ರಧಾನ ಸಂಪಾದಕರು–ಡಾ. ಎಂ.ಎಂ. ಕಲಬುರ್ಗಿ –ದ್ವಿತೀಯ ಪರಿಷ್ಕೃತ ಮುದ್ರಣ–೨೦೦೧ – ಪುಟ ಸಂಖ್ಯೆ: ೨೨,೨೩,೨೪,೨೫,೨೬

೧೦. ವಚನಕಾರ್ತಿಯರು – ಕಾಶಿ ವಿಶ್ವನಾಥ ಶೆಟ್ಟಿ – ಪ್ರಕಾಶಕರು ಆರ್ಯ ವೈಶ್ಯ ಮಿತ್ರರು, ಅರಸೀಕೆರೆ – ಪುಟ ಸಂಖ್ಯೆ: ೨೨, ೨೩.

೧೧. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ: ೨೧.

೧೨. ಭಾರತೀಯ ಸಮಾಜ –ಚ.ನ. ಶಂಕರರಾವ್, ಜೈ ಭಾರತ್

(ಸಂರಚನೆ ಮತ್ತು ಪರಿವರ್ತನೆ) ಪ್ರಕಾಶನ – ಮಂಗಳೂರು – ಪುಟ ಸಂಖ್ಯೆ: ೧೪೨, ೧೪೩, ೧೪೪, ೧೪೫.

೧೩. ಭಾರತೀಯ ಸಮಾಜ -ಚ.ನ. ಶಂಕರರಾವ್ – ಪುಟ ಸಂಖ್ಯೆ: ೧೪೬.

೧೪. ವಚನಕಾರ್ತಿಯರು –ಕಾಶಿ ವಿಶ್ವನಾಥ ಶೆಟ್ಟಿ – ಪುಟ ಸಂಖ್ಯೆ: ೩೩.

೧೫. ಸಮಾಜಶಾಸ್ತ್ರ –ಚ.ನ. ಶಂಕರರಾವ್ – ಪುಟ ಸಂಖ್ಯೆ: ೧೫೦, ೧೫೧, ೧೫೨

೧೬. ಇಪ್ಪತ್ತೈದು ವಚನಕಾರ್ತಿಯರು: – ಲೇಖಕರು ಶ್ರೀಮತಿ ಜಗದಂಬಾ ಮಲ್ಲೇದೇವರು ಜೀವನ ಹಾಗೂ ಸಾಧನೆ ಪುಟ ಸಂಖ್ಯೆ: ೮೬.

೧೭. ಸಮಾಜಶಾಸ್ತ್ರ – ಚ.ನ. ಶಂಕರರಾವ್ – ಪುಟ ಸಂಖ್ಯೆ – ೧೫೩.

೧೮. ಶಿವಶರಣೆಯರ ವಚನಸಂಪುಟ – ಪುಟ ಸಂಖ್ಯೆ – ೪೧೫.

೧೯. ಸಮಾಜಶಾಸ್ತ್ರ – ಚ.ನ. ಶಂಕರರಾವ್ – ಪುಟ ಸಂಖ್ಯೆ: ೧೫೪.

೨೦. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೨೫.

೨೧. ಶಿವಶರಣೆಯರ ವಚನ ಸಂಪುಟ – ಪ್ರಸ್ತಾವನೆ – ೨೨, ೩೦.

೨೨. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೨೪.

೨೩. ಶಿವಶರಣೆಯರು : ಜೀವನ ಮತ್ತು ಸಾಧನೆ – ಪ್ರೊ. ಹೆಚ್.ಎಂ. ಬೀಳಗಿ –ಪುಟ ಸಂಖ್ಯೆ: ೧೪೪, ೧೪೫.

೨೪. ವಚನಕಾರ್ತೆಯರು – ಕಾಶಿ ವಿಶ್ವನಾಥ ಶೆಟ್ಟಿ ಎಂ.ಎ. – ಪುಟ ಸಂಖ್ಯೆ: ೩೯.

೨೫. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೨೪೪.

೨೬. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೬೯, ೭೦, ೭೧, ೭೨, ೭೩, ೭೪, ೭೬

೨೭. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೨೧೯.

೨೮. ಶಿವಶರಣೆಯರು : ಜೀವನ ಮತ್ತು ಸಾಧನೆ – ಪ್ರೊ. ಹೆಚ್.ಎಂ. ಬೀಳಗಿ (ಶ್ರೀಮತಿ) –ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ. ಪುಟ ಸಂಖ್ಯೆ: ೧೩೪, ೧೩೫

೨೯. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೩೩೭ – ೧೧೩೮ನೇ ವಚನ.

೩೦. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೬೬,

೩೧. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೩೭೪.

೩೨ ಕನ್ನಡ ಸಾಹಿತ್ಯ ಪರಂಪರೆ – ಡಾ. ಪ್ರಸಾದಸ್ವಾಮಿ – ಪುಟ ಸಂಖ್ಯೆ: ೧೧೯, ೧೨೦.

೩೩. ವಚನ ಸ್ವರೂಪ : ಒಂದು ವಿವೇಚನೆ – ಪುಟ ಸಂಖ್ಯೆ: ೧೨೮, ೧೨೯, ೧೩೦, ೧೩೧.

೩೪. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ: ೪೧೭.

೩೫. ಕನ್ನಡ ಸಾಹಿತ್ಯ ಪರಂಪರೆ – ಡಾ. ಪ್ರಸಾದಸ್ವಾಮಿ – ಪುಟ ಸಂಖ್ಯೆ: ೧೨೦, ೧೨೧, ೧೨೨.

## ಅಧ್ಯಾಯ–೦೪

## ಆಚರಣೆಗಳು

### ೧. ಆಚರಣೆಯ ಲಾಭ ಯಾರಿಗೆ? ಮತ್ತು ಯಾವ ಯಾವ ರೂಪದಲ್ಲಿವೆ?

**"ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರುಂಟೆ?"**[೧] ಎಂಬ ಅಕ್ಕಮ್ಮನ ವಚನದ ಸಾಲಿನಿಂದಲೇ ಆಚರಣೆಯ ಬಗೆಗಿನ ಕುತೂಹಲ ಹೆಚ್ಚಾಗುತ್ತದೆ. ವ್ರತದ ಚೌಕಟ್ಟು ತಾತ್ವಿಕವಾಗಿ ಎಲ್ಲರಿಗೂ ಅನ್ವಯಿಸುವಂತಿದ್ದರೂ ಕೂಡ ಆಚರಣೆಯಲ್ಲಿ ಪುರುಷರಿಗೆ (ಕೆಲವು) ರಿಯಾಯಿತಿಗಳು ಇದ್ದವೆ? ಅಥವಾ ಅದನ್ನು ದಾಟಿಯೂ ಸಮರ್ಥನೆಯ ಧಾಟಿಯೊಂದು ಪ್ರಬಲವಾಗಿತ್ತೆ? ಎಂಬ ಪ್ರಶ್ನೆಗಳು ಗಂಭೀರ ಕುತೂಹಲವುಳ್ಳವಾಗಿವೆ. ವಚನಕಾರ್ತಿಯರ ಬಹುಸಂಖ್ಯೆಯ ವಚನಗಳು ಪುರುಷರು ವ್ರತ ಉಲ್ಲಂಘನೆ ಮಾಡುತ್ತಿರುವುದನ್ನು ವಿರೋಧಿಸುತ್ತಿವೆ. ಅಂದರೆ ವ್ರತವನ್ನು ಒಪ್ಪಿಕೊಂಡ ವಚನಕಾರ್ತಿಯರ ಗುಂಪು ವ್ರತದ ಚಾಲನೆಯಲ್ಲಿ ಪುರುಷರ ಪಾತ್ರವನ್ನು ಅತ್ಯಂತ ಎಚ್ಚರಿಕೆಯಿಂದ ಗಮನಿಸುತ್ತಿದ್ದಂತೆ ಕಾಣುತ್ತದೆ. ಏಕೆಂದರೆ ಈ ವ್ರತ ಎಂಬುದು ಪುರುಷ ನಿರ್ಮಿತ ವೈಚಾರಿಕ ಆಕೃತಿಯೇ ಆಗಿರುವಂತಿದೆ.[೨]

ಸಾಮಾನ್ಯವಾಗಿ ಆಚರಣೆ ಎಂದರೆ ಅನುಸರಿಸುವುದು, ಆಚರಿಸುವುದು ಎಂದರ್ಥವಿದೆ[೩]. ಅಂದರೆ ಯಾವುದನ್ನು ಅನುಸರಿಸುವುದೋ, ಯಾವುದನ್ನು ಆಚರಿಸಲ್ಪಡುತ್ತದೆಯೋ, ಯಾವುದನ್ನು ಬಳಸಲ್ಪಡುತ್ತದೋ ಅದನ್ನು ಆಚರಣೆ ಎನ್ನುವರು. ಆಚರಿಸುವ ಮತ್ತು ಬಳಸುವ ನಿಯಮಗಳು ಸ್ವತಂತ್ರವಾಗಿವೆಯೆ? ಹೇರಲ್ಪಡುತ್ತಿವೆಯೇ? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಆಚರಣೆಗಳನ್ನು ನಿರ್ಮಿಸುವ ಹಕ್ಕು ಪುರುಷನಿಗೆ ಮಾತ್ರವೇ ಇದೆಯೆ? ಅಥವಾ ಸ್ತ್ರೀಗೂ ಇದೆಯೆ? ಎನ್ನುವುದನ್ನು ಮನಗಾಣಬೇಕು. ಒಂದು ವೇಳೆ ಪುರುಷ ನಿರ್ಮಿಸಿರುವ ಆಚಾರ, ವ್ರತ, ನಿಷ್ಠೆ, ಸಂಪ್ರದಾಯ, ರೂಢಿಗಳನ್ನು ಸ್ತ್ರೀಯು ಅನುಸರಿಸಬೇಕೆ? ಧರ್ಮದ ನಿಯಮವನ್ನು ಪಾಲಿಸುವಂತೆ ಸ್ತ್ರೀಯರಿಗೆ ಹೇರಲ್ಪಡುತ್ತಿತ್ತೇ?, ಅದನ್ನು ಒಪ್ಪಿರುವ, ಪ್ರತಿರೋಧಿಸಿರುವ ವಚನಕಾರ್ತಿಯರ ವಚನಗಳನ್ನು ಈ ಅಧ್ಯಯನದಲ್ಲಿ ವಿಶ್ಲೇಷಣೆ ಮಾಡಲಾಗಿದೆ.

ವಚನಗಳು ಹುಟ್ಟಿದ್ದೆ ರಾಜಪ್ರಭುತ್ವವನ್ನು ಮತ್ತು ಧರ್ಮದ ಪ್ರಚಾರವನ್ನು ವಿರೋಧಿಸಿಕೊಂಡು. ಧರ್ಮದ ನಿರ್ಮಾತೃಗಳು, ಪ್ರಚಾರಕರು

ಸಾಮಾನ್ಯವಾಗಿ ಮೇಲ್ವರ್ಗದವರಾಗಿದ್ದರು. ಈ ಮೇಲ್ವರ್ಗದ ಜನ(ಗಣಗಳು) ತಮ್ಮನ್ನು ತಾವೇ ಶ್ರೇಷ್ಠರೂ, ಉತ್ತಮರೂ ಎಂದು ಸಾರಲು ಮಡಿಯ ಸಮಾಜದ ಕಲ್ಪನೆ ಬಿತ್ತಿದರು. ಈ ಮಡಿ ಸಮಾಜದ ಶ್ರೇಷ್ಠತೆ ಇರುವುದು ವ್ರತ, ಆಚರಣೆ, ನಿಷ್ಠೆ, ಭಕ್ತಿ, ಸಂಪ್ರದಾಯ ರೂಢಿಗಳಲ್ಲಿ ಎನ್ನುವುದನ್ನು ಸಾರಿದರು. ಈ ಕಾರಣಕ್ಕಾಗಿಯೇ ಸ್ತ್ರೀಯನ್ನು ಪುರುಷ ಮಡಿವಂತಿಕೆಯಿಂದ ದೂರ ಇರಿಸಿದನು. ಏಕೆಂದರೆ ಹೆಣ್ಣಿನ ನೈಸರ್ಗಿಕ ಕ್ರಿಯೆ ಋತುಚಕ್ರವನ್ನು ಅಪವಿತ್ರವೆಂದು ಕಲ್ಪಿಸಿ ಅವಳನ್ನು ಪರಂಪರೆಯಲ್ಲಿ ಶೂದ್ರರ (ಅಸ್ಪೃಶ್ಯರ) ಸಾಲಿಗೆ ಸೇರಿಸಲಾಗಿತ್ತು[೪]. ಇಲ್ಲಿಂದ ಇವಳು ಬಂಧಮುಕ್ತವಾಗಬೇಕಿತ್ತು. ಕೆಳವರ್ಗದ ಸ್ತ್ರೀಯರಿಗೆ ಧೈರ್ಯ ತುಂಬುವ ಮತ್ತು ಅರಿವು ಮೂಡಿಸುವ ಕೆಲಸಗಳಾಗಬೇಕಿತ್ತು. ಬ್ರಾಹ್ಮಣ್ಯ ಮನೋಭಾವನೆ ಮತ್ತು ಮನೋಧರ್ಮವನ್ನು ನಿರ್ಭೀಡೆಯಿಂದ ತರಾಟೆಗೆ ತೆಗೆದುಕೊಳ್ಳಬೇಕಿತ್ತು. ಸಾಮಾನ್ಯ ಜನತೆಯಲ್ಲಿ ವೈಚಾರಿಕತೆಯನ್ನು ಬಿತ್ತಬೇಕಿತ್ತು, ದೇವರು ಧರ್ಮಗಳ ಗೊಂದಲಗಳನ್ನು ಪರಿಹರಿಸಿಕೊಳ್ಳಲು ಭಕ್ತಿಯ ಅರಿವು ಮೂಡಿಸುವ ಪ್ರಯತ್ನಗಳು ತಳಸ್ತರದ ವಚನಕಾರ್ತಿಯರ ವಚನಗಳಲ್ಲಿ ಸ್ಫುಟವಾಗಿ ಗೋಚರಿಸುತ್ತವೆ.    ಧರ್ಮಗಳ ಸಾರವು ಪಾಂಡಿತ್ಯ ಭೂಯಿಷ್ಠ ಭಾಷೆಯ ನೆಲೆಯಲ್ಲಿತ್ತು. ಅದು ಕೆಳವರ್ಗದ ಜನರಿಗೆ ತಿಳಿಯದಾಯಿತು. ಹೀಗಾಗಿ ತಳಸ್ತರದ ವಚನಕಾರರು ತಿಳಿಯದ ಧರ್ಮವನ್ನು ಭಂಜಿಸಿ ಹೊಸ ಪ್ರಜಾಧರ್ಮವನ್ನು ನಿರ್ಮಿಸುವುದು ಅನಿವಾರ್ಯವಾಗಿತ್ತು. ಆಗ ಜನ ಸಾಮಾನ್ಯರ ಭಾಷೆಯಲ್ಲಿ ವಚನಗಳು ನಿರ್ಮಾಣವಾದವು. ಜನ ಸಾಮಾನ್ಯರು ವಚನಗಳ ನಿರ್ಮಾಣಕ್ಕೆ ಕೈ ಹಾಕಿ ಯಶಸ್ವಿಯಾದರು. ದೇವರ ಬಳಿಗೆ ಜನಸಾಮಾನ್ಯರನ್ನು ಕರೆದುಕೊಂಡು ಹೋಗುವ ಧರ್ಮವನ್ನು ಭಂಜಿಸಿ, ದೇವರೇ ಜನ ಸಾಮಾನ್ಯನ ಬಳಿಗೆ ಬರುವ ಕಾಯಕ ನಿಷ್ಠೆಯ ಧರ್ಮವನ್ನು ಪ್ರತಿಪಾದಿಸಿದರು. ವಚನಗಳು ಓದಿದರೆ ಗದ್ಯ ಹಾಡಿದರೆ ಪದ್ಯ. ವಚನಗಳಲ್ಲಿ ಭಕ್ತಿ, ಶಕ್ತಿ, ಯುಕ್ತಿ, ವಿಚಾರ, ಕ್ರಾಂತಿ, ಹರಿತವಾದ ನುಡಿ, ವೈಚಾರಿಕ ಪ್ರಜ್ಞೆ ಮತ್ತು ಕಾವ್ಯದ ಲಯಬದ್ಧ ನಿಯಮಗಳಿವೆ. ಇದು ಧರ್ಮದ ಚೌಕಟ್ಟಿನೊಳಗೆ ಬದುಕನ್ನು ತರುವ ವ್ರತ, ಆಚಾರ, ನಿಷ್ಠೆ, ರೂಢಿ ಸಂಪ್ರದಾಯಗಳನ್ನು ಒಡೆದು ಹಾಕಿದೆ. ಆದರೆ ಆಚರಣೆಗಳೆಂಬ ಮೌಢ್ಯಕ್ಕೆ ಜನಸಾಮಾನ್ಯರು ಬಲಿಯಾದದ್ದು ವಿಪರ್ಯಾಸ. ಕೆಲವರು ಆಚರಣೆಗಳನ್ನು ಒಪ್ಪಿ ಹೆಗಲ ಮೇಲೆ ಹೊತ್ತು ತಿರುಗಿದರೆ, ಮತ್ತೆ ಕೆಲವರು ಇವುಗಳನ್ನು ತಿರಸ್ಕರಿಸಿರುವುದು ಕಂಡು ಬರುತ್ತದೆ. ತಳಸ್ತರದ ವಚನಕಾರ್ತಿಯರು ಆಚರಣೆಗಳನ್ನು ನಿರ್ಭೀಡೆಯಿಂದ ವಿರೋಧಿಸಿದ್ದಾರೆ. ಬದುಕಿಗಾಗಿ ದೇವರ ಮೊರೆಹೋಗುವ ಬದಲು, ಬದುಕನ್ನೇ

ದೇವರಾಗಿಸಿದರು. ಆಚರಣೆಯ ಬಗ್ಗೆ ವಚನಕಾರ್ತಿಯರ ವಿಚಾರ ಯಾವುದೆಂಬುದನ್ನು ವಚನಗಳ ಭಾಗಗಳಿಂದಲೇ ಸ್ಪಷ್ಟ ಮಾಡಿಕೊಳ್ಳಬಹುದು.

ವ್ರತಭ್ರಷ್ಟನ ಕೂಡಿದವರಿಲ್ಲ

– **ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮನ ವಚನ**

ವ್ರತಹೀನನ ನೆರೆಯಲಿಲ್ಲ

– **ಕದಿರ ಕಾಯಕದ ಕಾಳವ್ವೆಯ ವಚನ**

ವ್ರತಹೀನನ ಬೆರೆಯಲುಂಟೆ

– **ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆಯ ವಚನ**

ವ್ರತಭ್ರಷ್ಟರ ನಿಟ್ಟೊರಸುವೆ ಸುಟ್ಟು ತುರತುರನೆ ತೂರುವೆ

– **ಕಾಲ ಕಣ್ಣಿಯ ಕಾಮಮ್ಮನ ವಚನ**

ವ್ರತ ತಪ್ಪಲು ಶರೀರ ಕಡೆ ಮೇಲು ವ್ರತವೆಂಬ ತೂತರ ಮೆಚ್ಚ

– **ಕೊಂಡೆ ಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮನ ವಚನ**

ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ

– **ಕೊಟ್ಟಣದ ಸೋಮಮ್ಮನ ವಚನ**

ವಕ್ರಹೀನನ ಬೆರೆಯಲಾಗದು

– **ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿಯ ವಚನ**

ಭಕ್ತ ವ್ರತಹೀನನರಿದು ನೆರೆಯನಯ್ಯ

– **ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮನ ವಚನ**

ವ್ರತವಿದ್ದಡೇನು, ವ್ರತಹೀನರಾದ ಬಳಿಕ?

– **ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆಯ ವಚನ**

ವ್ರತ ತಪ್ಪಲೆಂತೂ ಸೈರಿಸಬಾರದು

– **ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯ ವಚನ**

ವ್ರತ ತಪ್ಪಲು ಶರೀರವಿಡಿವ ನರಕಿಗೆ ಮುಕ್ತಿಯಿಲ್ಲ

**– ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮನ ವಚನ**

ಲಿಂಗ ಬಾಹ್ಯನ, ಆಚಾರ ಭ್ರಷ್ಟನ, ವ್ರತ ತಪ್ಪುಕನ ಗುರುಲಿಂಗ ಜಂಗಮವ ಕೊಂದವನ ಶಕ್ತಿಯುಳ್ಳಡೆ ಸಂಹಾರವ ಮಾಡುವುದು ಶಕ್ತಿಯಿಲ್ಲದಿದ್ದಡೆ ಕಣ್ಣು ಕರ್ಣವ ಮುಚ್ಚಿಕೊಂಡು ಶಿವಮಂತ್ರ ಜಪಿಸುವುದು

**– ರೇವಣಸಿದ್ದಯ್ಯಗಳ ಪುಣ್ಯಸ್ತ್ರೀ ರೇಕಮ್ಮನ ವಚನ**

ವ್ರತಭ್ರಷ್ಟನ, ಲಿಂಗಬಾಹ್ಯನ ಕಂಡಡೆ ಸತ್ತನಾಯ, ಕಾಗೆಯ ಕಂಡಂತೆ

**– ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆಯ ವಚನ**

ವ್ರತಹೀನನರಿದು ಬೆರೆದಡೆ ಕಾದ ಕತ್ತಿಯಲ್ಲಿ ಕೈ ಕಿವಿ ಮೂಗ ಕೊಯ್ವರಯ್ಯ

**– ಸೂಳೆ ಸಂಕವ್ವೆಯ ವಚನ**

ಆಯ ತಪ್ಪಿದಡೆ ಸಾವಿಲ್ಲ ; ವ್ರತ ತಪ್ಪಿದಡೆ ಕೂಡಲಿಲ್ಲ

**– ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮನ ವಚನ**

ಈ ಮೇಲಿನ ಅಷ್ಟೂ ವಚನದ ಭಾಗಗಳು ವ್ರತದ ಉಲ್ಲಂಘನೆಯನ್ನು ಕುರಿತು ಹೇಳುತ್ತವೆ. ಈ ಉಲ್ಲಂಘನೆಯ ಆಯಾಮವು ನೈತಿಕ ಮೌಲ್ಯದ ನೆಲೆಯನ್ನು ಸ್ಪರ್ಶಿಸುತ್ತಿದೆ ಮತ್ತು ಈ ಉಲ್ಲಂಘನೆ ಮಾಡುತ್ತಿರುವವರು ಪುರುಷರೇ ಆಗಿದ್ದಾರೆ.[೫] ಆದರೆ ಈ ಬಗ್ಗೆ ಎಚ್ಚರ ಬಂದಿರುವುದು ಮಾತ್ರ ಮಹಿಳಾ ವಚನಕಾರ್ತಿಯರಿಗೆ ಈ ಅಂಶಗಳ ಚರ್ಚೆಗೆ ಮೊದಲು 'ವ್ರತ'ದ ಸ್ವರೂಪ ಏನು ಎಂಬುದು ಖಚಿತವಾಗಬೇಕು. ಇದಕ್ಕೆ ಉತ್ತರವಾಗಿ ವಚನಗಳು ಸ್ಪಷ್ಟವಾಗಿ ನಿಲ್ಲುತ್ತವೆ.

ಅಕ್ಕಮ್ಮನ ವಚನಗಳು ಬಹುಮುಖ್ಯವಾಗಿ ವ್ರತವನ್ನೇ ಕುರಿತು ಹೇಳುತ್ತವೆ. ಅವುಗಳಿಂದಲೇ ವ್ರತದ ಸ್ವರೂಪವನ್ನು ಅರ್ಥ ಮಾಡಿಕೊಳ್ಳಬಹುದು.

ವ್ರತವೆಂಬುದೇನು? ಮನವಿಕಾರಿಸುವುದಕ್ಕೆ ಕಟ್ಟಿದ ಗೊತ್ತು.

ಜಗದ ಕಾಮಿಯಂತೆ ಕಾಮಿಸದೆ,

ಜಗದ ಕ್ರೋಧಿಯಂತೆ ಕ್ರೋಧಿಸದೆ,

ಜಗದ ಲೋಭಿಯಂತೆ ಲೋಭಿಸದೆ,

ಮಾಯಾಮೋಹಂಗಳು ವರ್ಜಿತವಾಗಿ

ಮನ ಬಂದಂತೆ ಆಡದೆ, ತನು ಬಂದಂತೆ ಕೂಡದೆ

ವ್ರತದಂಗಕ್ಕೆ ಸಂಗವಾಗಿ ನಿಂದ ಸದ್ಭಕ್ತನ ಅಂಗವೆ ...

ವ್ರತವೆಂಬುದೇನು? ವಸ್ತುವ ಕಾಂಬುದಕ್ಕೆ ನಿಚ್ಚಣಿಕೆ.

ವ್ರತವೆಂಬುದೇನು? ಇಂದ್ರಿಯಂಗಳ ಸಂದಮುರಿವ ಕುಲಕುಠಾರ,

ವ್ರತವೆಂಬುದೇನು? ಸಕಲವ್ಯಾಪಾರಕ್ಕೆ ದಾವಾನಳ,

ವ್ರತವೆಂಬುದೇನು? ಸರ್ವದೋಷನಾಶನ,

ವ್ರತವೆಂಬುದೇನು? ಚಿತ್ತ ಸುಯಿದಾನದಿಂದ

ವಸ್ತುವ ಕಾಂಬುದಕ್ಕೆ ಕಟ್ಟಿದ ಗುತ್ತಗೆ ...

ವ್ರತಾಚಾರವೆಂದು ಹೆಸರಿಟ್ಟುಕೊಂಡಿಪ್ಪರಯ್ಯ !

ವ್ರತವೆಂದೇನು ಆಚಾರವೆಂದೇನು?

ಅನ್ಯರು ಮಾಡಿದ ದ್ರವ್ಯವನೊಲ್ಲದಿಪ್ಪುದು ವ್ರತವೆ?

ಆರನು ಕರೆಯದಿಪ್ಪುದು ಆಚಾರವೆ?

ಪರಸ್ತ್ರೀ ಪರಧನಂಗಳಲ್ಲಿ ನಿಂದೆಗೆ ಒಡವಾಗದಿದ್ದುದೆ ವ್ರತ,

ಸರ್ವಭೂತಹಿತನಾಗಿ ದಯವಿದ್ದುದೆ ಆಚಾರ[೬]

ಈ ಮೇಲಿನ ವಚನಗಳಿಂದಲೇ ವ್ರತದ ಸ್ವರೂಪವನ್ನು ಸ್ಪಷ್ಟ ಮಾಡಿಕೊಳ್ಳಬಹುದು. ಅದು ಬದುಕಿನ ಲಯ, ಸಂವೇದನೆ, ಆಚಾರಗಳನ್ನು ಒಳಗೊಂಡಂತೆ ಒಂದು ನೈತಿಕ ಮೌಲ್ಯವಾಗಿದೆ.

ಈ ಆಚರಣೆಗಳು ಯಾಕೆ ತಳಸ್ತರದ ಸಮಾಜವನ್ನು ಅಷ್ಟು ಅಧಿಕಾರಯುತವಾಗಿ ಆಳುತ್ತಿವೆ. ಯಾರು ಈ ಆಚರಣೆಗಳನ್ನು ಅಧಿಕಾರಯುತವಾಗಿ ರೂಪಿಸಿದವರು? ಪುರುಷನೋ? ಸ್ತ್ರೀಯೋ? ಎಂಬ ಪ್ರಶ್ನೆಗಳು ಸಹಜವಾಗಿ ಉದ್ಭವವಾಗುತ್ತದೆ. ಸಾಮಾನ್ಯವಾಗಿ ಸ್ತ್ರೀಯು ರೂಪಿಸಿರಲು ಸಾಧ್ಯವಿಲ್ಲ ಏಕೆಂದರೆ ಸ್ತ್ರೀಯು ತಾನು ನಿರ್ಮಿಸಿದ ಆಚರಣೆಗಳಿಂದ ತನ್ನನ್ನು ತಾನೇ ಬಂಧನಕ್ಕೆ ಒಳಪಡಿಸಿಕೊಳ್ಳುತ್ತಿರಲಿಲ್ಲ. ಅಸ್ಪೃಶ್ಯಳಂತೆ, ಅಬಲೆಯಂತೆ, ಅಸಹಾಯಕಳಂತೆ, ಆತ್ಮವಿಲ್ಲದವಳಂತೆ, ಹೆಣ್ಣು ಭೋಗವಸ್ತುವಿನಂತೆ ಮತ್ತು ಅಪವಿತ್ರಳೆಂಬುದನ್ನು ಹೇಳಿಕೊಳ್ಳುತ್ತಿರಲಿಲ್ಲ. ಆಚರಣೆಗಳ ಮೂಲಕ ಯಾರು ಯಾರನ್ನು ಹೇಗೆ–ಹೇಗೆ ನಿಯಂತ್ರಣದಲ್ಲಿಡಬೇಕು. ಮಡಿವಂತಿಕೆಯ ಸಮಾಜದಿಂದ ಯಾರ್‍ಯಾರಿಗೆ ಶುದ್ಧತೆ–ಅಶುದ್ಧತೆ, ಪವಿತ್ರ–ಅಪವಿತ್ರ, ಸ್ಪಷ್ಟ–ಅಸ್ಪಷ್ಟ, ಸ್ಪೃಶ್ಯ–ಅಸ್ಪೃಶ್ಯ, ಗಂಡು–ಹೆಣ್ಣು, ಶಿಷ್ಟ–ಪರಿಶಿಷ್ಟಗಳೆಂಬ ಕಲ್ಪನೆಗಳಿಂದ ಹೊರಗಿಡಬೇಕೆಂಬ ನಿಯಮಗಳು ಹೇಗೆ ರೂಪುಗೊಂಡವು? ಇದರ ಲಾಭ ಪಡೆದವರು ಯಾರು? ನಷ್ಟ ಅನುಭವಿಸಿದವರು ಯಾರು? ಅದರಲ್ಲೂ ಈ ಆಚರಣೆಗಳ ನಿರ್ಮಾಣದ ಹಿಂದೆ ಸ್ತ್ರೀಯರನ್ನು ಶೋಷಣೆಗೆ ಒಳಪಡಿಸಿದ ಕರಾಳ ಮುಖಗಳ ಅನಾವರಣವಾಗಬೇಕಿದೆ. ವಾಸ್ತವವಾಗಿ ಹೆಣ್ಣಿನ ಸಮಸ್ಯೆಗಳೇನು? ಅವುಗಳು ಪರಿಹಾರಗೊಳ್ಳುವುದು ಯಾವಾಗ? ಈ ರೀತಿಯ ಪ್ರಶ್ನೆಗಳನ್ನು ಇಟ್ಟುಕೊಂಡುವಚನಗಳನ್ನು ವಿಶ್ಲೇಷಿಸಿದ್ದೇನೆ. ಒಟ್ಟು ಐವತ್ತು ವಚನಕಾರ್ತಿಯರು ಲಭ್ಯವಿದ್ದಾರೆ.ಇದುವರೆಗೆ ಲಭ್ಯವಾದ ವಚನಕಾರ್ತಿಯರಲ್ಲಿ ಹದಿಮೂರು ಜನ ವಚನಕಾರ್ತಿಯರ ಒಂದೊಂದು ವಚನ ಸಿಕ್ಕಿವೆ. ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮನ ಐದು ವಚನಗಳು ಸಿಕ್ಕಿವೆ. ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲೆ, ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ಇವರ ಎರಡೆರಡು ವಚನಗಳು ಕೆಲವು ವಚನಕಾರ್ತಿಯರ ವಚನಗಳು ಪಾಠಂತರಗಳು ಸಿಕ್ಕಿವೆ. ಹದಿನಾರು ಜನ ವಚನಕಾರ್ತಿಯರ ವಚನಗಳು ವ್ರತ ಎಂಬ ಒಂದೇ ವಿಚಾರವನ್ನ ಕುರಿತು ಹೇಳುತ್ತವೆ. ಅಕ್ಕಮ್ಮನ ಬಹಳಷ್ಟು ವಚನಗಳು ಆಚಾರವನ್ನು, ಆಯ್ದಕ್ಕಿ ಲಕ್ಕಮ್ಮನ ವಚನಗಳು ನಿಷ್ಠೆಯನ್ನು, ರೆಮ್ಮವ್ವೆಯ ವಚನಗಳು ಕಾಯಕ ನೇಮವನ್ನು ಮತ್ತು ಕಾಳವ್ವೆಯರ ವಚನಗಳು ನಿಷ್ಠೆಯನ್ನು ಹೇಳುತ್ತವೆ. ವ್ರತವು ಬೋಧಿಸಿದ್ದು, ಕೊಟ್ಟಿದ್ದು ಇತ್ಯಾದಿ ಅಂಶಗಳು ಈ ಹಿಂದೆಯೇ ಬಂದಿವೆ. ಈ ವ್ರತವು ಯಾರು ಕೊಟ್ಟಿದ್ದು ಅಥವಾ ಯಾರಿಂದ ಕೊಡಲ್ಪಟ್ಟಿದ್ದು ಎಂಬ ವಿಚಾರ ವಚನಗಳಲ್ಲೆ ಮಂಡಿತವಾಗಿದೆ.

"ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ವೀರಮಡಿವಾಳ, ನಿಜಗುಣ ಶಿವಯೋಗಿ, ಸಿದ್ಧರಾಮ, ಮೋಳಿಗೆ ಮಾರಯ್ಯ, ಆಯ್ದಕ್ಕಿಯ ಮಾರಯ್ಯ, ಏಕಾಂತಯ್ಯ, ಅಜಗಣ್ಣ, ಶಕ್ತಿ, ಮುಕ್ತಿ, ಮಹಾದೇವಿಯಕ್ಕ ಮುಂತಾದ ಏಳುನೂರೆಪ್ಪತ್ತು ಅಮರಗಣಂಗಳು ಕೊಟ್ಟ ವ್ರತ ಪ್ರಸಾದ[2]. ಯಾವ ವರ್ಗ, ವ್ರತವನ್ನು ಕೊಟ್ಟಿತ್ತೋ, ಅದೇ ವರ್ಗವು ವ್ಯಾವಹಾರಿಕ ಕಾರಣಗಳಿಗಾಗಿ ಅದನ್ನು ಮುರಿದಿದೆ. ಅಕ್ಕಮ್ಮ ತನ್ನ ವಚನದಲ್ಲಿ ಅದನ್ನು ಖಂಡಿತ ವ್ರತ, ಅಖಂಡಿತ ವ್ರತ, ಸಂದ ವ್ರತ, ಸಲ್ಲದ ವ್ರತವೆಂದು ನೇಮವ ಮಾಡಿಕೊಂಡು ಊರೂರ ತಪ್ಪದೇ ಸಾರಿ ದೂರಿಕೊಂಡು ತಿರುಗಲೇತಕ್ಕೆ? ಖ್ಯಾತಿಯ ಲಾಭಕ್ಕೆ ವ್ರತವ ಮಾಡಿಕೊಂಡವನ ನೇಮವ ನೋಡಾ! ಗುರುವಾದಡೂ ಆಚಾರ ಭ್ರಷ್ಟನಾದಡೆ ಅನುಸರಿಸಲಾಗದು ಎಂದು ವಿವರಿಸಿದ್ದಾಳೆ.

'ವ್ರತ'ವನ್ನು ಸ್ತ್ರೀಯರು ತಾವೇ ಇಷ್ಟಪಟ್ಟು ಆಚಾರಿಸುತ್ತಿದ್ದರೆ? ಅಥವಾ ಹೇರಲ್ಪಡುತ್ತಿತ್ತೆ! ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ತಳಸ್ತರದ ವಚನಕಾರ್ತಿಯರ ವಚನಗಳನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಹೌದು ಆಚರಣೆ ಹೇರಲ್ಪಡುತ್ತಿತ್ತು ಎನ್ನುವ ಸಾಧ್ಯತೆಯ ಜೊತೆಗೆ ಮಿತಿಗಳೂ ಇವೆ. ಏಕೆಂದರೆ ಕೆಲವು ವಚನಕಾರ್ತಿಯರು ಶರಣರ ನೆರಳನ್ನು ಅನುಸರಿಸಿದಂತೆ ತೋರುತ್ತವೆ. ಇನ್ನು ಕೆಲವು ಸ್ವತಂತ್ರವಾಗಿ ಆಲೋಚಿಸಿ ಶರಣರ ಚಿಂತನೆಗಳಿಗಿಂತ ಭಿನ್ನ ನೆಲೆಯಲ್ಲಿ ರಚಿಸಿರುವುದು ಗೋಚರವಾಗುತ್ತದೆ. ಉದಾಹರಣೆಗೆ ಮೋಳಿಗೆ ಮಾರಯ್ಯನ ಪುಣ್ಯಸ್ತ್ರೀ, ಆಯ್ದಕ್ಕಿ ಲಕ್ಕಮ್ಮ ಮತ್ತು ಹಡಪದಪ್ಪಣನ ಪುಣ್ಯಸ್ತ್ರೀ ಲಿಂಗಮ್ಮನಂತಹವರು. ಕೆಲವೊಮ್ಮೆ ದಾರಿ ತಪ್ಪಿದ ಶರಣರನ್ನು ಪ್ರಶ್ನಿಸಿ, ತಿದ್ದಿ ಸರಿದಾರಿಗೆ ತಂದ ಬದ್ಧತೆ ಇರುವುದನ್ನು ಕಾಣುತ್ತೇವೆ. ಸಾತ್ವಿಕ ಬದುಕನ್ನು ಬಯಸಿದ ಶರಣೆಯರು ಜೀವನ ಮೌಲ್ಯವನ್ನು ಪ್ರೀತಿಸಿದರು. ಮೌಢ್ಯತೆಯ ಮೌಲ್ಯಗಳನ್ನು ತಿರಸ್ಕರಿಸಿದರು. ಆ ಕಾಲದ ಅನೇಕ ಮಿತಿಗಳ ನಡುವೆ ಶರಣೆಯರು ಧಾರ್ಮಿಕ ಕ್ಷೇತ್ರವನ್ನು ಪ್ರವೇಶಿಸಿದ್ದು, ಅನುಭವ ಮಂಟಪದಲ್ಲಿ ಪುರುಷ ಸರಿದೊರೆಯಾಗಿ ವಿಚಾರ ಮಂಥನ ಮಾಡಿದ್ದು ಗಮನಾರ್ಹ. ತಳಸ್ತರದ ಶರಣೆಯರ ಚಿಂತನೆಗಳು ಪರಿಪೂರ್ಣ ಎಂದು ಎನಿಸದಿದ್ದರೂ ಮಹಿಳಾ ಚಿಂತನೆಯ ಮೂಲ ಪರಂಪರೆ ಗುರುತಿಸಲು ತಳಹದಿಯಾಗಿ ನಿಲ್ಲಲು ಖಂಡಿತ ನಾಂದಿಯಾಗುತ್ತದೆ. ಮಹಿಳಾ ಚಿಂತನೆಯ ವಿವಿಧ ಸಮಸ್ಯೆ ಬಗೆಹರಿಸಲು ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ದಾಳಿಯನ್ನು ಎದುರಿಸುವ ಶರಣೆಯರ ನಿಲುವುಗಳು ನಿಜಕ್ಕೂ ಪ್ರಸ್ತುತವಾಗುವುದರಲ್ಲಿ ಎರಡು

ಮಾತಿಲ್ಲ. ವ್ರತದ ವಿಚಾರದಲ್ಲಿ ಸ್ತ್ರೀಯರಿಗೆ ತಬ್ಬಿಬ್ಬು ಇತ್ತು. ಹೇಳಿಕೊಳ್ಳಲಾರದ ನೋವು ಇತ್ತು. ಈ ವ್ರತವನ್ನು ಬೋಧಿಸಲಾಗುತ್ತಿತ್ತು ಮತ್ತು ಕೇಳಲಾಗುತ್ತಿತ್ತು ಎನ್ನುವುದಕ್ಕೆ ಅಕ್ಕಮ್ಮನ ಒಂದು ವಚನ ಸಾಕ್ಷಿಯಾಗಿ ನಿಲ್ಲುತ್ತದೆ.

"ಅಕ್ಕಿ, ಬೇಳೆ, ಬೆಲ್ಲ, ಉಪ್ಪು, ಮೆಣಸು, ಅಡಿಕೆ, ಫಲರಸ ದ್ರವ್ಯ ಮುಂತಾದ ದ್ರವ್ಯಕ್ಕೆ ವ್ರತವೋ? ಮುಟ್ಟುವ ತಟ್ಟುವ ಸೋಂಕುವ ಚಿತ್ತಕ್ಕೆ ವ್ರತವೋ?

ಇಲ್ಲಿ ಬಾಹ್ಯದಲ್ಲಿ ಮಾಡುವ ಸೌಕರಿಯವಲ್ಲದೆ ವ್ರತಕ್ಕೆ ಸಲ್ಲ, ವ್ರತವಾವುದೆಂದಡೆ :

ತನ್ನಯ ಸ್ವಪ್ನದಲ್ಲಿ ತನಗಲ್ಲದುದ ಕಂಡಡೆ,

ತಾ ಮುಟ್ಟುದುದ ಮುಟ್ಟಿದಡೆ, ತಾ ಕೊಳ್ಳದುದ ಕೊಂಡಡೆ,

ಆ ಸೂಕ್ಷ್ಮ ತನುವಿನಲ್ಲಿ ಆ ತನುವಂ ಬಿಟ್ಟು ನಿಂದುದು ವ್ರತ.

ಸ್ಥೂಲ ತನುವಿನಲ್ಲಿ ಸರ್ವರ ನಿಂದೆಗೊಡಲಾಗದೆ"

'ವ್ರತ' ಅದು ಬದುಕಿನ ಲಯ, ಸಂವೇದನೆ, ಆಚಾರಗಳನ್ನು ಒಳಗೊಂಡಿದೆ. ಆವಾವ ವ್ರತಕ್ಕೂ ಗುರು ಲಿಂಗ ಜಂಗಮನೇ ಮೂಲಮಂತ್ರ. ಅವುಗಳನ್ನು ಪಾಲಿಸುವಾಗ ಒಂದೊಂದಕ್ಕೂ ಒಂದೊಂದು ಮೂಲಮಂತ್ರಗಳನ್ನು ಅನುಸರಿಸಬೇಕು. ಆಗ ಅವುಗಳನ್ನೇ ಒಪ್ಪಿ ಬಳಸಿದಾಗ ಗುರು, ಲಿಂಗ, ಜಂಗಮರ ಒಪ್ಪಿತ ವಿಚಾರವಿದೆ. ವ್ರತವೆಂಬುದೇನು? ವಸ್ತುವ ಕಾಂಬುದಕ್ಕೆ ನಿಚ್ಚಣಿಕೆ. ವ್ರತವೆಂಬುದೇನು ಇಂದ್ರಿಯಂಗಳ ಸಂದಮುರಿವ ಕುಲಕುಠಾರ. ಅಂದರೆ ವಾಸ್ತವ ಸ್ಥಿತಿಯನ್ನು ಕಾಣಲು ಅಥವಾ ವಾಸ್ತವ ಜಗತ್ತಿಗೆ ತಲುಪಿಸುವ ಸೋಪಾನ. ಇಂದ್ರಿಯಗಳ ನಿಗ್ರಹಿಸುವ ಶಕ್ತಿ ಈ ವ್ರತಕ್ಕೆ ಇದೆ. ವ್ರತಾವಾವುದೆಂದಡೆ ತನ್ನಯ ಸ್ವಪ್ನದಲ್ಲಿ ತನಗಲ್ಲದುದ ಕಂಡಡೆ, ಎನ್ನುವುದನ್ನು ಗ್ರಹಿಸಿದರೆ ವ್ರತವು ಹೇರಲ್ಪಟ್ಟದ್ದಾಗಿದೆ ಎಂದು ಹೇಳಬಹುದು. ತನ್ನಯ ಸ್ವಪ್ನದಲ್ಲಿ ತನ್ನದಲ್ಲದ ದೃಶ್ಯಗಳ ಕಾಣುವುದೆಂದರೆ ಅಸಹಾಯಕತೆ, ಅಧೀನತೆಯನ್ನು ತೋರಿಸುತ್ತದೆ. ಹೀಗೆ ಸ್ತ್ರೀಯರ ಮೇಲೆ ವ್ರತ ಪಾಲನೆಯ ಹೇರಿಕೆಯಾಗುತ್ತಿತೆಂದು ಹೇಳಬಹುದು.

ವ್ರತದ ಉಪದೇಶ ಮಾಡುವಾತನಿಗೆ, ವ್ರತವನ್ನು ಪಾಲಿಸುವವರಿಗೆ, ಉಪದೇಶಿಸಿಕೊಳ್ಳುವವರಿಗೆ ಮುಕ್ತಿ ಸಾದ್ಯ. ಅದು ಆತನ ಮುಕ್ತಿ ಅವಳ

ಮುಕ್ತಿಯಲ್ಲ. ಅಂದರೆ ಸ್ತ್ರೀಯು ಮೋಕ್ಷಕ್ಕೆ ಯೋಗ್ಯಳಲ್ಲವೆಂದು ಸಾರಿದಂತಿದೆ. ಹೀಗಿದ್ದು ಸ್ತ್ರೀಯು ವ್ರತವನ್ನು ತಾನೇ ತಾನಾಗಿ ಸ್ವತಂತ್ರವಾಗಿ ಒಪ್ಪಿ ಪಾಲಿಸಲು ಸಾಧ್ಯವಿಲ್ಲ. ವ್ರತವನ್ನು ಅವಳ ಮೇಲೆ ಹೇರಲ್ಪಟ್ಟಂತಿದೆ. ಹೀಗಾಗಿ ವ್ರತನಿಯಮದ ಪಾಲನೆಯನ್ನು ನೇರವಾಗಿ ನಿರಾಕರಿಸುತ್ತಾಳೆ. ಇಲ್ಲಿ ವ್ರತದ ತಂತ್ರವು ಬೋಧಿಸುವ ಮತ್ತು ಆಲಿಸುವ ಅಂಶವನ್ನು ಅವಲಂಬಿಸಿದೆ. ಈ ಮೂಲಕ ಜೀವನ ಕ್ರಮಗಳನ್ನು ಒಪ್ಪಿಕೊಳ್ಳಬೇಕಿತ್ತು. ವ್ರತಗಳೆಂಬ ಜೀವನದ ನಿಯಮ, ಕಟ್ಟಳೆಗಳನ್ನು ಪಾಲಿಸಬೇಕಿತ್ತು. ಇಂತಹ ಸ್ಥಿತಿಯನ್ನು ಅಂದಿನ ಸ್ತ್ರೀಯರು ಅಸಹಾಯಕತೆಯನ್ನು ಒಪ್ಪಿ ಪಾಲಿಸಬೇಕಿತ್ತು. ಇಂತಹ ಹೇರಲ್ಪಟ್ಟ ವ್ರತವನ್ನು ನಿರಾಕರಿಸುವ ವಚನಗಳು ನಮ್ಮ ತಳಸ್ತರದ ವಚನಕಾರ್ತಿಯರ ವಚನಗಳಲ್ಲಿ ಸ್ಫುಟವಾಗಿ ಕಾಣುತ್ತವೆ.

ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರ ಉಂಟೆ? ಎಂದು ಪ್ರಶ್ನಿಸುವಲ್ಲಿ ಸ್ತ್ರೀಯ ಅಧೀನತೆಯನ್ನು ಗುರುತಿಸಬೇಕು. ಅಂದು ಸ್ತ್ರೀಯು ಸ್ವತಂತ್ರಳಲ್ಲ. ಪುರುಷನ ದಾಸಿಯಾಗಿ, ಅಧೀನಳಾಗಿ, ಅವನ ಮಾರ್ಗದರ್ಶನದಲ್ಲಿ ಅವನು ಹಾಕಿಕೊಟ್ಟ ವ್ರತ ನಿಯಮವನ್ನು ಪ್ರಶ್ನಿಸದೆ ಪಾಲಿಸಿಕೊಂಡಾಗ ಮಾತ್ರ ಆಕೆಗೆ ಮುಕ್ತಿ. ಗಂಡನ ವ್ರತವನ್ನು (ಸೇವೆಯನ್ನು) ಮೊದಲು ಮಾಡಬೇಕು. ಜೊತೆಗೆ ಅವನನ್ನು ಸಂತೃಪ್ತಿ ಪಡಿಸಬೇಕು. ಆತನ ಭೋಗದ ವಸ್ತುವಾಗಿರಬೇಕು. ಆತನ ಸಂತಾನೋತ್ಪತ್ತಿಯ ಮೂಲವಾಗಿರಬೇಕು. ಹೀಗೆ ಆತನು ಶ್ರೇಷ್ಠನಾಗಿ ಸ್ತ್ರೀಯು ಕನಿಷ್ಠಳಾಗಿ ಇರಬೇಕಾದ ಅನಿವಾರ್ಯತೆಯಿತ್ತು. ಬಾಯಿಯಿದ್ದು ಮೂಖಳಾಗಿ, ವಿಚಾರವಂತಳಾದರೂ ವಿಚಾರ ಹೀನಳಾಗಿ ಬದುಕಬೇಕಿದ್ದ ಸ್ಥಿತಿ ಶೋಚನೀಯ. ವ್ರತಗಳ ಸಂಖ್ಯೆಯನ್ನು ಎಂಬತ್ನಾಲ್ಕು ಎಂದು ಅಕ್ಕಮ್ಮ ಹೇಳಿದ್ದಾಳೆ. ಅವುಗಳೆಂದರೆ ಅಸಿ, ಮಸಿ, ಕೃಷಿ, ವಾಣಿಜ್ಯ, ಬಾಗಿಲು, ಬೊಕ್ಕಸ, ಬಿಯಗ..., ಇನ್ನು ಮುಂತಾದವು. ಆದರೆ ಈ ವ್ರತಗಳ ನಿಜವಾದ ಅರ್ಥವೇನು? ಪಾಲನೆಯ ನಿಯಮಗಳೇನು ಎಂಬುದು ತಿಳಿದುಬಂದಿಲ್ಲ.

ವ್ರತ ದೀಕ್ಷೆಯ ಮಾಡುವಲ್ಲಿ ಗುರುವಿನ ಇರುವು ಊರೂರ ದಾರಿಗಳಲ್ಲಿ ವ್ರತವ ಮಾಡಿಕೊಳ್ಳಿಯೆಂದು ಸಾರಲಿಲ್ಲ ಎನ್ನುವಲ್ಲಿ ವ್ರತಗಳ ಆಚರಣೆ ಎಲ್ಲಾ ಸ್ತ್ರೀಯರಿಗೆ ಕಡ್ಡಾಯವಾಗಿರಲಿಲ್ಲ. ವ್ರತ ಪಾಲಿಸುವವರ ಮತ್ತು ಪಾಲಿಸದವರ ನಡುವಿನ ಮಿತಿಯನ್ನು ಹೇಳುತ್ತದೆ. ವ್ರತದೀಕ್ಷೆಯಲ್ಲಿ ಗುರುವಿನ ಇರವು ಮುಖ್ಯವಲ್ಲ. ಊರೂರ ದಾರಿಗಳಲ್ಲಿ ವ್ರತ ಬೋಧಿಸಲಿಲ್ಲ ಅಂದರೆ

ವ್ರತಗಳಿಗೆ ತಮ್ಮದೇಯಾದ ಮಹತ್ವಗಳಿದ್ದು ಅವುಗಳನ್ನು ಪಾಲಿಸುವವರ ಆಸಕ್ತಿಗೆ ಅನುಗುಣವಾಗಿತ್ತು. ಮೂರು ವ್ರತಕ್ಕೆ ಮುಕುತವಾಗಿ ತಬ್ಬಿಬ್ಬುಗೊಳ್ಳುತ್ತಿದ್ದೇನೆ. ನಾ ಹಿಡಿದ ಒಂದು ನೇಮಕ್ಕೆ ಸಂದೇಹವಾಗಿ, ಒಂದನೂ ಕಾಣದಿದ್ದೇನೆ. ಒಂದರ ಸಮಶೀಲಕ್ಕೆ ಸತಿ, ಪುತ್ರರು ಎನ್ನಂಗದೊಳಗಿರರು ಅಂದರೆ ಹೆಣ್ಣೊಬ್ಬಳು ವ್ರತ, ಆಚಾರ, ನೇಮ, ಶೀಲದ ಪಾಲನೆಯ ವಿಚಾರದಲ್ಲಿ ತಬ್ಬಿಬ್ಬುಗೊಳ್ಳುತ್ತಿದ್ದಳು. ಏಕೆಂದರೆ ಇವುಗಳ ಕುರಿತು ಆಕೆಯಲ್ಲಿ ಸಂದೇಹಗಳು ಒಡಮೂಡಿದ್ದರೂ ಪ್ರಶ್ನಿಸುವಂತಿರಲಿಲ್ಲ. ಒಂದು ವೇಳೆ ವ್ರತ ಏನಾದರೂ ಮುಕ್ಕಾದರೆ ಸ್ತ್ರೀಯು ತಬ್ಬಿಬ್ಬುಗೊಳ್ಳುತ್ತಿದ್ದಳು. ಏಕೆಂದರೆ ಒಡೆಯ(ಪತಿ)ನಿಂದ ಶಿಕ್ಷೆಗೆ ಒಳಗಾಗಬಹುದಾದ ಭಯದ ಸಾಧ್ಯತೆಗಳಿರಬಹುದೆನೂ? ಶೀಲದ ಪ್ರಶ್ನೆ ಎಂದರೆ ಸತಿ, ಪುತ್ರರು ಆತನ ಅಂಕೆಯಲ್ಲಿಯೇ ಇರಬೇಕಿತ್ತು. ಇದು ಪುರುಷ ದೌರ್ಜನ್ಯದ ಒಂದು ಮುಖ. ಜೈವಿಕ ಕ್ರಿಯೆಯ ನಂತರ ಮಕ್ಕಳ ಮುಖಗಳು ಅಪ್ಪನ ಅಥವಾ ಅಮ್ಮನ ಮುಖವನ್ನು ಹೋಲುವಂತಿರಬೇಕು ಎನ್ನುವಂತಹ ವಿಷಯ ಅಂದು ಕಡ್ಡಾಯದ ಶೀಲಪಾಲನೆಯಲ್ಲಿರುವಂತಿದೆ. ಆಕೆ ವ್ರತಕ್ಕೆ ಹೊಂದಿಕೊಳ್ಳಲಾರದಂತಹ ಸ್ಥಿತಿಯಲ್ಲಿ ಇದ್ದರೆ, ಒಡೆಯನು ಆಕೆಯನ್ನು ತ್ಯೆಜಿಸುವ ಸಾಧ್ಯತೆಗಳಿದ್ದವು ಅಂತಹ ಸಂದರ್ಭದಲ್ಲೂ ಆಕೆ ಪ್ರಶ್ನಿಸುವಲ್ಲಿ ಅಸಹಾಯಕಳಾಗಿದ್ದಳು. ಗಂಡನೆ ಒಡೆಯನಾಗಿ, ದೇವರಾಗಿ, ಲಿಂಗವಾಗಿ, ಪತಿಯಾಗಿ ಮತ್ತು ಆಕೆಗೆ ಸರ್ವವು ಆತನೇ ಆಗಬೇಕು ಎಂಬ ನಂಬಿಕೆಯಿತ್ತು.

ಒಡೆಯನ ವ್ರತ ಒಪ್ಪಿಕೊಂಡರೆ ಉತ್ತಮ ಸ್ಥಿತಿ, ಒಪ್ಪದಿದರೆ ಇನ್ನೂ ಯಾವ ಹಂತಕ್ಕೆ ಬದುಕು ಹೋಗುತ್ತದೆ ಎಂಬ ಆಂತಕಗಳು ಸ್ತ್ರೀಯರಲ್ಲಿತ್ತು. ಇಲ್ಲಿ ಸ್ತ್ರೀಯರಿಗೆ ಹೇಳಿಕೊಳ್ಳಲಾರದ ನೋವು, ಅಪಮಾನ, ಅವಮಾನ, ಅಸಹಾಯಕತೆ, ಶೋಷಣೆಗಳಿದ್ದವು. ಹೀಗಾಗಿ ಸ್ತ್ರೀಯು ವ್ರತ ನಿಯಮಗಳ ಉಲ್ಲಂಘನೆ ಮಾಡುವಂತಿಲ್ಲ. ಆದರೆ ಪುರುಷ ಉಲ್ಲಂಘಿಸುವ ಸ್ವತಂತ್ರವಿತ್ತು. ಅದಕ್ಕೆ ತಳಸ್ತರದ ವಚನಕಾರ್ತಿಯರ ವಚನಗಳಲ್ಲಿ ಪುರುಷರು ವ್ರತ ಉಲ್ಲಂಘನೆ ಮಾಡಿರುವ ವಿಚಾರವನ್ನು ಬಹುಸಂಖ್ಯಾ ವಚನಗಳಲ್ಲಿ ವಿರೋಧಿಸಿದ್ದನ್ನು ಕಾಣಬಹುದು. ವ್ರತವೆಂಬುದು ಪುರುಷ ನಿರ್ಮಾಣದ ಕೂಸು. ಇದು ಸ್ತ್ರೀಯನ್ನು ಅಧೀನಳಾಗಿ ಮತ್ತು ಶೋಷಣೆಗೆ ಒಳಗಾಗುವಂತೆ ಮಾಡಿದ ಒಂದು ಅಸ್ತ್ರ. ಇಲ್ಲಿ ಪುರುಷ ಸ್ತ್ರೀಯನ್ನು ವ್ರತವೆಂಬ ಬಂಧನದಲ್ಲಿರಿಸಿದನು ಆದರೆ ಬಂಧಮುಕ್ತಗೊಳಿಸಿರಲಿಲ್ಲ ಅಲ್ಲದೇ ಅಭಿವ್ಯಕ್ತಿ ಸ್ವಾತಂತ್ರವನ್ನು ನೀಡಿರಲಿಲ್ಲ ಎಂದು ಹೇಳಬಹುದು.

## ೦೨ ಆಚರಣೆಗಳ ನಿರ್ಮಾಣ ಮತ್ತು ನಿಯಂತ್ರಣ:

ಆಚರಣೆಗಳ ನಿರ್ಮಾತೃ ಪುರುಷ. ಅವನು ಆಚರಣೆಗಳಿಗೆ ವ್ರತ, ನಿಯಮ, ನಿಷ್ಠೆ, ಸಂಪ್ರದಾಯ ಮತ್ತು ಸಾಂಸ್ಕೃತಿಕ ಪರಂಪರೆ ಎನ್ನುವ ಚೌಕಟ್ಟನ್ನು ನೀಡಿದ್ದಾನೆ. ಆ ಮೂಲಕ ಅಚರಣೆಗಳ ಸಂಪೂರ್ಣ ನಿಯಂತ್ರಣ ಪುರುಷನ ಕೈಯಲ್ಲಿದೆ. ವಚನಸಾಹಿತ್ಯದಲ್ಲಿ ವ್ರತಾಚಾರಗಳನ್ನು ಕೊಟ್ಟ ಗಣಗಳ ಹೆಸರುಗಳು – ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ವೀರ ಮಡಿವಾಳ, ಮಾಚಯ್ಯ, ನಿಜಗುಣಶಿವಯೋಗಿ, ಸಿದ್ಧರಾಮ, ಮೋಳಿಗೆಯ ಮಾರಯ್ಯ, ಆಯ್ದಕ್ಕಿ ಮಾರಯ್ಯ, ಏಕಾಂತ ರಾಮಯ್ಯ, ಅಜಗಣ್ಣನೆಂದು ಗುರುತಿಸಲಾಗಿದೆ. ಅಲ್ಲದೆ ಸ್ತ್ರೀಯರಲ್ಲಿ ಅಕ್ಕಮಹಾದೇವಿ, ದುಗ್ಗಳೆಯರು ವ್ರತಗಳನ್ನು ನೀಡಿದವರಲ್ಲಿ ಪ್ರಮುಖರು .ಹೀಗೆ ಏಳನೂರ ಎಪ್ಪತ್ತು ಅಮರಗಣಾಂಗಳು ವ್ರತವೆಂಬ ಪ್ರಸಾದವನ್ನು ಕೊಟ್ಟರು. ಪುರುಷರೇ ವ್ರತ, ಆಚರಣೆಯನ್ನು ಹಾಕಿ ಕೊಟ್ಟಿರುವುದರಿಂದ ಸ್ತ್ರೀಯರಿಗೆ ಇದು ಕಡ್ಡಾಯವಾಗಿರಬೇಕು. ಸ್ತ್ರೀಯರಿಗೆ ವ್ರತ ಆಚರಣೆಯ ನಿಯಮವನ್ನು ಬೋಧಿಸಿದ್ದು, ವ್ರತ ಪಾಲಿಸುವ ಅಥವಾ ಆಚರಿಸುವಂತೆ ದೀಕ್ಷೆ ನೀಡಿದ್ದು ಪುರುಷ. ವ್ರತ ಆಚರಣೆ ಪಾಲಿಸುತ್ತಿರುವ ಸ್ತ್ರೀಯರಿಗೆ ಒಂದು ಚೌಕಟ್ಟನ್ನು ಹಾಕಿಕೊಟ್ಟನು, ಅದರಿಂದ ತಾನು ಹೊರಗುಳಿದು ಲಾಭ ಪಡೆದುಕೊಂಡನು. ಹೀಗಾಗಿ ಪುರುಷನಿಗೆ ಮಾತ್ರ ವ್ರತ ಆಚರಣೆಯ ನಿಯಮಗಳನ್ನು ಮೀರುವ ಅವಕಾಶವಿತ್ತು. ಇಂತಹ ಸನ್ನಿವೇಶವನ್ನು ಗಮನಿಸುತ್ತಿದ್ದ ವಚನಾಕಾರ್ತಿಯರು ವ್ರತಭ್ರಷ್ಟನಾದವನು ಗುರುವಿದ್ದರೂ ಆಚರಿಸಲಾಗದು ಮತ್ತು ಅನುಸರಿಸಲಾಗದು ಎಂದಿದ್ದಾರೆ.

೧. ಖ್ಯಾತಿ ಲಾಭಕ್ಕೆ ವ್ರತವ ಮಾಡಿಕೊಂಡವನ ನೇಮವ ನೋಡಾ!

೨. ಗುರುವಾದಡೂ ಆಚಾರ ಭ್ರಷ್ಟನಾದಡೆ ಅನುಸರಿಸಲಾಗದು"

೩. ಆಚಾರ ತಪ್ಪಿದಲ್ಲಿ ಪ್ರಾಯಶ್ಚಿತ ಉಂಟೆಂಬ
ಅನಾಚಾರಿಗಳ ಮುಖವ ನೋಡಬಹುದೆ?

೪. ಆಚಾರ ತಪ್ಪಿದಲ್ಲಿ, ಶ್ರೇಷ್ಠನು ನಾನೆಂದು
ಆಚಾರವನ್ನು ಅನುಸರಣೆಯ ಮಾಡಬಹುದೆ?
ಆಚಾರಕ್ಕೂ ಪಕ್ಷಪಾತ ಉಂಟೆ?

ಈ ವಚನವು ವ್ರತ ಆಚರಣೆಯ ನಿಯಮವನ್ನು ಯಾರು ಹುಟ್ಟು ಹಾಕಿದರೋ ಆ ಗಣಗಳೇ ಇವುಗಳನ್ನು ಮೀರಿ ನಡೆಯುತ್ತಿದ್ದರು ಎಂಬುದನ್ನು ತಿಳಿಸುತ್ತದೆ. ವ್ರತವನ್ನು ಯಾರೇ ಮೀರಿದರು ಅದು ಖಂಡನೀಯ. ಈ ನಿಯಮ ಪಾಲಿಸದವರು ಭ್ರಷ್ಟರು ಅವರ ನಿಯಮವನ್ನು ಅನುಸರಿಸುವ ಅಗತ್ಯವಿಲ್ಲವೆಂದು ನೇರವಾಗಿ ಹೇಳಿದ್ದಾಳೆ. ಆದರೂ ಮಹಿಳೆಗೆ ಮುಕ್ತ ವಿಚಾರಕ್ಕೆ ಅವಕಾಶವೇ ಇರಲಿಲ್ಲ ಎಂದು ತೋರುತ್ತದೆ ಅದಕ್ಕೆ ಸ್ತ್ರೀಯು ಪುರುಷನ ಆಚಾರದಲ್ಲಿ ಸತಿಯಾಗಿ ನಡೆಯಬೇಕಿತ್ತು. ಉದಾಹರಣೆಗೆ "ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರ ಉಂಟೆ? ಎಂಬ ವಚನದ ಸಾಲು ಸಾಕ್ಷಿಯಾಗಿ ನಿಲ್ಲಬಲ್ಲದು. ಇಲ್ಲಿ ಸ್ತ್ರೀಗೆ ಹೇಳಿಕೊಳ್ಳಲಾರದ ನೋವು ಮತ್ತು ಅಸಹಾಯಕತೆಗಳಿದ್ದವು. ಏಕೆಂದರೆ ಗಂಡನನ್ನು ಒಡೆಯನೆಂದು ಒಪ್ಪಿಕೊಂಡಾಗ ಅವನು ಹಾಕಿಕೊಟ್ಟ ವ್ರತಗಳನ್ನು ಸ್ತ್ರೀಯೊಬ್ಬಳು ಪಾಲಿಸುವುದು ಮತ್ತು ಅನುಸರಿಸುವುದು ಧರ್ಮವಾಗಿತ್ತು.

ಹೀಗಾಗಿ ಸ್ತ್ರೀಯು ವ್ರತವನ್ನು ಉಲ್ಲಂಘನೆ ಮಾಡುವಂತಿರಲಿಲ್ಲ. ಆದರೆ ಪುರುಷ ಮಾತ್ರ ಈ ವ್ರತಗಳ ಉಲ್ಲಂಘನೆ ಮಾಡುವ ಅವಕಾಶವಿತ್ತು. ಬಹುಸಂಖ್ಯಾ ವಚನಗಳು ಪುರುಷರು ವ್ರತ–ನಿಯಮವನ್ನು ಮೀರಿರುವುದನ್ನು ವಿರೋಧಿಸುತ್ತವೆ. ಕಟು ವಿರೋಧಗಳ ನಡುವೆಯು ಪುರುಷರಿಗೆ ರಿಯಾಯಿತಿಗಳಿದ್ದವು. ವ್ರತ ಉಲ್ಲಂಘನೆ ಮಾಡಿದ್ದನ್ನು ಸಮರ್ಥಿಸುವ ಧಾಟಿಯೊಂದಿತ್ತು ಎಂದೆನಿಸುತ್ತದೆ. ತಾನು ಪುರುಷನೆಂಬ ಧಾಟಿಯಿರಬಹುದು. ಇಂತಹ ಮೊಂಡು ಧೈರ್ಯಗಳನ್ನು ಗುರುತಿಸುತ್ತಿದ್ದ ವಚನಕಾರ್ತಿಯರು ಲಾಭಿ ಪುರುಷರನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. "ಬೈವುದಕ್ಕೆ ಬಾಯಿ ತೆರಪಿಲ್ಲ; ಹೊಯ್ಯುವದಕ್ಕೆ ಕೈಗೆ ಅಡಹಿಲ್ಲ ನೋಡುವ ಕಣ್ಣನೆ ಮುಚ್ಚುವೆ ಈ ನೋವನಿನ್ನಾರಿಗೂ ಹೇಳೆ" ಎಂಬ ಸಾಲುಗಳು ಪುರುಷನ ದಬ್ಬಾಳಿಕೆಯನ್ನು ವಿಜೃಂಭಿಸಿದರೆ, ಸ್ತ್ರೀಯರ ಅಸಹಾಯಕತೆ ಮತ್ತು ನೋವುಗಳು ಯಾರಿಗೆ ಹೇಳಲಿ? ಮತ್ತು ಗಂಡನ ನಿಯಮಗಳನ್ನು ಅನುಸರಿಸಲೋ ಬಿಡಲೋ ಎನ್ನುವ ಗೊಂದಲದಲ್ಲಿದ್ದಾಳೆ. ಸಮಾಜದ ಪುರುಷರು ವ್ರತ ನಿಯಮದ ಆಚರಣೆಗಳನ್ನು ಮಾಡಿ ಸ್ತ್ರೀಯರಿಗೆ ನೋವು ನೀಡುತ್ತಿದ್ದರೆ ಗಂಡನ ಬಳಿ ಹೇಳಿ ಪರಿಹಾರ ಪಡೆಯಬಹುದಿತ್ತು. ಆದರೆ ಗಂಡನೆ ವ್ರತ ನಿಯಮಗಳನ್ನು ಹೇರಿ, ಆಚರಿಸುವಂತೆ ಒತ್ತಾಯಿಸುತ್ತಿದ್ದರೆ ನಾನು ಯಾರಲ್ಲಿ ದೂರಲಿ ಎಂದು ಅಸಹಾಯಕತೆಯಿಂದ ಹೇಳಿಕೊಂಡಿದ್ದಾಳೆ.

ಆಚಾರವನ್ನು ವಸ್ತುವಾಗಿ, ವ್ರತವನ್ನು ಪ್ರಾಣವಾಗಿ, ಕ್ರಿಯೆಯನ್ನು ಜ್ಞಾನವಾಗಿ ಮತ್ತು ಜ್ಞಾನವೇ ಆಚಾರಗಳೆಂಬ ಚೌಕಟ್ಟನ್ನು ಕೊಟ್ಟ ಆದರ್ಶ ಸ್ತ್ರೀಯರ ಅಥವಾ ಪುಣ್ಯಸ್ತ್ರೀಯರ ಕಲ್ಪನೆಯನ್ನು ಜಾರಿಗೆ ತಂದರು. ಆಚರಣೆ ಮತ್ತು ವ್ರತಗಳ ಬಗ್ಗೆ ತಾತ್ವಿಕ ಚಿಂತನೆ ಮತ್ತು ಆಚರಣಾತ್ಮಕ ಸಂಬಂಧದ ನೆಲೆಯಿಂದ ವಿಶ್ಲೇಷಣೆ ಮಾಡುವ ಪ್ರಯತ್ನ ಆಗಬೇಕಿತ್ತು. ಅದಕ್ಕೆ ಸ್ತ್ರೀಯರು (ವಚನಾಕಾರ್ತಿಯರು) ವಚನಗಳನ್ನು ಬರೆಯಲಾರಂಭಿಸಿದರು. ವಚನಕಾರ್ತಿಯರು ತಮ್ಮ ವಚನಗಳಲ್ಲಿ ಆಚರಣೆಗಳ ಉಲ್ಲಂಘನೆಯ ವಿಚಾರವನ್ನು ಕುರಿತು ಮಾತನಾಡುತ್ತಾರೆ. ಪುರುಷ ನಿರ್ಮಿತವಾದ ವ್ರತ ಆಚರಣೆಯ ಕಟ್ಟನ್ನು ಒಡೆಯುವ ಪ್ರಯತ್ನ ಮಾಡಿದ್ದಾರೆ. ಪುರುಷರ ವ್ರತ ಆಚರಣೆಯ ನಿಯಮಗಳನ್ನು ವಿರೋಧಿಸಿಕೊಂಡೆ ಬಂದಿದ್ದಾರೆ.

ವ್ರತ ಎಂದರೇನು? ವ್ರತದ ಸ್ವರೂಪಗಳು ಎಂತಹದ್ದು? ಅದು ಬದುಕಿನ ಸಂವೇದನೆಯೆ? ಅಥವಾ ಅದು ಪರಂಪರೆಯ ಹೆಸರಿನಲ್ಲಿ ಹೇರಲ್ಪಟ್ಟಿದೆಯೇ? ಇದು ಆಚರಣೆಯ ಹೆಸರಿನ ಒಂದು ನೈತಿಕ ಮೌಲ್ಯವೇ? ಎನ್ನುವ ಪ್ರಶ್ನೆಗಳಿಗೆ ಉತ್ತರವನ್ನು ವಚನಕಾರ್ತಿಯರ ವಚನಗಳ ಮೂಲಕವೇ ಸ್ಪಷ್ಟಪಡಿಸಿಕೊಳ್ಳಬಹುದು.

೧. ಹೆಣ್ಣು ಹೊನ್ನು ಮಣ್ಣಿಗಾಗಿ ವ್ರತವೆಂಬ ನೇಮವ ಮಾಡಿಕೊಳ್ಳಬಹುದೆ?
ಕೂಲಿಗೆ ಬಳಿನೀರ ಕುಡಿದಡೆ ಅದಾರ ಮುಟ್ಟವುದು?
ವಾಸಿಗೆ ಮೂಗನರಿದುಕೊಂಡಡೆ ನಾಚಿಕೆ ಯಾರಿಗೆಂಬುದನರಿದ ಮತ್ತೆ
ಇಂತಿವ ಹೇಸಿ ಶೀಲವಂತನಾಗಬೇಕು.

೨. ಸೀಮೋಂಘನಲೆಂಬುದ ನಾನರಿಯೆ, ನೀವೆ ಬಲ್ಲಿರಿ
ಇದ್ದ ಮನೆಯ ಬಿಡಲಾರದೆ, ತೊಟ್ಟಿದ್ದ ತೊಡಿಗೆಯ ಅಳಿಯಲಾರದೆ,
ಇದ್ದ ಠಾವ ಬಿಟ್ಟು ಹೋಗೆನೆಂಬುದು ಛಲವೆ?

೩. ವ್ರತಾಚಾರವೆಂಬುದು ತನಗೂ, ತನ್ನ ಸತಿಗೋ, ಇದಿರ ಭೂತ ಹಿತಕೊ?
ತಾನರಿಯದೆ ತನಗೆ ವ್ರತ ಉಂಟೆ?
ವ್ರತಾಚಾರಿಗಳ ಗರ್ಭದಿಂದ ಬಂದ ಶಿಶುವ ಅನ್ಯರಿಗೆ ಕೊಡಬಹುದೆ?
ವ್ರತಾಚಾರವಿಲ್ಲದರಲ್ಲಿ ತಂದು ವ್ರತವ ಮಾಡಬಹುದೆ?[೧೦]

ಅಕ್ಕಮ್ಮಳು ವ್ರತಾಚಾರದ ಮರ್ಮವನ್ನು ಅರಹುತ್ತಾಳೆ. ನೈತಿಕ ನಿಯಮಗಳ, ಧಾರ್ಮಿಕ ವಿಧಿ–ವಿಧಾನಗಳ, ಯಾಂತ್ರಿಕ ಅನುಸರಣೆ ಮಾತ್ರ

ವ್ರತವಲ್ಲ ; ಅಂಗಕ್ರಿಯೆಗಳು ಲಿಂಗಕ್ರಿಯೆಗಳಾಗುವಂತೆ ಅಂತರಂಗದ ಅರಿವು ಮತ್ತು ಆಚರಣೆಗಳನ್ನು ಸಮನ್ವಯಿಸಿಕೊಳ್ಳಬೇಕೆಂಬ ನಿಲುವು ಈಕೆಯದು. ಅರಿವಿಲ್ಲದ ಆಚರಣೆ, ಅಜ್ಞಾನದ ಕರ್ಮ ಬಂಧನದಲ್ಲಿ ಸಿಲುಕಿದವರನ್ನು, ಅಹಂಭಾವಿಗಳಾದ ಹಿರಿಯರನ್ನು ಕಂಡಾಗ ಅಬ್ಬರಿಸುತ್ತಾಳೆ. ವ್ರತ, ನಿಯಮಗಳ ಹೆಸರಿನಲ್ಲಿ ಸೋಮಾರಿಗಳಾಗಿ, ಕಾಯಕದಿಂದ ವಿಮುಖರಾಗುತ್ತಿರುವವರನ್ನು, ವ್ರತದ ನಿಯಮ ಉಲ್ಲಂಘಿಸಿದವರನ್ನು, ಹೆಣ್ಣು, ಹೊನ್ನು, ಮಣ್ಣಿಗಾಗಿ ವ್ರತವೆಂಬುದನ್ನು ಮಾಡಿಕೊಂಡವರನ್ನು, ವ್ರತಾಚಾರವೆಂಬುದು ಹೆಣ್ಣಿಗೋ? ಗಂಡಿಗೋ? ಸಮಾಜಹಿತಕ್ಕೋ? ಭೂತಹಿತಕ್ಕೋ? ಗರ್ಭದಲ್ಲಿದಲ್ಲಿರುವ ಶಿಶುವಿಗೋ? ಎಂಬುದನ್ನು ಅರಿಯದವರ ಲಿಂಗ ಪೂಜೆಯನ್ನಾದರೂ ಮೆರೆಯಬೇಕು. ಗುರುದರ್ಶನವನ್ನಾದರೂ ಮೆರೆಯಬೇಕು ಎನ್ನುವ ನಿಯಮಕ್ಕೆ ಬದ್ಧಳಾದವಳು.

ಅವಾವ ವ್ರತಕ್ಕೂ ಗುರುಲಿಂಗ ಜಂಗಮನೆ ಮೂಲಮಂತ್ರ.

ಆವಾವುದ ತಾ ಕೊಂಬ ಕೊಡುವಲ್ಲಿ

ಲಿಂಗ ಜಂಗಮನ ಮುಂದಿಟ್ಟುಕೊಂಬುದೆ ಶುದ್ಧಕ್ರೀ.

ಹೀಗಲ್ಲದೆ

ಲಿಂಗ ಜಂಗಮ ಹೊರತೆಯಾಗಿ ಮತ್ತೊಂದು ಕೊಂಡೆನಾಯಿತ್ತಾದಡೆ,

ಎನಗದಲ್ಲದ ದ್ರವ್ಯ, ಎನಗಿದೆ ಭಾಷೆ[೧೧].

ಎಂಬ ವಚನದ ಸಾಲು ವ್ರತವೆಂಬುದನ್ನು ಅರಿಯಲು ಸಹಾಯಕವಾಗುತ್ತವೆ. ಇಲ್ಲಿ ಗುರುಲಿಂಗ ಜಂಗಮದ ಒಪ್ಪಿತ ವಿಚಾರವಿದೆ. ವ್ರತವ ಉಪದೇಶವ ಮಾಡುವಲ್ಲಿ ಹಿಡಿವಾತನ ಯುಕ್ತಿ –ಎಂಬ ವಚನದ ಸಾಲುಗಳಲ್ಲಿ ವ್ರತವನ್ನು ಬೋಧಿಸಲಾಗುತ್ತಿತ್ತು ಮತ್ತು ಕೇಳಲಾಗುತ್ತಿತ್ತು ಎಂಬ ಮಹತ್ವದ ವಿಷಯವನ್ನು ಪ್ರಕಟಿಸುತ್ತೀವೆ. ವ್ರತಾಚಾರಗಳ ಅನುಸರಣೆಯಲ್ಲಿ ಗುರು, ಜಂಗಮರ ಮಾರ್ಗದರ್ಶನ ಅವಶ್ಯ. ತಾ ಕೊಂಬ ಕೊಡುವಲ್ಲಿ ಲಿಂಗ ಜಂಗಮದ ಮುಂದಿಟ್ಟುಕೊಂಬುದೆ ಶುದ್ಧಕ್ರೀ. ಎಲ್ಲಾ ವ್ರತ, ನಿಯಮ, ಶೀಲಗಳಿಗೆ ಜಂಗಮ ಪ್ರಸಾದ, ದರ್ಶನ, ಮಾಟವೆ ವ್ರತಗಳು. ಆದುದರಿಂದ ಜಂಗಮಲಿಂಗಕ್ಕೆ ಸಂದೇಹ ಮಾಡಕೂಡದೆಂದು ಎಚ್ಚರಿಸುತ್ತಾಳೆ. ಇನ್ನೊಂದು ವಚನದಲ್ಲಿ ಕಾಯಕ ತತ್ತ್ವದ ರಹಸ್ಯವನ್ನೆ ಬಿಚ್ಚಿಟ್ಟಳು. “ಇಂದಿಗೆ ನಾಳಿಂಗೆ

ಎಂಬ ಸಂದೇಹಮಂ ಬಿಟ್ಟು ಅಂದಿನ ಕಾಯಕದ ಆದಾಯವನ್ನು ಎಲ್ಲರೊಡಗೂಡಿ ಅಂದೆ ಸದ್ವಿನಿಯೋಗ ಮಾಡಬೇಕು" ಎನ್ನುತ್ತ ಆ ಸಂಗ್ರಹ ತತ್ತ್ವದ ಹಿರಿಮೆಯನ್ನು ನೆನಪಿಸಿಕೊಡುತ್ತಾಳೆ.

ಎನ್ನ ವ್ರತದ ನೇಮ; ಅಡಿ ಆಕಾಶದೊಳಗಾದ ವ್ರತಸ್ಥರು ಕೇಳಿರೆ.

ನಮ್ಮ ನಿಮ್ಮ ವ್ರತಕ್ಕೆ ಸಂಬಂಧವೇನು?

ಲೆಕ್ಕವಿಲ್ಲದ ವ್ರತ, ಕಟ್ಟಳೆಯಿಲ್ಲದ ನೇಮ, ಇವನೆಷ್ಟು ಮಾಡಿದಡೆ ಏನು?

ತನ್ನ ಮನೆಗೆ ಕಟ್ಟಳೆ ಇರಬೇಕು.

ಎನ್ನ ಲಿಂಗವಂತೆಗೆ ಸೂತಕಮಾಸ ತಡೆದಲ್ಲಿ,

ಗರ್ಭವೆಂಬುದು ತಲೆದೋರಿದಲ್ಲಿಯೇ ಆತ್ಮಚೇತನಿಸುವನ್ನಕ್ಕ

ಆಕೆಯ ಉದರದ ಮೇಲೆ ನಿಹಿತ ಲಿಂಗವಿರಬೇಕು.

ನವಮಾಸ ತುಂಬಿ ಆಕೆಯ ಗರ್ಭದಿಂದ ಉಭಯಜಾತತ್ವವಾಗಲಾಗಿ

ಚೇತನ ಬೇರಾದಲ್ಲಿ ಗುರುಕರಜಾತನಮಾಡಬೇಕು.

ಇಂತೀ ಇಷ್ಟರ ಕ್ರೀಯಲ್ಲಿ ಸಂತತ ವ್ರತ ಇರಬೇಕು[೧೨].

–ಎಂಬ ವಚನದ ಸಾಲುಗಳಲ್ಲಿ ವ್ರತವೆಂಬ ನಂಬಿಕೆಯ ಕುರಿತು ಪ್ರಶ್ನಿಸುತ್ತಾಳೆ. ಹೆಣ್ಣು ವ್ರತವನ್ನು ಮಾಡುವುದರಿಂದ ನಿಮಗೇನು ಲಾಭ? ಹೆಣ್ಣಿಗೂ ನಿಮಗೂ ಯಾವ ರೀತಿಯ ಸಂಬಂಧ? ಒಲ್ಲದ ಮನಸ್ಸಿನಿಂದ ವ್ರತವನ್ನು ಮಾಡಿದರೆ ಏನು ಪ್ರಯೋಜನವಿಲ್ಲ. ಹೀಗೆ ಹೇಳಿ ಹೇರಲ್ಪಟ್ಟ ವ್ರತ ನಿಯಮಗಳನ್ನು ಪಾಲಿಸಬೇಕಾದ ಅನಿವಾರ್ಯತೆಯನ್ನು ಇಲ್ಲಿ ಹೇಳಿಕೊಂಡಿದ್ದಾಳೆ.

ಎಲ್ಲವ ಮೀರಿ ಶೀಲವಂತನಾದಲ್ಲಿ ರೋಗವೆಲ್ಲಿಂದ ಬಂದಿತು?

ಆ ಗುಣ ತನುವಿಲ್ಲಿಯ ತೊಡಕು; ರುಜೆ ಪ್ರಾಣವ ಕೊಳ್ಳಲರಿಯದು.

ಅಂಗದ ಡಾವರಕ್ಕೆ ಸೈರಿಸಲಾರದೆ,

ಮದ್ದ ತಾ ಲಿಂಗಕ್ಕೆ ತೋರಿ, ಜಂಗಮಕ್ಕೆ ಕೊಟ್ಟು, ಜಂಗಮ ಪ್ರಸಾದವೆಂದು

ಲಿಂಗ ಜಂಗಮವ ಹಿಂಗದೆ ಕೊಳ್ಳೆಂದು ಹೇಳುವ ಅನಂಗಿಗಳಿಗೆ

ಗುರು ಲಿಂಗ ಜಂಗಮ ಮೂರರಲ್ಲಿ ಒಂದೂ ಇಲ್ಲ ಎಂದೆ.

–ಎಂಬ ವಚನದ ಸಾಲುಗಳು ವ್ರತಭ್ರಷ್ಟರನ್ನು ಕುರಿತದ್ದಾಗಿದೆ. ಯಾರು ಹೆಣ್ಣಿಗೆ ವ್ರತ ಪಾಲಿಸಬೇಕು ಎಂದು ಹೇಳುತ್ತಿದ್ದಾರೋ ಅವರು ರೋಗ ರುಜಿನಗಳಿಂದ ಬಳಲುತ್ತಿದ್ದಾರೆ. ಅಲ್ಲದೆ ಅವರಲ್ಲಿಯೇ (ಮನಸ್ಸಿನಲ್ಲಿ) ತೊಡಕುಗಳಿವೆ. ಅದು ಗುರು, ಲಿಂಗ, ಜಂಗಮ ಮೂರು ಅಲ್ಲದ ಸ್ಥಿತಿ. ಇಂತಹವರಿಂದ ದೀಕ್ಷೆ ಸಲ್ಲದು. 'ವ್ರತದೀಕ್ಷೆಯ ಮಾಡುವಲ್ಲಿ ಗುರುವಿನ ಇರುವು' ಎಂಬ ಸಾಲು ಈ ಮೇಲಿನ ಮಾತಿಗೆ ಪುಷ್ಟಿ ಕೊಡುತ್ತದೆ.

'ವ್ರತವೆಂಬುದು ಒಡೆಯನ ಕಟ್ಟಳೆ' ಎನ್ನುವ ವಚನದ ಸಾಲನ್ನು ನೋಡಿದಾಗ ಈ ಒಡೆಯ ಯಾರು? ಎಂಬ ಪ್ರಶ್ನೆಯು ಮೂಡುತ್ತದೆ. ಅದಕ್ಕೆ ಉತ್ತರ ಅಕ್ಕಮ್ಮನ ವಚನದಿಂದಲೇ ಕಾಣಬಹುದು. 'ಪುರುಷನ ಆಚಾರದಲ್ಲಿ ಸತಿ ನಡೆಯಬೇಕಲ್ಲದೆ ಸತಿಗೆ ಸ್ವತಂತ್ರವುಂಟೆ'? ಇಲ್ಲಿ ಒಡೆಯ ಎಂದರೆ 'ಗಂಡ' ಎಂಬುದು ಸೂಚಿತವಾಗಿದೆ. ವ್ರತ ಎಂಬುದು ಪುರುಷ ನಿರ್ಮಿತ ತಾತ್ವಿಕ ಚೌಕಟ್ಟು. ಅದು ಕೆಲವರಿಗೆ, ಮಹಿಳೆಯರಿಗೆ ಬೋಧಿಸಿದ್ದು, ಕೊಟ್ಟಿದ್ದು ಇವರು ಪಡೆದುಕೊಂಡಿದ್ದು ಪುರುಷ ವಚನಕಾರರಲ್ಲಿಯೂ ಅದು ಒಂದು ವರ್ಗದವರ ಬೌದ್ಧಿಕ ನಿರ್ಮಿತಿ. ವ್ರತವು ಯಾರಿಂದ ಸೃಷ್ಟಿಯಾಯಿತೋ ಆ ವರ್ಗಕ್ಕೂ– ವ್ರತಕ್ಕೂ ಎರಡು ರೀತಿಯ ಸಂಬಂಧಗಳು ಇದ್ದಿರಬಹುದು. ಒಂದು : ವ್ರತದೊಂದಿಗಿದ್ದ ತಾತ್ವಿಕ ಸಂಬಂಧ, ಇನ್ನೊಂದು ವ್ರತದೊಂದಿಗಿದ್ದ ಆಚರಣಾತ್ಮಕ ಸಂಬಂಧ.[೧೩] ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ ವ್ರತಕ್ಕೆ ಎರಡು ಆಯಾಮಗಳಿದ್ದವು. ಅದರ ತಾತ್ವಿಕ ಆಯಾಮವು ವಿಚಾರಕ್ಕೆ, ನುಡಿಗೆ, ಸಂಬಂಧಿಸಿದ್ದು, ಅದರ ಆಚರಣಾತ್ಮಕ ಆಯಾಮವು ಆಚಾರಕ್ಕೆ, ನಡೆಗೆ ಸಂಬಂಧಿಸಿದ್ದು. ಪಾಲನೆಯ ಬಿರುಕುಗಳು ಸ್ಪಷ್ಟವಾಗಿ ಎದ್ದು ಕಾಣುವುದು ಆಚರಣಾತ್ಮಕ ಆಯಾಮದಲ್ಲಿ ಎಂದು ಹೇಳಬಹುದು.

ತಾ ವ್ರತಿಯಾಗಿ ಮಕ್ಕಳೆಂದು ಮಾಡದಿರ್ದಡೆ ಆ ವ್ರತಕ್ಕೆ ತಾನೆ ಹೊರಗು.

ತನ್ನಂಗ ಮನ ಭಾವ ಕರಣಂಗಳಲ್ಲಿ ಸಂಗದಲ್ಲಿ ಇದ್ದವರಿಗೆಲ್ಲಕ್ಕೂ

ತನ್ನಂಗದ ವ್ರತವ ಮಾಡಬೇಕು

ಇದು ಸೀಮೆವಂತರ ಯುಕ್ತಿ[೧೪].

–ಎಂಬ ಈ ವಚನದ ಸಾಲುಗಳಲ್ಲಿ ಹೆಣ್ಣು ತಾನು ಮಕ್ಕಳನ್ನು ಪಡೆಯುವುದು ಒಂದು ವ್ರತ. ಆಕೆ ಮಕ್ಕಳನ್ನು ಪಡೆಯದೆ ಇದ್ದರೆ ವ್ರತದಿಂದ ಹೊರಗೆ ತಳ್ಳಲ್ಪಡುತ್ತಿದ್ದಳು. ಆಕೆಯು ತನ್ನ ಅಂಗದ ವ್ರತ, ಲಿಂಗ, ಮನ, ಭಾವ ಮತ್ತು ಕರಣಗಳಲ್ಲಿ ವ್ರತದ ನಿಯಮವನ್ನು ಪಾಲಿಸಬೇಕಿತ್ತು ಇದು ಸೀಮೆವಂತರ ನಿಯಮವಾಗಿತ್ತು ಎಂದು ಅಸಹಾಯತೆಯನ್ನು ಪ್ರಕಟಿಸಿದ್ದಾಳೆ.

ನಾನಾ ವ್ರತ ನೇಮ ಭೇದಂಗಳಲ್ಲಿ ಅರುವತ್ತು ನಾಲ್ಕು ವ್ರತ, ಐವತ್ತಾರು ಶೀಲ,

ಮೂವತ್ತೆರಡು ನೇಮ, ನಿತ್ಯ ಕೃತ್ಯ ಲೆಕ್ಕಕ್ಕವಧಿಯಿಲ್ಲ ಅಗೋಚರ[೧೫].

–ಎಂಬ ವಚನದ ಸಾಲುಗಳಲ್ಲಿ ಅರವತ್ತು ನಾಲ್ಕು ವ್ರತ, ಐವತ್ತಾರು ಶೀಲ, ಮೂವತ್ತೆರಡು ನೇಮಗಳಿವೆ ಎಂದು ಹೇಳಲಾಗಿದೆ. "ಅರಿತು ಮಾಡುವ ಶೀಲ ಮುಕ್ತಿಯ ಮೂಲ" ಎಂದು ಜ್ಞಾನಿ ಚೆನ್ನಬಸವಣ್ಣನವರು ಹೇಳಿದಂತೆ, ಅಕ್ಕಮ್ಮ ಅರಿವಿನಿಂದ ಅಮೃತವಾದ ಆಚರಣೆಯನ್ನು ಪುರಸ್ಕರಿಸಿ, ಆ ವಿಚಾರದ ಅಂಧ ಶ್ರದ್ಧೆಯನ್ನು ತಿರಸ್ಕರಿಸಿದ್ದಾಳೆ. ಅರಿತು ಮನಃಪೂರ್ವಕವಾಗಿ ಆಚರಿಸಿದಾಗಲೆ ಆ ಆಚರಣೆ ಬ್ರಹ್ಮಮಯವಾಗುವುದೆಂಬ ನಂಬಿಕೆ ಆಕೆಯದು. ಅಂತೆಯೆ "ವೇಷವೆಲ್ಲಿರದು? ಸೂಳೆಯಲ್ಲಿ, ಡೊಂಬರಲ್ಲಿ, ಬೈರೂಪಿಗಳಲ್ಲಿ ಇಂದೆ? ವೇಷವ ತೋರಿ ಒಡಲ ಹೊರೆವ ದಾಸಿವೇಶಿಯ ಮಕ್ಕಳಿಗೆ ನಿಜಭಕ್ತಿ ಎಲ್ಲಿಯದು?" ಎಂದು ವೇಷಧಾರಿ ಭಕ್ತರನ್ನು ಜರೆದು ವಿಡಂಬಿಸುತ್ತಾಳೆ. ಹಿರಿಯರ ಹಿರಿತನವನ್ನು ಖಂಡಿಸುತ್ತಾಳೆ.

ಇಷ್ಟೇವ್ರತ, ಇಷ್ಟೇನೇಮ, ಇಷ್ಟೇಶೀಲ, ಇಷ್ಟೇಆಚಾರ ಮತ್ತು ಇಷ್ಟೇನಿತ್ಯ ಕೃತ್ಯಗಳೆಂಬುದಿಲ್ಲ ಅವು ಅಸಂಖ್ಯಾತವಾಗಿದ್ದವು. ಗಂಡು ತನ್ನ ಅನುಕೂಲತೆಗೆ ತಕ್ಕಂತೆ ಅವುಗಳನ್ನು ಬದಲಾಯಿಸುತ್ತ ಹೋಗಿರುವ ಸಾಧ್ಯತೆ ಕಾಣಿಸುತ್ತದೆ. ಹೀಗಾಗಿ ಅವಳು ಅವುಗಳೆಲ್ಲವನ್ನು ಆಚರಣೆಯ ಹೆಸರಲ್ಲಿ ನೀಡಿದ ವೈದಿಕ ಪರಂಪರೆಯನ್ನು ವಚನಗಳ ಮೂಲಕ ವಿರೋಧ ವ್ಯಕ್ತಪಡಿಸುತ್ತಾಳೆ.

ಬೈವುದಕ್ಕೆ ಬಾಯಿ ತೆರಪಿಲ್ಲ; ಹೊಯ್ವುದಕ್ಕೆ ಕೈಗೆ ಅಡಹಿಲ್ಲ
ನೋಡುವ ಕಣ್ಣನೆ ಮುಚ್ಚುವೆ ಈ ನೋವನಿನ್ನಾರಿಗೂ ಹೇಳೆ[೧೬]

–ಎಂಬ ವಚನದ ಸಾಲುಗಳಲ್ಲಿ ಸ್ತ್ರೀಯು ಗಂಡನ ಅಥವಾ ಒಡೆಯನ ನಿಯಮವನ್ನು ಪಾಲಿಸಿಕೊಂಡು ಬಂದಿದ್ದಾಳೆ ಆದರೂ ಪುರುಷ ಶೋಷಣೆ ಮಾಡುವುದು ತಪ್ಪಲಿಲ್ಲ. ಬೈಯುವುದನ್ನು ಕೇಳಲಾರದೆ, ಹೊಡೆಯುವುದನ್ನು ಸಹಿಸಲಾರದೆ ತನ್ನ ಕಣ್ಣನ್ನು ಮುಚ್ಚುವೆ ಎಂದು ಹೇಳುತ್ತಾಳೆ. ಆದರೆ ತನ್ನ ನೋವನ್ನು ಯಾರಿಗೂ ಹೇಳಲಾರೆ ಎಂದು ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾಳೆ.

ಬಂದುದ ಸಾಕೆನ್ನದೆ, ಬಾರದುದ ತಾ ಎನ್ನದೆ,
ಗಡಿಗೆ ಬಟ್ಟಲು ನಮ್ಮಡೆಯಲ್ಲಿ ಒಡಗೂಡಿ ಸುರಿಯೆನ್ನದೆ
ಮಂತ್ರ ಭಿನ್ನವಾಗಿ, ಮತ್ತಾರಿಗೂ ಸಂಚರಿಸದೆ,
ಕೆಲಬಲದಿಂದ ಅವರಿಗೆ ಅದು ನೇಮವೆಂದೆನಿಸದೆ
ಲಿಂಗಕ್ಕೆ ಬಂದು ಸಂದುದ ಆನಂದದಿಂದ ಸ್ವೀಕರಿಸಿ ನಿಂದುದೆ ಭರಿತಾರ್ಪಣ[೧೭].

–ಎಂಬ ವಚನದ ಸಾಲುಗಳು ದುರಾಸೆಗಳನ್ನು ನಿರಾಕರಿಸುತ್ತವೆ. ಕೆಲವರ ದೃಷ್ಟಿಯಲ್ಲಿ ವ್ರತವೆಂಬುದನ್ನು ಪಾಲಿಗೆ ಬಂದುದು ಪಂಚಾಮೃತವೆಂದು ಸ್ವೀಕರಿಸಬೇಕು. ಆಗ ಅದು ನಿಜವಾದ ನೇಮವಾಗುವುದು. ಇದರಿಂದ ಬದುಕಿನಲ್ಲಿ ಆನಂದವು ಲಭಿಸುವುದು ಎಂದ್ಹೇಳಿದ್ದಾರೆ. ಇನ್ನು ಕೆಲವರು ವ್ರತ ತಪ್ಪಿದವರ, ವ್ರತ ನೀಡಿದವರ, ವ್ರತ ನಿಯಮಗಳನ್ನು ತೀವ್ರವಾಗಿ ಖಂಡಿಸುತ್ತಾರೆ. ಆದರೂ ವೈದಿಕ ಮನೋಸ್ಥಿತಿಯ ಚಿಂತನೆಗಳು ಸಮರ್ಪಣಭಾವದಿಂದ ಸ್ತ್ರೀಯು ವ್ರತವನ್ನು ಪಾಲಿಸಬೇಕೆಂಬ ನಿಯಮವನ್ನು ಮಾಡಿದಂತಿದೆ. ಹೀಗೆ ವಿರೋಧಿಸಿದವರಲ್ಲಿ ಮಸಣಮ್ಮಳು ಒಬ್ಬಳು.

ಕಾಗೆಯ ನಾಯ ತಿಂದವರಿಲ್ಲ;
ವ್ರತಭ್ರಷ್ಟನ ಕೂಡಿದವರಿಲ್ಲ.
ನಾಯಿಗೆ ನಾರಂಗವಕ್ಕುವುದೆ?
ಲೋಕದ ನರಂಗೆ ವ್ರತವಕ್ಕುವುದೇ ಶಿವಬೀಜಕಲ್ಲದೆ?[೧೮]

–ಈ ಮೇಲಿನ ವಚನದಲ್ಲಿ ಕಾಗೆ ಮತ್ತು ನಾಯಿಯನ್ನು ತಿಂದವರಿಲ್ಲ. ವ್ರತಭ್ರಷ್ಟನ ಕೂಡಿದವರಿಲ್ಲ. ಕಾಗೆ ಮತ್ತು ನಾಯಿ ತಿಂದವರು, ವ್ರತಭ್ರಷ್ಟರ ಕೂಡಿದವರು ನರಕಕ್ಕೆ ಹೋಗುವರೇ ಹೊರತು ಸ್ವರ್ಗಕ್ಕಲ್ಲ. ಇಲ್ಲಿ ಸ್ವರ್ಗ–ನರಕದ ಪ್ರಶ್ನೆಗಳು ಚರ್ಚೆಗೆ ಅವಕಾಶವನ್ನು ಮಾಡಿಕೊಡುತ್ತವೆ. ಈ ವ್ರತ ಆಚರಣೆಗಳನ್ನು

ಯಾರು ಕೊಟ್ಟಿದ್ದು ಮತ್ತು ಯಾರಿಂದ ನಿರ್ಮಾಣವಾದುದು ಎಂಬ ವಿಚಾರಗಳ ಮಂಡನೆಗಳಾಗಿವೆ. ಈ ವ್ರತಗಳನ್ನು ವಚನಕಾರ(ಪುರುಷ)ರಲ್ಲೇ ಕೆಲವು ಪ್ರಮುಖರು ಕೊಟ್ಟಿದ್ದಾರೆ. ಇನ್ನೊಂದು ವಿಶೇಷತೆಯೆಂದರೆ ಯಾರು ಕೊಟ್ಟಿದ್ದರೋ ಅವರೆ ವ್ಯವಹಾರಿಕ ಕಾರಣಗಳಿಗಾಗಿ ಸ್ವತಃ ಪಾಲನೆಯ ವಿಚಾರದಲ್ಲಿ ಅದನ್ನು ಮುರಿದಿದ್ದಾರೆ. ವ್ರತವು ಕೆಲವು ಕೋರಿಕೆಗೆ, ಒತ್ತಾಯಕ್ಕೆ ಮತ್ತು ಒಡೆಯನಿಗೆ ಅಂಜಬೇಕಾದ ಅನಿವಾರ್ಯತೆಗಳಾಗಿರಬಹುದು. ವಚನಕಾರ್ತಿಯರು ವ್ರತವೇ ಪ್ರಾಣ, ಆತ್ಮ, ಜ್ಞಾನ, ವಸ್ತು, ಕ್ರಿಯೆ ಮತ್ತು ಪರಂಪರೆಗಳಾದ ಇಂತಹ ನೆಲೆಗಳನ್ನು ಚರ್ಚೆಗೆ ತಂದಿಟ್ಟರು. ಜೊತೆಗೆ ಸ್ತ್ರೀಯರು ಈ ವ್ರತಗಳನ್ನು ಮೀರಲು ಪ್ರಯತ್ನಿಸಿದರು. ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮನ ವಚನದ ಸಾಲುಗಳಲ್ಲಿ ವ್ರತಭ್ರಷ್ಟನ ಕೂಡಿದವರಿಲ್ಲ ಎಂಬ ಮಾತು ವ್ರತಭ್ರಷ್ಟನ ಬಗೆಗಿನ ನಿರಾಕರಣೆಯನ್ನು ಸೂಚಿಸುತ್ತದೆ. 'ವ್ರತಭಷ್ಟನೆಂದರೆ ಕಾಗೆಯಂತೆ, ಸತ್ತ ನಾಯ ತಿಂದಂತೆ' ಎಂದು ಭಾವಿಸಿಕೊಳ್ಳಬಹುದು. ನಾಯಿ ಮತ್ತು ಕಾಗೆ ವ್ರತಭ್ರಷ್ಟನ ಸಂಕೇತದಲ್ಲಿ ನಿಲ್ಲುತ್ತವೆ. ಇವುಗಳ ಜೊತೆ ಇರುವವರಿಗೆ ನರಕ ಪ್ರಾಪ್ತಿಯಾಗುವುದು ಎಂದಿದೆ.

**೩. ಆಚರಣೆಗಳ ಬಗ್ಗೆ ವಚನಕಾರ್ತಿಯರು ತಳೆಯುವ ನಿಲುವುಗಳೇನು?**

ಹನ್ನೆರಡನೆಯ ಶತಮಾನದಲ್ಲಿ ಸ್ತ್ರೀಯರು ಪಡೆದ ಪುರುಷ ಸಮಾನ ಅವಕಾಶಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ತುಂಬ ಮುಖ್ಯವಾದುದು. ಈ ಆಚರಣೆಯು ಕೆಲವು ಪುರುಷರ (ಗಣಗಳ) ಹಕ್ಕು ಎಂಬ ಸ್ಥಾಪಿತ ಕಲ್ಪನೆಯನ್ನು ವಚನಕರ್ಾತಿಯರು ವಿರೋಧಿಸಿದರೆಂಬುದು ಅಷ್ಟೇ ಮುಖ್ಯ. ಪುರುಷ ನಿರ್ಮಾಣ ಮಾಡಿದ ನಿಯಮಗಳಿಗೆ ಸ್ತ್ರೀಯು ಬದ್ಧಳಾಗಿರಬೇಕಿತ್ತು. ಆಚರಣೆ, ನೇಮ, ವ್ರತ, ಶೀಲ ಮತ್ತು ಸಂಪ್ರದಾಯ ಇವುಗಳನ್ನು ಆಕೆ ಪಾಲಿಸುವಂತೆ ಒಡೆಯನಿಂದ ಹೇರಲ್ಪಟ್ಟಿವೆ.[೧೯] ಅದನ್ನು ಪ್ರತಿರೋಧಿಸಿದವರು ಇದ್ದಾರೆ ಮತ್ತು ನಿಷ್ಠೆಯಿಂದ ಪಾಲಿಸಿದವರು ಇದ್ದಾರೆ. ಉರಿಲಿಂಗ ಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆಯ ವಚನದಲ್ಲಿ ವ್ರತದ ಬಗೆಗಿನ ನಿಷ್ಠೆಯನ್ನು ಕಾಣಬಹುದು.

> "ವ್ರತವೆಂಬುದು ನಾಯಕರತ್ನ;
> ವ್ರತವೆಂಬುದು ಸುಪ್ಪಾಣಿಯ ಮುತ್ತು;
> ವ್ರತವೆಂಬುದು ಜೀವನ ಕಳೆ;
> ವ್ರತವೆಂಬುದು ಸುಯಿದಾನ.
> ವ್ರತ ತಪ್ಪಲು, ಉರಿಲಿಂಗಪೆದ್ದಿಗಳ ರಸನೊಲ್ಲನವ್ವಾ[೨೦]

ಎಂಬ ಈ ವಚನದಲ್ಲಿನ ಕೊನೆಯ ಸಾಲನ್ನು ನಾವು ಮೊದಲು ಅರ್ಥ ಮಾಡಿಕೊಂಡರೆ ಒಳಿತು. ಏಕೆಂದರೆ ಈಕೆ ವ್ರತದ ಬಗ್ಗೆ ನಿಷ್ಠೆ, ಭಕ್ತಿಯನ್ನು ತಳೆಯುವುದರ ಹಿಂದಿನ ತಾತ್ಪರ್ಯ ಅರ್ಥವಾಗುತ್ತದೆ. ಇಲ್ಲಿ ವ್ರತವನ್ನು ಪಾಲಿಸುವಂತೆ ಹೇರಲಾಗಿದೆ. ಏಕೆಂದರೆ ಒಂದು ವೇಳೆ ಈಕೆ ಏನಾದರೂ ವ್ರತವನ್ನು ತಪ್ಪಿದರೆ ಗಂಡ (ಉರಿಲಿಂಗ ಪೆದ್ದಿ)ಯಿಂದ ತಿರಸ್ಕಾರಕ್ಕೆ ಒಳಗಾಗಬೇಕಾಗುತ್ತದೆ ಎಂಬ ಭಯ ಕಾಡಿದಂತಿದೆ. ಅದಕ್ಕೆ ಅವಳು ಒಲ್ಲದ ಮನಸ್ಸಿನಿಂದಲೇ ವ್ರತವೆಂಬುದು ನಾಯಕರತ್ನ, ಸುಪ್ಪಾಣಿಯ ಮುತ್ತು, ಜೀವನ ಕಳೆ, ಸುಯಿದಾನ ಎಂದೆಲ್ಲ ಹೇಳಿದಳು. ಆ ಮೂಲಕ ಹೆಣ್ಣಿಗೆ ಗಂಡನೇ ಒಡವೆಯೆಂಬ ಭಾವನೆಯನ್ನು ತಳೆದು, ಗಂಡನಿಂದ ತಿರಸ್ಕಾರಕ್ಕೆ ಒಳಗಾಗದೆ ಮತ್ತು ಸಮಾಜದ ನಿಂದನೆಯಿಂದ ತಪ್ಪಿಸಿಕೊಂಡಂತಿದೆ. ಕಾಗೆಯ ನಾಯ ತಿಂದವರಿಲ್ಲ; ವ್ರತಭ್ರಷ್ಟನ ಕೂಡಿದವರಿಲ್ಲ. ನಾಯಿಗೆ ನಾರಂಗವಕ್ಕುವುದೇ? ಲೋಕದ ನರಂಗೆ ವ್ರತವಕ್ಕುವುದೆ ಶಿವಬೀಜಕಲ್ಲದೆ? ನೀವೇ ಸಾಕ್ಷಿ ನಿಜಗುಣೇಶ್ವರಲಿಂಗದಲ್ಲಿ. ಹೀಗೆ ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮಳು ವ್ರತಪಾಲನೆಯನ್ನು ವಿರೋಧಿಸುತ್ತಾಳೆ. ಈ ವಚನದಲ್ಲಿ ಯಾರು ವ್ರತಪಾಲಿಸುವಂತೆ ನಿಯಮವನ್ನು ನಿರೂಪಿಸಿದರೋ ಅವರೇ ವ್ರತಭ್ರಷ್ಟರಾಗಿರುವುದರ ಸುಳಿವು ನೀಡುತ್ತದೆ. ಅಂತಹ ವ್ರತಭ್ರಷ್ಟರಿಂದ ದೀಕ್ಷೆಯನ್ನು ಪಡೆಯುವ ಅಗತ್ಯವಿಲ್ಲವೆಂದು ತಿರಸ್ಕರಿಸುತ್ತಾಳೆ. ವ್ರತಭ್ರಷ್ಟರು ಇವಳ ಪಾಲಿಗೆ ಕಾಗೆ, ನಾಯಿಯ ಸ್ವರೂಪದಂತೆ ಭಾಸವಾಗುತ್ತಾರೆ ಎಂದೆನಿಸುತ್ತದೆ. ಏಕೆಂದರೆ ವ್ರತಭ್ರಷ್ಟರ ನಿಯಮಗಳು ನಾಯಿಯ ಮೊಲೆಯ ಹಾಲಿನಂತೆ ತಿರಸ್ಕೃತವಾದುದು.

'ಕದಿರು ಮುರಿಯೆ ಏನೂ ಇಲ್ಲ.
ವ್ರತಹೀನ ನೆರೆಯಲಿಲ್ಲ ಗುಮ್ಮೇಶ್ವರ[೨೧]

–ಎಂಬ ವಚನದಲ್ಲಿ ಕದಿರಕಾಯಕದ ಕಾಳವ್ವೆಯು ವ್ರತಹೀನರನ್ನು ಕುರಿತು ಮಾತನಾಡುತ್ತಾಳೆ. ವ್ರತಹೀನರಿಂದ ಏನು ಪ್ರಯೋಜನವಿಲ್ಲ. ಅವರು ಹಾಕಿಕೊಟ್ಟ ಮಾರ್ಗದಲ್ಲಿ ಹೋದರೆ ಉಚಿತವಲ್ಲ. ಹೀಗಾಗಿ ವ್ರತವೆಂಬುದು ಸ್ವಾರ್ಥದ ಅಸ್ತ್ರವಾಗಿ ಬಳಸುವವರನ್ನು ವಿರೋಧಿಸುತ್ತಾಳೆ.

ಬಂಜೆಯಾವಿಂಗೆ ಕ್ಷೀರವುಂಟೆ?
ವ್ರತಹೀನನ ಬೆರೆಯಲುಂಟೆ?
ನೀ ಬೆರೆದಡೂ ಬೆರೆ;ನಾನೊಲ್ಲೇ ನಿಜಶಾಂತೇಶ್ವರ[೨೨]

ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆಯ ಈ ವಚನದಲ್ಲಿ ವ್ರತಹೀನನ ಬೆರೆಯಲಾಗದು ಬೆರೆದಡೆ ನರಕ ತಪ್ಪದು ಎಂಬ ಮಾತು ಧ್ವನಿಸುತ್ತದೆ. ಆ ಮೂಲಕ ವ್ರತ ಪಾಲನೆಯನ್ನು ಅದರಲ್ಲೂ ವ್ರತಭ್ರಷ್ಟರು ನೀಡಿದ ವ್ರತಪಾಲನೆ ಮಾಡುವುದರಿಂದ ನರಕಪ್ರಾಪ್ತಿಯಾಗುತ್ತದೆ ಎಂದು ಹೇಳಿದ್ದಾಳೆ.

ಎನ್ನ ಕರಣಂಗಳ ಲಿಂಗದಲ್ಲಿ ಕಟ್ಟುವೆ;
ಗುರುಲಿಂಗ ಜಂಗಮದ ಕಾಲ ಕಟ್ಟುವೆ;
ವ್ರತಭ್ರಷ್ಟರ ನಿಟ್ಟೋರಸುವೆ, ಸುಟ್ಟು ತುರುತುರನೆ ತೂರುವೆ,
ನಿರ್ಭೀತ ನಿಜಲಿಂಗದಲ್ಲಿ?[೨೩]

–ಎಂಬ ವಚನದಲ್ಲಿ ಕಾಲಕಣ್ಣಿಯ ಕಾಮಮ್ಮಳು ವ್ರತಭ್ರಷ್ಟರ ಕುರಿತು ಸಿಟ್ಟು ಕೋಪಗಳನ್ನು ಅನಾವರಣಮಾಡಿದ್ದಾಳೆ. ಯಾವ ಮಟ್ಟದ ಅಕ್ರೋಶವೆಂದರೆ ಈಕೆ ವ್ರತಭ್ರಷ್ಟರ ನಿಟ್ಟೊರಸುವೆ, ಸುಟ್ಟು ತುರುತುರನೆ ತೂರುವೆ ಎಂದು ಅಕ್ರೋಶವನ್ನು ವ್ಯಕ್ತಪಡಿಸಿದ್ದಾಳೆ.

ಆಯುಷ್ಯತೀರಲು ಮರಣ;
ವ್ರತ ತಪ್ಪಲು ಶರೀರ ಕಡೆ,
ಮೇಲುವ್ರತವೆಂಬ ತೂತರ ಮೆಚ್ಚ
ನಮ್ಮ ಅಗಜೇಶ್ವರಲಿಂಗವು[೨೪]

–ಎಂಬ ಕೊಂಡೆಮಂಚಣ್ಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮನ ವಚನದಲ್ಲಿ ವ್ರತ ತಪ್ಪಿದವರಿಗೆ ಸಾವು ಖಂಡಿತ ಎಂದು ಭಯ ಹುಟ್ಟಿಸುವ ಅನಿವಾರ್ಯದ ವಾತಾವರಣದಲ್ಲಿದ್ದುಕೊಂಡೆ ವ್ರತ ಆಚರಣೆಯನ್ನು ವಿರೋಧಿಸುತ್ತಾಳೆ. ಆಯುಷ್ಯ ತೀರಲು ಮರಣವೇ ಹೊರತು ವ್ರತ ತಪ್ಪುವುದರಿಂದಲ್ಲ. ವ್ರತಗಳಲ್ಲಿ ಮೇಲುವ್ರತ–ಕೀಳು ವ್ರತಗಳೆಂಬುದಿಲ್ಲ. ಮೇಲು ವ್ರತ ಪಾಲಿಸಿದವರಿಗೆ ಮಾತ್ರ ದೇವರು ಮೆಚ್ಚುವನು ಎಂಬ ವಂದತಿಗಳಿಗೆಲ್ಲ ನಿರ್ಭೀಡೆಯಿಂದ ವಿರೋಧಿಸುತ್ತಾಳೆ.

ಹದತಪ್ಪಿ ಕುಟ್ಟಲು  ನುಚ್ಚಲ್ಲದೆ ಅಕ್ಕಿಯಿಲ್ಲ.
ವ್ರತಹೀನನ ನೆರೆಯೆ ನರಕವಲ್ಲದೆ ಮುಕ್ತಿಯಿಲ್ಲ.
ಅರಿಯದುದು ಹೋಗಲಿ, ಅರಿದು ಬೆರೆದೆನಾದಡೆ,
ಕಾದ ಕತ್ತಿಯಲ್ಲಿ ಕಿವಿಯ ಕೊಯ್ವರಯ್ಯ.[೨೫]

–ಎಂಬ ವಚನದಲ್ಲಿ ಕೊಟ್ಟಣದ ಸೋಮಮ್ಮ ವ್ರತಹೀನನಿಗೆ ಸ್ವರ್ಗದ ಮತ್ತು ಮುಕ್ತಿಯ ಭಾಗ್ಯವಿಲ್ಲವೆಂದು ಹೇಳಿದಂತಿದೆ. ವ್ರತ ಹೀನನಿಗೆ ನರಕವು ಕಟ್ಟಿಟ್ಟ ಬುತ್ತಿಯಂತೆ. ವ್ರತದ ಮಹತ್ವವನ್ನು ಸಾರಿದ ಪುರುಷನಿಗೆ ವ್ರತಹೀನರ ಹೀನತ್ವದ ಬಗೆಗೆ ಅರಿವು ಮೂಡಿಸಿ, ಭಯಗೊಳಿಸುವ ಪ್ರಯತ್ನ ಮಾಡುತ್ತಾಳೆ. ಅರಿಯದೆ ತಪ್ಪು ಮಾಡಿದರೆ ಕ್ಷಮೆ ಇದೆ. ಆದರೆ ಅರಿತರಿತು ತಪ್ಪು ಮಾಡಿದರೆ ನರಕದಲ್ಲಿ ಕಾದಕತ್ತಿಯಿಂದ ಕಿವಿಯ ಕೊಯ್ವರಯ್ಯ ಎಂದು ಎಚ್ಚರಿಸುತ್ತಾಳೆ.

ಹದಮಣ್ಣಲ್ಲದೆ ಮಡಕೆಯಾಗಲಾರದು.
ವ್ರತಹೀನನ ಬೆರೆಯಲಾಗದು
ಬೆರದಡೆ ನರಕ ತಪ್ಪದು
ನಾನೊಲ್ಲೆ ಬಲ್ಲೆನಾಗಿ ಕುಂಭೇಶ್ವರ[೨೬]

–ಎಂಬ ವಚನದಲ್ಲಿ ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ ವ್ರತಹೀನನ ಬೆರೆಯಬಾರದು ಬೆರೆದರೆ ನರಕ ತಪ್ಪದು ಎಂದು ಸ್ತ್ರೀಯರನ್ನು ಎಚ್ಚರಿಸುತ್ತಾಳೆ. ವ್ರತಹೀನನಿಗೆ ನರಕ ಪ್ರಾಪ್ತಿಯಾಗುತ್ತದೆ ಅದೇ ರೀತಿ ವ್ರತಹೀನನನ್ನು ಸ್ತ್ರೀಯು ಬೆರೆದಡೆ ಆಕೆಗೂ ನರಕ ತಪ್ಪಿದಲ್ಲ ಎಂದು ಹೇಳಿದ್ದಾಳೆ.

ಚರಣಾಯುಧ ವೇಳೆಯನರಿವುದಯ್ಯಾ
ಭಕ್ತ ವ್ರತಹೀನನರಿದು ನೆರೆಯನಯ್ಯಾ
ನೆರೆದಡೆ ನರಕ ಗುರುಶಾಂತೇಶ್ವರಾ[೨೭]

–ಎಂಬ ವಚನದಲ್ಲಿ ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ ವ್ರತಹೀನನಿಗೆ ನರಕ ತಪ್ಪದು ಎಂದಿದ್ದಾಳೆ. ಭಕ್ತರಲ್ಲಿ ಸ್ವರ್ಗ ನರಕದ ಕಲ್ಪನೆಯ ಭೀತಿಯನ್ನು ಹುಟ್ಟು ಹಾಕಿದಂತಿದೆ. ಸದ್ಚಾರಿತ್ರ್ಯವುಳ್ಳವರು. ಸ್ವರ್ಗಕ್ಕೂ, ವ್ರತಹೀನರು–ನರಕಕ್ಕೆ ಹೋಗುವರೆಂಬ ನಿಲುವನ್ನು ಪ್ರತಿಪಾದಿಸಿದಂತಿದೆ.

ತನು ಬತ್ತಲೆಯಾದಡೇನು, ಮನ ಬತ್ತಲೆಯಾಗದನ್ನಕ್ಕ?
ವ್ರತವಿದ್ದಡೇನು, ವ್ರತಹೀನರಾದ ಬಳಿಕ?
ನೆರೆದಡೆ ನರಕವಯ್ಯಾ ನಿಂಭೇಶ್ವರಾ[೨೮]

–ಎಂಬ ವಚನದಲ್ಲಿ ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ ವ್ರತಗಳ ಮಹತ್ವ ಮತ್ತು ಹೀನತ್ವಗಳನ್ನು ಪ್ರತಿಪಾದಿಸಿದ್ದಾಳೆ. ವ್ರತೆಗಳಾದವರು ಸ್ವರ್ಗಕ್ಕೂ, ವ್ರತಹೀನರು

ನರಕಕ್ಕೂ ಎಂಬ ಸ್ಥಾಪಿತ ಕಲ್ಪನೆಯನ್ನು ಈಕೆಯು ಮುಂದುವರೆಸಿದಂತಿದೆ. ಇಲ್ಲೂ ವ್ರತವಿದ್ದಡೇನು? ವ್ರತಹೀನರಾದರೆ ನರಕವಯ್ಯಾ ಎಂದಿದೆ.

(೧) ಕಾಯಕ ತಪ್ಪಿದಡೆ ಸೈರಿಸಬಾರದು;
ವ್ರತ ತಪ್ಪಲೆಂತೂ ಸೈರಿಸಬಾರದು
ಕರ್ಮಹರ ಕಾಳೇಶ್ವರಾ

(೨) ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ
ಮಾತು ತಪ್ಪಿ ನುಡಿಯಲು ಬಾಯಿಗೆ ಮೂಲ
ವ್ರತಹೀನನ ನೆರೆಯಲು ನರಕಕ್ಕೆ ಮೂಲ[೨೯]

–ಎಂಬ ವಚನಗಳ ಬಾಚಿಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ತಾತ್ವಿಕವಾದ ಚಿಂತನೆಗಳನ್ನು ವ್ರತದ ಬಗ್ಗೆ ಮತ್ತು ವ್ರತಹೀನರ ಬಗ್ಗೆ ಮಾತಾಡಿದ್ದಾಳೆ. ಇಲ್ಲಿ ಭಕ್ತಿ ಮತ್ತು ಭಕ್ತನ ನೆಲೆಯಲ್ಲಿ, ಕಾಯಕ ಮತ್ತು ಜಾತಿಯ ನೆಲೆಯಲ್ಲಿ, ವ್ರತ ಮತ್ತು ಕರ್ಮದ ನೆಲೆಯಲ್ಲಿ, ಹಾಗೂ ನಿಷ್ಠೆಯ ನೆಲೆಯಲ್ಲೂ ಈ ವಚನಗಳನ್ನು ಗ್ರಹಿಸಬಹುದು.

ಕಾಯಕ ನಿಷ್ಠೆ, ವ್ರತ ನಿಷ್ಠೆ, ಆಚಾರ ನಿಷ್ಠೆ ಮತ್ತು ನೇಮ ನಿಷ್ಠೆಯನ್ನು ತಪ್ಪಬಾರದು. ತಪ್ಪಿದರೆ ಸೈರಿಸಬಾರದು ಎಂದಿದ್ದಾಳೆ. ಜೊತೆಗೆ ಬಾಚಿ ಕಾಯಕದ ಮಹತ್ವವನ್ನು ಸಾರಿದಂತಿದೆ ಕೈ ತಪ್ಪಿ ಕೆತ್ತಲು ಕಾಲಿಗೆ ಹೇಗೆ ಮೂಲವೋ? ಹಾಗೆಯೇ ವ್ರತ ಹೀನನ ನೆರೆಯಲು ನರಕಕ್ಕೆ ಮೂಲ! ಎಂದು ಎಚ್ಚರಿಕೆಯನ್ನು ನೀಡಿದ್ದಾಳೆ.

"ಗರುಡಿಯಲ್ಲಿ ಕೋಲಲ್ಲದೆ ಕಾಳಗದಲ್ಲಿ ಕೋಲುಂಟೆ?
ಭವಿಗೆ ಮೇಲುವ್ರತ ಪುನರ್ದೀಕ್ಷೆಯಲ್ಲದೆ ಭಕ್ತರಿಗುಂಟೆ?
ವ್ರತ ತಪ್ಪಲು ಶರೀರವಿಡಿವ ನರಕಿಗೆ ಮುಕ್ತಿಯಿಲ್ಲ
ಅಮುಗೇಶ್ವರ ಲಿಂಗದಲ್ಲಿ.[೩೦]

–ಎಂಬ ವಚನದಲ್ಲಿ ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ ಗರುಡಿಯಲ್ಲಿ ಕೋಲಲ್ಲದೆ ಕಾಳಗದಲ್ಲಿ ಕೋಲ್ಲಲಾಗುವುದಿಲ್ಲ ಅದು ವೀರಮರಣ. ಭವಿಗೆ ಮೇಲು ವ್ರತವನ್ನು ನೀಡಿದರೆ ಅದು ಪುನರ್ದೀಕ್ಷೆಯಾಗುವುದು. ಒಮ್ಮೆ ಭಕ್ತನಾದರೆ ಆತನಿಗೆ ಪುನರ್ದೀಕ್ಷೆಗಳಿಲ್ಲ ಹಾಗೆಯೇ ವ್ರತನಿಷ್ಠನೊಬ್ಬನು

ವ್ರತಹೀನನಾದರೆ ನರಕಕ್ಕೆ ಹೋಗುತ್ತಾನೆ. ಆತನಿಗೆ ಮುಕ್ತಿಯೆಂಬುದಿಲ್ಲ ಎಂದು ಮಾರ್ಮಿಕವಾಗಿ ನುಡಿಯುತ್ತಾಳೆ.

ಲಿಂಗಬಾಹ್ಯನ, ಆಚಾರ ಭ್ರಷ್ಟನ, ವ್ರತ ತಪ್ಪುಕನ,
ಗುರುಲಿಂಗಜಂಗಮನ ಕೊಂದವನ,
ಪಾದೋದಕ ಪ್ರಸಾದ ದೂಷಕನ,
ವಿಭೂತಿ ರುದ್ರಾಕ್ಷಿ ನಿಂದಕನ ಕಂಡಡೆ,
ಶಕ್ತಿಯುಳ್ಳಡೆ ಸಂಹಾರವ ಮಾಡುವುದು
ಶಕ್ತಿಯಿಲ್ಲದಿದ್ದಡೆ ಕಣ್ಣು ಕರ್ಣವ ಮುಚ್ಚಿಕೊಂಡು
ಶಿವಮಂತ್ರ ಜಪಿಸುವುದು.
ಅಷ್ಟೂ ಆಗದಿದ್ದಡೆ, ಸ್ಥಳವ ಬಿಡುವುದು,
ಅದಲ್ಲದಿದ್ದಡೆ, ಕುಂಭೀಪಾತಕ ನಾಯಕ ನರಕದಲ್ಲಿಕ್ಕುವ
ಶ್ರೀಗುರುಸಿದ್ದೇಶ್ವರನು[೩೧]

–ಎಂಬ ವಚನದಲ್ಲಿ ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮಳ ಭಕ್ತಿಯ ಪಾರಕಾಷ್ಠೆಯನ್ನು ಕಾಣಬಹುದು. ಲಿಂಗಬಾಹ್ಯನ, ಆಚಾರಭ್ರಷ್ಟನ, ವ್ರತ ತಪ್ಪಿದವನ, ಗುರುಲಿಂಗಜಂಗಮನ ಕೊಂದವನ, ಪಾದೋದಕ ಪ್ರಸಾದವ ದೂಷಿಸಿದವನ, ವಿಭೂತಿ ರುದ್ರಾಕ್ಷಿ ನಿಂದಕನ ಕಂಡರೆ ಶಕ್ತಿಯಿದ್ದರೆ ಸಂಹಾರ ಮಾಡಿ, ಇಲ್ಲದಿದ್ದರೆ ಕಣ್ಣು ಮುಚ್ಚಿಕೊಂಡು ಶಿವಾನಾಮಜಪವಮಾಡಬೇಕು. ಇದು ಸಾಧ್ಯವಾಗದಿದ್ದರೆ ಕೆಟ್ಟವರಿಂದ ದೂರವಿರಲು ಆ ಸ್ಥಳವನ್ನು ಬಿಟ್ಟು ಹೋಗುವುದು ಒಳ್ಳೆಯದು ಎಂದು ಉಪದೇಶ ಮಾಡಿದ್ದಾಳೆ. ಹೀಗೆ ವ್ರತಭ್ರಷ್ಟರನ್ನು ಸಂಹಾರ ಮಾಡದೇ, ಕಣ್ಣು–ಕಿವಿ ಮುಚ್ಚಿ ಶಿವನಾಮ ಜಪ ಮಾಡದಿದ್ದರೆ ಮತ್ತು ಆ ಸ್ಥಳ ಬಿಡದೆ ವ್ರತಭ್ರಷ್ಟರೊಡನೆ ಇದ್ದರೆ ಕುಂಭೀಪಾತಕ ನರಕ ತಪ್ಪುವುದಿಲ್ಲ ಎಂದು ಎಚ್ಚರಿಸಿದ್ದಾಳೆ.

ವ್ರತಭ್ರಷ್ಟನ, ಲಿಂಗಬಾಹ್ಯನ ಕಂಡಡೆ
ಸತ್ತನಾಯ, ಕಾಗೆಯ ಕಂಡಂತೆ
ಅವರೊಡನೆ ನುಡಿಯಲಾಗದು ಭೀಮೇಶ್ವರಾ[೩೨]

–ಎಂಬ ವಚನದಲ್ಲಿ ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ವ್ರತಭ್ರಷ್ಟನ, ಲಿಂಗಬಾಹ್ಯನ ಕಂಡರೆ ಸತ್ತನಾಯಿಯನ್ನು ಮತ್ತು ಕಾಗೆಯನ್ನು ಕಂಡಂತಾಗುತ್ತದೆ. ಇವುಗಳ ಜೊತೆಗೆ ಮಾತಾಡಲು ಅಸಾಧ್ಯವೆಂದು ಹೇಳಿದ್ದಾಳೆ.

ಇಲ್ಲಿ ಸತ್ತ ನಾಯಿಯನ್ನು ಮತ್ತು ಕಾಗೆಯನ್ನು ವ್ರತಭ್ರಷ್ಟನಿಗೆ ಹೋಲಿಸಿರುವುದು ಮಾರ್ಮಿಕವಾಗಿದೆ.

ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ
ವ್ರತಹೀನನರಿದು ಬೆರೆದಡೆ
ಕಾದಕತ್ತಿಯಲ್ಲಿ ಕೈ ಕಿವಿ ಮೂಗಕೊಯ್ವರಯ್ಯಾ.
ಒಲ್ಲೆನೊಲ್ಲೆ ಬಲ್ಲೆನಾಗಿ ನಿಮ್ಮಾಣೆ ನಿರ್ಲಜ್ಜೇಶ್ವರಾ.[೩೩]

–ಎಂಬ ಸೂಳೆ ಸಂಕವ್ವೆಯ ವಚನದಲ್ಲಿ ವ್ರತಹೀನನೆಂದು ಅರಿತು ಬೆರೆತರೆ, ಬತ್ತಲೆ ನಿಲ್ಲಿಸಿ ಕೊಲ್ಲುವರು. ಕಾದಕತ್ತಿಯಲ್ಲಿ ಕೈ, ಕಿವಿ, ಮೂಗುಗಳ ಕೊಯ್ವರು ಎಂದು ಶಿಕ್ಷೆಯ ವಿಧಾನಗಳನ್ನು ಹೇಳುತ್ತಾಳೆ. ಅರಿಯದೆ ತಪ್ಪು ಮಾಡಿದರೆ ಇಲ್ಲಿ ಕ್ಷಮೆವುಂಟು, ಅರಿತು ಮಾಡಿದ ತಪ್ಪಿಗೆ ಶಿಕ್ಷೆ ತಪ್ಪದು. ಅದ್ದರಿಂದ ವ್ರತಹೀನನು ಎಂದು ಗೊತ್ತಾದರೆ ತಿರಸ್ಕರಿಸುತ್ತಾಳೆ. ಇದು ನಿಮ್ಮಾಣೆ ನಿರ್ಲಜ್ಜೇಶ್ವರಾ ಎಂದು ಪ್ರಮಾಣ ಮಾಡುತ್ತಾಳೆ. ಆಣೆ ಮೂಲಕ ವತ್ರಹೀನರನ್ನು ಖಂಡಿಸುತ್ತಾಳೆ.

ಆವ ಕಾಯಕವ ಮಾಡಿದಡೂ ಒಂದೆ ಕಾಯಕವಯ್ಯಾ
ಆವ ವ್ರತವಾದಡೊ ಒಂದೆ ವ್ರತವಯ್ಯಾ
ಆಯ ತಪ್ಪಿದಡೆ ಸಾವಿಲ್ಲ;
ವ್ರತ ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದಡೆ ಕೂಡಲಿಲ್ಲ;
ಕಾಕಪಿಕದಂತೆ ಕೂಡಲು ನಾಯಕ ನರಕ
ಗಂಗೇಶ್ವರಲಿಂಗದಲ್ಲಿ.[೩೪]

–ಎಂಬ ವಚನದಲ್ಲಿ ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮ ಯಾವುದೇ ಕಾಯಕ ಮಾಡಿದರೂ ಅದು ಒಂದೇ ಕಾಯಕ. ಯಾವುದೇ ವ್ರತ ಮಾಡಿದರೂ ಅದು ಒಂದು ವ್ರತವೇ ಎಂದು ವ್ರತಹೀನರಿಗೆ ತಿದ್ದಿಕೊಳ್ಳಲು ಅವಕಾಶವನ್ನು ನೀಡುತ್ತಾಳೆ. ವ್ರತಹೀನನಾದ ತಕ್ಷಣ ಸಾವು ಬರುವುದಿಲ್ಲ. ನರಕಕ್ಕೆ ಹೋಗುವುದಿಲ್ಲ ಮತ್ತು ಆತನ ಸಂಗವನ್ನು ತಿರಸ್ಕರಿಸಲಾಗುವುದಿಲ್ಲ. ಆದರೆ ವ್ರತಹೀನನು ಬದುಕಿನ ಉದ್ದಕ್ಕೂ ನೋವು ಹಿಂಸೆಯನ್ನು ಅನುಭವಿಸಿಕೊಂಡೆ ಇರಬೇಕು. ಆತನಿಗೆ ಗಂಗೇಶ್ವರನಲ್ಲಿ ವ್ರತಹೀನತೆಯಿಂದ ಸಾವಿನ ಮೂಲಕ ಕೂಡಲು ಸಾಧ್ಯವಿಲ್ಲ ಎಂದು ಎಚ್ಚರಿಸುತ್ತಾಳೆ.

ಕಟ್ಟಕಡೆಯ ಕಟ್ಟಲು ಬಲಿವುದೆ?
ವ್ರತ ಹೋದಲ್ಲಿ ವ್ರತ ಒಪ್ಪುವುದೆ?
ಕೆಟ್ಟ ಕಣ್ಣಿಂಗೆ ದೃಷ್ಟಿಯುಂಟೆ?
ಭವಹರ ಕುರಂಗೇಶ್ವರಲಿಂಗಾ[೩೫]

–ಎಂಬ ವಚನದಲ್ಲಿ ಕುರುಡನಿಗೆ ಹೇಗೆ ನೋಡಲು ಸಾಧ್ಯವಿಲ್ಲವೋ ಹಾಗೆಯೇ ವ್ರತಹೀನನನ್ನು ಒಪ್ಪಲು ಸಾಧ್ಯವಿಲ್ಲ. ವ್ರತಹೀನನು ಕಣ್ಣಿದ್ದು ಕುರುಡನಂತೆ ಎಂದು ಧ್ವನಿಸುತ್ತದೆ. ಈ ವಚನದ ಅಂಕಿತನಾಮವಿದೆ ಆದರೆ ಕರ್ತೃ ಯಾರು? ಎಂಬುದು ತಿಳಿದಿಲ್ಲ. ವಚನದಲ್ಲಿನ ಭವಹರ ಕುರಂಗೇಶ್ವರ ಲಿಂಗಾಂಕಿತವಾದುದು ವಿಶೇಷವಾಗಿ ಕಾಣುತ್ತದೆ. ಈ ಮೇಲಿನ ವಚನಗಳನ್ನು ಗಮನಿಸಿದಾಗ ಆಚರಣೆಗಳ ಬಗೆಗೆ ವಚನಕಾರ್ತಿಯರು ತಳೆದಿರುವ ನಿಲುವು ಸ್ಪಷ್ಟವಾಗುತ್ತದೆ. ಆಚಾರಗಳನ್ನು ನಿಷ್ಠೆಯಿಂದ ಪಾಲಿಸಿದವರು ಕೆಲವರಿದ್ದಾರೆ ಮತ್ತು ಕೆಲವರು ಆಚರಣೆಗಳನ್ನು ತಿರಸ್ಕರಿಸಿದವರಿದ್ದಾರೆ. ಈ ಆಚರಣೆಯ ಭಾಗಗಳಾದ ವ್ರತ, ನೇಮ, ನಿಷ್ಠೆ ಮತ್ತು ಸಂಪ್ರದಾಯಿಕ ಚೌಕಟ್ಟಿನ ಆಚರಣೆಗಳನ್ನು ಒಪ್ಪಿ, ಒಪ್ಪದೆ ಒಲ್ಲದ ಮನಸ್ಸಿನಿಂದಲೇ ಪಾಲಿಸಿದವರುಂಟು. ವ್ರತವೆಂಬುದು ಕೆಲವರಿಗೆ ನಾಯಕರತ್ನವಾದರೆ ಮತ್ತೆ ಕೆಲವರಿಗೆ ಬದುಕಿನ ಸಂಪ್ರದಾಯಗಳ ನಿರಾಕರಣೆ. ವ್ರತಹೀನನು ನರಕಕ್ಕೆ ಹೋಗುವನು. ಆತನನ್ನು ಸತ್ತನಾಯಿ. ಕಾಗೆಯ ಸಂಕೇತದ ಮೂಲಕ ಸೂಚಿಸಲಾಗಿದೆ. ಈತನಿಗೆ ಮೋಕ್ಷವಿಲ್ಲ. ಆತನನ್ನು ಎಲ್ಲರೂ ತಿರಸ್ಕರಿಸಬೇಕು. ಒಂದು ವೇಳೆ ತಿರಸ್ಕರಿಸದೆ ಇದ್ದಡೆ ಆತನೊಡನೆ ಇದ್ದವರಿಗೂ ನರಕ ಪ್ರಾಪ್ತಿಯಾಗುವುದು ಎಂಬ ವಿಶೇಷ ಧ್ವನಿ ವ್ಯಕ್ತವಾಗುವುದು. ಇಲ್ಲಿ ನಾವು ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ವ್ರತಹೀನನೆಂದರೆ ಪುರುಷನೆ. ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ಸಂಪ್ರದಾಯದ ಕಪಿಮುಷ್ಠಿಯಲ್ಲಿ ಬಂಧಿಸಿದವನನ್ನೇ ಸ್ತ್ರೀಯರು ವ್ರತ ನಿಯಮಗಳ ಮೂಲಕ ತಿರಸ್ಕರಿಸಿರುವುದು ವಿಶೇಷವಾಗಿ ಕಾಣುತ್ತದೆ. ಇದು ಸ್ತ್ರೀಯ ಅಭಿವ್ಯಕ್ತಿಯ ಬೌದ್ಧಿಕತೆ ಮತ್ತು ಮಾನಸಿಕ ಸ್ಥಿತಿಯ ಶಕ್ತಿಯಾಗಿ ಕಾಣುತ್ತದೆ.

### ೪. ಆಚರಣೆಗಳ ಬಗ್ಗೆ ವಚನಕಾರರು ತಳೆದ ನಿಲುವುಗಳು:

ವಚನಕಾರರು, ವಚನ ಚಳುವಳಿ, ವಚನ ಸಾಹಿತ್ಯ ಎಂಬ ಪದಗಳು ಒಟ್ಟು ಸೇರಿ ಒಂದು ಅರ್ಥವನ್ನು ನೀಡಬಲ್ಲವು. ವಚನಕಾರರು ಎಂದ ತಕ್ಷಣ

ನಮ್ಮ ನೆನಪಿಗೆ ಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಚೆನ್ನಬಸವಣ್ಣ, ಅಕ್ಕಮಹಾದೇವಿ ಮತ್ತು ಹೆಚ್ಚೆಂದರೆ ತಳಸ್ತರದ ಜೇಡರದಾಸಿಮಯ್ಯ ನೆನಪಿಗೆ ಬರುತ್ತಾರೆ ಈ ಹೆಸರುಗಳನ್ನೇ ಗಮನಿಸಿದರೂ ಸಾಕು ಒಂದು ವರ್ಗದ ಶ್ರೇಣೀಕರಣವು ಎದ್ದು ಕಾಣುತ್ತದೆ. ಹೀಗಾಗಿ ಬೇರೆ ಬೇರೆ ವಚನಕಾರರ ಬಗ್ಗೆ ಅಲಕ್ಷ್ಯ ಸಹಜವಾಗತೊಡಗಿತು. ವಿಭಿನ್ನ ವೃತ್ತಿ ಮತ್ತು ಕಸುಬಿನ ಒಬ್ಬರೋ ಇಬ್ಬರೋ ವಚನಕಾರರನ್ನು ಪ್ರಾತಿನಿಧಿಕವಾಗಿ ತೆಗೆದುಕೊಂಡು ಇಡಿಯಾಗಿ ಆಯಾವೃತ್ತಿ ಮತ್ತು ಕಸುಬುಗಳಿಗೆ ಸಾಮಾನ್ಯೀಕರಿಸಲಾಯಿತು. ಇದರಿಂದಲೂ ಕೂಡ ಚರ್ಚೆಗೆ ಬರಬೇಕಾದ ವಚನಕಾರರು ಚರ್ಚೆಯಿಂದ ಹೊರಗುಳಿದರು. ವಚನಕಾರರಲ್ಲಿ ಎಲ್ಲ ಜಾತಿಯ, ಎಲ್ಲ ಧರ್ಮದ ಎಲ್ಲ ವೃತ್ತಿಯ ಜನರೂ ಇದ್ದರು. ಇಲ್ಲಿ ಕೆಳಸ್ತರದ ವಚನಕಾರರು ಮತ್ತು ಸ್ತ್ರೀಯರು ಇದ್ದರು. ಎಲ್ಲರೂ ಸಮಾನತೆಯಿಂದ ಇದ್ದರೆಂದು ವಚನಗಳು ಸಾರುತ್ತವೆ.

ಕೆಲ ವಚನಕಾರರು ಸ್ತ್ರೀಯರ ಮೇಲೆ ಬೌದ್ಧಿಕವಾದ ಹೊರೆಯನ್ನು ಹೊರಿಸಿದ್ದರು. ಅದು ಆಚರಣೆ, ವ್ರತ, ನೇಮಗಳೆಂಬ ನಿಯಮಗಳಿಂದ ಹೇರಲ್ಪಟ್ಟಿತ್ತು. ಅದರ ವಿರುದ್ಧ ವಚನಕಾರ್ತಿಯರ ವಚನಗಳು ಮಾತಾಡಿವೆ. ಆದರೆ ಮತ್ತೆ ಕೆಲವು ವಚನಕಾರರು ಸ್ತ್ರೀ ಸಮಾನತೆಗಾಗಿ ಸಾಕಷ್ಟು ವಚನಗಳನ್ನು ರಚಿಸಿದ್ದಾರೆ. ಆದ್ಯ ವಚನಕಾರ ದಾಸಿಮಯ್ಯ ಬಡತನದಲ್ಲೂ ತೃಪ್ತ ಜೀವನವನ್ನು ನಡೆಸಿದವರು. ಅವರ ವಚನಗಳು ಗಾತ್ರದಲ್ಲಿ ತೀರ ಚಿಕ್ಕವು. ಭಾಷೆಯು ತೀರ ಸರಳ. ಮೂರು, ನಾಲ್ಕು, ಐದು ಸಾಲಿನ ವಚನಗಳಲ್ಲಿ ಒಂದು ತೀವ್ರವಾದ ಅನುಭವವನ್ನು ಹೇಳುವ ರೀತಿ ಆಶ್ಚರ್ಯಕರವಾದುದು. ಅವನು ಆ ಶತಮಾನದ ಶ್ರೇಷ್ಠ ಚಿಂತಕನೂ ಆಗಿದ್ದಾನೆ. ಅವನಿಗೆ ಹೆಣ್ಣು – ಗಂಡೆಂದಾಗಲಿ, ಉತ್ತಮ – ಅಧಮ ಕುಲಗಳೆಂದು ಭೇದವನ್ನು ಮಾಡಿ ಉಚ್ಚ ನೀಚವೆಂದು ಕಲ್ಪಿಸುವುದೇ ಹಾಸ್ಯಸ್ಪದವಾಗಿ ಕಾಣುತ್ತದೆ.

> ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ
> ಒಡೆಯರ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀಥ?
> ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲಿ ಹಿಡಿಗೋಲ?
> ನೀ ತೊಡಕಿಕ್ಕಿದ ತೋಡಕನೀ ಲೋಕದ ಜಡರೆತ್ತ, ಬಲ್ಲರೈ ರಾಮನಾಥ.[೩೬]

–ಎಂಬ ವಚನದಲ್ಲಿ ಹೆಣ್ಣೆಂಬುದರ ಚಿಹ್ನೆಗಳಿರುವುದು ದೇಹಕ್ಕೆ ಮಾತ್ರ! ಅದು ಪ್ರಾಣಕ್ಕಿಲ್ಲ. ಹುಟ್ಟಿಗೆ ಜಾತಿಯಿಲ್ಲ. ಹುಟ್ಟಿದ ಕೆಲ ದಿನಗಳ ನಂತರ ಜಾತಿಯನ್ನು ತಂದು ಅಂಟಿಸುವರು. ಅಂದರೆ ಬ್ರಾಹ್ಮಣ ಧರಿಸುವ ಜನಿವಾರವಾಗಲಿ, ಅಂತ್ಯಜ ಹಿಡಿದ ಹಿಡಿಗೋಲು ಆಗಲಿ ಇವು ಪ್ರಾಣದೊಂದಿಗೆ ಬಂದಂತಹವು ಅಲ್ಲ. ಹುಟ್ಟಿದ ನಂತರ ಬಂದಂಥವೇ ಹೊರತು ಹುಟ್ಟಿನಿಂದ ಬಂದಂತಹವು ಅಲ್ಲ. 'ಪ್ರಾಣ'ದ ದೃಷ್ಟಿಯಿಂದ ಇವರೆಲ್ಲರು ಮೊದಲು ಮನುಷ್ಯರು. ಹೆಣ್ಣು–ಗಂಡು ಮತ್ತು ಬ್ರಾಹ್ಮಣ–ಹೊಲೆಯರೆಂಬ ಕಲ್ಪನೆಗಳು ದೇಹಕ್ಕೆ ಮತ್ತು ಸಾಮಾಜಿಕ ವ್ಯವಸ್ಥೆಗೆ ಸಂಬಂಧಪಟ್ಟವು ಎಂಬುದನ್ನು ಪ್ರತಿಪಾದಿಸುತ್ತದೆ.

ಮೊಲೆ–ಮುಡಿ ಬಂದರೆ ಹೆಣ್ಣೆಂಬರು
ಗಡ್ಡ–ಮೀಸೆಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು
ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ[೩೭]

–ಎಂಬ ವಚನದಲ್ಲಿ ದಾಸಿಮಯ್ಯ ತನ್ನ ಕಾಲದ ನಂಬಿಕೆಯನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದ್ದಾನೆ. ದೈಹಿಕ ಸ್ವರೂಪದ ಬದಲಾವಣೆಯನ್ನು ಗುರುತಿಸಿ ಹೆಣ್ಣು–ಗಂಡು ಎಂದು ಕರೆದರೆ, ಈ ಹೆಣ್ಣು–ಗಂಡಿನೊಳಗೆ ಅಸ್ತಿತ್ವ ಪಡೆದುಕೊಂಡಿರುವ ಆತ್ಮದ ಸ್ವರೂಪವನ್ನು ಬೇರೆ ಬೇರೆಯಾಗಿಸಲು ಸಾಧ್ಯವಿಲ್ಲ. ಆತ್ಮ ಆತ್ಮವೇ ಹೊರತು ಗಂಡು–ಹೆಣ್ಣುಗಳೆಂಬ ಆತ್ಮಗಳಿಲ್ಲ ಎಂದು ವಿಡಂಬಿಸುತ್ತಾನೆ. ಇದೇ ವಿಷಯವನ್ನು ಅಲ್ಪ–ಸ್ವಲ್ಪ ಬದಲಾವಣೆಯೊಂದಿಗೆ – ಅಂಬಿಗರ ಚೌಡಯ್ಯ, ಸತ್ಯಕ್ಕ ಮತ್ತು ಗೊಗ್ಗವ್ವೆಯರು ತಂತಮ್ಮ ವಚನಗಳಲ್ಲಿ ಪ್ರತಿಪಾದಿಸಿದ್ದಾರೆ.

ಕರ್ಮನಿಷ್ಠ ಬ್ರಾಹ್ಮಣ್ಯಕ್ಕಿಂತ ಭಕ್ತಿಮಾರ್ಗವು ಬಸವಣ್ಣನಿಗೆ ಪ್ರಿಯವಾಯಿತು. ಏಕೆಂದರೆ ಭಕ್ತಿಮಾರ್ಗವು ಜಾತಿ, ಕುಲ, ಭೇದಗಳನ್ನು ಮನ್ನಿಸುವುದಿಲ್ಲ. ಅದು ಭಗವಂತನ ಬಳಿಗೆ ಹೋಗುವ ಒಂದು ರಾಜಮಾರ್ಗ ಹೀಗಿರುವಾಗ ಬಸವನನ್ನು ಕರ್ಮದ ಬಂಧನಕ್ಕೆ ಸಿಲುಕಿಸುವಂತಹ ಉಪನಯನ ಸಮಾರಂಭವನ್ನು ಅವನು ಪ್ರತಿಭಟಿಸಿನಿಂತದ್ದು, ಅದು ಸಾಂಪ್ರದಾಯಿಕ ಸಮಾಜವನ್ನು ತಬ್ಬಿಬ್ಬು ಮಾಡಿದ್ದು ಆಶ್ಚರ್ಯವಾಗಿ ಕಾಣುತ್ತದೆ.

ಕೊಲ್ಲುವವನೆ ಮಾದಿಗ
ಹೊಲಸು ತಿಂಬುವನೇ ಹೊಲೆಯ[೩೮]

–ಎಂಬ ಈ ವಚನದ ಸಾಲುಗಳು ಸಾಮಾಜಿಕ ಶ್ರೇಣೀಕರಣವನ್ನು ಸೂಚಿಸುತ್ತವೆ. ಇಂತಹ ಸಾಮಾಜಿಕ ಅಸಮಾನತೆಯನ್ನು ತೊಡೆದು ಹಾಕುವಲ್ಲಿ ಬಸವಣ್ಣನ ಪಾತ್ರ ಪ್ರಮುಖವಾದುದು. ತಳಸ್ತರದ ವಚನಕಾರ್ತಿಯರ ವಚನಗಳಲ್ಲಿ ಬಸವಣ್ಣನವರ ಪ್ರಭಾವಗಳಿವೆ. ವಚನಕಾರ್ತಿಯರೆ ಹೇಳಿಕೊಳ್ಳುವಂತೆ ತಾವುಗಳು ಕೆಳಜಾತಿಯಲ್ಲಿ ಹುಟ್ಟಿ ಬಸವಣ್ಣ, ಚೆನ್ನಬಸವಣ್ಣ, ಸಿದ್ಧರಾಮರಂತವರ ಪ್ರಭಾವಕ್ಕೆ, ಮಾರ್ಗದರ್ಶನಕ್ಕೆ ಒಳಗಾಗಿ ಉತ್ತಮ ಬದುಕನ್ನು ಕಟ್ಟಿಕೊಂಡಿರುವುದಾಗಿ ಹೇಳಿಕೊಂಡಿದ್ದಾರೆ. ಇಂತಹ ಬಸವಣ್ಣ ದೈವಭಕ್ತ, ಭಕ್ತಿ ಭಂಡಾರಿ, ಸಾಮಾಜಿಕ ಅಂದೋಲನಕಾರ, ಮಾನವತಾವಾದಿ ಮೊದಲಾದವುಗಳಾಗಿ ಕಾಣುತ್ತಾನೆ. ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ ಎಂಬ ಇಂತಹ ವಚನದ ಸಾಲುಗಳು ಅವನು ಭವದಲ್ಲಿ ಅನುಭವಿಸಿದ ಬೇಗೆಯನ್ನು ಸಜೀವವಾಗಿ ನಮ್ಮ ಮುಂದೆ ತಂದು ನಿಲ್ಲಿಸುತ್ತವೆ.

ಬಸವಣ್ಣ ಮುಂತಾದ ಶಿವಶರಣರಿಗೆ ಗುರುವಿನ ಸ್ಥಾನದಲ್ಲಿದ್ದವನು ಅಲ್ಲಮಪ್ರಭು. ಅಲ್ಲಮನು ವೈಶ್ಯನ ಮಗಳು ಕಾಮಲತೆಯೊಂದಿಗೆ ವಿವಾಹವಾಗಲು ಸಮಾಜ ಒಪ್ಪಲಿಲ್ಲ. ಈ ಮಧ್ಯೆ ಆಕೆ ಅಸುನೀಗಿದಳು. ಇದರಿಂದ ದಿಙ್ಮೂಢನಾಗಿದ್ದ ಅಲ್ಲಮ ತಾನು ಮುಂದೆ ಸಾಧಕನಾಗಬೇಕು, ಮುಕ್ತನಾಗಬೇಕು, ಅನಿಮಿಷಯೋಗಿ ಇಷ್ಟಲಿಂಗಕ್ಕಾಗಿ ಜೀವಂತ ಸಮಾಧಿ ಹೊಂದಿರಬೇಕಾದರೆ ತಾನಾದರೂ ಹೆಣ್ಣೊಬ್ಬಳ ಸಾವಿನಿಂದ ಅಳಲಬೇಕೆ? ಇಷ್ಟಲಿಂಗಕ್ಕಾಗಿ, ದೇವರಿಗಾಗಿ ಬದುಕಬೇಕು. ಸತ್ತರು ದೇವರಿಗಾಗಿಯೇ ಸಾಯಬೇಕು ಎಂದು ನಿರ್ಧರಿಸಿದಂತಿದೆ ಅವನ ವಚನಗಳ ಸಾರ. ಗಂಡು–ಹೆಣ್ಣಿನ ಸಂಬಂಧದ ಸಂಕೀರ್ಣತೆಯನ್ನು, ಬೆಲೆಯನ್ನು, ಅರಿತಿದ್ದ ಅಲ್ಲಮನಿಗೆ ಮಾನಸಿಕವಾಗಿ ಕಾಮಲತೆಯ ತೊಡಕನ್ನು ಬಿಡಿಸಿಕೊಳ್ಳುವುದು ಕಷ್ಟವಾಯಿತು.

ಕುಲದಲಧಿಕನು ಹೋಗಿ ಹೊಲಗೇರಿಯಲ್ಲಿ ಮನೆಯ ಕಟ್ಟಿದಡೆ
ಕಷ್ಟವಾಯಿತು. ಕುಲ ಕೆಡದೆ ಇಪ್ಪ ಪರಿಯ ನೋಡಾ !
ಆತನ ಕುಲದವರೆಲ್ಲರೂ ಮುಖವ ನೋಡಲೊಲ್ಲದೈದಾದರೆ
ಕುಲವುಳ್ಳವರೆಲ್ಲರೂ ಕೈವಿಡಿದರು,
ಕಾಲಗೆಟ್ಟವನೆಂದು ತಿಳಿದು ವಿಚಾರಿಸಲು
ಹೊಲೆಗಟ್ಟು ಹೋಯಿತು ಕಾಣಾ ಗುಹೇಶ್ವರಾ ....

ಅಲ್ಲಮ ಪ್ರಭು ನೇರವಾಗಿ ಜಾತಿ ಬಗ್ಗೆ ಬರೆದಿರುವ ವಚನಗಳು ಬಹಳ ಕಡಿಮೆ. ಸಾಮಾಜಿಕ ವಾಸ್ತವಗಳನ್ನು ವಿಮರ್ಶಾತ್ಮಕ ಮಾದರಿಯಲ್ಲಿ ಬಳಸಿಕೊಳ್ಳದೆ, ಅಲ್ಲಮಪ್ರಭು ಎಂದಿನಂತೆ ಅವುಗಳನ್ನು ರೂಪಕಾತ್ಮಕ ಮಾದರಿಯಲ್ಲಿ ಬಳಸಿಕೊಳ್ಳುತ್ತಾನೆ. ಈ ವಚನದ ಹಿಂದಿರುವ ತಾತ್ವಿಕ ಗ್ರಹಿಕೆ ಪ್ರಭುವಿಗೆ ವಿಶಿಷ್ಟವಾದದ್ದೇನೂ ಅಲ್ಲ. ಈ ತಾತ್ವಿಕ ಗ್ರಹಿಕೆಯನ್ನು 'ವಾಸ್ತವದ ತಲೆ ಕೆಳಗು' ಎಂದು ಹೆಸರಿಸಬಹುದಾಗಿದೆ. ಬ್ರಾಹ್ಮಣ ಶ್ರೇಷ್ಠತೆಯ ಸಂಕೇತ ಎಂದರೆ, ಬೆಡಗಿನಲ್ಲಿ ಆತ ಕೇಡು, ಪಾಪಗಳ ಸಂಕೇತ. "ಊರವರೆಲ್ಲ ಬೇಟೆಗೆ ಹೋಗಿ ಹಾರುವನ ಕೊಂದರು" ಎಂಬ ವಚನದಲ್ಲಿ ಹಾರುವ ನೇತ್ಯಾತ್ಮಕ ಶಕ್ತಿಯ ಸಂಕೇತ. ಹಾಗೆಯೇ ಹೊಲೆಯ, ಹೊಲತಿ ಎಂದರೆ ಇತ್ಯಾತ್ಮಕ ಸಂಕೇತ. ಸಾಮಾನ್ಯವಾಗಿ ವೈದಿಕ ಭಕ್ತಿ ಪಂಥಗಳಲ್ಲಿ ಬ್ರಾಹ್ಮಣ್ಯದ ಆದರ್ಶವನ್ನು ಒಪ್ಪಿ ಅದನ್ನು ಪರಿವರ್ತಿಸುವ ಕೆಲಸ ನಡೆಯುತ್ತದೆ.[೩೯]

> ಎಸೆಯದಿರು ಎಸೆಯದಿರು ಕಾಮ,
> ಕಾಮ ಕ್ರೋಧ, ಲೋಭ, ಮೋಹ ಮದ ಮತ್ಸರ ಇದು ಸಾಲದೆ ನಿನಗೆ?
> ನಿನ್ನ ಬಾಣ ಹುಸಿಯಲದೇಕೋ
> ಗುಹೇಶ್ವರ ಲಿಂಗದ ವಿರಹದಲ್ಲಿ ಬೆಂದವರ
> ಮರಳಿ ಸುಡಲುಂಟೆ ಕಾಮಾ[೪೦]

–ಎಂಬ ವಚನದ ಸಾಲುಗಳನ್ನು ನೋಡಿದರೆ ಅಲ್ಲಮನು ಅಪಾರವಾದ ದೈಹಿಕ, ಮಾನಸಿಕ ಯಾತನೆಯನ್ನು ಕಳೆದಿದ್ದಾನೆ. ಸ್ತ್ರೀಯರು ಆಚರಿಸುತ್ತಿದ್ದ ವ್ರತ, ನೇಮ, ಆಚರಣೆಗಳನ್ನು ವಿಡಂಬಿಸಿದ್ದಾನೆ. ಈ ವ್ರತ ನಿಯಮಗಳು ಕೆಲವು ಸ್ತ್ರೀ ಪುರುಷರ ಮೇಲೆ ಹೇರಲ್ಪಟ್ಟಿದ್ದವು. ಅವು ಅವರ ಸಾಮಾಜಿಕ ಸ್ತರಗಳ ಆಧಾರದ ಮೇಲೆ ನಿಂತಿದ್ದವು ಎಂದು ಹೇಳಬಹುದು. ಊರದ ಚೇಳಿನ ಏರದ ಬೇನೆ; ಇಂದು ಸಾವ ಹೆಂಡತಿಗೆ ನಾಳೆ ಸಾವ ಗಂಡ ಆಡುತಾಡುತ ಬಂದ ಕೋಡಗ ಜಪವ ಮಾಡುವ ತಪಸಿಯ ನುಂಗಿತ್ತಲ್ಲಾ; ತಲೆಯಿಲ್ಲದ ಮೃಗ ಒಡಲಿಲ್ಲದೆ ಆಹಾರವ ಕೊಂಡಿತ್ತು ಎಂಬ ಸಾಲುಗಳನ್ನು ನೋಡಿದರೆ ಅಲ್ಲಮ ಪ್ರಭು ಕನ್ನಡದ ತೀರ ಕೆಳ ಶೂದ್ರ ವರ್ಗದ ಪ್ರಪ್ರಥಮ ಯೋಗಿಯೂ, ಶ್ರೇಷ್ಠ ಸಾಹಿತಿಯೂ ಆಗಿದ್ದಾನೆ. ಮಾತೆಂಬುದು ಜ್ಯೋತಿರ್ಲಿಂಗ! ಸ್ವರವೆಂಬುದು ಪರತತ್ವ ! ತಾಳೋಷ್ಠ ಸಂಪುಟವೆಂಬುದೇ ನಾದಬಿಂದುಕಳಾತೀತ ! ಗುಹೇಶ್ವರನ ಶರಣರು ನುಡಿದು ಸೂತಕಿಗಳಲ್ಲ ಕೇಳಾ, ಮರುಳೆ.

ಮಾತಿಗೆ ಸೂತಕವುಂಟಾಗುವುದು ದೃಷ್ಟಿವಾದಗಳ ಸೋಂಕಿನಿಂದ. ಕಳವಳದ ಮಾತುಧಾತಿನ 'ಅಂಗ ಸಂಗಿಗೆ' ಮಾತ್ರ ಮಾತು ಸೂತಕವೇ ಹೊರತು ಗುಹೇಶ್ವರನ ಶರಣರಿಗೆ ಅಲ್ಲ. ಒಮ್ಮೆ ಪಾತಿತ್ಯ ನಶಿಸಿ ನಿರ್ಮಾಲ್ಯ ನೆಲೆಗೊಂಡರೆ ನಂತರ ಸೂತಕವೆಂಬುದಿಲ್ಲ.[೪೧] ಈ ವಚನ ಸೂಚಿಸುವ ತಾನು ಅನಾವರಣವಾಗಿರಬಹುದಾದ ಸಂದರ್ಭ ಮತ್ತು ಇದನ್ನು ಶೂನ್ಯ ಸಂಪಾದನಾಕಾರ ಪೋಣಿಸಿರುವ ಸಂಕಲನಕಾರನ ಸಂದರ್ಭ ಬೇರೆ ಬೇರೆ. ಮೊದಲನೆಯದಾಗಿ ನುಡಿವ ನುಡಿಗೂ ಕವಿತ್ವ ಸಾಧಿಸಿಕೊಡುವ ಸಂರಚನೆಗೂ ಇರುವ ಅಗಾಧ ವ್ಯತ್ಯಾಸವನ್ನು ಪ್ರಭು ಗುರುತಿಸಿದ್ದಾನೆ. ಮಾತನ್ನು ಜ್ಯೋತಿರ್ಲಿಂಗವಾಗಿ ಕಾಣುವುದಕ್ಕೂ ಪರಾವಾಕ್ಕಾಗಿ ಕಾಣುವುದಕ್ಕೂ ಅಪಾರವಾದ ವ್ಯತ್ಯಾಸವಿದೆ.

ಅಲ್ಲಮನ ಸಾಕಾರ ಸ್ವರೂಪದ ಬಗೆಗಿನ ನಿರಾಕರಣೆಗಳೂ ಗಮನಿಸುವಂಥವುಗಳೇ ಆಗಿವೆ. ಅಲ್ಲಮನ ವಚನಗಳಲ್ಲಿ ಎಲ್ಲಿಯೂ ಸಾಕಾರ ಸ್ವರೂಪದ ಶಿವ (ಹರ)ನಾಗಲೀ ಅಥವಾ ಅವನಿಗೆ ಸಂಬಂಧಿಸಿದ ಪುರಾಣದ ಪರವಾದಂಥ ವಿವರವಾಗಲೀ ಪ್ರಧಾನವಾದ ಧೋರಣೆಯಲ್ಲವೇ ಅಲ್ಲ[೪೨]

ಅಕ್ಕಮಹಾದೇವಿ ಶ್ರೇಷ್ಠ ಅನುಭಾವಿ, ತನ್ನ ಆದರ್ಶಕ್ಕಾಗಿ ಸಾಮಾಜಿಕ ವ್ಯವಸ್ಥೆ ಮತ್ತು ರಾಜ ಪ್ರಭುತ್ವಗಳೆರಡನ್ನೂ ಏಕಕಾಲಕ್ಕೆ ಧಿಕ್ಕರಿಸಿ ನಿಂತವಳು. ಹೆಣ್ಣುತನಕ್ಕೆ ಒಂದು ಗೌರವ ಭಾವನೆಯನ್ನು ತಂದುಕೊಟ್ಟ ಬಸವ, ಅಲ್ಲಮ ಮೊದಲಾದವರಿಂದ ಸನ್ಮಾನಿತಳಾದಳು. ಬಲವಂತದಿಂದ ಕೈ ಹಿಡಿದ ಗಂಡನೊಬ್ಬನನ್ನು, ಅದರಲ್ಲೂ ರಾಜನೊಬ್ಬನನ್ನು ತಿರಸ್ಕರಿಸಿದ್ದು ನಮಗೆ ಆಶ್ಚರ್ಯವಾಗಿ ಕಾಣುತ್ತದೆ. ದಿಟ್ಟೆಯಾದರೂ ಅವಳು ಹೆಣ್ಣು ತಾನೆ? ಅವಳು ಗಂಡನನ್ನು ತ್ಯಜಿಸಿ ಹೊರಟಮೇಲೂ ಉದ್ದಕ್ಕೂ ದುಷ್ಟಜನ ಅವಳನ್ನು ಕಾಡಿದರೆಂದು ತೋರುತ್ತದೆ. ಗಂಡನನ್ನು ಬಿಟ್ಟವಳು; ಹದಿಹರೆಯದ ಹೆಣ್ಣು; ಯಾರೂ ಆಶ್ರಯ ಇಲ್ಲದವಳು; ಮೈ ಮೇಲೆ ಸರಿಯಾಗಿ ಬಟ್ಟೆ ಕೂಡ ಇಲ್ಲ. ಇಂತಹ ಸಂದರ್ಭವನ್ನು ಊಹಿಸಿಕೊಂಡರೆ ಅವಳು ಪಟ್ಟಿರಬಹುದಾದ ಯಾತನೆಯ ಕಲ್ಪನೆ ನಮಗೆ ಸ್ವಲ್ಪವಾದರೂ ಬಂದೀತು.

ಕಿಚ್ಚಿಲದ ಬೇಗೆಯಲ್ಲಿ ಬೆಂದೆನವ್ವ!
ಏರಿಲ್ಲದ ಘಾಯದಲಿ ನೊಂದೆನವ್ವ
ಸುಖವಿಲ್ಲದ ಧಾವತಿಗೊಂಡೆನವ್ವ[೪೩]

ಎಂಬ ವಚನದ ಸಾಲುಗಳು ಸ್ತ್ರೀಯ ಅಸಹಾಯಕತೆಯನ್ನು ಬಿಂಬಿಸುತ್ತದೆ. ಬೆಂಕಿಯಿಲ್ಲದ ಬೇಗೆ, ಗಾಯವಿಲ್ಲದ ನೋವು ಇವು ಅವಳ ಆಂತರಂಗದ ವೇದನೆಯನ್ನು ತೀರ ಸಹಜವಾಗಿ ಧ್ವನಿಸುತ್ತದೆ.

ಸಾವಿಲ್ಲದ ಕೇಡಿಲ್ಲದ ರೂಪಿಲ್ಲದ ಚೆಲುವಂಗೆ
ಆನೊಲಿದೆನವ್ವಾ....., ಹರನೇ ನೀ ನನಗೆ
ಗಂಡನಾಗಬೇಕೆಂದು ಅನಂತ ಕಾಲ ತಪ್ಪಿಸಿದೆ ನೋಡಾ[೪೪]

ಒಮ್ಮೆ ಕಾಮನ ಕಾಲ ಹಿಡಿವೆ. ಒಮ್ಮೆ ಚಂದ್ರಮಂಗೆ ಸೆರೆಗೊಡ್ಡಿ ಬೇಡುವೆ ಚೆನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕೊ ಮರುಳೆ. ಕಾಯಕ್ಕೆ ನೆಳಲಾಗಿ ಕಾಡಿತ್ತು. ಮಾಯೆ ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು. ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ಮಾಡಿ ತನ್ನ ನೂಲು ತನ್ನನ್ನೇ ಸುತ್ತಿ ಸುತ್ತಿ ಸಾವ ತೆರದಂತೆ ಎಂಬ ವಚನಗಳ ಸಾಲುಗಳು ಜೀವಪರ ಮತ್ತು ಜೀವಪರ ಕಾಳಜಿಯುಳ್ಳ ಅನುಭಾವಿ ಸಾಹಿತ್ಯಗಳಾಗಿವೆ. ಇವಳು ಸಮಾಜದ ಪ್ರತಿರೋಧಗಳನ್ನು ಎದುರಿಸಿ ಆಧ್ಯಾತ್ಮವನ್ನು ಸಾಧಿಸಿದ್ದಾಳೆ.

ಕೆಲವು ವಚನಕಾರರು ಇನ್ನೂ ಇತರ ವಚನಕಾರರಿಗೆ ಹೇಗೆ ಆದರ್ಶರು? ಮತ್ತು ಮಾದರಿಗಳಾಗಿದ್ದರು ಎಂಬುದನ್ನು ಗುರುತಿಸಬಹುದು. ಅಲ್ಲದೆ ಅವರಲ್ಲಿನ ಒಂದೊಂದು ಗುಣ ವಿಶೇಷತೆಯು ಒಬ್ಬೊಬ್ಬ ವಚನಕಾರರ ಮೇಲೆ ಪ್ರಭಾವ ಮತ್ತು ಪರಿಣಾಮ ಬೀರಿರುವುದನ್ನು ವಚನಗಳ ಮೂಲಕ ಪಟ್ಟಿ ಮಾಡಬಹುದು. ಪ್ರಭಾವಕ್ಕೆ ಅಥವಾ ಆದರ್ಶದ ನೆಲೆಗೆ ಜಾತಿ ಮುಖ್ಯವಾಗುವುದಿಲ್ಲ. ಬೇರೆ–ಬೇರೆ ಜಾತಿಯ ವೃತ್ತಿಯ ಕಾಯಕ, ಕೆಳವರ್ಗದ ವಚನಕಾರರ ಮೇಲೂ ಪ್ರಭಾವವಿರುವುದು ಕಾಣಿಸುತ್ತದೆ. ಬಸವಣ್ಣನು ಕಿನ್ನರಿ ಬೊಮ್ಮಯ್ಯನಿಗೆ ತನು, ಕಕ್ಕೆಯ ಬೊಮ್ಮಣ್ಣನಿಗೆ ಮನ, ಗಾವುದಿ ಮಾಚಯ್ಯನಿಗೆ ಅಂತರಂಗ, ಗಜೇಶ ಮಸಣಯ್ಯನಿಗೆ ಕರಸ್ತಲ, ನುಲಿಯ ಚಂದಯ್ಯನಿಗೆ ಅಂಗದ ಸತ್ಕ್ರೀ, ಕನ್ನಡಿ ಕಾಯಕದ ಅಮ್ಮದೇವಯ್ಯನಿಗೆ ಕತ್ತಿ, ಚೆನ್ನಬಸವಣ್ಣನು ನನ್ನ ಪರಮಾರಾಧ್ಯ ಗುರು ಮಡಿವಾಳ ಮಾಚಿದೇವನ ಕೃಪೆಯಿಂದ ನಾನು ಬದುಕಿದೆ ಎಂದಿದ್ದಾನೆ. ಚೆನ್ನಬಸವಣ್ಣನು ಕಕ್ಕೆಯ ಬೊಮ್ಮಣ್ಣನಿಗೆ ಬುದ್ಧಿ, ಸಕಳೇಶ ಮಾದರಸನಿಗೆ ಜ್ಞಾನಪ್ರಸಾದ, ಗಾವುದಿ ಮಾಚಯ್ಯನಿಗೆ ಬಹಿರಂಗ, ಕನ್ನಡಿ ಕಾಯಕದ ಅಮ್ಮಿದೇವನಿಗೆ ಕತ್ತರಿ ಕೊಟ್ಟವನು. ಅಲ್ಲಮನು ಕಕ್ಕೆಯ

ಬೊಮ್ಮಣ್ಣನಿಗೆ ಸ್ವೈರಣೆ, ಸಕಳೇಶ ಮಾದರಸನಿಗೆ ಬಯಲ ಪ್ರಸಾದ, ಕಿನ್ನರಿ ಬೊಮ್ಮಯ್ಯನಿಗೆ ಮನ, ಗಜೇಶ ಮಸಣಯ್ಯನಿಗೆ ಭಾವಸ್ತಲ, ಗಾವುದಿ ಮಾಚಯ್ಯನಿಗೆ ಸರ್ವಾಂಗ ಮತ್ತು ಸೊಡ್ಡಳ ಬಾಚರಸನನ್ನು ಸಲಹಿದನು. ಸಿದ್ಧರಾಮನು ಡಕ್ಕೆಯ ಬೊಮ್ಮಣ್ಣನಿಗೆ ಚಿತ್ತ, ಸಕಳೇಶ ಮದರಸನಿಗೆ ನಿರ್ಮಲ ಪ್ರಸಾಧ, ಸೊಡ್ಡಳ ಬಾಚರಸನಿಗೆ ಅರುಹು ಆಗಿದ್ದಾನೆ. ಇವರ ಜೊತೆಗೆ ಮಡಿವಾಳಯ್ಯ, ನಿಜಗುಣದೇವರು, ಘಟಿವಾಳಯ್ಯ, ಅಜಗಣ್ಣ, ಕಕ್ಕಯ್ಯ, ಚೆನ್ನಯ್ಯ, ಹಳ್ಳಯ್ಯ ಕೆಂಬಾವಿ ಭೋಗಯ್ಯ, ಶಿವನಾಗಮಯ್ಯಾ ಇತರ ವಚನಕಾರರಲ್ಲಿ ಕಾಣುವ ಸಾಮಾನ್ಯ ಮಾದರಿ.

**ಅಡಿ ಟಿಪ್ಪಣಿ :**

೧. ಶಿವಶರಣೆಯರ ವಚನ ಸಂಪುಟ – ೫೪೦ನೇ ವಚನ ಪುಟ ಸಂಖ್ಯೆ : ೧೮೨

೨. ಅಲಕ್ಷಿತ ವಚನಕಾರ್ತಿಯರ ಲೋಕದೃಷ್ಟಿ– ಪ್ರೊ. ಬಿ.ಎಂ. ಪುಟ್ಟಯ್ಯ – ಪುಟ (ಕಾಲ್ನಡಿಗೆ) ಸಂಖ್ಯೆ : ೧೧೩

೩. ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ ೨೦೦೧) – ಕನ್ನಡ ಸಾಹಿತ್ಯ ಪರಿಷತ್ – ಚಾಮರಾಜಪೇಟೆ, ಬೆಂಗಳೂರು. ಪುಟ ಸಂಖ್ಯೆ : ೯೫

೪. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೩, ೨೪

೫. ಅಲಕ್ಷಿತ ವಚನಕಾರ್ತಿಯರ ಲೋಕದೃಷ್ಟಿ – ಪ್ರೊ. ಬಿ.ಎಂ. ಪುಟ್ಟಯ್ಯ – ಪುಟ (ಕಾಲ್ನಡಿಗೆ) ಸಂಖ್ಯೆ : ೧೦೯, ೧೧೦, ೧೧೧

೬. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೬೭, ೧೬೮

೭. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೬೪ (ವಚನಗಳ ಸಂಖ್ಯೆ:೫೨೪)

೮. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೩೧ (ವಚನಗಳ ಸಂಖ್ಯೆ:೪೩೭)

೯. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೩೫, ೧೪೭ (ವಚನಗಳ ಸಂಖ್ಯೆ:೪೭೮, ೪೪೮, ೪೪೯)

೧೦. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೮೪, ೧೮೨, ೧೭೮ (ವಚನಗಳ ಸಂಖ್ಯೆ: ೫೮೭, ೫೮೧, ೫೬೯)

೧೧. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೩೭ (ವಚನಗಳ ಸಂಖ್ಯೆ:೪೫೩)

೧೨. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೩೮ (ವಚನಗಳ ಸಂಖ್ಯೆ: ೪೫೭)

೧೩. ಅಲಕ್ಷಿತ ವಚನಕಾರ್ತಿಯರ ಲೋಕದೃಷ್ಟಿ– ಪ್ರೊ. ಬಿ.ಎಂ. ಪುಟ್ಟಯ್ಯ – ಪುಟ (ಕಾಲ್ನಡಿಗೆ) ಸಂಖ್ಯೆ : ೧೧೫

೧೪. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೫೪ (ವಚನಗಳ ಸಂಖ್ಯೆ:೫೦೧)

೧೫. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೫೯ (ವಚನಗಳ ಸಂಖ್ಯೆ:೫೧೪)

೧೬. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೪೧ (ವಚನಗಳ ಸಂಖ್ಯೆ:೪೬೫)

೧೭. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೧೬೩ (ವಚನಗಳ ಸಂಖ್ಯೆ:೫೨೬)

೧೮. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೨೮ (ವಚನಗಳ ಸಂಖ್ಯೆ:೭೪೨)

೧೯. ಅಲಕ್ಷಿತ ವಚನಕಾರ್ತಿಯರ ಲೋಕದೃಷ್ಟಿ – ಪ್ರೊ. ಬಿ.ಎಂ. ಪುಟ್ಟಯ್ಯ – (ಕಾಲ್ನಡಿಗೆ) ಪುಟ ಸಂಖ್ಯೆ : ೧೧೫

೨೦. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೨೮ (ವಚನಗಳ ಸಂಖ್ಯೆ:೭೪೦)

೨೧. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೩೦ (ವಚನಗಳ ಸಂಖ್ಯೆ:೭೪೩)

೨೨. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೩೪ (ವಚನಗಳ ಸಂಖ್ಯೆ:೭೪೯)

೨೩. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೩೫ (ವಚನಗಳ ಸಂಖ್ಯೆ:೭೫೦)

೨೪. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೩೬ (ವಚನಗಳ ಸಂಖ್ಯೆ:೭೫೧)

೨೫. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೩೭ (ವಚನಗಳ ಸಂಖ್ಯೆ:೭೫೨)

೨೬. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೨೪೫ (ವಚನಗಳ ಸಂಖ್ಯೆ:೭೭೨)

೨೭. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ:೨೪೮,೨೪೯ (ವಚನಗಳ ಸಂಖ್ಯೆ:೭೮೨)

೨೮. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೩೨೨(ವಚನಗಳ ಸಂಖ್ಯೆ:೧೦೮೯)

೨೯. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೩೨೩ (ವಚನಗಳ ಸಂಖ್ಯೆ : ೧೦೯೦, ೧೦೯೧)

೩೦. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೩೬೨ (ವಚನಗಳ ಸಂಖ್ಯೆ:೧೨೦೪)

೩೧. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೩೬೩ (ವಚನಗಳ ಸಂಖ್ಯೆ:೧೨೦೫)

೩೨. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೩೭೩ (ವಚನಗಳ ಸಂಖ್ಯೆ:೧೨೩೩)

೩೩. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೩೭೪ (ವಚನಗಳ ಸಂಖ್ಯೆ:೧೨೩೪)

೩೪. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೪೧೫ (ವಚನಗಳ ಸಂಖ್ಯೆ:೧೩೪೯)

೩೫. ಶಿವಶರಣೆಯರ ವಚನ ಸಂಪುಟ – ಪುಟ ಸಂಖ್ಯೆ : ೪೧೬ (ವಚನಗಳ ಸಂಖ್ಯೆ:೧೩೫೦)

೩೬. ವಚನ ಕಮ್ಮಟ – ಸಂಪಾದಕರು–ಕೆ. ಮರುಳಸಿದ್ದಪ್ಪ,

ಕಿ.ರಂ. ನಾಗರಾಜ – ಪುಟ ಸಂಖ್ಯೆ : ೧೦

೩೭. ವಚನ ಕಮ್ಮಟ – ಪುಟ ಸಂಖ್ಯೆ : ೧೦

೩೮. ಬಸವಣ್ಣನವರ ವಚನಗಳು –ಸಂಪಾದಕರು–ಡಾ. ಎಲ್. ಬಸವರಾಜು ಪುಟ ಸಂಖ್ಯೆ : ೧೧೫, ಗೀತಾ ಬುಕ್ ಹೌಸ್ –ಪ್ರಕಾಶಕರು, ಮೈಸೂರು

೩೯. ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ – ಡಿ.ಆರ್. ನಾಗರಾಜ್–ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ – ಪುಟ ಸಂಖ್ಯೆ : ೧೮೨, ೧೮೩

೪೦. ವಚನ ಕಮ್ಮಟ – ಪುಟ ಸಂಖ್ಯೆ : ೧೯

೪೧. ನಾಗಾರ್ಜುನ–ಅಲ್ಲಮಪ್ರಭು ಒಂದು ತೌಲನಿಕ ಅಧ್ಯಯನ – ಎಸ್. ನಟರಾಜ ಬೂದಾಳು, ಪುಟ ಸಂಖ್ಯೆ–೧೩, ೧೪

೪೨. ಅನುಭಾವ : ಸಾಂಸ್ಕೃತಿಕ ಸಮಸ್ಯೆ – ಬಸವರಾಜ ಕಲ್ಗುಡಿ–ಮುದ್ರಣ– ಧಾರಿಣಿ ಮತ್ತು ಹುಡುಕಾಟ ಗ್ರಾಫಿಕ್ಸ್–ಪುಟ ಸಂಖ್ಯೆ : ೧೫೮, ೧೫೯

೪೩. ವಚನ ಕಮ್ಮಟ – ಪುಟ ಸಂಖ್ಯೆ : ೬೨

೪೪. ವಚನ ಕಮ್ಮಟ – ಪುಟ ಸಂಖ್ಯೆ : ೬೪

# ಅಧ್ಯಾಯ–೦೫

## ಉಪಸಂಹಾರ

ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ವಚನಸಾಹಿತ್ಯದ ಸೃಷ್ಟಿ ಮಹತ್ವವಾದುದು. ಅದರಲ್ಲೂ ತಳಸ್ತರದ ಸ್ತ್ರೀಯರು ವಚನಕಾರ್ತಿಯರಾದದ್ದು ಪವಾಡವೇ ಸರಿ. ಸ್ವಾಭಿವ್ಯಕ್ತಿಯ ಕಲೆಯನ್ನು ರೂಢಿಸಿಕೊಂಡು ಸಾಹಿತ್ಯ, ಸಂಸ್ಕೃತಿ ಧರ್ಮದ ಮೌಢ್ಯಗಳ ಚೌಕಟ್ಟನ್ನು ಮುರಿದರು. ತಳಸ್ತರದ ಜನರ ಭಾಷೆ ಮತ್ತು ಸಮುದಾಯದ ಬದುಕನ್ನು ಕೇಂದ್ರವಾಗಿಸಿಕೊಂಡು ಚರಿತ್ರೆ ಕಟ್ಟಲು ಪ್ರಯತ್ನಿಸಿದರು. ಹೀಗೆ ಕಟ್ಟಿದ ಚರಿತ್ರೆಯು ತಳಸ್ತರದ ಬದುಕನ್ನು ಮೂಲಸ್ತರಕ್ಕೆ ಒಯ್ಯುತ್ತದೆ  ಎಂಬ ಭಯದಿಂದ ತಳಸ್ತರದ ಬದುಕನ್ನು ಸ್ಮೃತಿಯಿಂದ ವಿಸ್ಮೃತಿಗೆ ತಳಲಾಗಿತ್ತು. ಅದನ್ನು ಮತ್ತೆ ಸ್ಮೃತಿಗೆ ತರುವ ಪ್ರಯತ್ನ ಈ ಅಧ್ಯಯನದಲ್ಲಾಗಿದೆ.

ಇವರು ಪ್ರಭುತ್ವ ಅಥವಾ ರಾಜ ಕೇಂದ್ರಿತ ಆಶಯಗಳನ್ನು ಕೈ ಬಿಟ್ಟು ಜನ ಸಾಮಾನ್ಯರ ಬದುಕಿನ ಬವಣೆಗೆ ಧ್ವನಿಯಾದರು. ತಳಸ್ತರದ ವಚನಕಾರ್ತಿಯರ ವಚನಗಳ ಅರ್ಥವನ್ನೂ, ಸ್ವರೂಪವನ್ನು ತಾತ್ವಿಕ ನೆಲೆಯಲ್ಲಿ ನೋಡುವ ಪ್ರಯತ್ನ ಮಾಡಲಾಗಿದೆ. ತಳಸ್ತರದ ವಚನಕಾರ್ತಿಯರು ಧರ್ಮಶಾಸ್ತ್ರವು ನಿರ್ಮಿಸಿದ ನೀತಿ ನಿಯಮಗಳ ಚಕ್ರವ್ಯೂಹದಲ್ಲಿ ಸಿಲುಕಿದ ಅಜ್ಞಾನ, ಬಡತನ, ಮೂಢನಂಬಿಕೆ ಮತ್ತು ವ್ರತಾಚರಣೆಗಳ ಜಾಲವನ್ನು ಭೇದಿಸಿದರು. ಹೊಸ ಸಮಾಜದ ನಿರ್ಮಾಣಕ್ಕೆ ಅಣಿಗೊಂಡು ದುರ್ಬಲ ಜನ ಸಮುದಾಯಗಳನ್ನು ಶುದ್ಧ ಮಾನವೀಯ ನೆಲೆಯಲ್ಲಿ ಪ್ರೀತಿಸಿ ಗೌರವಿಸಿದರು. ಈ ಹೊಸ ಸಮಾಜದ ಪ್ರವೇಶಕ್ಕೆ ಅಸಂಖ್ಯಾತ ದೀನ ದಲಿತರ ಉದ್ಧಾರ ಮತ್ತು ಆತ್ಮೋದ್ಧಾರದ ಬಗೆಯನ್ನು ಕ್ರಮಿಸಿದರು. ಲಿಂಗ, ಜಾತಿ, ವೃತ್ತಿ, ವರ್ಗ ತಾರತಮ್ಯವಿಲ್ಲದ ಸಮಾನ ಅವಕಾಶ ಮತ್ತು ವರ್ಗ ಆಶಯಗಳು ಆಕರ್ಷಿಸಿದವು. ಧಾರ್ಮಿಕ, ಸಾಮಾಜಿಕ ಅಸ್ತಿತ್ವವನ್ನೆ ಕಳೆದುಕೊಂಡಿದ್ದ ಸ್ತ್ರೀಯರಿಗೆ ಎಲ್ಲಾ ರೀತಿಯಲ್ಲಿ ಸ್ವತಂತ್ರ ಪಡೆಯಲು ಅವಕಾಶ ನೀಡಲಾಯಿತು. ಕುಲ ಕಸಬುಗಳ ಕಾರಣಕ್ಕಾಗಿಯೇ ಧಾರ್ಮಿಕ ಮತ್ತು ಸಾಮಾಜಿಕ ತಾತ್ಸಾರಕ್ಕೆ ಒಳಗಾಗಿದ್ದ ಸ್ತ್ರೀಯರು ಅಸಮಾನತೆಯ ಕಳಂಕವನ್ನು ಕಳೆದುಕೊಂಡು ಗೌರವದ ಬದುಕನ್ನು ರೂಪಿಸಿಕೊಂಡರು.

ಸ್ತ್ರೀಯು ಪಾತಿವ್ರತ್ಯ ಧರ್ಮವನ್ನು ಪಾಲಿಸಬೇಕು ಎನ್ನುವ ಪುರುಷ ಧರ್ಮದಲ್ಲಿ ವೇಶ್ಯೆಯರ ಬಗ್ಗೆ ಅನುಕಂಪವಿಲ್ಲ. ವ್ರತಹೀನರೊಡನೆ ವೇಶ್ಯೆಯ ಸಂಬಂಧ ನಿಷಿದ್ಧವಾಗಿತ್ತು. ಸೂಳೆ, ದಾಸಿ, ವೇಶ್ಯೆಯರನ್ನು ಕಟುನುಡಿಗಳಲ್ಲಿ ನಿಂದಿಸಲಾಗಿದೆ. ಡಾಂಭಿಕತೆ, ಮೋಸ, ಕುಟಿಲತನ, ಹುಸಿ, ನಟನೆ ಮೊದಲಾದ ದುರ್ಗಣಗಳಿಗೆ ಸೂಳೆಯನ್ನು ಸಂಕೇತಿಸಲಾಗಿದೆ. ಹೀಗಿದ್ದರೂ ಭಕ್ತೆಯರಾಗಿ ಬದುಕು ಸಾಗಿಸಿದ ಸೂಳೆ ಸಂಕವ್ವೆ, ಹಾದರ ಕಾಯಕದ ಗಂಗಮ್ಮ, ಸೂಳೆ ನಿಂಬಕ್ಕೆ, ಸೂಳೆ ಬೊಂತಾಲದೇವಿಯರ ಹೆಸರನ್ನು ಸೂಚಿಸಬಹುದು.

ವೈಯಕ್ತಿಕ ತೀವ್ರತೆಯಿಂದ ಆಧ್ಯಾತ್ಮಿಕ ಆಸಕ್ತಿಯನ್ನು ತಳಸ್ತರದ ಸ್ತ್ರೀಯರು ಪ್ರವೇಶಿಸಿದರು. ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಮತ್ತು ವೈಚಾರಿಕ ಚಿಂತನಾ ಕ್ರಮದಿಂದ ಪ್ರಭಾವಿತರಾಗಿರುವ ಸ್ತ್ರೀಯರ (ತಳಸ್ತರದ ವಚನಕಾರ್ತಿಯರ) ಆಸಕ್ತಿ ಕೇಂದ್ರ ಆಧ್ಯಾತ್ಮದ ಸಾಧನೆ. ಆ ಮೂಲಕ ಪುರುಷ ಧರ್ಮ ನೆಲೆಯನ್ನು ವಿಂಡಬಿಸುವುದಾಗಿದೆ. ಈ ವಚನಕಾರ್ತಿಯರ ಬಹುಪಾಲು ವಚನಗಳಲ್ಲಿ ಧರ್ಮ–ದೇವರು, ಆತ್ಮ–ಪರಮಾತ್ಮ, ವ್ರತ–ಆಚರಣೆ, ರೂಢಿ–ಸಂಪ್ರದಾಯ ಮತ್ತು ನೇಮ–ನಿಯಮಗಳ ಚರ್ಚೆಗಳು ನಡೆದಿವೆ. ಈ ತಳಸ್ತರದ ವಚನಕಾರ್ತಿಯರು ಸಮಾಜಮುಖಿಚಿಂತನೆಯ ಮಾನವತವಾದಿ ಆಶಯಗಳನ್ನು ಪ್ರತಿಪಾದಿಸಿದ್ದಾರೆ.

ಹಿಂದೆ ಕುಟುಂಬದ ಒಳಗೆ ಇದ್ದು ವ್ರತ–ಆಚರಣೆ, ನೇಮ–ನಿಷ್ಠೆ ಪಾಲನೆಯ ಮೂಲಕ ನರಕಯಾತನೆಯನ್ನು ಅನುಭವಿಸಿದ್ದ ಸ್ತ್ರೀಯರಿಗೆ ಇಂದು ಕುಟುಂಬದಾಚೆಯ ಬದುಕಿಗೆ ತಮ್ಮನ್ನು ತಾವು ತೆರೆದುಕೊಳ್ಳುವುದನ್ನು ಕಲಿಸಿದವರು ತಳಸ್ತರದ ವಚನಕಾರ್ತಿಯರು. ಇವರು ಪುರುಷ ಕೇಂದ್ರಿತ, ಜಾತಿ ಕೇಂದ್ರಿತ ವ್ಯವಸ್ಥೆ, ಲಿಂಗಾಧಾರಿತ ಅಸಮಾನತೆ, ಮನುಷ್ಯ ಸ್ವಭಾವದ ಕ್ಷುದ್ರತೆ, ಢಾಂಬಿಕತೆಯನ್ನು ತೀಕ್ಷ್ಣವಾಗಿ ವಿಮರ್ಶಿಸಿದ್ದಾರೆ. ಜೀವನಾನುಭವದ ಮಿಡಿತಗಳನ್ನು ಆಡು ಮಾತಿನಲ್ಲಿ ಅಭಿವ್ಯಕ್ತಿಸಿರುವ ವಚನಕಾರ್ತಿಯರು ಆಚಾರನಿಷ್ಠೆ ಮತ್ತು ವ್ರತಭ್ರಷ್ಟ, ವೈಧಿಕ ತತ್ವನಿಷ್ಠೆಗಳನ್ನು ವಿರೋಧಿಸಿದ್ದಾರೆ.

ತಳಸ್ತರದ ವಚನಕಾರ್ತಿಯ ವಚನಗಳಲ್ಲಿನ ಅನೇಕ ಅಂಶಗಳು ಮತ್ತು ಆಶಯಗಳು ಪ್ರಸ್ತುತ ಸಂದರ್ಭಕ್ಕೆ ಅಗತ್ಯವಾಗಿದೆ. ಆದಾಗ್ಯೂ ಶರಣೆಯರಲ್ಲಿ ಸಾಧ್ಯತೆಗಳ ಜೊತೆಗೆ ಮಿತಿಗಳೂ ಇವೆ. ಅನೇಕ ವಚನಕಾರ್ತಿಯರು ಶರಣರ ನೆರಳನ್ನು ಅನುಸರಿಸಿದರೆ ಉದಾಹರಣೆ– ಆಯ್ದಕ್ಕಿ ಲಕ್ಕಮ್ಮ, ಉರಿಲಿಂಗಪೆದ್ದಿಗಳ

ಪುಣ್ಯಸ್ತ್ರೀ ಕಾಳವ್ವೆ, ಎಡೆಮಠದ ನಾಗಿದೇವಯ್ಯಗಳ ಪುಣ್ಯಸ್ತ್ರೀ ಮಸಣಮ್ಮ, ಕಾಟಕೂಟಯ್ಯಗಳ ಪುಣ್ಯಸ್ತ್ರೀ ರೇಚವ್ವೆ, ಕೊಂಡೆಮಂಚಣಗಳ ಪುಣ್ಯಸ್ತ್ರೀ ಲಕ್ಷ್ಮಮ್ಮ, ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ, ಗುಂಡಯ್ಯಗಳ ಪುಣ್ಯಸ್ತ್ರೀ ಕೇತಲದೇವಿ, ದಸರಯ್ಯಗಳ ಪುಣ್ಯಸ್ತ್ರೀ ವೀರಮ್ಮ, ದುಗ್ಗಳೆ, ಬತ್ತಲೇಶ್ವರನ ಪುಣ್ಯಸ್ತ್ರೀ ಗುಡ್ಡವ್ವೆ, ಬಾಚಿ ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಮೊಳಿಗೆ ಮಾರಯ್ಯನ ಪುಣ್ಯಸ್ತ್ರೀ ಮಹಾದೇವಿ, ರಾಯಸದ ಮಂಚಣ್ಣಗಳ ಪುಣ್ಯಸ್ತ್ರೀ ರಾಯಮ್ಮ, ರೇವಣಸಿದ್ಧಯ್ಯಗಳ ಪುಣ್ಯಸ್ತ್ರೀ ರೇಕಮ್ಮ, ಸಿದ್ಧಬುದ್ಧಯ್ಯಗಳ ಪುಣ್ಯಸ್ತ್ರೀ ಕಾಳವ್ವೆ, ಹಡಪದಪ್ಪಣಗಳ ಪುಣ್ಯಸ್ತ್ರೀ ಲಿಂಗಮ್ಮ ಮತ್ತು ಹಾದರ ಕಾಯಕದ ಮಾರಯ್ಯಗಳ ಪುಣ್ಯಸ್ತ್ರೀ ಗಂಗಮ್ಮರನ್ನು ಗುರುತಿಸಬಹುದು. ಇನ್ನೂ ಕೆಲವರು ಸ್ವತಂತ್ರವಾಗಿ ವೃತ್ತಿ, ಕಾಯಕ ಮತ್ತು ಭಕ್ತಿಯ ನೆಲೆಯಲ್ಲಿ ಶರಣರ ಆಲೋಚನೆಗಳಿಗಿಂತ ಭಿನ್ನವಾಗಿ ಆಲೋಚಿಸಿ ವಚನಗಳನ್ನು ರಚಿಸಿರುವುದು ನಮಗೆ ಕಾಣುತ್ತವೆ. ಉದಾಹರಣೆಗೆ ಅಕ್ಕಮ್ಮ, ಕದಿರ ಕಾಯಕ ಕಾಳವ್ವೆ, ಕದಿರ ರೆಮ್ಮವ್ವೆ, ಕನ್ನಡಿ ಕಾಯಕದ ರೇಮಮ್ಮ, ಕಾಲಕಣ್ಣಿಯ ಕಾಮಮ್ಮ, ಕೊಟ್ಟಣದ ಸೋಮವ್ವೆ, ಗೊಗ್ಗವ್ವೆ, ಬೊಂತಾದೇವಿ, ಸತ್ಯಕ್ಕ ಮತ್ತು ಸೂಳೆ ಸಂಕವ್ವೆಯರನ್ನು ಗುರುತಿಸಬಹುದು. ಈ ಮೇಲಿನ ಎಲ್ಲ ವಚನಕಾರ್ತಿಯರು ಹನ್ನೆರಡನೆಯ ಶತಮಾನದಲ್ಲಿ ಸ್ತ್ರೀಯರು ಪಡೆದ ಪುರುಷ ಸಮಾನ ಅವಕಾಶಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಮೂಲಕ ಸಾಹಿತ್ಯ ರಚನೆಗೆ ಕೈ ಹಾಕಿ, ಸಾಹಿತ್ಯ ರಚನೆ ಪುರುಷನ ಹಕ್ಕು ಎಂಬ ಸ್ಥಾಪಿತ ನೆಲೆಯನ್ನು ಸುಳ್ಳಾಗಿಸಿದರು.

ಸಾತ್ವಿಕ ಬದುಕನ್ನು ಬಯಸಿದ ಶರಣೆಯರು ಜೀವನ ಮೌಲ್ಯವನ್ನು ಹೆಚ್ಚಿಸಿದರು. ಆ ಕಾಲದ ಅನೇಕ ಮಿತಿಗಳ ನಡುವೆ ಶರಣೆಯರು ಧಾರ್ಮಿಕ ಸಾಹಿತ್ಯಿಕ, ಆರ್ಥಿಕ, ಸಾಮಾಜಿಕ ಕ್ಷೇತ್ರವನ್ನು ಪ್ರವೇಶಿಸಿದ್ದು ಮಹತ್ವದ ವಿಚಾರ. ಅನುಭವ ಮಂಟಪದಲ್ಲಿ ಪುರುಷ ಸರಿದೊರೆಯಾಗಿ ವಿಚಾರ ಮಂಥನ ಮಾಡಿದ್ದು ಗಮನಾರ್ಹ ವಿಷಯ. ತಳಸ್ತರದ ವಚನಕಾರ್ತಿಯರ ವಚನಗಳು ಅಥವಾ ಚಿಂತನೆಗಳು ಪರಿಪೂರ್ಣ ಎಂದು ಎನಿಸದಿದ್ದರೂ ಮಹಿಳಾ ಚಿಂತನೆಯ ಮೂಲ ಪರಂಪರೆಯನ್ನು ಗುರುತಿಸಲು ತಳಹದಿಯಾಗಿ ನಿಲ್ಲಬಲ್ಲವು. ಮಹಿಳಾ ಚಿಂತನೆಯ ವಿವಿಧ ಸಮಸ್ಯೆ ಬಗೆಹರಿಸಲು ಸಾಂಸ್ಕೃತಿಕ, ಸಾಮಾಜಿಕ ದಾಳಿಯನ್ನು ಎದುರಿಸುವ ಶರಣೆಯರ ನಿಲುವುಗಳು ನಿಜಕ್ಕೂ ಪ್ರಸ್ತುತ ಜೊತೆಗೆ ಸಾಮಾನ್ಯ ಜನತೆಯಲ್ಲಿ ವೈಚಾರಿಕತೆಯ ಪ್ರಜ್ಞೆಯನ್ನು

ಬಿತ್ತುತ್ತವೆ. ದೇವರು–ಧರ್ಮ, ನರಕ–ಸ್ವರ್ಗ, ಗಂಡು–ಹೆಣ್ಣು, ಊರ ಹೊರಗಿನವರು–ಊರ ಒಳಗಿನವರು, ಶ್ರೇಷ್ಠ–ಕನಿಷ್ಠ, ಸ್ಪೃಶ್ಯ–ಅಸ್ಪೃಶ್ಯ, ಉಚ್ಚ–ನೀಚ ಮತ್ತು ಬ್ರಾಹ್ಮಣ–ಶೂದ್ರರೆಂಬ ತಾರತಮ್ಯಗಳನ್ನು ವಿರೋಧಿಸಿರುವುದು ತಳಸ್ತರದ ವಚನಕಾರ್ತಿಯರ ವಚನಗಳಲ್ಲಿ ಸ್ಫುಟವಾಗಿ ಗೋಚರಿಸುತ್ತದೆ. ಈ ಮೂಲಕ ತಳಸ್ತರದ ವಚನಕಾರ್ತಿಯರನ್ನು ಒಂದೆಡೆಗೆ ತರುವ ಪ್ರಯತ್ನ ಮಾಡಿದ್ದೇನೆ.

* * * * *

## ಅನುಬಂಧ–೦೧


೧ ಡಾ.ಎಂ.ಎಂ.ಕಲಬುರ್ಗಿ :– ಶಿವಶರಣೆಯರ ವಚನ ಸಂಪುಟ, ಮುದ್ರಣ ಗುರುದತ್ ಪ್ರಿಂಟರ್ಸ್, ಮೈಸೂರು ರಸ್ತೆ, ಬೆಂಗಳೂರು– ೨೬, ೨೦೦೧.

೨ ಡಾ.ಎಲ್.ಬಸವರಾಜು :– ಅಲ್ಲಮನ ವಚನ ಚಂದ್ರಿಕೆ– ಪ್ರ: ಲೋಹಿಯಾ ಪ್ರಕಾಶನ, ಬಳ್ಳಾರಿ– ೨೦೦೧.

೩ ಬಸವರಾಜ ಕಲ್ಗುಡಿ :– ಅನುಭಾವ; ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ, ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ–೨೦೦೧.

೪ ಡಿ.ಆರ್.ನಾಗರಾಜ್ :– ಅಲ್ಲಮ ಪ್ರಭು ಮತ್ತು ಶೈವಪ್ರತಿಭೆ, ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು–೧೯೯೯.

೫ ಎಸ್.ನಟರಾಜ ಬೂದಾಳು :– ನಾಗಾರ್ಜುನ–ಅಲ್ಲಮಪ್ರಭು, ಪ್ರ; ಗೋಧೂಳಿ ಪ್ರಕಾಶನ–೨೦೧೦.

೬ ಡಾ.ರಹಮತ್ ತರೀಕೆರೆ :– ಕರ್ನಾಟಕದ ನಾಥಪಂಥ, ಪ್ರ; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ– ೨೦೦೬.

೭ ಕಾಶಿ ವಿಶ್ವನಾಥಶೆಟ್ಟಿ :– ವಚನಕಾರ್ತೆಯರು, ಪ್ರ; ಆರ್ಯವೈಶ್ಯ ಮಿತ್ರರ ಪ್ರಕಾಶಕರು, ಅರಸೀಕೆರೆ–೧೯೭೬

೮ ಹೆಚ್.ಎಸ್.ಶ್ರೀಮತಿ. :– ಮಹಿಳಾ ಸಾಹಿತ್ಯ ಚರಿತ್ರೆ.

೯ ಬಿ.ಎಂ. ಪುಟ್ಟಯ್ಯ :– ಅಲಕ್ಷಿತ ವಚನಕಾರ್ತಿಯರು– (ಕಾಲ್ನಡಿಗೆ)

೧೦ ಸಿ.ಎಸ್. ಶಿವಕುಮಾರ ಸ್ವಾಮಿ (ಕುಮಾರಚಲ್ಯ) :– ವಚನಕಾರರ ಜೀವನದೃಷ್ಟಿ.

೧೧ ಭೂಸನೂರು ಮಠ ಸಂ.ಶಿ (ಸಂ) :– ವಚನಸಾಹಿತ್ಯ ಸಂಗ್ರಹ.

೧೨ ಆರ್.ಸಿ ಹಿರೇಮಠ (ಸಂ) :– ಶಿವಶರಣೆಯರ ವಚನಗಳು

೧೩ ಸಬಿತಾ ಬನ್ನಾಡಿ :– ಆಲಯವು ಬಯಲಾಗಿ.

೧೪ ಬಿ.ವಿ. ಶಿರೂರ (ಸಂ) :– ಎಲ್ಲ ಪುರಾತನರ ವಚನಗಳು

೧೫ ಹೆಚ್. ತಿಪ್ಪೇರುದ್ರಸ್ವಾಮಿ :– ಶರಣರ ಅನುಭವ ಸಾಹಿತ್ಯ ಕದಳಿ ಕರ್ಪೂರ.

೧೬ ಡಾ.ವೀರಣ್ಣ ಕಾಜೂರ (ಸಂ) :– ಶಿವಶರಣೆಯರ ವಚನ ಸಂಪುಟ

೧೭ ಡಾ.ಸುಶೀಲಾ ನೆಲ್ಲಿಸರ :– ತಳ ಸಮುದಾಯದ ವಚನಕಾರ್ತಿಯರು, (ಲೇಖನ) ಬಸವಪಥ ಮೇ–೨೦೧೧ (ಮಾಸಿಕ ಪತ್ರಿಕೆ)

೧೮ ಬಸವ ಬೆಳಗು :– ತ್ರೈಮಾಸಿಕ ಪತ್ರಿಕೆ
ಸ್ತ್ರೀ ಸಂವೇದನೆ, ೧೨ನೇ ಶತಮಾನದ ಪ್ರಮುಖ ಶಿವಶರಣೆಯರು (ಲೇಖನ) ಡಿಸೆಂಬರ್ ೨೦೧೧ರ ಸಂಚಿಕೆ.

೧೯ ಬಸವ ಫಥ ೨೦೧೧ (ಕೈಚಿತ್ರ) :– ಅನುಭವ ಮಂಟಪ

೨೦ ಡಾ.ಎಲ್.ಬಸವರಾಜು (ಸಂ) :– ಬಸವಣ್ಣನವರ ವಚನಗಳು, ಪ್ರ:ಗೀತಾ ಬುಕ್ ಹೌಸ್, ಮೈಸೂರು ೨೦೦೦.

೨೧ ಡಾ.ಎಂ.ಚಿದಾನಂದ ಮೂರ್ತಿ :– ವಚನ ಸಾಹಿತ್ಯ, ಪ್ರ: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲಯ, ೨೦೦೮.

೨೨ ಸಂಕ್ಷಿಪ್ತ ಕನ್ನಡ ನಿಘಂಟು (ಪರಿಷ್ಕೃತ) :– ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ (೨೦೦೧).

೨೩ ಕನ್ನಡ ರತ್ನಕೋಶ (ಪರಿಷ್ಕೃತ) :– ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಣೆ ೨೦೦೧,

೨೪ ಚ.ನ.ಶಂಕರರಾವ್ ಭಾರತೀಯ ಸಮಾಜದ ಅಧ್ಯಯನ ಸಂಪುಟ–೨ ಪರಿಷ್ಕೃತ ಆವೃತ್ತಿ–೨೦೦೦. ಜೈ ಭಾರತ್ ಪ್ರಕಾಶನ, ಮಂಗಳೂರು

೨೫ ಶ್ರೀಮತಿ ಜಗದಾಂಬ ಮಲ್ಲೇದೇವರು :– ಇಪ್ಪತ್ತೈದು ವಚನಕಾರ್ತಿಯರ ಜೀವನ ಹಾಗೂ ಸಾಧನೆ, ಪ್ರಕಾಶಕರು ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ, ಮೂರುಸಾವಿರ ಮಠ ಹುಬ್ಬಳ್ಳಿ

೨೬ ಪ್ರೊ.ಎಂ.ಹೆಚ್. ಬೀಳಗಿ ಎಂ.ಎ. :– ಶಿವಶರಣೆಯರು ಜೀವನ ಮತ್ತು ಸಾಧನೆ, ಪ್ರಕಾಶಕರು, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ